ಬಿಸಿಲ


ಜೂನ್ 1999 ರೂ. 10

■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ

ಮಾಸಪತ್ರಿಕೆ

ಕಂಪ್ಯೂಟರ್ ಮೂಲಕ ವ್ಯಾಪಾರ

ಮಹಿಳೆಯರ ಸಮಸ್ಯೆಗೆ ಪರಿಹಾರ



ಮರಣದಂಡನೆ

ಏಕೆ? ಹೇಗೆ? ಬೇಕೆ?

ನಿಮ್ಮ ನೆಚ್ಚಿನ ಪತ್ರಿಕೆಗಳು ನಿಮ್ಮ ಮನೆ ಬಾಗಿಲಿಗೆ!

ಈಗಾಗಲೇ ಜನಮನ ಗೆದ್ದಿರುವ 'ಬದುಕು' ಮಾಸಪತ್ರಿಕೆ ಹಾಗೂ ಶೀಘ್ರ ಬಿಡುಗಡೆಯಾಗಲಿರುವ **'ಮನೆ'** ವಾರಪತ್ರಿಕೆ, **'ದಾರಿ'** ವಾರಪತ್ರಿಕೆಗಳಿಗಾಗಿ ನೀವು ಪುಸ್ತಕದ ಅಂಗಡಿ ಹುಡುಕಿಕೊಂಡು ಹೋಗಬೇಕಿಲ್ಲ. ಓದುಗರ ಅನುಕೂಲಕ್ಕಾಗಿ ಈ ಪತ್ರಿಕೆಗಳನ್ನು ನಿಮ್ಮ ಮನೆ ಬಾಗಿಲಿಗೇ ತಲುಪಿಸುವ ವ್ಯವಸ್ಥೆ ಮಾಡಿದ್ದೇವೆ. ಕೆಳಗಿನ ಅವಕಾಶಗಳಲ್ಲಿ ನಿಮಗೆ ಇಷ್ಟವಾದ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಅಂಚೆ ವೆಚ್ಚವನ್ನು ನಾವೇ ಭರಿಸುವುದರಿಂದ ನೀವು ಹೆಚ್ಚಿಗೆ ಹಣ ನೀಡುವ ಅಗತ್ಯವೇ ಇಲ್ಲ! ☑ ಹೀಗೆ ಟಿಕ್ ಮಾಡುವ ಮೂಲಕ ನಿಮ್ಮ ಆಯ್ಕೆಯನ್ನು ತಿಳಿಸಿ. ಡಿ.ಡಿ.ಯನ್ನು ಬೆಂಗಳೂರಿನಲ್ಲಿ ಸಂದಾಯವಾಗುವಂತೆ 'ಅಂಕುರ ಪ್ರಕಾಶನ'ದ ಹೆಸರಿನಲ್ಲಿ ತೆಗೆಸಿ.

☐ **'ಬದುಕು'** ಮಾಸಪತ್ರಿಕೆ, **'ಮನೆ'** ವಾರಪತ್ರಿಕೆ, **'ದಾರಿ'** ವಾರಪತ್ರಿಕೆಗಳಿಗಾಗಿ ವಿಶೇಷ ರಿಯಾಯಿತಿ ದರದಲ್ಲಿ ವಾರ್ಷಿಕ ಚಂದಾ 300 ರೂಪಾಯಿಯನ್ನು ಕಳಿಸುತ್ತಿದ್ದೇನೆ. ಮೂರು ಪತ್ರಿಕೆಗಳನ್ನು ಒಂದು ವರ್ಷಕಾಲ ನಮ್ಮ ಮನೆಗೆ ಅಂಚೆ ಮೂಲಕ ಕಳಿಸಿಕೊಡಿ.

☐ ಎಂ.ಓ. [ಸಂಖ್ಯೆ...................... ದಿನಾಂಕ.................]
☐ ಡಿ.ಡಿ. [ಸಂಖ್ಯೆ..................... ದಿನಾಂಕ................ಬ್ಯಾಂಕ್.................................]

☐ **'ಬದುಕು'** ಮಾಸಪತ್ರಿಕೆಯ ವಾರ್ಷಿಕ ಚಂದಾ ರೂ. 120ನ್ನು ಕಳಿಸುತ್ತಿದ್ದೇನೆ. **'ಬದುಕು'** ಮಾಸಪತ್ರಿಕೆಯನ್ನು ಒಂದು ವರ್ಷಕಾಲ ನಮ್ಮ ಮನೆಗೆ ಅಂಚೆ ಮೂಲಕ ಕಳಿಸಿ.

☐ ಎಂ.ಓ. [ಸಂಖ್ಯೆ..................... ದಿನಾಂಕ.................]
☐ ಡಿ.ಡಿ. [ಸಂಖ್ಯೆ..................... ದಿನಾಂಕ................ಬ್ಯಾಂಕ್.................................]

☐ **'ಮನೆ'** ವಾರಪತ್ರಿಕೆಯ ವಾರ್ಷಿಕ ಚಂದಾ ರೂ. 120ನ್ನು ಕಳಿಸುತ್ತಿದ್ದೇನೆ. **'ಮನೆ'** ವಾರಪತ್ರಿಕೆಯನ್ನು ಒಂದು ವರ್ಷಕಾಲ ನಮ್ಮ ಮನೆಗೆ ಅಂಚೆ ಮೂಲಕ ಕಳಿಸಿ.

☐ ಎಂ.ಓ. [ಸಂಖ್ಯೆ..................... ದಿನಾಂಕ.................]
☐ ಡಿ.ಡಿ. [ಸಂಖ್ಯೆ..................... ದಿನಾಂಕ................ಬ್ಯಾಂಕ್.................................]

☐ **'ದಾರಿ'** ವಾರಪತ್ರಿಕೆಯ ವಾರ್ಷಿಕ ಚಂದಾ ರೂ. 120ನ್ನು ಕಳಿಸುತ್ತಿದ್ದೇನೆ. **'ದಾರಿ'** ವಾರಪತ್ರಿಕೆಯನ್ನು ಒಂದು ವರ್ಷಕಾಲ ನಮ್ಮ ಮನೆಗೆ ಅಂಚೆ ಮೂಲಕ ಕಳಿಸಿ.

☐ ಎಂ.ಓ. [ಸಂಖ್ಯೆ..................... ದಿನಾಂಕ.................]
☐ ಡಿ.ಡಿ. [ಸಂಖ್ಯೆ..................... ದಿನಾಂಕ................ಬ್ಯಾಂಕ್.................................]

'ಬಿಸಿಲ ಬದುಕು' ಮಾಸಪತ್ರಿಕೆ
ಅಂಕುರ ಪ್ರಕಾಶನ, 473, 1ನೇ ಬ್ಲಾಕ್, 3ನೇ ಸ್ಟೇಜ್, ಅಂಚೆ ಪೆಟ್ಟಿಗೆ: 7951, ಬಸವೇಶ್ವರನಗರ,
ಬೆಂಗಳೂರು - 560 079. ✆: 3307810

ಪತ್ರಿಕೆ ಕಳಿಸಬೇಕಾದ ವಿಳಾಸ:..
....
....
ಪಿನ್ ಕೋಡ್:..ದೂರವಾಣಿ:....................................

ನಿರೀಕ್ಷಿಸಿ

ಶೀಘ್ರ ಬಿಡುಗಡೆ

ಮನೆ
ವಾರ ಪತ್ರಿಕೆ

ರೂ. 2

- ಕನ್ನಡ ಬಲ್ಲ ಪ್ರತಿಯೊಬ್ಬರ ಕೈ ಸೇರಲಿರುವ ವಿನೂತನ ವಾರಪತ್ರಿಕೆ.
- ಪತ್ರಿಕೋದ್ಯಮದ ಇತಿಹಾಸದಲ್ಲಿ ಒಂದು ಮೈಲುಗಲ್ಲು.
- ಚುಟುಕು ಬರಹ ಹಾಗೂ ಸುಲಭ ಬೆಲೆ ಈ ಪತ್ರಿಕೆಯ ವೈಶಿಷ್ಟ್ಯ.
- ಪ್ರಥಮ ಸಂಚಿಕೆಯ **ಒಂದು ಲಕ್ಷ** ಪ್ರತಿಗಳು ಕನ್ನಡ ಓದುಗರನ್ನು ತಲುಪಲಿವೆ!

ದಾರಿ
ವಾರ ಪತ್ರಿಕೆ

ರೂ. 2

- ವಿದ್ಯಾರ್ಥಿಗಳು, ನಿರುದ್ಯೋಗಿಗಳ ಕೈಪಿಡಿ.
- ವಿದ್ಯಾವಕಾಶ, ಉದ್ಯೋಗಾವಕಾಶಗಳ ಸಮಗ್ರ ಮಾಹಿತಿ.
- ಮಾಹಿತಿಯಷ್ಟೇ ಅಲ್ಲ; ಮಾರ್ಗದರ್ಶನವೂ ಉಂಟು.
- ಬೆಲೆ ಮಾತ್ರ **ಕೇವಲ 2 ರೂಪಾಯಿ.**

ಎಲ್ಲರಿಗೂ ಇಷ್ಟವಾಗುವ ವಿಶಿಷ್ಟ ಮಾಸಪತ್ರಿಕೆ

ಬದುಕು

- ಗೃಹಿಣಿ-ಯುವತಿಯರಿಗೆ ಅಚ್ಚುಮೆಚ್ಚಾಗುವ ಲೇಖನಗಳು.
- ಮನೆ ಯಜಮಾನನ ಮನ ತಣಿಸುವ ವಿಷಯಗಳು.
- ಸಾಮಾನ್ಯ ಓದುಗರೊಂದಿಗೆ ಗಂಭೀರ ಓದುಗರಿಗೂ ವಿಪುಲ ಆಹಾರ.
- ಬದುಕು ರೂಪಿಸಿಕೊಳ್ಳಲು ಬೇಕಾದ ಸಕಲ ಸ್ಫೂರ್ತಿ ಮತ್ತು ಮಾಹಿತಿ.

ಬಿಸಿಲ ಬದುಕು

ಜೂನ್ 1999 ಸಂಪುಟ 2 ಸಂಚಿಕೆ 12

ಪರಿಸರ

ಎಂದಿನಂತೆ ಜೂನ್ ಐದರಂದು ವಿಶ್ವ ಪರಿಸರ ದಿನಾಚರಣೆ ಆಚರಿಸುತ್ತಿದ್ದೇವೆ. ಹಾಗೆಯೇ ಹಿಂದಿನಂತೆ ಪರಿಸರ ವಿನಾಶಕ್ಕೆ ಹಲವು ಬಗೆಯ ಕೊಡುಗೆ ನೀಡುವುದನ್ನೂ ಮುಂದುವರಿಸಿದ್ದೇವೆ. ಇದು ಸಮಕಾಲೀನ ಸನ್ನಿವೇಶದ ದುರಂತ. ಪರಿಸರದ ಪ್ರಶ್ನೆ ಬಂದಾಗ ಗಾಳಿ, ನೀರು, ಗಿಡ, ಮರ ಕುರಿತ ನಿಸರ್ಗಕ್ಕೆ ಸಂಬಂಧಿಸಿದ ವಿಷಯಗಳನ್ನಷ್ಟೇ ನಾವು ಗಮನಿಸುತ್ತೇವೆ. ಆದರೆ ಕೌಟುಂಬಿಕ ಪರಿಸರ, ಸಾಮಾಜಿಕ ಪರಿಸರ, ರಾಜಕೀಯ ಪರಿಸರ, ವಾಣಿಜ್ಯ ಪರಿಸರ ಇತ್ಯಾದಿ ಮನುಷ್ಯ ನಿರ್ಮಿತ ಪರಿಸರಗಳ ಸಂರಕ್ಷಣೆ ಬಗ್ಗೆ ನಾವೇಕೆ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ?

ರಾಜಕೀಯವನ್ನೇ ತೆಗೆದುಕೊಳ್ಳಿ. ಸೋನಿಯಾರ ವಿದೇಶಿ ಮೂಲದ ಬಗ್ಗೆ ಎದ್ದ ಪ್ರಶ್ನೆ, ತದನಂತರದ ದೇಶವ್ಯಾಪಿ ನಾಟಕ ಹಾಗೂ ಸುಖಾಂತ್ಯದ ದೃಶ್ಯ ಏನನ್ನು ಪ್ರತಿಬಿಂಬಿಸುತ್ತದೆ? ಕೆಲದಿನಗಳ ಹಿಂದಷ್ಟೇ ಮುಖತಃ ಮಾತಾಡಲೂ ಅಸಹ್ಯಪಡುತ್ತಿದ್ದ ಪಟೇಲ್- ದೇವೇಗೌಡ ಇಂದು ಹೆಗಲ ಮೇಲೆ ಕೈ ಹಾಕಿಕೊಂಡು ಒಟ್ಟಾಗಿ ಜನರ ಬಳಿ ಹೋಗೋಣ ಎನ್ನುವುದಕ್ಕೆ ಏನರ್ಥ? ಕಳೆದ ಚುನಾವಣೆಯಲ್ಲಿ ಮತದಾರರ ಒಂದು ವರ್ಗಕ್ಕೆ ಹಿಂದೂವಾದದ ಹುಚ್ಚು ಹಿಡಿಸಿ ಕೆಲವು ಸ್ಥಾನಗಳನ್ನು ಲಪಟಾಯಿಸಿದ ಬಿ.ಜೆ.ಪಿ. ತನ್ನ ಮೂಲ ಸಿದ್ಧಾಂತಕ್ಕೆ ಮುಸುಕು ತೊಡಿಸಲು ಮುಂದಾಗಿರುವುದು ಏತಕ್ಕೆ? ಇವೆಲ್ಲ ರಾಜಕೀಯ ಪರಿಸರ ವಿನಾಶದ ಕೆಲವು ನಿದರ್ಶನಗಳಷ್ಟೇ.

ಸಾಮಾಜಿಕ ಪರಿಸರ ಕೂಡ ಮಾಲಿನ್ಯದಿಂದ ಮುಕ್ತವಾಗಿಲ್ಲ. ವರದಕ್ಷಿಣೆ, ಜಾತಿ ಲೆಕ್ಕಾಚಾರ, ಬಾಲ್ಯ ವಿವಾಹ, ದುರ್ಬಲರ ಮೇಲಿನ ದೌರ್ಜನ್ಯ... ಹೀಗೆ ಪಟ್ಟಿಯನ್ನು ಹನುಮಂತನ ಬಾಲದಂತೆ ಹಿಗ್ಗಿಸುತ್ತಾ ಹೋಗಬಹುದು. ಕೊನೆಗೆ ಮನುಷ್ಯ ಮನುಷ್ಯರ ನಡುವಿನ ಕನಿಷ್ಠ ಸಂಬಂಧದಲ್ಲಾದರೂ ನಿಯತ್ತು ನೆಲೆಸಿದೆಯೆ ಎಂದು ಪರಿಶೀಲಿಸಿದರೆ ನಿರಾಶೆಯೇ ತೇಲುತ್ತದೆ.

ಹಣ ಸಂಪಾದನೆಯೇ ಯಶಸ್ಸಿನ ಮಾನದಂಡ ಎಂಬ ನಂಬಿಕೆ ಸಾರ್ವತ್ರಿಕ ಮಾನ್ಯತೆ ಪಡೆದಿರುವುದು ಏನನ್ನು ತೋರಿಸುತ್ತದೆ? ನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುವ 'ಅಣ್ಣನಿಂದ ತಮ್ಮನ ಕೊಲೆ', 'ಗಂಡನಿಂದ ಹೆಂಡತಿ ಕೊಲೆ', 'ಅತ್ತಿಗೆ ಮೇಲೆ ಅತ್ಯಾಚಾರ', 'ಮಾವನನ್ನು ವಂಚಿಸಿದ ಅಳಿಯ' ಇತ್ಯಾದಿ ಸುದ್ದಿಗಳು ಎಂಥ ಸಾಮಾಜಿಕ ಪರಿಸರಕ್ಕೆ ದ್ಯೋತಕ ಎಂಬುದನ್ನು ಗಮನಿಸಬೇಕು.

ಹಾಗೆಯೇ ಬದುಕಿನ ವಿವಿಧ ಸ್ತರಗಳಲ್ಲಿ ಕಾಣಿಸಿಕೊಂಡಿರುವ ಪರಿಸರ ಮಾಲಿನ್ಯ ಪರಸ್ಪರ ಆಂತರಿಕ ಸಂಬಂಧ ಹೊಂದಿರುವುದು ನಿಜ. ವ್ಯವಸ್ಥೆಯಲ್ಲೇ ಊನವಿದ್ದಾಗ ವ್ಯವಸ್ಥೆಯ ಅಂಗಗಳ ಮೇಲೆ ಅದರ ಪರಿಣಾಮ ಆಗದಿರದು. ಇದನ್ನು ಸರಿಪಡಿಸಲು ದೊಡ್ಡ ದೊಡ್ಡ ಸಿದ್ಧಾಂತಗಳ ಹುಡುಕಾಟದ ಬದಲು ಪ್ರತಿಯೊಬ್ಬ ಪ್ರಜ್ಞಾವಂತ ತನ್ನ ವೈಯಕ್ತಿಕ ನೆಲೆಯಲ್ಲಿ ತಾನೆಷ್ಟು ಶುದ್ಧ ಎಂದು ಪರಿಶೀಲಿಸಿಕೊಂಡರೆ ಅದು ಪರಿಸರ ಸಂರಕ್ಷಣೆಗೆ ಬಹು ದೊಡ್ಡ ಕಾಣಿಕೆಯಾದೀತು.

-ಸಂಪಾದಕ

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಎ.ಎಂ.ಸುರೇಶ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ರಮೇಶ್ ವಿಟ್ಲಾಪುರ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಅಂಕುರ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattarahalli, Old Madras Road, Bangalore -560 049 Editor : Chandrakanta Vaddu

ಹಾಸ್ಯ

ಕನಸು?

ಪತ್ನಿ: ಇವತ್ತು ಬೆಳಿಗ್ಗೆ 5 ಗಂಟೆಗೆ ನಾನು ಒಂದು ಒಳ್ಳೆಯ ಕನಸು ಕಂಡೆ.

ಪತಿ: ನಾನೂ ಒಂದು ಕೆಟ್ಟ ಕನಸನ್ನು ಕಂಡೆ. ನಿನ್ನ ಕನಸಿನ ವಿವರ ಮೊದಲು ಹೇಳು.

ಪತ್ನಿ: ದೀಪಾವಳಿಗೆ ನನ್ನ ಅಮ್ಮ ಅಪ್ಪ ಮತ್ತು ನನ್ನ ಚಿಕ್ಕ ತಮ್ಮ 15 ದಿನ ಇರಲು ನಮ್ಮ ಮನೆಗೆ ಬರಲಿದ್ದಾರೆ. ಈಗ ಹೇಳಿ ನಿಮ್ಮ ಕೆಟ್ಟ ಕನಸಿನ ಬಗ್ಗೆ.

ಪತಿ: ನಿನ್ನ ಕನಸಿನ ಡಿಟ್ಟೋ ಕಾಪಿಯೇ ನನ್ನದೂ ಸಹ.

ಹಲ್ವಾ

ಹೆಂಡತಿ: ನಿಮಗೋಸ್ಕರ ಕಷ್ಟಪಟ್ಟು ಹಲ್ವಾ ಮಾಡಿದೆ.

ಗಂಡ: ನಾನೂ ಅದನ್ನು ಅಷ್ಟೇ ಕಷ್ಟಪಟ್ಟು ತಿಂದೆ.

ಸೀರೆ

''ರೀ! ಪಕ್ಕದ್ಮನೆ ಶಾರಿ ಉಟ್ಟುಕೊಂಡಿರುವ ಸೀರೆ ತುಂಬಾ ಚೆನ್ನಾಗಿದೆ. ರೀ, ಅಂಥದೇ ಒಂದು ಸೀರೆಯನ್ನು ನನಗೆ ತಂದು ಕೊಡ್ರೀ'' - ಕೇಳಿದಳು ಪತ್ನಿ ತನ್ನ ಪತಿಯನ್ನು.

''ಅಯ್ಯೋ!... ಅವಳಿಗೆ ಸಾಲ ಮಾಡಿ ತಂದುಕೊಟ್ಟೆ! ಇನ್ನು ನಿನಗೆ...' ಎನ್ನುತ್ತಾ ನಾಲಿಗೆಯನ್ನು ಕಚ್ಚಿಕೊಂಡ ಪತಿರಾಯ.

ಸಲಹೆ

ಪುಕ್ಕಟೆ ಸಲಹೆಗಾಗಿ ಒಬ್ಬ ಟಾಂಗಾವಾಲ ಒಬ್ಬ ಪಶುವೈದ್ಯರಿಗೆ ಬರೆದ.

''ನನ್ನ ಕುದುರೆ ಕೆಲವು ಸಲ ಸರಿಯಾಗಿ ಓಡುತ್ತೆ; ಕೆಲವು ಸಲ ಬಹಳ ಕುಂಟುತ್ತೆ. ಏನು ಮಾಡಲಿ?''

ಪಶುವೈದ್ಯರು ಉತ್ತರಿಸಿದರು: ''ಸರಿಯಾಗಿ ನಡೆಯುತ್ತಿರುವಾಗ ಮಾರಿಬಿಡು!''

ಜ್ಞಾಪಕ ಶಕ್ತಿ

''ನನ್ನ ಜ್ಞಾಪಕ ಶಕ್ತಿಯೇ ಕಡಿಮೆಯಾಗಿದೆ ಡಾಕ್ಟ್ರೇ...'

''ಅದನ್ನೆಲ್ಲಾ ಮರೆತುಬಿಡಿ.. ಎಲ್ಲಾ ಸರಿ ಹೋಗುತ್ತದೆ.''

ಬಿಟ್ಟು ಬರಲು ನನಗೇನು ಹುಚ್ಚೆ?

ಹುಚ್ಚಾಸ್ಪತ್ರೆಯಲ್ಲಿದ್ದ ಮಿತ್ರನನ್ನು ನೋಡಲು ಹೋಗಿದ್ದ ಗುಂಡ:

''ಹೇಗಿದ್ದೀಯೋ, ಯಾವಾಗ ಮನೆಗೆ ಕಳಿಸ್ತಾರಂತೆ?''

ಮಿತ್ರ: ಇಂಥ ಆಸ್ಪತ್ರೆ, ಎಲ್ಲಾ ಅನುಕೂಲ, ಒಳ್ಳೆಯ ವಾತಾವರಣ ಬಿಟ್ಟು ಬರೋಕೆ ನಂಗೇನು ಹುಚ್ಚೆ?

ಹಿತವಚನ

ನಿಮಗೆ ಖಾಯಿಲೆಯಾದಾಗ ಸರಿಯಾದ ವೈದ್ಯರಲ್ಲಿಗೆ ಹೋಗಿ ತಪಾಸಣೆ ಮಾಡಿಸಿ; ಏಕೆಂದರೆ ಡಾಕ್ಟರೂ ಬದುಕಬೇಕು!

ಡಾಕ್ಟರು ಬರೆದುಕೊಟ್ಟ ಔಷಧಿಗಳನ್ನು ಕೊಂಡುಕೊಳ್ಳಿ; ಏಕೆಂದರೆ ಔಷಧಿ ಅಂಗಡಿಯವನೂ ಬದುಕಬೇಕು!

ನಂತರ ಈ ಔಷಧಿಗಳನ್ನು ಬಳಸದೇ ಕಸದ ತೊಟ್ಟಿಯಲ್ಲಿ ಬಿಸಾಡಿ; ಏಕೆಂದರೆ ನೀವೂ ಬದುಕಬೇಕು!

ಹೊರಗೆ ಬಂದ್ಬಿಟ್ಟೆ!

ಆತ: ನನ್ನ ಹೆಂಡ್ತಿ ಮೇಲೆ ಬಂದ ಸಿಟ್ಟನ್ನು ನನ್ನಿಂದ ತಡೆಯೋಕೆ ಆಗ್ಲಿಲ್ಲ.

ಈತ: ಆಗ, ನೀನೇನು ಮಾಡಿದೆ?

ಆತ: ನೀನೇ ಅಡಿಗೆ ಮಾಡು. ನಿನ್ನ ಬಟ್ಟೇನ ನೀನೇ ಒಗೆದುಕೋ ಎಂದು ಮನೆಯಿಂದ ಹೊರಗೆ ಬಂದ್ಬಿಟ್ಟೆ!

ಉಳಿತಾಯ?

ಆಕೆ: ಅರೇ, ಇದೇನ್ರಿ... ಫ್ಯಾನಿನಲ್ಲಿ ಒಂದೇ ಒಂದು ಬ್ಲೇಡ್ ಇದೆಯಲ್ಲಾ?

ಈತ: ಮನೆಯಲ್ಲಿ ನಾನೊಬ್ನೇ ತಾನೇ ಇರೋದು. ಯಾಕೆ ಸುಮ್ಮನೆ ಮೂರು ಬ್ಲೇಡುಗಳೂ ಸುತ್ತಿ ಕರೆಂಟ್ ಖರ್ಚಾಗಬೇಕೂಂತ ಎರಡು ಬ್ಲೇಡ್‌ಗಳನ್ನು ಕಳಚಿಟ್ಟಿದ್ದೆ.

ಯೋಚನೆ

''ಏನಯ್ಯಾ ಸುರೇಶ್!... ಏನೋ ತುಂಬಾ ಯೋಚನೆ ಮಾಡ್ತಾ ಇದೀಯಾ! ನಿನ್ನ ಹೆಂಡ್ತಿ ಊರಿಗೆ ಹೋಗಿದ್ದಾಳೆ ಅಂತನಾ...?''

''ಅದಕ್ಕಲ್ಲಯ್ಯಾ!... ನಮ್ಮ ಪಕ್ಕದ್ಮನೆ ಸರೋಜ ಊರಿಗೆ ಹೋಗಿದ್ದಾಳೆ!''

ಪ್ರೇಮ ಪ್ರಸ್ತಾಪ

ರಾಜ: ಏನೋ ಗೋಪಿ, ನಿನ್ನೆ ರಮಾ ಹತ್ತಿರ ನಿನ್ನ ಪ್ರೇಮದ ಪ್ರಸ್ತಾಪ ಮಾಡಿದೆಯಾ? ಏನಾಯ್ತು?

ಗೋಪಿ: ನಾನು ಇನ್ನೇನು ಪ್ರಸ್ತಾಪ ಮಾಡಬೇಕು ಎನ್ನುವಷ್ಟರಲ್ಲಿ ಆಕೆ, ನನಗೆ ಕುಮಾರವ್ಯಾಸ ಹಾಗೂ ಸರ್ವಜ್ಞನೆಂದರೆ ತುಂಬ ಇಷ್ಟ ಎಂದಳು. ಈಗಲೇ ಇಬ್ಬರನ್ನು ಪ್ರೀತಿಸುವವಳನ್ನು ಮದುವೆಯಾಗಿ ನಾನೇನು ಸುರಿದುಕೊಳ್ಳಲಿ ಎಂದು ನನ್ನ ಪ್ರೇಮದ ಪ್ರಸ್ತಾಪ ಮಾಡಲೇ ಇಲ್ಲ.

ಬಿಸಾಕ್ಲೇ ಇಲ್ಲ

ಆ ತರಗತಿಯಲ್ಲಿ ಮಿಸ್ ಹೇಳಿದರು:

''ನೋಡಿ ಮಕ್ಕಳೇ, ನೀವು ಒಂದ್ನಿಮಿಷ ನಿಶ್ಯಬ್ದವಾಗಿ ಕುಳಿತುಕೊಳ್ಳಿ ನೋಡೋಣ.

ಒಂದು ಚಾಕಲೇಟು ಬಿಸಾಡಿದರೂ ಶಬ್ದ ಕೇಳಬೇಕು ಅಷ್ಟು ಶಿಸ್ತಾಗಿರಬೇಕು''.

ಒಂದು ನಿಮಿಷವಂತೂ ಎಲ್ಲರೂ ನಿಶ್ಯಬ್ದವಾಗಿ ಕುಳಿತರು.

ಆದರೆ ಅರವಿಂದ, ''ಮಿಸ್.....'' ಎಂದು ಅಳುತ್ತಾ ನಿಂತ.

''ಯಾಕೆ? ಏನಾಯ್ತು ಮರಿ?''

''ನೀವು ಚಾಕ್ಲೆಟ್ ಬಿಸಾಕ್ಲೇ ಇಲ್ಲ.''

ಏನ್ ಮಾಡ್ತೀಯಾ?

ಮೇಷ್ಟ್ರು: ಗುಂಡಾ, ಯಾರಾದರೂ ನೀರಲ್ಲಿ ಮುಳುಗ್ತಾ ಇರೋದನ್ನ ಕಂಡ್ರೆ ನೀನೇನ್ ಮಾಡ್ತೀಯಾ?

ಗುಂಡ : ಅವರು ಮುಳುಗುವುದನ್ನು ನೋಡ್ತಾ ಕೂತ್ಕೋತೀನಿ ಸಾರ್.

ಮೇಷ್ಟ್ರು : ಯಾಕೋ?

ಗುಂಡ : ನೀವೇ ಹೇಳಿದಿರಲ್ಲಾ ಸಾರ್! ಅವರವರೇ ಕಷ್ಟಪಟ್ಟು ಮೇಲಕ್ಕೆ ಬರ್ಬೇಕು ಅಂತ.

ಮೊದಲು ತತ್ತಿಯೊ, ಕೋಳಿಯೋ

ಉಪಾಧ್ಯಾಯರು: ''ತತ್ತಿಯು ಮೊದಲು, ನಂತರ ಕೋಳಿಯು'' ಎಂಬುದರ ಅರ್ಥವೇನು ಕಿಟ್ಟಿ?

ಕಿಟ್ಟಿ : ಉಪಾಹಾರಕ್ಕೆ ತತ್ತಿಯು, ಊಟಕ್ಕೆ ಕೋಳಿಯು.


■ ಟಿ.ವಿ. ವೆಂಕಟರಮಣಯ್ಯ

ಒಳನೋಟ


- ಮರಣ ದಂಡನೆ: ಏಕೆ? ಹೇಗೆ? ಬೇಕೆ? 10
  - ಎಂ.ಎಲ್.ದೇಶೀಕರ್
- ಮರಣ ದಂಡನೆ ಖಂಡಿತ ಇರಬೇಕು 11
  - ವಿಜಯ ಸಾಸನೂರು
- ಶಿಕ್ಷೆಗಳು ಇನ್ನಷ್ಟು ಕಠಿಣವಾಗಬೇಕು 12
  - ಬಿ.ಎಸ್.ಅಬ್ಬಾಯಿ
- ಯಾತನೆಯ ಬಂಧನಕ್ಕಿಂತ ಮರಣ ವಾಸಿ 13
  - ಬಿ.ಎಸ್.ಮಣಿ
- ಗಲ್ಲು ಶಿಕ್ಷೆ ಇರಕೂಡದು 15
  - ಪ್ರೊ.ನಗರಿ ಬಾಬಯ್ಯ
- ಫಾಶಿ ಶಿಕ್ಷೆ: ನ್ಯಾಯಾಧೀಶರ ನೋಟ 16
  - ಕೋ.ಚೆನ್ನಬಸಪ್ಪ
- ಸಾವಿನ ಮನೆಯಿಂದ.... 17
  - ಎಚ್.ದಂಡಪ್ಪ
- ನಮ್ಮಜ್ಜಿಯ ಕ್ರಿಕೆಟ್ ಪುರಾಣ 20
  - ವಿ.ಎಸ್.
- ಹಾಸ್ಯ ಕಲಾವಿದ ಬಾಂದೇಕರ 28
  - ಬಿ.ವಿಲ್ಸನ್
- ನಮ್ಮ ಮಕ್ಕಳು ಮತ್ತು ಚಿತ್ರಕಲೆ 34
  - ಎಂ.ಎಸ್.ಮೂರ್ತಿ
- ಕಷ್ಟಚಕ್ರ 61
  - ಡಾ.ಟಿ.ಕೆ.ತಾಪಸ್
- ಮೋಜಿನ ಗಣಿತ 63
  - ರವಿರಾಜು
- ಯಶಸ್ಸಿನ ಸೂತ್ರಗಳು 64
  - ವಾಗೀಶ ಬಳ್ಳಾರಿ
- ಸ್ವಭಾವಗಳ ಸಿಂಹಾವಲೋಕನ 65
  - ಕೃಶಾಂಗ
- ಕ್ರೀಡೆ ಬಗ್ಗೆ ತಿಳಿಯಿರಿ 67
  - ಶಂಕರಗೌಡ ವೈ.ಪಾಟೀಲ
- ಪ್ರೇಕ್ಷಕರ ದುರ್ವರ್ತನೆಗೆ 68
  - ಗರ್ತಿಕೆರೆ ವಿ.ಪ್ರಕಾಶ್
- ಬುರುಡೆ ಜಲಪಾತ 70
  - ಸೀತಾರಾಂ ಬೆಳಖಂಡ

ಸ್ಥಿರ ಶೀರ್ಷಿಕೆಗಳು

- ನಗೆ ಲೇಖನ - 20, ಹೊಸ ಪುಸ್ತಕ- 23
- ಕ್ವಿಜ್- 29, ಅಡುಗೆ ಮನೆ- 33,
- ಸಂವೇದನೆ- 34, ವಯಸ್ಕರಿಗಾಗಿ- 37
- ಆಪ್ತ ಸಮಾಲೋಚನೆ- 39
- ಉಚಿತ ವರ್ಗೀಕೃತ ಜಾಹೀರಾತು- 56
- ಕನ್ನಡದಲ್ಲಿ ಕಲಿತವರು- 59
- ವ್ಯಕ್ತಿತ್ವ ವಿಕಾಸ- 65, ಪದಬಂಧ- 69
- ಕಿಲಕಿಲ - 71, ತಾರಾಬದುಕು- 72



ಮರಣದಂಡನೆ: ಏಕೆ? ಹೇಗೆ? ಬೇಕೆ? 10



ಘೋರ್ಪಡೆ ಕ್ಯಾಮರಾ ಕಣ್ಣು 30



ಮಹಿಳೆಯ ಸಮಸ್ಯೆಗೆ ಪರಿಹಾರವೆಲ್ಲಿ? 19



ಎರಡು ಚಿತ್ರಗಳ ಬಿಡುಗಡೆಯ ಕಥೆ 72



ಕಂಪ್ಯೂಟರ್ ಮೂಲಕ ವ್ಯಾಪಾರ 24

ವಿದ್ಯೆ - ಉದ್ಯೋಗ

- ಸ್ನಾತಕೋತ್ತರ ಪದವಿಗಳಿಗೆ ಅರ್ಜಿ 41
- ಕ.ಲೋ.ಆಯೋಗದಲ್ಲಿ 188 ಹುದ್ದೆ 42
- ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ 43
- ನೀವೂ ಇಂಗ್ಲಿಷ್ ಕಲಿಯಿರಿ 44
- ಮಾರ್ಗದರ್ಶಿ 46
- ಡಿಪ್ಲೋಮಾ/ಸ್ನಾತಕೋತ್ತರಕ್ಕೆ ಅರ್ಜಿ 48
- ನರ್ಸಿಂಗ್‌ನಲ್ಲಿ ವಿಪುಲ ಅವಕಾಶ 49
- ಆರೋಗ್ಯ ವಿಜ್ಞಾನ ಗ್ರಂಥಪಾಲಕರ ಒಂದು ವರ್ಷದ ಡಿಪ್ಲೊಮಾ 51
- ನೌಕಾದಳಕ್ಕೆ ಅರ್ಜಿ 52
- ಸಿಆರ್‌ಪಿಎಫ್ ನೇಮಕಾತಿ 54
- ರಸಪ್ರಶ್ನೋತ್ತರ 55

ಟಪಾಲು



-ಡಿ.ಸಿ. ಉಮೇಶ್, ಮೂಡಿಗೆರೆ.

ಅಬ್ಬರವೇ ಕಂಡು ಬರುವ 'ಬದುಕು' ಮೇ 99ರಲ್ಲಿ ಗೊಬ್ಬರವಾಯಿತಲ್ಲ! ಕಾರಣವೇನು?

[ಉತ್ತಮ ಕಾಗದದ ಅಲಭ್ಯತೆಯಿಂದಾಗಿ ಕಳಪೆ ಕಾಗದ ಬಳಸಬೇಕಾಯ್ತು. ಕ್ಷಮಿಸಿ - ಸಂ]

ನಿಯಂತ್ರಿಸಲಿ

-ಶ್ರೀ ಶೈಲ ಮಲ್ಲಪ್ಪ, ಮುದ್ದೇಬಿಹಾಳ

'ಡ್ರಗ್ಸ್' ಲೇಖನ ನಿಜವಾಗಿಯೂ ಕಣ್ಣು ತೆರೆಸುವಂತಿತ್ತು. ಇಂದಿನ ದುಷ್ಟ ಸಮಾಜದ ಸೆಳೆತದೆಲ್ಲಿ ಪ್ರಮುಖವಾಗಿ ಯುವಕರೂ ಸೇರಿದಂತೆ ಹಲವಾರು ಜನರು 'ಡ್ರಗ್ಸ್' ಚಟಕ್ಕೆ ಬಲಿಯಾಗಿದ್ದಾರೆ. ಆದರೆ ಇದು ದೇಶದ ಭವಿಷ್ಯತ್ತಿಗೆ ಮಹಾ ಹೆಮ್ಮಾರಿಯಾಗಿದೆ. ಆದ ಕಾರಣ ಸರ್ಕಾರವು ತೀಕ್ಷ್ಣ ಕ್ರಮಗಳಿಂದ ಇದನ್ನು ನಿಯಂತ್ರಿಸಲಿ.

ವಿಶ್ವಕಪ್

-ಚಂದ್ರಶೇಖರ ಎಸ್. ಪಾಟೀಲ್, ಮೋರಟಗಿ.

ವಿಶ್ವಕಪ್ ಕ್ರಿಕೆಟ್ ಕುರಿತು ಸಮಗ್ರ ಮಾಹಿತಿ ದೊರೆಯಿತು. 'ಹಿಂದೂಸ್ತಾನ ಆದಷ್ಟು 99ರ ವಿಶ್ವಕಪ್ ತನ್ನ ಮಡಿಲಿಗೆ ಹಾಕಿ ಕೊಳ್ಳಲಿ' ಎಂದು ನಮ್ಮೆಲ್ಲರ ಆಸ್ಸೆ.

ಸಾವಿನ ಬಾಗಿಲು

-ಸಂತೋಷಕುಮಾರ ಬಂಡೆ, ನಾಗಠಾಣ.

'ಸಾವಿನ ಬಾಗಿಲು ಡ್ರಗ್ಸ್' ಎಂಬ ಲೇಖನ ತುಂಬಾ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಸಂಪೂರ್ಣ 'ಡ್ರಗ್ಸ್' ವ್ಯಸನಕ್ಕೆ ಮಾರು ಹೋಗುತ್ತಿರುವ ಇಂದಿನ ಯುವಪೀಳಿಗೆಗೆ ಇದೊಂದು ಎಚ್ಚರಿಕೆಯ ಲೇಖನವಾಗಿದೆ. ಡ್ರಗ್ಸ್ ವಿರೋಧವನ್ನು 'ಬದುಕು' ಮನನಾಟುವಂತೆ ತಿಳಿಸಲು ಪ್ರಯತ್ನಿಸಿದೆ. ಇದರಿಂದಾದರೂ ಯುವ ಪೀಳಿಗೆ ಎಚ್ಚೆತ್ತು 'ಡ್ರಗ್ಸ್' ಸೇವನೆಯನ್ನು ವಿರೋಧಿಸಬೇಕಾಗಿದೆ.

ವಿಶೇಷ ಪತ್ರಿಕೆ

-ವಿಜಯಾನಂದ ಬಿ. ಕಾಲವಾಡ, ಧಾರವಾಡ.

ಪತ್ರಿಕೆಯ ವಿನ್ಯಾಸ, ಮುದ್ರಣ, ಲೇಖನ, ವಿಷಯ ಇತ್ಯಾದಿ ಮಾಹಿತಿಗಳು ಬಹಳ ಉತ್ತಮವಾಗಿವೆ. ಪ್ರತಿಯೊಬ್ಬ ಓದುಗನು ಬಯಸುವ ವಿಶೇಷ ಪತ್ರಿಕೆಯಾಗಿದೆ.

ಸರ್ವಾಂಗ ಸುಂದರ

-ಕವಿತಾಕೃಷ್ಣ, ಕ್ಯಾತಸಂದ್ರ

'ಬದುಕು' ಮಾಸಪತ್ರಿಕೆ ನೋಡಿದೆ. ವಿಭಾಗಗಳನ್ನು ಓದಿದೆ. ವಿನೂತನ ಹಾಗೂ ವಿಶಿಷ್ಟವಾದ ರೀತಿ ನೀತಿಗಳಿಂದ ಸರ್ವಾಂಗ ಸುಂದರವಾಗಿದೆ. ಅಂಕಣಗಳು ಆಕರ್ಷಕವಾಗಿದ್ದು ಸ್ವಾರಸ್ಯಭರಿತವಾಗಿವೆ. ವಿವೇಚನೆ ಬೆಳೆಸುವ, ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ, ಸಕಲ ಅನ್ನಾಂಗಗಳಿಂದ ಪುಷ್ಟಿಗೊಂಡಿರುವ 'ಬದುಕು' ಕನ್ನಡ ಪತ್ರಿಕಾ ಬಳಗದಲ್ಲಿ ಒಂದು 'ಧೃವತಾರೆ'ಯಾಗಿದೆ. ಸಂಪಾದಕರ ದಕ್ಷತೆಗೆ ಹಿಡಿದ ಕೈಗನ್ನಡಿಯಾಗಿದೆ.

ಬದುಕು ಒಳಗೊಂಡಿರಲಿ

-ಎಚ್. ಮಮತಾಜ್, ಊರಿಲ್ಲ.

'ಬದುಕು' ಮಾಸಪತ್ರಿಕೆಯು ಅತ್ಯುತ್ತಮವಾಗಿದ್ದು ಎಲ್ಲರಿಗೂ ಉಪಯೋಗಕರ. ನಾನು ಇದನ್ನು ಬರೆಯಲು ಕಾರಣವೇನೆಂದರೆ ಇದರಲ್ಲಿ ಕೆಳಗಿನ ಲೇಖನಗಳನ್ನು ಮಂಡಿಸಲಿ ಎಂದು ಕೋರಿಕೊಳ್ಳುತ್ತೇನೆ: ಕಂಪ್ಯೂಟರ್ ಬಗ್ಗೆ, ಎಸ್.ಎಸ್.ಎಲ್.ಸಿ. ತರಗತಿಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳು, ವೈಜ್ಞಾನಿಕ ಅನ್ವೇಷಣೆಗಳು, ಕೆಲವು ಆದಿವಾಸಿಗಳು ಜೀವಿಸುವ ರೀತಿ-ನೀತಿ, ಸಂಸ್ಕೃತಿ ಹಾಗೂ ಎಸ್.ಎಸ್.ಎಲ್.ಸಿ. ರ್‍ಯಾಂಕ್ ವಿದ್ಯಾರ್ಥಿಗಳ ಸಂದರ್ಶನ.

ಉಣ್ಣದ ಮಗು

-ಲಕ್ಷ್ಮಿ ಕಾಂತ ಕೊಂಪಲ್, ಲಿಂಗಸೂಗೂರು.

'ವಿಶ್ವ ತಾಯಂದಿರ ದಿನಾಚರಣೆ'ಗೆ ಡಾ. ವಿನೋದ ಛೆಬ್ಬಿ (ಉಣ್ಣದ ಮಗುವಿಗೆ ಔಷಧಿ ಬೇಕೆ?) ಲೇಖನ ಸಕಾಲಿಕ ಹಾಗೂ ಅರ್ಥಪೂರ್ಣವಾಗಿದೆ.

ಪತ್ರಮಿತ್ರ

-ಡಿ.ಎನ್. ಮಂಜುನಾಥ್, ದಂಡಿನ ಶಿವರ.

ನಮ್ಮ ಪ್ರಕಾಶನದಿಂದ ಬರುವ ಆಗಸ್ಟ್ ತಿಂಗಳಲ್ಲಿ ಪ್ರಕಟವಾಗುವ 'ಪತ್ರಮಿತ್ರರ ಪರಿಚಯ' ಪುಸ್ತಕಕ್ಕೆ ರಾಜ್ಯದ ಎಲ್ಲಾ ಪತ್ರಮಿತ್ರರ ವಿವರಗಳನ್ನು ಸಂಗ್ರಹಿಸುತ್ತಿದ್ದೇವೆ.

ಆದ್ದರಿಂದ ಪತ್ರಮೈತ್ರಿ ಹವ್ಯಾಸ ಹೊಂದಿರುವ ಎಲ್ಲಾ ಪತ್ರಮಿತ್ರರು ಈ ಪುಸ್ತಕದಲ್ಲಿ ಪ್ರಕಟಿಸಲು ತಮ್ಮ ಸಂಪೂರ್ಣ ವ್ಯಕ್ತಿ ಪರಿಚಯ, ಪತ್ರಮೈತ್ರಿ, ಬಗ್ಗೆ ತಮ್ಮ ಅನಿಸಿಕೆ ಹಾಗೂ ಒಂದು ಕಪ್ಪು ಬಿಳುಪು ಭಾವಚಿತ್ರವನ್ನು ಜೂನ್ ತಿಂಗಳೊಳಗೆ ಇಂದ್ರಮ್ಮ, ಮಂಜುಶ್ರೀ ಪ್ರಕಾಶನ, ದಂಡಿನ ಶಿವರ - 572 215 ತುಮಕೂರು ಜಿಲ್ಲೆ, ಈ ವಿಳಾಸಕ್ಕೆ ಕಳುಹಿಸಿ, ಸಹಕರಿಸಬೇಕೆಂದು ಕೋರುತ್ತೇನೆ.

ಸಂವೇದನೆ

-ಸುರೇಶ ಅಂಗಡಿ, ಹೂವಿನಹಡಗಲಿ

ಸಂವೇದನೆಯಲ್ಲಿ ವೀ. ಸೀತಾರಾಮಯ್ಯನವರ ಸಮಯ ಪ್ರಜ್ಞೆ ಕುರಿತು ಮಾರ್ಮಿಕವಾಗಿ

ತಿಳಿಸಿದ್ದೀರಿ. ವಿ.ಸೀ.ರವರ ಶಿಸ್ತು, ಸಮಯ ಪಾಲನೆಯನ್ನು ನಾನು ಅಳವಡಿಸಿಕೊಳ್ಳಲು ನಿರ್ಧರಿಸಿದ್ದೇನೆ.

ಅರ್ಥರಹಿತ ಅವಾಂತರ

-ತಲಕಾಡು ವಿಶ್ವ ಸಮಾಜ ವೆಂಕಟೇಶ್

ಅಲ್ಲಮ ಪ್ರಭು ಬೆಟ್ಟದೂರು ಅವರ ವಿವಾದ (ಪುಟ 21, ಬಿಸಿಲ ಬದುಕು ಮೇ 1999) 'ಬಿರುಗಾಳಿ v/s ಸುಂಟರಗಾಳಿ' ಶೀರ್ಷಿಕೆ ಪ್ರಚೋದಕವಾಗಿದ್ದರೂ' ಸಾರ್ಥಕವಾಗಿದೆ! ಈ ಬೆಟ್ಟದೂರ ಅವರ ಅಭಿಪ್ರಾಯ ಬಾಲಿಶವಾಗಿದೆ. ಇಂತಹ ಹಾಸ್ಯಾಸ್ಪದ ಹೇಳಿಕೆಗಳಿಂದ ಭೈರಪ್ಪನವರನ್ನು ಬೆತ್ತಲುಗೊಳಿಸಿದ ಭ್ರಮೆ ಅವರಿಗೆ ಇದ್ದರೆ ಅದಕ್ಕೆ ನಗಬೇಕೋ ಅಳಬೇಕೋ ತಿಳಿಯದಾಗಿದೆ! ಚಂಪಾ, ಲಂಕೇಶ್ ಮತ್ತಿತರ ಎಷ್ಟೇ ಹಿಮಾಲಯದೆತ್ತರದ ವ್ಯಕ್ತಿಗಳೇ ಇರಬಹುದು ಅವರ ಸದ್ದು ಗದ್ದಲಗಳೆಲ್ಲ ಸಾಹಿತ್ಯಸಾಗರದಲ್ಲಿ ಎಲ್ಲೋ ಅಡಗಿ ಹೋಗುವ ಅಲೆಗಳಂತೆ ನಿರ್ನಾಮವಾಗಿ ಹೋಗಿವೆ! ಬತ್ತಲಾಗದೆ ಬಯಲು ಸಿಗದಿಲ್ಲಿ! ಸಾಹಿತ್ಯ ಅಂದರೆ ಅದು ಶೂನ್ಯ ಸಂಪಾದನೆ! ಎಲ್ಲ ಸಾಹಿತ್ಯ ಚಳುವಳಿಗಳನ್ನು ತನ್ನ ವಿಶಾಲ ಸಾಗರದಲ್ಲಿ ಅಡಗಿಸಿ ಮೇಲೆದ್ದು ಜಗದಗಲ ಮುಗಿಲಗಲ ಚಾಚುವುದೇ ಸಾಹಿತ್ಯದ ವಿಶಾಲವ್ಯಾಪ್ತಿಯ ಸಹಜ ಗುಣವಾಗಿದೆ!

'ಬದುಕು' ಹುಡುಕಿ.........

-ರಾಘವೇಂದ್ರ ಎಸ್. ಕುಲಕರ್ಣಿ, ಭಂಕಲಗಾ.

ನಾನು 'ಬದುಕು' ಖರೀದಿಸುವುದಗೋಸ್ಕರ ಗುಲಬರ್ಗಾಕ್ಕೆ ಬರುತ್ತೇನೆ. ಇನ್ನು ಮುಂದೆ ಬದುಕಿನಲ್ಲಿ ಪರಿಸರ ನಾಶ, ಯುವಕರು ಮಾದಕ ವಸ್ತುಗಳಿಗೆ ಬಲಿಯಾಗುತ್ತಿರುವುದು, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿ ನೀಡಿ.

-ಅಶೋಕ ಶಂ., ಹಾವನೂರ.

ಸಂಚಿಕೆ ವೈವಿಧ್ಯಮಯವಾಗಿ ಮೂಡಿ ಬಂದಿದೆ. ಆದಾಗ್ಯೂ ಪತ್ರಿಕೆಯ ಪುಟಗಳು ಇನ್ನೂ ಹೆಚ್ಚಾಗಲಿ. ಜೀವನೋಪಾಯಕ್ಕೆ ಸಹಾಯಕ ವಾಗುವಂತಹ ಅಂಕಣಗಳು ಮೂಡಿ ಬರಲಿ. ''ಅನುಭವಗಳು'', ''ಹೀಗಿರಬೇಕು'', ''ಕಸದಲ್ಲಿ ರಸ'', ''ಕಡಿಮೆ ಖರ್ಚಿನ ಜೀವನ'', ''ಬದುಕಿಗೊಂದು ದಾರಿ'', ''ಸಮಂಜಸ'', ''ಹಿತ-ಮಿತ'', ''ಅವಕಾಶ'', ''ಅಪಾಯ-ಉಪಾಯ'' ಈ ಮುಂತಾದ ಅಂಕಣಗಳನ್ನು ದಯವಿಟ್ಟು ಪ್ರಾರಂಭಿಸಿ. ಬಿಸಿಲಲ್ಲಿದ್ದವರಿಗೆ ಬದುಕು ನೀಡಲು ಪ್ರಯತ್ನಿಸಿ. ಆಗ 'ಬಿಸಿಲ ಬದುಕು' ನೆರಳು ನೀಡುವ ತಾಣವಾದೀತು!

ನಿಲ್ಲಿಸಬೇಡಿ

-ಎ.ಎಸ್.ಮೊಹಮ್ಮದ್ ರಫೀಕ್, ಪುತ್ತೂರು.

ತಮ್ಮ ಬದುಕು ಪತ್ರಿಕೆಯಲ್ಲಿ ಮೂಡಿ ಬರುತ್ತಿರುವ ಲೇಖನಗಳು ಹಾಗೂ ವಯಸ್ಕರ ಮತ್ತು ಆಪ್ತಸಮಾಲೋಚನೆ ವಿಭಾಗವು ಬಹಳಷ್ಟು ಮೆಚ್ಚಿಕೆಯಾಗಿದೆ. ಇದನ್ನು ದಯವಿಟ್ಟು ನಿಲ್ಲಿಸಬೇಡಿ. ಮುಂದಿನ ಸಂಚಿಕೆಯಿಂದ ಪರಸ್ಪರ ಗೆಳೆತನ ಸಂಪಾದಿಸಲು ''ಸ್ನೇಹ-ಸಂಗಮ'' ಎಂಬ ವಿಭಾಗವನ್ನು ಆರಂಭಿಸಿರಿ. ಇದಕ್ಕಾಗಿ ಒಂದು ಪುಟವನ್ನು ಮೀಸಲಿಡಿ. ಓದುಗರು ಕಳುಹಿಸುವ ತಮ್ಮ ಹೆಸರು ಹಾಗೂ ವಿಳಾಸವನ್ನು ಪ್ರಕಟಿಸಿರಿ. ಇದರಿಂದಾಗಿ ಓದುಗರು ಪರಸ್ಪರ ಗೆಳೆತನ ಸಂಪಾದಿಸಲು ಸಾಧ್ಯವಾಗಬಹುದು.

ಅಭಿನಂದನೆಗಳು

-ಎಚ್. ಮುರಳೀಧರರಾವ್, ಬೆಂಗಳೂರು.

'ಬದುಕು' 3ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಇಡೀ ಪತ್ರಿಕೆಯ ಬಳಗಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ನನ್ನ ವಾರ್ಷಿಕ ಚಂದಾ ಅವಧಿ ಜೂನ್ 99ರಲ್ಲಿ ಕೊನೆಗೊಳ್ಳುತ್ತದೆ. ಬದುಕು ಮನೆ ದಾರಿ ಮೂರೂ ಪತ್ರಿಕೆಗಳು ಸೇರಿದಂತೆ ಚಂದಾ ನವೀಕರಿಸಬೇಕೆಂದಿದ್ದೇನೆ. ದಯವಿಟ್ಟು ನಾನು ಕಳುಹಿಸಬೇಕಾಗಿರುವ ವಾರ್ಷಿಕ ಚಂದಾ ಹಣ ತಿಳಿಸಿ.

ಅರ್ಥ - ಅಪಾರ್ಥ

ಜಯಲಲಿತ **ಪೂಟಿಸುವ** ದೇವತೆಗಳು ಎರಡೇ ಎರಡು : ಒಂದು ಅಧಿಕಾರ ಇನ್ನೊಂದು ಐಶ್ವರ್ಯ.
[*ಪ್ರಪಂಚ*, 25.4.99] *-ಶ್ರೀಕಾಂತ ಕಾಮೇಶ್*, ತಾವರಗೇರಾ.

... ಕಸ್ತೂರಿಯವರುಯಾವ ಸಂದಿಗ್ಧಕ್ಕೂ ಅವಕಾಶ ಕೊಡದೆ ತಮ್ಮದೊಂದು ತಮಾಷೆಯ ಪುಸ್ತಕ **ಬಂದು** ಹೇಳಿಕೊಂಡರು....
[*ಲಂಕೇಶ್ ಪತ್ರಿಕೆ*, 7.4.99] *-ಬಾಲಕೃಷ್ಣ ಉದ್ದಾರ್*, ಸುರಪುರ.

ಮುಂಬೈ, 2-ಶುಭ ಶುಕ್ರವಾರ (**ಗುಡ್ ಫ್ರೈ**) ಪ್ರಯುಕ್ತ ದೇಶದಾದ್ಯಂತ ಇರುವ ಎಲ್ಲ ಪ್ರಮುಖ ಪೇಟೆಗಳಿಗೆ ರಜೆ ಇತ್ತು.
[*ಸಂಯುಕ್ತ ಕರ್ನಾಟಕ*, 3.4.99] *- ವೈ.ಬಿ. ಚಳ್ಳಮರದ ಶಿಕ್ಷಕರು*, ಸಿಂಧನೂರು.

ಸಿದ್ದರಾಮಯ್ಯ **ಜಾತಿವಾತಿ** ಎಂದಿಲ್ಲ: ಎಂ.ಎಸ್.ಪಾಟೀಲ್
[*ಪ್ರಜಾವಾಣಿ*, 5,5.99] *-ಯು. ಸಿದ್ದಪ್ಪ ಶಿಕ್ಷಕರು*, ಕೂಡ್ಲಿಗಿ.

ಅರ್ಜುನ್ ಸಿಂಗ್ **199-200** ನೇ ಇಸವಿಯ **ವಿತ್ರ** ಮಸೂದೆಗೆ ಅಂಗೀಕಾರ.
[*ಕನ್ನಡಮ್ಮ* ದಿನಪತ್ರಿಕೆ, 18.4.99] *-ಬಸವರಾಜ ಚ. ಕರಕರಡ್ಡಿ*, ಧಾರವಾಡ.

ಲೋಕಶಕ್ತಿ ಬಲೆಗೆ **ತಲಾಠಿ.**
[*ಸಂಯುಕ್ತ ಕರ್ನಾಟಕ*, 19.5.99] *-ಡಿ.ಎಂ. ಸಾವಕಾರ್* ಅರಿಕೇರಿ,
ಮನೋಹರ ಪಾಟೀಲ ಮುದ್ದೇಬಿಹಾಳ.

9 ಪಂದ್ಯಗಳ 13 ಇನ್ನಿಂಗ್ಸ್‌ಗಳಿಂದ 111.90 ರನ್‌ಗಳ ಸರಾಸರಿಯಲ್ಲಿ **11119** ರನ್ ಬಾರಿಸಿ ಅತಿ ಹೆಚ್ಚು ರನ್ ಹೊಡೆದ ದಾಖಲೆಯನ್ನು ಸ್ಥಾಪಿಸಿದ್ದಾರೆ..
[*ಪ್ರಜಾವಾಣಿ*, 19.4.99] *-ಮಂಜುನಾಥ ಬೇಗ್ಗಿ*, ಹುಳ್ಳಿಹಾಳ

ಹೋಳಿ ಆಚರಣೆಯ ಕಾಲಕ್ಕೆ ಆಂಧ್ರ ಪ್ರದೇಶದ ವಿಫಿಧೆಡೆ ಸಂಭವಿಸಿದ ದುರ್ಘಟನೆಗಳಲ್ಲಿ **17** ಮೃತಪಟ್ಟಿದ್ದಾರೆ.
[*ಸಂಯುಕ್ತ ಕರ್ನಾಟಕ*, 4.3.99] *-ಬಾವಾಸಾಹೇಬ ರಾ.ವಂಟಿ*, ಹುನಗುಂದ.

ಮರಣ ದಂಡನೆ

ಏಕೆ? ಹೇಗೆ? ಬೇಕೆ?

ರಾಜೀವ್ ಹತ್ಯೆಗೆ ಸಂಚು ನಡೆಸಿದ್ದು 41 ಮಂದಿ. ಈ ಪೈಕಿ 12 ಮಂದಿ ಸಾವನ್ನಪ್ಪಿದರು. ಉಳಿದ 26 ಮಂದಿ ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿತ್ತು. ಈಗ 19 ಮಂದಿ ಖುಲಾಸೆಗೊಂಡು ನಾಲ್ವರಿಗೆ ಗಲ್ಲು ಶಿಕ್ಷೆ ಕಾಯಂ ಆಗಿದೆ. ಈ ಹಿನ್ನೆಲೆಯಲ್ಲಿ ಮರಣ ದಂಡನೆ ಕುರಿತ ವಿಶೇಷ ವಿಶ್ಲೇಷಣೆ.

■ ಎಂ.ಎಲ್.ದೇಶೀಕರ್

ನೇಣುಗಂಬದ ನೆರಳಿನಲ್ಲಿ


ರಾಜೀವ್ ಹಂತಕರು




ಮುರುಗನ್



ನಳಿನಿ



ಸಂತನ್



ಅರಿವು

ತಪ್ಪು ಮಾಡಿದವರಿಗೆ ನ್ಯಾಯಾಂಗ ಹಲವು ಶಿಕ್ಷೆ ವಿಧಿಸುತ್ತದೆ. ಅದರಲ್ಲಿ ಮರಣ ದಂಡನೆ ಒಂದು. ಈಚೆಗೆ ರಾಜೀವ್ ಹತ್ಯೆ ಪ್ರಕರಣದಲ್ಲಿ ನಾಲ್ಕು ಜನಕ್ಕೆ ಸುಪ್ರೀಂಕೋರ್ಟು ಇಂಥ ಶಿಕ್ಷೆ ವಿಧಿಸಿದೆ. ಗಲ್ಲು ಶಿಕ್ಷೆ, ನೇಣು ಹಾಕುವುದು ಎಂದೆಲ್ಲ ಇದಕ್ಕೆ ಹೇಳುತ್ತಾರೆ. ನಮ್ಮಲ್ಲಿ ಮರಣ ದಂಡನೆಗೆ ಗುರಿಯಾಗುವ ವ್ಯಕ್ತಿಯನ್ನು ನೇಣು ಹಾಕಿ ಸಾಯಿಸುವುದರಿಂದ ಈ ಮಾತು ರೂಢಿಯಲ್ಲಿದೆ. ಮರಣ ದಂಡನೆ ಶಿಕ್ಷೆ ಬಹುಪಾಲು ದೇಶಗಳಲ್ಲಿ ಇದೆ. ಇಂಥ ಶಿಕ್ಷೆಗೆ ಗುರಿಯಾಗುವ ವ್ಯಕ್ತಿ ಆದಷ್ಟೂ ಕಡಿಮೆ ಯಾತನೆಗೆ ಗುರಿಯಾಗಬೇಕು ಎಂದು ವಾದವಿದೆ. ಅದಕ್ಕಾಗಿ ಕೆಲವು ದೇಶಗಳಲ್ಲಿ ವಿದ್ಯುತ್ ಕುರ್ಚಿ, ವಿಷದ ಇಂಜೆಕ್ಷನ್ ಬಳಸುತ್ತಾರೆ. ಬರ್ಬರ ಕೃತ್ಯ ನಡೆಸಿದ ವ್ಯಕ್ತಿಗೆ ದಯೆ ತೋರಬಾರದು, ಅವನು ಅತ್ಯಂತ ಕ್ರೂರ ರೀತಿಯಲ್ಲಿ ಸಾಯಬೇಕು ಎಂದು ಹಲವು ಸಮಾಜಗಳು ನಂಬುತ್ತವೆ. ಅಂಥ ಕಡೆ ಅಪರಾಧಿಯ ಕುತ್ತಿಗೆ ಕತ್ತರಿಸಿ, ಗುಂಡು ಹೊಡೆದು ಸಾಯಿಸುವುದೂ ಇದೆ. ಇಂಥ ಅಪರಾಧ ಮಾಡಿದರೆ ಏನು ಗತಿಯಾಗುತ್ತದೆ ಎಂದು ಬೇರೆಯವರಿಗೂ ತಿಳಿಯಲಿ ಎಂಬ ಕಾರಣಕ್ಕೇ ಈ ಶಿಕ್ಷೆಯನ್ನು ಸಾರ್ವಜನಿಕವಾಗಿಯೇ ಜಾರಿಗೊಳಿಸುವ ದೇಶಗಳೂ ಇವೆ.



ಮರಣದಂಡನೆ

ಕೆಲವು ದೇಶಗಳಲ್ಲಿ ತಪ್ಪು ಮಾಡಿದ ವ್ಯಕ್ತಿಯನ್ನು ಸಾರ್ವಜನಿಕವಾಗಿ ಕಲ್ಲು ಹೊಡೆದು ಸಾಯಿಸುವ ಪರಿಯೂ ಉಂಟು.

ಇಂಗ್ಲೆಂಡ್‌ನಂಥ ದೇಶದಲ್ಲಿ ಹದಿನೆಂಟನೇ ಶತಮಾನದಲ್ಲಿ ಅನಾಚಾರ ಮಾಡಿದ ಹೆಂಗಸನ್ನು ಬಹಿರಂಗವಾಗಿ ಸುಟ್ಟು ಸಾಯಿಸಲಾಗುತ್ತಿತ್ತು. ಕಾಲ ಕಳೆದಂತೆ ಮರಣ ದಂಡನೆ ಕುರಿತ ನಿಲುವು ಬದಲಾಗುತ್ತಾ ಬಂದಿದೆ. ಮನುಷ್ಯರಿಗೆ ಇನ್ನೊಂದು ಜೀವಿಯನ್ನು, ಅದರಲ್ಲೂ ಮನುಷ್ಯನನ್ನು ಕೊಲ್ಲುವ ಹಕ್ಕು ಇರಬಾರದೆಂಬುದು ಮಾನವತಾವಾದಿಗಳ ಇತ್ತೀಚಿನ ಕೂಗು. ಅದೇ ಕೊಂಚ ಗಟ್ಟಿ ದನಿಯೂ ಆಗುತ್ತಿದೆ.

ಈ ಹಿನ್ನೆಲೆಯಲ್ಲಿ ಮರಣದಂಡನೆ ಕುರಿತಾದ ಹಲವು ವಿಚಾರಗಳನ್ನು ಓದುಗರ ಮುಂದಿಡುವ ಯತ್ನ ಈ ಲೇಖನದಲ್ಲಿದೆ. ಕಾನೂನು, ಪೊಲೀಸು ವ್ಯವಸ್ಥೆ ಮತ್ತು ಮಾನವ ಹಕ್ಕುಗಳ ಬಗ್ಗೆ ಚಿಂತಿಸುವ ಜನ ಆ ಕುರಿತು ಹೇಳಿದ್ದು ಹೀಗಿದೆ.

"ಮರಣ ದಂಡನೆ ಖಂಡಿತ ಇರಬೇಕು"



ವಿಜಯ ಸಾಸನೂರು ಬರಹಗಾರರು. ಈಗವರು ರಾಜ್ಯ ಕಾರಾಗೃಹಗಳ ಇನ್‌ಸ್ಪೆಕ್ಟರ್ ಜನರಲ್. ಯಾವುದೇ ವಿಚಾರಕ್ಕೂ ಸ್ಪಷ್ಟತೆಯಿಂದ ಪ್ರತಿಕ್ರಿಯಿಸಬಲ್ಲವರು. ಮರಣದಂಡನೆ ಕುರಿತಾದ ಲೇಖನ ಸಿದ್ಧಪಡಿಸುವಾಗ ಸಹಜವಾಗಿ ನಮಗೆ ಹೊಳೆದ ಮೊದಲ ವ್ಯಕ್ತಿ. ಅವರನ್ನು ಅವರ ಕಚೇರಿಯಲ್ಲಿ ಕಂಡು ಮಾತಾಡಿಸಿದಾಗ ವ್ಯಕ್ತವಾದ ವಿಚಾರಗಳಿವು.

ವಿಜಯ ಸಾಸನೂರು
ಸಂದರ್ಶನ

ಬದುಕು-ಮರಣದಂಡನೆ ಕುರಿತು ನಿಮ್ಮ ಅಭಿಪ್ರಾಯ ಏನು?

ವಿಜಯ ಸಾಸನೂರು-ಮರಣ ದಂಡನೆ ಇರಬೇಕು. ಇದು ನನ್ನ ಖಚಿತ ಅಭಿಪ್ರಾಯ. ಬಿಲ್ಲಾ-ರಂಗಾ ಅವರಂಥ ಬರ್ಬರ ಹಂತಕರು, ಭಯೋತ್ಪಾದಕರು, ಮರ್ಸೆನರಿಗಳು, ಸುಪಾರಿ ಹಂತಕರನ್ನು ಗಲ್ಲಿಗೇರಿಸುವುದರಲ್ಲಿ ತಪ್ಪೇನೂ ಇಲ್ಲ. ಇನ್ನೊಬ್ಬರ ಜೀವ, ಅಸ್ತಿತ್ವದ ಬಗ್ಗೆ ಇನಿತೂ ಗೌರವ ಇಲ್ಲದೆ, ಮೈಗಂಟಿ ಕಚ್ಚಿದ ಕೀಟವನ್ನು ಹೊಸಕಿ ಹಾಕುವಂತೆ ಮನುಷ್ಯ ಜೀವಗಳನ್ನು ಹೊಸಕಿ ಹಾಕಿಬಿಡುವ ವ್ಯಕ್ತಿಗೆ, ವ್ಯಕ್ತಿಗಳಿಗೆ ಕ್ಷಮೆ ಇರಬಾರದು. ಅಂಥವರಿಗೆ ಖಂಡಿತ ಮರಣ ದಂಡನೆ ನೀಡಲೇಬೇಕು. ಅಂಥವರಿಗೆ ಜೀವಾವಧಿ ಶಿಕ್ಷೆ ವಿಧಿಸಿದರೆ ಖಂಡಿತಾ ಸರಕಾರಕ್ಕೆ ಅನಗತ್ಯ ಹೊರೆ. ಆವೇಶದಲ್ಲಿ ಕೊಲೆ ಮಾಡಿದವರ, ತಮ್ಮ ಉಳಿವಿಗಾಗಿ ಕೊಲೆ ಮಾಡಿದವರ ವಿಚಾರ ಬಿಡಿ.

ನಮ್ಮ ನ್ಯಾಯಾಂಗ ಅಂಥವರನ್ನು ಸಹೃದಯತೆಯಿಂದಲೇ ನೋಡುತ್ತಾ ಬಂದಿದೆ. ಇಂಥವರಿಗೆ ಮರಣದಂಡನೆ ವಿಧಿಸುವುದು ಅಪರೂಪ. ಅವರಿಗೆ ಸಾಮಾನ್ಯವಾಗಿ ಜೀವಾವಧಿ ಶಿಕ್ಷೆ ವಿಧಿಸಲಾಗುತ್ತಿದೆ. ಇಂಥ ಬಹುಪಾಲು ಜನ ತಮ್ಮ ಕೃತ್ಯದ ಬಗ್ಗೆ ಪಶ್ಚಾತ್ತಾಪ ಪಡುತ್ತಾರೆ ಎಂದು ಸದಾ ಅವರೊಡನೆ ಇರುವ ಅಧಿಕಾರಿಗಳು ಹೇಳುತ್ತಾರೆ.

ಭಯೋತ್ಪಾದಕರು, ಮರ್ಸೆನರಿಗಳು (ಕೂಲಿ ಸೈನಿಕರು) ಬೇರೆ ರೀತಿ. ಜನತಂತ್ರ ವ್ಯವಸ್ಥೆಯಲ್ಲಿ ಆಯ್ಕೆಯಾದ ಸರಕಾರ ಅಸ್ಥಿರಗೊಳಿಸುವುದು ಇವರ ಉದ್ದೇಶ. ಇದಕ್ಕಾಗಿ ಎಂಥ ಬರ್ಬರ ಕೃತ್ಯಕ್ಕೂ ಹೇಸುವುದಿಲ್ಲ. ಇದಕ್ಕೆ ಶಿಕ್ಷೆ ಇಲ್ಲ ಅಂತಾದರೆ, ಕಾನೂನು ವ್ಯವಸ್ಥೆಯೇ ಕುಲಗೆಟ್ಟು ಹೋಗುತ್ತದೆ.

ಸುಪಾರಿ ಹಂತಕರು ಇನ್ನೂ ಕ್ರೂರಿಗಳು. ಅವರಿಗೆ ಒಂದಷ್ಟು ಹಣಬೇಕು. ಅದಕ್ಕಾಗಿ ಯಾರ ಜೀವಬೇಕಾದರೂ ತೆಗೆಯುತ್ತಾರೆ. ಸ್ವಾರ್ಥಕ್ಕೆ, ಇನ್ನೊಂದು ಜೀವ ಬಲಿ ತೆಗೆದುಕೊಳ್ಳುವ ಇಂಥವರಿಗೆ ಗಲ್ಲುಶಿಕ್ಷೆ ಖಂಡಿತ ಆಗಬೇಕು.

ಇನ್ನು ಬಿಲ್ಲಾ-ರಂಗಾನಂಥ ಬರ್ಬರ ಹಂತಕರ ವಿಚಾರ. ಇಂಥವರನ್ನು ಸುಮ್ಮನೆ ಬಿಟ್ಟರೆ ಸಮಾಜ ಉಳಿದೀತೇ? ಹಾಗೆ ನೋಡಿದರೆ ಚಾರ್ಲ್ಸ್ ಶೋಭರಾಜ್‌ಗೂ ಗಲ್ಲು ಶಿಕ್ಷೆ ವಿಧಿಸಬೇಕಿತ್ತು. ಅದ್ಹೇಗೆ ಆತ ಪಾರಾದನೋ! ನನಗೇ ಆಶ್ಚರ್ಯ. ಕೆಲವೇ ಕೆಲವು ರೂಪಾಯಿಗಳಿಗಾಗಿ ವಿಷ ಉಣಿಸಿ ಕೊಂದ ಈತ ಬದುಕುಳಿಯಬಾರದಿತ್ತು.

ಭಯೋತ್ಪಾದನೆ ಕುರಿತು ಬೇರೆ ಬೇರೆಯವರು ಬೇರೆ ಬೇರೆ ನಿಲುವು ತಾಳುವುದು ಸಾಧ್ಯ. ಇಲ್ಲಿನ ತೀರ್ಮಾನಕ್ಕೆ ನಿಂತ ನೆಲೆ ಮುಖ್ಯ. ಭಗತ್‌ಸಿಂಗ್‌ನ ಉದಾಹರಣೆ ನೋಡಿ. ಆತ ನಮ್ಮ ಪಾಲಿಗೆ ದೇಶ ಭಕ್ತ. ಬ್ರಿಟಿಷರ ದೃಷ್ಟಿಯಲ್ಲಿ ಆತ ಭಯೋತ್ಪಾದಕ.


ಬದುಕು-ಕೆಲವು ದೇಶಗಳಲ್ಲಿ ಶಿರಚ್ಛೇದನದಂಥ ಶಿಕ್ಷೆಗಳು ಇವೆ. ಇಂಥದರ ಬಗ್ಗೆ ನೀವೇನು ಹೇಳುತ್ತೀರಿ?

ಸಾಸನೂರು-ಅಲ್ಲಿನ ಸ್ಥಿತಿ, ಸಮಾಜ, ಇತಿಹಾಸಗಳ ಅರಿವು ಇಲ್ಲದೇ ಆ ಬಗ್ಗೆ ಮಾತಾಡುವುದು ತಪ್ಪಾಗುತ್ತದೆ. ಹಾಗಾಗಿ ನಾನೇನೂ ಹೇಳಲು ಹೋಗುವುದಿಲ್ಲ. ನಮ್ಮಲ್ಲಿನ ನ್ಯಾಯಾಂಗ, ದಂಡ ಸಂಹಿತೆ ತುಂಬಾ ವಿಶ್ವಾಸಾರ್ಹ ಅಂತ ಮಾತ್ರ ಹೇಳಬಲ್ಲೆ. ನಮ್ಮಲ್ಲಿ ಅಪರೂಪಕ್ಕೆ ಮರಣ ದಂಡನೆ ವಿಧಿಸುತ್ತಾರೆ. ಈಗ ಸುಪ್ರೀಂಕೋರ್ಟು ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ನಾಲ್ಕು ಜನಕ್ಕೆ ಮರಣ ದಂಡನೆ ವಿಧಿಸಿದೆ.

ನಮ್ಮಲ್ಲಿನ ನ್ಯಾಯಾಂಗ ತುಂಬಾ ವಿಶ್ವಾಸಾರ್ಹ, ನೆರೆಯ ಪಾಕಿಸ್ತಾನದಲ್ಲೂ ಜನತಂತ್ರ ವ್ಯವಸ್ಥೆ ಇದೆ. ಜನರಿಂದ ಆರಿಸಿದ ಸರಕಾರ ಇದೆ. ಆದರೆ ಪತ್ರಕರ್ತ ನಜಂ ಸೇಠಿ ಪ್ರಕರಣದಲ್ಲಿ ಮಧ್ಯ ಪ್ರವೇಶಿಸಲು ಅಲ್ಲಿ ಹೈಕೋರ್ಟು ನಿರಾಕರಿಸಿ ಕೈತೊಳೆದುಕೊಂಡಿದೆ. ನಮ್ಮಲ್ಲಿ ಹಾಗಾಗುವುದು ಸಾಧ್ಯವಿತ್ತೆ. ಇಂಥದೊಂದು ಅರ್ಜಿ ನಮ್ಮಲ್ಲಿ ಕೋರ್ಟಿನ ಎದುರು ಬಂದಿದ್ದರೆ, ಕೂಡಲೇ ಬಂಧಿತನನ್ನು ಹಾಜರು ಮಾಡುವಂತೆ ಆದೇಶ ಹೊರಬೀಳುತ್ತಿತ್ತು. ಅದಕ್ಕೇ ಹೇಳಿದ್ದು: ನಮ್ಮಲ್ಲಿನ ನ್ಯಾಯಾಂಗಕ್ಕೆ ಹೆಚ್ಚು ವಿಶ್ವಾಸಾರ್ಹತೆ.

ಬದುಕು-ಎನ್‌ಕೌಂಟರ್ ವಿಷಯಕ್ಕೆ ಬರೋಣ. ಕೆಲವೊಮ್ಮೆ ಪೊಲೀಸರೇ ಇಂಥ ಎನ್‌ಕೌಂಟರ್‌ಗಳನ್ನು ಮಾಡಿ ಹತ್ಯೆ ಮಾಡುತ್ತಾರೆ ಅನ್ನುವ ನಂಬಿಕೆ ಇದೆ. ಪಾತಕಿಗಳು (ಮುಂಬಯಿಯಲ್ಲಿ), ಆಂಧ್ರದ ಹಲವೆಡೆ ನಕ್ಸಲೀಯರು ಇಂಥ ನಕಲಿ ಎನ್‌ಕೌಂಟರ್‌ಗಳಿಗೆ ಗುರಿಯಾಗುತ್ತಿದ್ದಾರೆ ಅಲ್ಲವೇ?

ಸಾಸನೂರು-ಯಾವತ್ತೂ ಎನ್‌ಕೌಂಟರ್‌ಗಳನ್ನು ಪೊಲೀಸರಾಗಲಿ, ಸೈನಿಕರಾಗಲಿ ತಾವೇ



ಮರಣದಂಡನೆ

ರೂಪಿಸಬಾರದು. ಸೈನಿಕರ ಇಂಥ ಕಾರ್ಯಾಚರಣೆ ಬಯಲಿಗೆ ಬರೋದಿಲ್ಲ. ಪೊಲೀಸರು ನಕಲಿ ಎನ್‌ಕೌಂಟರ್ ಮಾಡಿದರೆ ಒಂದಲ್ಲ ಒಂದು ದಿನ ಖಂಡಿತ ಬಯಲಾಗುತ್ತೆ, ಅದು ಸತ್ಯ. ಪೊಲೀಸರು ಹೆಚ್ಚು ಆತ್ಮಸಾಕ್ಷಿಯಿಂದ ಇಂಥ ಕಡೆ ವರ್ತಿಸಬೇಕಾಗುತ್ತೆ. ನಿಜವಾಗಿ ಅಗತ್ಯವಿದ್ದಾಗ ಇಂಥ ಎನ್‌ಕೌಂಟರ್ ನಡೆದರೆ ಮೃತನ ಕಡೆಯವರು ಕೂಡ ಒಪ್ಪಿಕೊಳ್ಳುತ್ತಾರೆ. ಅದೊಂದು ನಾಟಕ ಅಂತಾದರೆ ಜನರೇ ಪೊಲೀಸರ ವಿರುದ್ಧ ತಿರುಗಿಬೀಳುತ್ತಾರೆ. ಅದೊಂದು ರೀತಿ ಸರಕಾರನೇ ಹತ್ಯೆ ನಡೆಸಿದ ಹಾಗೆ.

ಬದುಕು-ಮಾನವ ಹಕ್ಕುಗಳಿಗೆ ಹೋರಾಡುವವರು ಮರಣ ದಂಡನೆ ರದ್ದಾಗಬೇಕು ಎಂದೇ ಆಂದೋಲನ ಹಮ್ಮಿಕೊಂಡಿದ್ದಾರೆ....!

ಸಾಸನೂರು-ಇಂಥವರು ಯಾವತ್ತೂ ಅಪರಾಧಿಯ ಬಗ್ಗೆಯೇ ಹೆಚ್ಚು ಕರುಣೆ ಮತ್ತು ಮಾನವೀಯ ಭಾವನೆಯಿಂದ ನೋಡ್ತಾರೆ. ಅವರು ಅಪರಾಧಕ್ಕೆ ಬಲಿಯಾದವರು ಅವರನ್ನು ಅವಲಂಬಿಸಿದ್ದ ಕುಟುಂಬಗಳವರ ಕ್ಷೋಭೆಯನ್ನು ಕೂಡ ಅರ್ಥ ಮಾಡಿಕೊಳ್ಳಬೇಕು.

ಗಲ್ಲು ಶಿಕ್ಷೆಗೆ ಗುರಿಯಾಗಬೇಕಾದವರಿಗೆ ಅನುಕಂಪ ತೋರಿದರೆ, ಅಂಥ ಮತ್ತಷ್ಟು ದುಷ್ಕೃತ್ಯಗಳಿಗೆ, ದುಷ್ಕರ್ಮಿಗಳಿಗೆ ಬಲ ಬಂದಂತೆ. ನಾವು ತಪ್ಪು ನಡೆದರೆ ಶಿಕ್ಷೆ ಆಗುತ್ತೆ ಅನ್ನುವ ಭಯ, ನಿಯಂತ್ರಣ ಇರಬೇಕು.

ನಕ್ಸಲೀಯರು ಭಯೋತ್ಪಾದಕರಲ್ಲ

ನಮ್ಮ ಸಂದರ್ಶನ ವೇಳೆ ವಿಜಯ ಸಾಸನೂರು ನಕ್ಸಲೀಯರ ವಿಚಾರ ಪ್ರಸ್ತಾಪಿಸುತ್ತಾ, ಅವರು ಭಯೋತ್ಪಾದಕರಲ್ಲ ಎಂದರು. ಆಯಾ ಪ್ರದೇಶದ ಸಾಮಾಜಿಕ, ಆರ್ಥಿಕ ಸ್ಥಿತಿ ಇಂಥ ಚಟುವಟಿಕೆಗೆ ಕಾರಣ. ನಕ್ಸಲೀಯರು ಭಯೋತ್ಪಾದಕರಲ್ಲ; ಮಾರ್ಗದರ್ಶನ ಸಿಕ್ಕದೆ ಅಂಥ ಹಾದಿ ಹಿಡಿದವರು ಎಂದರು. ಅವರು ಹೇಳಿದ ಇನ್ನೂ ಕೆಲವು ವಿಚಾರಗಳು :


ನಕ್ಸಲೀಯರು ಕ್ರಿಯಾಶೀಲರಾಗೋದು ಅಭಿವೃದ್ಧಿ ಕಾಣದ ಪ್ರದೇಶಗಳಲ್ಲಿ. ಇವರು ಇದ್ದವರನ್ನು ಬೆದರಿಸಿ ನೂರು ರೂಪಾಯಿ ಕಿತ್ಕೊಂಡು ಜನಕ್ಕೆ ಐದು ರೂಪಾಯಿ ಕೊಡ್ತಾರೆ. ಅವರು ಕೊಟ್ಟರು ಅನ್ನೋದು ಅಷ್ಟೇನೇ, ಜನಕ್ಕೆ ಪ್ರಯೋಜನ ಇಲ್ಲ.

ಒಂದು ಸಲ ಅವರು ಪ್ರಬಲರಾದರೆ, ತಾವೇ ಪ್ರತಿ ಸರಕಾರ ರಚಿಸ್ತೀವಿ ಅಂತ ಹೇಳಿ ಶೋಷಣೆಗೆ ನಿಲ್ತಾರೆ. ಇಂಥ ಚಟುವಟಿಕೆಯಿಂದ ಜನಕ್ಕೆ ಲಾಭ ಇರೋದಿಲ್ಲ.

ನಾನು ಸೆಂಟ್ರಲ್ ರೇಂಜ್ ಡಿಐಜಿ ಆಗಿದ್ದಾಗ ಪಾವಗಡದ ತಿರುಮಣಿ ಎಂಬಲ್ಲಿ ನಕ್ಸಲೀಯರ ಚಟುವಟಿಕೆ ಆರಂಭವಾಯಿತು. ಶುರುಮಾಡಿದ್ದು ಅನಂತಪುರದ ನಕ್ಸಲೀಯರು. ವಿಚಾರ ಮಾಡಿದಾಗ ಆ ಭಾಗದ ಅಭಿವೃದ್ಧಿಯ ಕೊರತೇನೇ ಇದಕ್ಕೆ ಕಾರಣ ಅನ್ನಿಸಿತು. ಕಂದಾಯ ಮತ್ತು ಪೊಲೀಸು ಇಲಾಖೆ ಇಡೀ ಪರಿಸ್ಥಿತಿ ಅಧ್ಯಯನ ಮಾಡಿ ಕಾರಣ ತಿಳಿದು ಸರಕಾರದ ಮುಂದೆ ಮಂಡಿಸಿದೆವು. ಆಗ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ತುರ್ತಾಗಿ ತೊಂಬತ್ತು ಲಕ್ಷ ಹಣ ಬಿಡುಗಡೆ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದರು. ಅಷ್ಟೇ ಅಲ್ಲ ಇಂಥ ಕಾರ್ಯಗಳು ಪೊಲೀಸರ ನಿಗಾದಲ್ಲಿಯೇ ನಡೆಯಬೇಕಂತಲೂ ಸೂಚಿಸಿದ್ದರು.

ಇಂಥ ವಾಸ್ತವ ಮತ್ತು ಸೂಕ್ಷ್ಮಗಳನ್ನು ಅರಿಯದೇ ಜನತಂತ್ರ ರೀತಿಯ ಪ್ರತಿಭಟನೆ ಬಿಟ್ಟು, ಹಾದಿ ತಪ್ಪಿದ ಕೆಲವರು ನಡೆಸೋ ಚಟುವಟಿಕೆಯಿಂದ ಏನೂ ಪ್ರಯೋಜನ ಆಗೋದಿಲ್ಲ.

''ಶಿಕ್ಷೆಗಳು ಇನ್ನಷ್ಟು ಕಠಿಣವಾಗಬೇಕು''



ಬಿ.ಎಸ್.ಅಬ್ಬಾಯಿ ಬೆಂಗಳೂರು ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್. ಹಿರಿಯ ಅಧಿಕಾರಿಗಳಿಂದ ಹಿಡಿದು ಜೈಲಿನ ಕೈದಿಗಳವರೆಗೆ ಎಲ್ಲರಲ್ಲೂ ಅಭಿಮಾನ ಹುಟ್ಟಿಸುವ ವ್ಯಕ್ತಿ. ನೋಡಲು ಕೊಂಚ ದರ್ಪದ ಸ್ವಭಾವದವರಾಗಿ ಕಂಡರೂ, ಕೈದಿಗಳ ನೋವು, ಅನಾರೋಗ್ಯ, ದುರಂತಗಳಿಗೆ ಮಾನವೀಯತೆಯಿಂದ ಸ್ಪಂದಿಸುವ ವ್ಯಕ್ತಿ ಎಂಬುದು ಅವರೊಡನೆ ಕುಳಿತಿದ್ದ ಕೆಲವು ಹೊತ್ತಿನಲ್ಲೇ ಅರಿವಾಯಿತು. ಮರಣ ದಂಡನೆ, ಜಾರಿ ಕುರಿತಂತೆ ವಿವರವಾದ ಮಾಹಿತಿ ಒದಗಿಸಿದ ಅವರು ನಮ್ಮ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದ್ದು ಇಲ್ಲಿದೆ.

ಬಿ.ಎಸ್.ಅಬ್ಬಾಯಿ
ಸಂದರ್ಶನ

ಬದುಕು-ಮರಣ ದಂಡನೆ ಇರಬೇಕೇ?

ಅಬ್ಬಾಯಿ-ಖಂಡಿತ ಇರಬೇಕು.

ಬದುಕು-ಇಂಥ ಶಿಕ್ಷೆ ತೀರಾ ಕ್ರೂರ ಅಲ್ಲವೇ? ಇಂಥದೊಂದು ಶಿಕ್ಷೆ ಜಾರಿ ಮಾಡುವಾಗ ನಿಮಗೇನು ಅನ್ನಿಸುತ್ತದೆ?

ಅಬ್ಬಾಯಿ-ನಾವು ಕಾನೂನು ಪಾಲಕರು. ಮರಣ ದಂಡನೆ ಶಿಕ್ಷೆ ಜಾರಿಗೆ ಬರುವಾಗ ಹಲವಾರು ವಿಧಿ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಸೆಷನ್ಸ್ ನ್ಯಾಯಾಲಯ ಇಂಥ ಶಿಕ್ಷೆಯನ್ನು ಅಪರೂಪದಲ್ಲಿ ಅಪರೂಪ ಪ್ರಕರಣಗಳಲ್ಲಿ ಮಾತ್ರ ವಿಧಿಸುತ್ತದೆ. ರಾಜ್ಯದಲ್ಲಿ ಕಳೆದ ಹದಿನಾರು ವರ್ಷಗಳಲ್ಲಿ ಒಂದೂ ಮರಣದಂಡನೆ ಶಿಕ್ಷೆ ವಿಧಿಸಿಲ್ಲ ಎಂಬುದರಿಂದಲೇ ಇದು ಸಾಬೀತಾಗುತ್ತದೆ. ಶಿಕ್ಷೆ ಜಾರಿ ಮಾಡುವಾಗ ನಾವು ಕೇವಲ ಕಾನೂನು ಪಾಲಕರು. ಅಲ್ಲಿ ವೈಯಕ್ತಿಕ ವಿಚಾರವೆಂಬುದು ಇರುವುದಿಲ್ಲ.

ಬದುಕು-ಕೆಲವು ದೇಶಗಳಲ್ಲಿ ಕ್ರೂರ ರೀತಿಯ ಶಿಕ್ಷೆಗಳಿವೆ.... ಅದರ ಬಗ್ಗೆ ನಿಮ್ಮ ಪ್ರತಿಕ್ರಿಯೆ!

ಅಬ್ಬಾಯಿ-ಬೇರೆ ದೇಶಗಳ ವಿಚಾರ ಇಲ್ಲಿ ಬೇಡ. ನಮ್ಮಲ್ಲಿಯ ಶಿಕ್ಷೆಗಳು ಇನ್ನೂ ಕಠಿಣವಾಗಬೇಕು. ಅಪರಾಧಗಳು ಹೆಚ್ಚುತ್ತಿರುವುದು ನೋಡಿದರೆ ಇದು ಅನಿವಾರ್ಯ ಅನಿಸುತ್ತದೆ. ನಮ್ಮಲ್ಲಿ ಜೀವಾವಧಿ ಶಿಕ್ಷೆ ಅಂದರೆ ಕೇವಲ ಹದಿನಾಲ್ಕು ವರ್ಷ. ಕೆಲವು ದೇಶಗಳಲ್ಲಿ ಐವತ್ತು, ನೂರು ವರ್ಷ ಶಿಕ್ಷೆ ವಿಧಿಸುವುದೂ ಉಂಟು. ಅದರಲ್ಲಿ ಪೆರೋಲ್ ಮುಂತಾದ ರಿಯಾಯಿತಿಗಳು ಇರುತ್ತವೆ ಬಿಡಿ. ಆದರೆ ನಮ್ಮಲ್ಲಿ ಕನಿಷ್ಠ ಜೀವಾವಧಿ ಶಿಕ್ಷೆ ಎಂದರೆ, ಆ ವ್ಯಕ್ತಿ ಬದುಕಿರುವವರೆಗೂ ಸೆರೆವಾಸ ಅನುಭವಿಸಬೇಕು ಎಂಬಷ್ಟಾದರೂ ಕಠಿಣವಾಗಿರಬೇಕು.

ಮರಣ ದಂಡನೆಯ ಇತಿಹಾಸ

ಮರಣ ದಂಡನೆಯ ಇತಿಹಾಸ ದೊಡ್ಡದು. ಸಿಗುವ ದಾಖಲೆಗಳಲ್ಲಿ ಇದರ ಮೊದಲ ಪ್ರಸ್ತಾಪ ಬರುವುದು ಈಜಿಪ್ಟಿನ ನಾಗರಿಕತೆಯಲ್ಲಿ. 'ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು' ಎಂಬುದು ಅಲ್ಲಿನ ನಿಯಮ. ಕಣ್ಣು ಕಿತ್ತವನ ಕಣ್ಣು ಕೀಳಬೇಕು. ಹಲ್ಲು ಮುರಿದವನ ಹಲ್ಲು ಮುರಿಯಬೇಕು ಎಂದೇ ಅಲ್ಲಿನ ನಂಬಿಕೆ. ಹೀಗಾಗಿ ಕೊಲೆಗಾರನಿಗೆ ಸಾವು ಅನಿವಾರ್ಯ ದಂಡನೆ.

ಇಂಥ ನಿಯಮ ಈಗಲೂ ಕೊಲ್ಲಿ ರಾಷ್ಟ್ರಗಳಲ್ಲಿ ಇದೆ. ನಂತರದ ಬಹುಮುಖ್ಯ ಇತಿಹಾಸ ಘಟ್ಟ ಎಂದರೆ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳದು. ಅಲ್ಲಿಯೂ ಮರಣ ದಂಡನೆ ಈಜಿಪ್ತಿಯನ್ನರಂತೆಯೇ ಕ್ರೂರ. ಒಂದು ಬದಲಾವಣೆ ಎಂದರೆ ಇಲ್ಲಿ ವಿಷದ ಬಳಕೆಯ ಮೊದಲ ಪ್ರಸ್ತಾಪವಿದೆ. ತತ್ವಜ್ಞಾನಿ ಸಾಕ್ರಟೀಸ್ ದಂಡನೆಗೆ ಗುರಿಯಾದ. ಆತ ಕುಡಿದಿದ್ದು ಹೆಮ್‌ಲಾಕ್ ಎಂಬ ವಿಷ.

ಅತ್ಯಂತ ಪ್ರಾಚೀನ ನಾಗರಿಕತೆ ಎನಿಸಿಕೊಂಡ ಭಾರತದಲ್ಲಿ ಮೊದಲು ದೊರೆಯುವ ದಂಡ ಸಂಹಿತೆ ಮೌರ್ಯರ ಕಾಲದ್ದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇದರ ಪ್ರಸ್ತಾಪವಿದೆ. ಆ ಕಾಲದ ಹಲವು ಕತೆಗಳನ್ನು ಕೇಳಿದಾಗ ಉಪವಾಸದಿಂದ ಕೊಲ್ಲುವುದೂ ಒಂದು ತಂತ್ರವಾಗಿತ್ತು ಎಂದು ತಿಳಿಯುತ್ತದೆ.

ನೇಣು ಹಾಕುವುದು, ಕತ್ತು ಕತ್ತರಿಸುವುದು, ಆನೆಯ ಕಾಲಿಗೆ ಕಟ್ಟಿ ಎಳೆಸುವುದು, ರಥದ ಗಾಲಿಗೆ ಕಟ್ಟುವುದು ಇಂಥ ಹಲವಾರು ವಿಧಾನಗಳು ಹಿಂದಿನ ಕಾಲದಲ್ಲಿ ಇದ್ದಹಾಗೆ ಕಾಣುತ್ತದೆ. ಶೂದ್ರಕನ ಕಾಲದವರೆಗೆ ನೇಣು ಹಾಕುವುದು ಸಾಮಾನ್ಯವಾಗಿ ಅನುಸರಿಸುವ ಶಿಕ್ಷೆಯಾಗಿತ್ತು.

ಭಾರತದ ಮೇಲೆ ಪರಕೀಯರ ದಾಳಿ ಆರಂಭವಾದಂತೆ ಪ್ರಭುತ್ವ ವಿಧಿಸುವ ಶಿಕ್ಷೆಗಳು ಹೆಚ್ಚು ಕ್ರೂರವಾದ ಹಾಗೆ ಕಾಣುತ್ತದೆ. ಬಹಿರಂಗ ಶಿರಚ್ಛೇದನ, ಚರ್ಮ ಸುಲಿಯುವುದು ಮುಂತಾದ ದಂಡನೆಯ ವಿಧಿಗಳನ್ನು ಮುಸ್ಲಿಂ ರಾಜರು ತಮ್ಮ ನೆಲದಿಂದ ಇಲ್ಲಿಗೂ ತಂದ ಹಾಗೆ ಕಾಣುತ್ತದೆ. ಅಕ್ಬರನ ಕಾಲಕ್ಕೆ ಜೀವಂತ ಹುಗಿಯುವ ಕ್ರಮವೂ ಜಾರಿಗೆ ಬಂದಿದ್ದಿರಬೇಕು. ಸಲೀಂ-ಅನಾರ್ಕಲಿಯ ಪ್ರಸಂಗ ಕೇವಲ ಕತೆ ಎಂದು ತಳ್ಳಿಹಾಕುವುದು ಕಷ್ಟ. ಅನಾರ್ಕಲಿಯನ್ನು ಜೀವಂತವಾಗಿ ಹುಗಿದದ್ದು, ಕತೆಯ ರಮ್ಯತೆಗೆ, ಭೀಭತ್ಸತೆಗೆ ಬಳಸಿಕೊಂಡ ಅಂಶವಾಗಿರಬಹುದು. ಆದರೆ; ಆ ಕಾಲಕ್ಕೆ ಅಂಥದೊಂದು ಪದ್ಧತಿ ಜಾರಿಗೆ ಬಂದಿದ್ದಿರಬೇಕು.

ಮರಣ ದಂಡನೆಗೂ ಜನತಂತ್ರ ವ್ಯವಸ್ಥೆಯ ಬೆಳವಣಿಗೆಗೂ ಹತ್ತಿರ ಸಂಬಂಧವಿದೆ. ರಾಜಪ್ರಭುತ್ವ ಅಳಿದು ಜನರೇ ಆಳ್ವಿಕೆ ನಡೆಸಬೇಕು ಎಂಬ ವಿಚಾರ ಇಂಗ್ಲೆಂಡಿನಲ್ಲಿ ತೀವ್ರವಾದಾಗ, ರಾಜನನ್ನು ಪದಚ್ಯುತಗೊಳಿಸಿ ಮುಖ್ಯಸ್ಥನಾದ ದಂಡನಾಯಕ ಆಲಿವರ್ ಕ್ರಾಂವೆಲ್ ಅಂದಿನ ಇಂಗ್ಲೆಂಡಿನ ದೊರೆಯನ್ನೇ ಮರಣ ದಂಡನೆಗೆ ಗುರಿಮಾಡಿದ.

ಆಳುವುದು ದೈವದತ್ತ ಹಕ್ಕು ಎಂದು ನಂಬಿದ್ದ ರಾಜಮನೆತನಗಳ ವಿರುದ್ಧ ದಂಗೆ ಆರಂಭವಾಯಿತು. ಫ್ರಾನ್ಸಿನ ಮಹಾಕ್ರಾಂತಿ ತೀವ್ರತರವಾಗಿದ್ದಾಗ ರಾಬಸ್ಪಿಯರ್ ಎಂಬಾತ ಗಿಲೋಟಿನ್ ಯಂತ್ರ ಕಂಡುಹಿಡಿದ. ಇದರಿಂದಾಗಿ ಅತ್ಯಂತ ಸರಳ ತಂತ್ರದಿಂದ ಜನರ ಕತ್ತು ಕತ್ತರಿಸುವುದು ಸಾಧ್ಯವಾಯಿತು. ಈ ಗಿಲೋಟಿನ್ ಯಂತ್ರಕ್ಕೆ ಫ್ರಾನ್ಸಿನ ಹದಿನಾಲ್ಕನೆ ಲೂಯಿ, ಆತನ ಮಗ, ಹೆಂಡತಿ ಮೇರಿ ಆಂಟಾಯಿನೆಟ್ ಬಲಿಯಾದರೆ, ದಿನ ಬೆಳಗಾದರೆ ಒಬ್ಬರಲ್ಲ ಒಬ್ಬರು ಈ ಯಂತ್ರಕ್ಕೆ ಬಲಿಯಾಗುತ್ತಾ ಹೋದರು. ಕೊನೆಗೆ ಗಿಲೋಟಿನ್ ಯಂತ್ರದ ಹಾವಳಿ ನಿಂತಿದ್ದು ಖುದ್ದು ರಾಬಸ್ಪಿಯರ್‌ನನ್ನೇ ಗಿಲೋಟಿನ್‌ಗೆ ಒಡ್ಡಿದ ಮೇಲೆ. ಮಧ್ಯಯುಗ ದಾಟಿ ಕೈಗಾರಿಕಾ ಕ್ರಾಂತಿಯತ್ತ ಜಗತ್ತು ಸರಿಯತೊಡಗಿದಾಗ ವಿಚಾರಗಳ ಸರಣಿಯಲ್ಲಿ ಬದಲಾವಣೆ ಕಂಡಿತು. ಇದಕ್ಕೆ ವೈಚಾರಿಕ ಕ್ರಾಂತಿಯೂ ಕಾರಣ. ಜಗತ್ತಿನ ಎರಡು ಮಹಾಯುದ್ಧಗಳೂ ಕಾರಣ. ಜಗತ್ತು ವಿಸ್ತಾರವಾಗುತ್ತಿದ್ದ ಅಂದಿನ ದಿನಗಳಲ್ಲಿ ಪ್ರಭುತ್ವದ ವಿರುದ್ಧ ದಂಗೆ, ಕಡಲ್ಗಳ್ಳತನ, ಸಮುದ್ರಯಾನದ ನಡುವೆ ಹಡಗಿನ ಸಿಬ್ಬಂದಿಯ ದಂಗೆ ಮಹಾಪರಾಧಗಳು ಎನಿಸಿದ್ದವು. ಇಂಥದಕ್ಕೆ ಮರಣ ದಂಡನೆಯೇ ಶಿಕ್ಷೆ. ಇಂಗ್ಲೆಂಡಿನಂಥ ಸಂಪ್ರದಾಯಸ್ಥ ದೇಶದಲ್ಲಿ ಹೆಣ್ಣಿನ ಅನೈತಿಕತೆ ಘೋರ ಅಪರಾಧ. ಅಂಥ ವ್ಯಕ್ತಿಯನ್ನು ಸಾರ್ವಜನಿಕವಾಗಿ ಸುಟ್ಟು ಕೊಲ್ಲಲಾಗುತ್ತಿತ್ತು.

ಎರಡನೆಯ ಮಹಾಯುದ್ಧ ಮನುಷ್ಯನ ಅಂತಃಸತ್ವ ಕಲಕಿದ ಘೋರ ಸಾಮೂಹಿಕ ಹತ್ಯೆಗಳನ್ನು ಕಂಡಿತು. ಲಕ್ಷಾಂತರ ಯಹೂದಿಗಳನ್ನು ವಿಷಾನಿಲ ಪ್ರಯೋಗದಿಂದ ಕೊಂದ ಹಿಟ್ಲರ್‌ನ ತಂಡ ಒಂದೆಡೆಯಾದರೆ, ತಲೆಮಾರುಗಳವರೆಗೆ ಮಾರಕ ಪರಿಣಾಮ ಬೀರುವ ಅಣುಬಾಂಬಿನ ಪ್ರಯೋಗ ಕೂಡ ಇಲ್ಲಿ ನಡೆಯಿತು. ಮನುಷ್ಯ ಬದುಕಿನ ಕ್ಷಣಿಕತೆಯ ಬಗೆಗಿನ ತಲ್ಲಣ ಹುಟ್ಟಿದ್ದೇ ಆಗ. ಆಗಿನಿಂದಲೂ ಮನುಷ್ಯ ಜೀವದ ಮಹತ್ತಿನ ಬಗ್ಗೆ ಗಂಭೀರ ಚಿಂತನೆ ನಡೆಯತೊಡಗಿದೆ. ಮರಣದಂಡನೆ ಇರಬೇಕೇ? ಬೇಡವೋ? ಇದೊಂದು ಬೃಹತ್ ಪ್ರಶ್ನೆ.

ಬರ್ಬರ ಕೃತ್ಯಗಳಲ್ಲಿ ತೊಡಗಿದವರನ್ನು ಇಂಥ ಶಿಕ್ಷೆಗೆ ಗುರಿ ಮಾಡದಿದ್ದರೆ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ ಎಂದು ಆಳುವ ವರ್ಗದ ವಾದ. ವ್ಯವಸ್ಥೆಯ ಸಂರಕ್ಷಣೆಯ ಹೆಸರಲ್ಲಿ ಸರಕಾರಗಳೇ ಹತ್ಯೆಗೆ ಮುಂದಾಗುತ್ತಿವೆ ಎಂಬುದು ಮಾನವತಾವಾದಿಗಳ ಕೂಗು.


''ಯಾತನೆಯ ಬಂಧನಕ್ಕಿಂತ ಮರಣದಂಡನೆ ವಾಸಿ''

ಸಂಜೆವಾಣಿ

ಕೆಲವು ಸಲ ನಾನಾ ಬಗೆಯ ಯಾತನೆಗೆ ಗುರಿಯಾಗಿ ಜೀವಾವಧಿ ಶಿಕ್ಷೆ ಅನುಭವಿಸುವುದಕ್ಕಿಂತ ಮರಣ ದಂಡನೆ ವಾಸಿ ಅನಿಸುತ್ತದೆ ಎನ್ನುತ್ತಾರೆ 'ದಿನ ಸುಡರ್' ತಮಿಳು ಪತ್ರಿಕೆಯ ಸಂಪಾದಕ ಬಿ.ಎಸ್.ಮಣಿ. ಇವರು ಕಳೆದ ಹಲವು ದಶಕಗಳಿಂದ ತಮಿಳು ಪತ್ರಿಕೆ ನಡೆಸುತ್ತಾ ಬಂದಿದ್ದು, 'ಸಂಜೆವಾಣಿ' ಕನ್ನಡ ಸಂಜೆಪತ್ರಿಕೆ ಹುಟ್ಟುಹಾಕಿ ಬೆಳೆಸಿದವರು. ಇದೆಲ್ಲಕ್ಕಿಂತ ಹೆಚ್ಚಾಗಿ ಮಾನವತಾವಾದಿ. ದೌರ್ಜನ್ಯಗಳು ನಡೆದಾಗೆಲ್ಲ ಅದರ ವಿರುದ್ಧ ದನಿ ಎತ್ತುವವರು. ಜನರನ್ನು ಸಂಘಟಿಸಿ ಪ್ರತಿಭಟಿಸಿದವರು.

ಕಾನೂನು ಸರಿಯಾಗಿಯೇ ಇರುತ್ತದೆ. ಅದನ್ನು ಜಾರಿಗೊಳಿಸುವ ಜನ ಸರಿಯಾಗಿರುವುದಿಲ್ಲ. ವ್ಯವಸ್ಥೆಯ ಈ ವಿಷಮತೆ ಮಣಿ ಅವರನ್ನು ಕೊಂಚ ಕಟುವಾಗಿ ಪ್ರತಿಕ್ರಿಯಿಸುವಂತೆ ಮಾಡಿದ ಹಾಗೆ ತೋರಿತು.

ಅವರು ಮುಖ್ಯವಾಗಿ ಪ್ರಸ್ತಾಪಿಸಿದ್ದು ಎರಡು ಪ್ರಸಂಗಗಳನ್ನು: ವೀರಪ್ಪನ್ ವಿರುದ್ಧದ ವಿಶೇಷ ಕಾರ್ಯಾಚರಣೆ ಪಡೆ ನೂರಾರು ಮುಗ್ಧ ಗ್ರಾಮಸ್ಥರನ್ನು ಟಾಡಾಕಾಯ್ದೆಯಡಿ ಬಂಧಿಸಿಟ್ಟಿರುವುದು ಒಂದು. ಇತ್ತೀಚೆಗೆ ರಾಜೀವ್‌ಗಾಂಧಿ ಪ್ರಕರಣದಲ್ಲಿ ಖುಲಾಸೆಯಾದ ಶುಭ ಸುಂದರಂ ಎಂಬ ಫೋಟೋ ಜರ್ನಲಿಸ್ಟ್ ಪ್ರಕರಣ ಇನ್ನೊಂದು.



ಮರಣ ದಂಡನೆ ವಿಧಿಸುವುದು ಹೀಗೆ !

ಸೆಪ್ಟೆಂಬರ್ 5, 1983

ರಾಜ್ಯದಲ್ಲೇ ಇತ್ತೀಚಿನ ದಿನಗಳಲ್ಲಿ ಕಟ್ಟಕಡೆಯದಾಗಿ ಗಲ್ಲುಶಿಕ್ಷೆ ಜಾರಿಯಾದ ದಿನ. ಅದಾದ ಮೇಲೆ ರಾಜ್ಯದಲ್ಲಿ ಯಾರಿಗೂ ಗಲ್ಲು ಶಿಕ್ಷೆ ವಿಧಿಸಿಲ್ಲ. ಅಂದು ಗಲ್ಲುಗಂಬ ಏರಿದ ವ್ಯಕ್ತಿ ಹನುಮಂತ ಲಕ್ಷ್ಮಣಪ್ಪ ಮಡಿಯಾರ್.

ಈತ ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನವರು. ಮೊದಲ ಹೆಂಡತಿ ಕೊಲೆ ಮಾಡಿಯೂ ಶಿಕ್ಷೆಯಿಂದ ಪಾರಾಗಿದ್ದ. ಎರಡನೇ ಹೆಂಡತಿಯನ್ನು ತವರಿನವರು ಕಳಿಸಲಿಲ್ಲ ಎಂಬ ಸಣ್ಣ ಕಾರಣಕ್ಕೆ ಈತ ನಾಲ್ಕು ಜನರ ಕೊಲೆ ಮಾಡಿದ್ದ. ಇವನಿಗೆ ಬಲಿಯಾದವರು ಅತ್ತೆ, ಮಾವ, ಹೆಂಡತಿ ಮತ್ತು ಹೆಂಡತಿಯ ಅಕ್ಕ.

ರಾಷ್ಟ್ರಪತಿಗಳ ಕ್ಷಮಾದಾನ ಕೂಡ ಸಿಗದೆ, ಕರ್ನಾಟಕದ ಬೆಳಗಾವಿ ಜೈಲಿನಲ್ಲಿ ಈತ ಗಲ್ಲಿಗೇರಿದ.

ಕರ್ನಾಟಕದ ಬೆಂಗಳೂರು, ಬಳ್ಳಾರಿ ಮತ್ತು ಬೆಳಗಾವಿ ಜೈಲುಗಳಲ್ಲಿ ಮಾತ್ರ ಗಲ್ಲು ಶಿಕ್ಷೆ ಜಾರಿಗೊಳಿಸಬಹುದಾದ ಸೌಕರ್ಯವಿದೆ.

ಯಾವುದೇ ಆಪಾದಿತನ ಮೇಲೆ ಗಲ್ಲುಶಿಕ್ಷೆ ವಿಧಿಸುವುದು ಜಿಲ್ಲಾ ಸೆಷನ್ಸ್ ನ್ಯಾಯಾಲಯ. ಆಪಾದಿತ ಹೈಕೋರ್ಟು, ಆನಂತರ ಸುಪ್ರೀಂಕೋರ್ಟಿಗೆ ಮೇಲ್ಮನವಿ ಸಲ್ಲಿಸಬಹುದು. ಮೇಲಿನ ಎರಡೂ ನ್ಯಾಯಾಲಯಗಳಲ್ಲಿ ಮನವಿ ತಿರಸ್ಕೃತವಾದರೆ ರಾಷ್ಟ್ರಪತಿಯ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸಬಹುದು. ಅಲ್ಲಿಯೂ ಕ್ಷಮಾದಾನ ದೊರೆಯದೇ ಇದ್ದಲ್ಲಿ ಗಲ್ಲು ಶಿಕ್ಷೆ ಜಾರಿಗೊಳಿಸಲು 'ಬ್ಲ್ಯಾಕ್ ವಾರಂಟ್' ಹೊರಡಿಸಲಾಗುತ್ತದೆ.

ಶಿಕ್ಷೆಗೆ ಗುರಿಯಾಗುವವನನ್ನು ಎಂದು ನೇಣಿಗೆ ಹಾಕಬೇಕು ಎಂಬ ವಿವರ ಇರುವ ಇಂಥ ವಾರಂಟ್‌ನ ಅಂಚಲ್ಲಿ ದಪ್ಪ ಕಪ್ಪು ಪಟ್ಟಿ ಇರುತ್ತದಾದ ಕಾರಣ ಇದಕ್ಕೆ ಬ್ಲ್ಯಾಕ್ ವಾರಂಟ್ ಎಂದು ಹೆಸರು.

ಬ್ಲ್ಯಾಕ್ ವಾರಂಟ್ ಜೈಲು ಅಧಿಕಾರಿಗಳನ್ನು ತಲುಪಿದ ನಂತರ, ಮರಣ ದಂಡನೆ ಜಾರಿಗೆ ನಾಲ್ಕು ದಿನ ಇರುವಾಗ ಸಂಬಂಧಿಸಿದ ವ್ಯಕ್ತಿಗೆ ವಿಷಯ ತಿಳಿಸಲಾಗುತ್ತದೆ. ಈ ಅವಧಿಯಲ್ಲಿ ಆತ ತನ್ನ ಆಸ್ತಿ, ಸಂಪತ್ತಿನ ವಿಲೇವಾರಿಗೆ ಇಚ್ಛಿಸಿದಲ್ಲಿ ಅದಕ್ಕೆ ಅನುಕೂಲ ಕಲ್ಪಿಸಿಕೊಡಲಾಗುವುದು.

ಮರಣ ದಂಡನೆ ಜಾರಿಯ ವಿಚಾರ ಸಂಬಂಧಿಸಿದ ವ್ಯಕ್ತಿಗೆ ತಿಳಿಸಿದ ಮೇಲೆ ಆತನನ್ನು ಪ್ರತ್ಯೇಕವಾದ ಸೆಲ್‌ನಲ್ಲಿಯೇ ಇರಿಸಲಾಗುವುದು. ಆತ ಕೊನೆಯ ನಾಲ್ಕು ದಿನಗಳಲ್ಲಿ ತನ್ನ ಸಂಬಂಧಿಕರನ್ನು, ಧರ್ಮ ಗುರುಗಳನ್ನು ಭೇಟಿಯಾಗಬಹುದು.

ಗಲ್ಲು ಶಿಕ್ಷೆಗೆ ಒಂದು ದಿನ ಮುಂಚೆ ಆತನಿಗೆ ಎಣ್ಣೆಸ್ನಾನ ಮಾಡಿಸಲಾಗುವುದು. ಮರುದಿನ ಸೂರ್ಯೋದಯಕ್ಕೆ ಮುನ್ನ ಜೈಲಿನ ಸೂಪರಿಂಟೆಂಡೆಂಟ್, ಜಿಲ್ಲಾ ಸರ್ಜನ್, ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಹಾಗೂ ಜೈಲು ಸಿಬ್ಬಂದಿ ಸಮ್ಮುಖದಲ್ಲಿ ನೇಣು ಹಾಕಲಾಗುವುದು.

ನೇಣು ಹಗ್ಗವನ್ನು ವಿಶೇಷವಾಗಿ ತಯಾರಿಸಲಾಗುತ್ತದೆ. ಮೂರು ಹಗ್ಗಗಳನ್ನು ಕೂಡಿಸಿ ಮೇಣ ಹಚ್ಚಿ ಅದನ್ನು ಹೊಸೆಯಲಾಗುತ್ತದೆ. ನೇಣು ಶಿಕ್ಷೆಗೆ ಗುರಿಯಾಗುವ ವ್ಯಕ್ತಿಯಷ್ಟೇ ಭಾರವನ್ನು ತೂಗು ಹಾಕಿ, ಮೊದಲೇ ಪರೀಕ್ಷೆ ನಡೆಸಿ, ಅಷ್ಟು ಭಾರ ಅದು ತಾಳಿಕೊಳ್ಳಬಲ್ಲದು ಎಂದು ಖಚಿತಪಡಿಸಲಾಗುತ್ತದೆ.

ವಿಶೇಷ ರೀತಿಯಲ್ಲಿ ನೇಣಿನ ಗಂಟು ಬಿಗಿಯಲಾಗುತ್ತದೆ. ಆ ಗಂಟು ವ್ಯಕ್ತಿಯ ಕುತ್ತಿಗೆಯ ಹಿಂಭಾಗಕ್ಕೆ ಬರುವಂತೆ ವ್ಯವಸ್ಥೆ ಮಾಡಲಾಗುತ್ತದೆ. ನೇಣುಗಂಬದ ವೇದಿಕೆಯ ಮೇಲೆ ನಿಂತ ವ್ಯಕ್ತಿಯ ಕುತ್ತಿಗೆಗೆ ಕುಣಿಕೆ ಹಾಕಿದ ನಂತರ ಲಿವರ್ ಒಂದನ್ನು ಎಳೆದಾಗ, ಕುಣಿಕೆಗೆ ದೇಹ ನೇತು ಬೀಳುತ್ತದೆ.

ಅರ್ಧಗಂಟೆ ಹೀಗೆ ದೇಹ ತೂಗಾಡಿದ ನಂತರ, ಜಿಲ್ಲಾ ಸರ್ಜನರು ವ್ಯಕ್ತಿ ಮೃತನಾದನೆಂದು ಘೋಷಿಸಿದ ಮೇಲೆ ದೇಹ ಇಳಿಸಲಾಗುತ್ತದೆ. ಮೃತನ ದೇಹವನ್ನು ಇಚ್ಛಿಸಿದಲ್ಲಿ ಆತನ ಸಂಬಂಧಿಗಳಿಗೆ ಒಪ್ಪಿಸಲಾಗುವುದು. ಅವರು ಬಯಸದಿದ್ದಲ್ಲಿ ಅಥವಾ ಮೃತನ ದೇಹವನ್ನು ಊರಿಗೆ ಕೊಂಡೊಯ್ದರೆ ಗಲಾಟೆ ಆಗಬಹುದಾದ ಸಂಭವ ಇದ್ದಲ್ಲಿ, ಆ ದೇಹವನ್ನು ಜೈಲಿನ ಅಧಿಕಾರಿಗಳೇ ಮೃತನ ಧಾರ್ಮಿಕ ವಿಧಿಗಳಿಗನುಸಾರ ನೆರವೇರಿಸುತ್ತಾರೆ.

[ಈ ಮಾಹಿತಿ ಒದಗಿಸಿದವರು ಬೆಂಗಳೂರು ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಬಿ.ಎಸ್.ಅಬ್ಬಾಯಿ]

ವೀರಪ್ಪನ್‌ಗೆ ನೆರವಾಗಿದ್ದಾರೆ ಎಂಬ ಆರೋಪದ ಮೇಲೆ ಟಾಡಾ ಕಾಯಿದೆಯಡಿ ಬಂಧಿತರಾಗಿ ಮೈಸೂರು ಜೈಲಲ್ಲಿ ಕೊಳೆಯುತ್ತಿರುವ ನೂರಾರು ಗ್ರಾಮಸ್ಥರ ವಿಚಾರ ಮನ ಕಲಕುವಂಥದ್ದು. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸೂಚನೆ ಪಡೆಯಬೇಕು ಎಂಬ ಖಚಿತ ನಿಲುವು ಮಣಿ ಅವರದ್ದು. ಇಲ್ಲವಾದಲ್ಲಿ ಇದು ಮರಣದಂಡನೆಗಿಂತ ಘೋರ ಶಿಕ್ಷೆ. ದಿನ ದಿನವೂ ಇಷ್ಟಿಷ್ಟು ಸಾಯುವ ರೀತಿ ಇದು ಎಂಬುದು ಅವರ ನಿಲುವು.

ಶುಭಸುಂದರಂ ಇತ್ತೀಚೆಗೆ ಖುಲಾಸೆಯಾಗಿದ್ದಾನೆ. ಆತ ಎಂಟು ವರ್ಷ ಬಂಧನದಲ್ಲಿದ್ದ. ಫೋಟೋ ಜರ್ನಲಿಸ್ಟ್ ಆಗಿದ್ದ ಆತ, ತನ್ನ ಕುಟುಂಬದ ಆಧಾರಸ್ತಂಭ ಆತನಿಗೆ ಹೆಂಡತಿ, ಎರಡು ಮಕ್ಕಳು ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಆಪಾದಿತನಾಗಿ ಎಂಟು ವರ್ಷ ಜೈಲಲ್ಲಿ ಕಳೆದ ಆತ ತನ್ನ ಯಾತನೆಯ ದಿನಗಳನ್ನು ತಮಿಳು ಪತ್ರಿಕೆಯೊಂದರಲ್ಲಿ ಬಹಿರಂಗಪಡಿಸಿದ್ದಾನೆ. ಅದನ್ನು ಪ್ರಸ್ತಾಪಿಸಿದ ಬಿ.ಎಸ್.ಮಣಿ; ನಾವು ಮರಣ ದಂಡನೆಯ ಕ್ರೌರ್ಯದ ಬಗ್ಗೆ ಮಾತಾಡುವಾಗ, ಅದಕ್ಕಿಂತ ಕ್ರೂರ ಎನ್ನಿಸುವ ಇಂಥ ವಾಸ್ತವಗಳನ್ನು ಮರೆಯಬಾರದು ಎನ್ನುತ್ತಾರೆ.

ಕಾನೂನು, ಇತಿಹಾಸ, ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಅಷ್ಟಾಗಿ ತಿಳಿದಿಲ್ಲ ಎಂದು ಒಪ್ಪಿಕೊಂಡೇ ಮಾತಾಡುವ ಅವರಿಗೆ ಮನುಷ್ಯ ಜೀವನದ ಸೂಕ್ಷ್ಮಗಳು, ಸಂವೇದನೆಗಳನ್ನು ಕೊಂದುಬಿಡುವ ಇಡೀ ವ್ಯವಸ್ಥೆಯ ಬಗ್ಗೆಯೇ ಸಾತ್ವಿಕ ಆಕ್ರೋಶವಿದೆ. ■


ಪ್ರಧಾನಿ ಕುರ್ಚಿಯೇ?

ಏನಿದು ಗೆಳೆಯ,
ಕಾಲೇಜು ಕನ್ಯೆಯರೆಲ್ಲಾ
ನಿನ್ನ ಹೃದಯ
ಗೆಲ್ಲಲು ಪ್ರಯತ್ನಿಸುತ್ತಿರುವರಲ್ಲಾ
'ನಿನ್ನ ಹೃದಯವೇನು
ಭಾರತದ ಪ್ರಧಾನಿ ಕುರ್ಚಿಯೇ?

- ಹುಳಿಯಾರು ಕಿರಣ್

"ಗಲ್ಲು ಶಿಕ್ಷೆ ಎಲ್ಲಿಯೂ ಇರಕೂಡದು"





ಪ್ರೊ.ನಗರಿ ಬಾಬಯ್ಯನವರು ಬೆಂಗಳೂರು ವಿಶ್ವ ವಿದ್ಯಾನಿಲಯದ ಆಂಗ್ಲ ವಿಭಾಗದ ಮುಖ್ಯಸ್ಥರಾಗಿದ್ದು ಕೊಂಡು, ಬಿಡುವಿನ ವೇಳೆಯಲ್ಲಿ ಮತ್ತು ಕೆಲವೊಮ್ಮೆ ರಜೆಗಳನ್ನ ಬಳಸಿಕೊಂಡು ಮಾನವನ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ. ಇವರು ಎಲ್ಲಿ ಮಾನವನ ಹಿತಾಸಕ್ತಿಗೆ ಧಕ್ಕೆ ಒದಗುತ್ತದೊ ಅಲ್ಲಿ ತಮ್ಮ ಸಂಘಟನೆಯೊಂದಿಗೆ ಹೋರಾಟಕ್ಕೆ ಸಜ್ಜಾಗುತ್ತಾರೆ. 1986ರ ಮೂರು ತಿಂಗಳ ಕಾರಾಗೃಹವಾಸ ಅವರಿಗೆ ಮಾನವನನ್ನು ಆಳವಾಗಿ ಅರಿಯಲು, ಹೋರಾಡಲು ಪ್ರೇರೆಪಿಸಿದೆ.

ರಾಜೀವ್ ಗಾಂಧಿ ಹತ್ಯಾ ಪ್ರಕರಣದಲ್ಲಿ ಮೊದಲಿಗೆ 26 ಜನರಿಗೆ ಮರಣದಂಡನೆ ವಿಧಿಸ ಲಾಗಿದ್ದು, ಮಾನವ ಹಕ್ಕುಗಳಿಗೆ ರಕ್ಷಣೆ ಕೋರಿ ಹಲವಾರು ಸಂಘಟನೆಗಳು ಹೋರಾಟ ಮಾಡಿ ದ್ದರ ಫಲವಾಗಿ ಇಂದು ಕೇವಲ ನಾಲ್ಕು ಜನರಿಗೆ ಗಲ್ಲು ಶಿಕ್ಷೆ ಖಾಯಂಗೊಳಿಸಲಾಗಿದೆ.

ಮಾನವ ಹಕ್ಕುಗಳ ರಕ್ಷಣಾ ವೇದಿಕೆಯ ಪ್ರೊ.ನಗರಿ ಬಾಬಯ್ಯನವರು ಈ ಬಗ್ಗೆ ಹೇಳು ತ್ತಾರೆ: ಗಲ್ಲು ಶಿಕ್ಷೆ ಎಲ್ಲಿಯೂ ಯಾವ ಕಾರಣಕ್ಕೂ ಇರಬಾರದು. ತಪ್ಪು ಮಾಡಿದವನಿಗೆ ತಿದ್ದಿಕೊಳ್ಳಲು ಅವಕಾಶ ಕೊಡದೆ ಅವರ ಜೀವನ ಕೊನೆ ಗಾಣಿಸುವುದು ಸರಿಯಲ್ಲ. ರಾಜೀವ್ ಗಾಂಧಿ ಹತ್ಯೆ ಮಾಡಿದ ಜನ ಯಾವುದೇ ವೈಯಕ್ತಿಕ ದ್ವೇಷಕ್ಕಾಗಿ ಕೊಲೆ ಮಾಡಲಿಲ್ಲ. ಅದು ಸಾಮೂಹಿಕ ಸಂಘಟನೆಯ ನಿರ್ಣಯವಾಗಿದ್ದು, ಆ ಕಾರ್ಯ ಮಾಡಿದವರು ಕೆಲವಾರು ಜನ. ಭಾರತದಿಂದ ಶಾಂತಿ ಪಾಲನಾ ಪಡೆ (IPKP)ಯನ್ನು ಶ್ರೀಲಂಕಾಕ್ಕೆ ರಾಜೀವ್‌ಗಾಂಧಿಯವರು ಕಳುಹಿಸಿದ್ದರಿಂದ ಅಲ್ಲಿ ಸಾವಿರಾರು ಜನ ಹತ ರಾಗಬೇಕಾಯ್ತು. ಆ ಸಾವಿನ ಸೇಡಿಗಾಗಿ ಅವರು ರಾಜೀವ್ ಗಾಂಧಿಯನ್ನು ಕೊಲೆ ಮಾಡಿದ್ದರು. ನಾಗರಿಕ ಸಮಾಜದಲ್ಲಿ ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು ಇಂತಹ ಕಾಡು ಸಂಸ್ಕೃತಿ, ಕಾಡು ಶಿಕ್ಷೆಯನ್ನು ಮತ್ತೆ ತರುವುದು ಎಷ್ಟು ನ್ಯಾಯಸಮ್ಮತ? ಒಬ್ಬ ವ್ಯಕ್ತಿ ಮಾಡಿರುವ ತಪ್ಪುಗಳನ್ನು ಒಂದು ಸರಕಾರ ಸಂಸ್ಥೆಯಾಗಿ ಅನುಕರಿಸುವುದು ಸರಿಯೇ? ಪ್ರಜೆಗಳ ಜೀವ ಕಾಪಾಡುವ ಸರಕಾರವೆ ಅವರ ಜೀವ ತೆಗೆಯುವುದು ಸರಿಯಲ್ಲ. ಹುಟ್ಟುತ್ತಲೆ ಯಾರೂ ಅಪರಾಧಿ ಗಳಲ್ಲ. ಸಮಾಜ, ಸುತ್ತಲಿನ ಪರಿಸರ ಮನುಷ್ಯನನ್ನ ನಿರ್ಮಿಸುತ್ತೆ.


ಮನುಷ್ಯನ ಪರಿಸ್ಥಿತಿ, ಅವನನ್ನ ಅಪರಾಧಿ ಯನ್ನಾಗಿ ಮಾಡುತ್ತದೆ. ಅವನು ಆ ಪರಿಸ್ಥಿತಿ ಯಿಂದ ಹೊರಬಂದಾಗ ಅವನಿಗೆ ಅದರ ಬಗ್ಗೆ ಪಶ್ಚಾತ್ತಾಪವಾಗಿರುವ ಸಾಧ್ಯತೆಯಿದೆ. ಅವನಿಗೆ ಸುಧಾರಿಸಲು ಅವಕಾಶ ಕೊಡುವುದು ನಾಗರಿಕ ಸಮಾಜದ ಕರ್ತವ್ಯವಾಗಿದೆ. ಮಾನವನ ಹುಟ್ಟು ಸಾವು ಸಹಜವಾಗಿರಬೇಕೇ ಹೊರತು ಇನ್ನೊಬ್ಬರ ನಿರ್ಣಯಕ್ಕೆ ಬಿಡಬಾರದು. ಅದೂ ಸರಕಾರ ಮತ್ತು ಕಾನೂನು ಸೇರಿ ಕೊಲೆ ಮಾಡುವುದು ಸರಿಯಲ್ಲ. ರಾಜೀವ್‌ಗಾಂಧಿ ಹಂತಕರಲ್ಲಿ ಒಬ್ಬಳಾದ ನಳಿನಿಗೆ ಪತಿಯೊಂದಿಗೆ ಸಂಸಾರ ಮಾಡಿ ಒಂದು ಮಗುವನ್ನ ಹೆರಲು ಅವಕಾಶ ಕೊಟ್ಟಂತಹ ಕಾನೂನು ಆ ಮಗುವಿಗೆ ತಂದೆ-ತಾಯಿಯ ಆಸರೆ ಪ್ರೀತಿ, ವಾತ್ಸಲ್ಯದಂತಹ ಮೂಲ ಭೂತ ಹಕ್ಕುಗಳಿಂದ ವಂಚಿಸುವುದು ನ್ಯಾಯವೆ? ಇದು ನಾಗರಿಕ ಸಮಾಜದ ಪ್ರತಿಯೊಬ್ಬ ವ್ಯಕ್ತಿ ಇಂದು ಚಿಂತಿಸಬೇಕಾದ ವಿಷಯವಾಗಿದೆ. ಈ ಎಲ್ಲ ಕಾರಣಗಳಿಂದ ಈ ವಿಷಯವನ್ನು ಕಾನೂನು ಚೌಕಟ್ಟಿನೊಳಗೆ ಪರಿಶೀಲಿಸಿದರೆ ಸಾಲದು, ಮಾನವ ಹಕ್ಕುಗಳ ದೃಷ್ಟಿಯಿಂದ, ಮಾನವೀಯತೆ ಯಿಂದ ನೋಡಬೇಕಾದ ಅವಶ್ಯಕತೆಯಿದೆ. ಮೂಲಭೂತವಾಗಿ ಮಾನವನಿಗೆ ಬೇಕಾಗಿ ರುವುದೇ ಜೀವಿಸುವ ಹಕ್ಕು. ಅದೇ ಇಲ್ಲದಿದ್ದ ಮೇಲೆ ಪ್ರಕೃತಿಯ ಮೂಲಕ್ಕೆ ಕೊಡಲಿಯೇಟು ಕೊಟ್ಟಂತಾಗುತ್ತದೆ. ಆದ್ದರಿಂದ ಮಾನವ ಹಕ್ಕುಗಳ ರಕ್ಷಣಾ ವೇದಿಕೆ ರಾಜೀವ್‌ಗಾಂಧಿ ಹಂತಕರಿಗೆ ಗಲ್ಲು ಶಿಕ್ಷೆ ನೀಡದೆ ಕ್ಷಮಾದಾನ ನೀಡಬೇಕೆಂದು ಕೋರಿಕೊಂಡಿದೆ.

■ ಪ್ರಭಾವತಿ ಕುಳ್ಳಿ


ಗಲ್ಲಿಗೆ ಗುರಿಯಾದವನ ಸಂದರ್ಶನ

1968ರಲ್ಲಿ ಅಮೆರಿಕಾದ ಜೈಲೊಂದರಲ್ಲಿ ಮರಣದಂಡನೆಗೆ ಗುರಿಯಾಗಿದ್ದ ವ್ಯಕ್ತಿ ಯೊಬ್ಬನ ಸಂದರ್ಶನದಿಂದ ಆಯ್ದ ಭಾಗ:

ಈ ದಿನ ಸಾಯುವ ಸರದಿ ನನ್ನ ದಾಗಿತ್ತು... ಆದರೆ ಆರನೆಯ ತಡೆಯಾಜ್ಞೆ ಯನ್ನು ನಾನು ಪಡೆದೆ. ಗಲ್ಲಿಗೇರುವುದು ಒಂದು ವಾರ ಮುಂದೂಡಲ್ಪಟ್ಟಿತು. ಈ ಅವಧಿಯು ಬಹಳ ಕಿರಿದಾದ್ದರಿಂದ ಆತ್ಮೀ ಯವಾದ ಕ್ಷಣಗಳಾಗಿದ್ದವು. "ಈ ದಿನ ಶುಕ್ರವಾರ. ನಾಳೆ ನಿನ್ನನ್ನು ಗಲ್ಲಿಗೇರಿಸ ಲಾಗುತ್ತದೆ" ಎಂದು ಅಧಿಕಾರಿಗಳು ಹೇಳಿ ದರು. "ಇದನ್ನು ಯಾವುದೇ ರೀತಿಯಲ್ಲಿ ದಾಖಲಿಸಿಲ್ಲ. ಏಕೆಂದರೆ ನಿನ್ನ ಅಸ್ತಿತ್ವವನ್ನು ನೀನು ಅರಿತುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಮರಣದಂಡನೆಗೆ ಗುರಿಯಾದ ವ್ಯಕ್ತಿಯ ಮನಸ್ಥಿತಿ ಕೋಲಾಹಲದಿಂದ ಕೂಡಿರುತ್ತದೆ. ಆದರೆ ನೀನು ಸಂಯಮದಿಂದ ಯಾವುದೇ ಆವೇಶ ಆತಂಕ ತಲ್ಲಣಗಳಿಲ್ಲದೆ ಪ್ರಶಾಂತ ಚಿತ್ತನಾಗಿರುವುದನ್ನು ಕಂಡರೆ ಆಶ್ಚರ್ಯ ವಾಗುತ್ತದೆ" ಎಂದರು. ಆದರೆ ಗಲ್ಲು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಯ ಪ್ರಕಾರ ಅವನ ಕುಟುಂಬದ ಸದಸ್ಯರು, ಆಡಳಿತಗಾರರು, ನ್ಯಾಯಾಲಯದವರು ಪ್ರಕ್ಷೋಭೆಯ ಸ್ಥಿತಿಯ ಲ್ಲಿರಬಹುದೇ ಹೊರತು ತಾನಲ್ಲ. ಯಾವುದೇ ಮನುಷ್ಯನಿಗೆ ಮರಣದಂಡನೆ ವಿಧಿಸಿದಾಗ ಅವನು ಶಿಕ್ಷೆಯ ಪರಿವೆಯನ್ನೇ ಕಳೆದು ಕೊಂಡಿರುತ್ತಾನೆ. ಏಕೆಂದರೆ ಅವನಿಗೆ ಯಾವು ದೂ ಮುಖ್ಯವಾಗಿರುವುದಿಲ್ಲ. ಎಲ್ಲವೂ ಶೂನ್ಯವಾಗಿರುತ್ತದೆ. ಇಂತಹ ಸನ್ನಿವೇಶದಲ್ಲಿ ಅವನು ಆತಂಕಗೊಳ್ಳುವುದಾದರೂ ಏತಕ್ಕೆ? ಆಡಳಿತ ವರ್ಗವು ನಮ್ಮನ್ನು ಸಾಯಿಸಿದರೆ ಮತ್ತೆ ನಾವು ಏನು ಮಾಡಲು ಸಾಧ್ಯ. ನಮಗೆ ನಮ್ಮ ದೇಹದ ಅಸ್ತಿತ್ವವೇ ಇರುವುದಿಲ್ಲ. ಯಾವುದನ್ನೂ ಗ್ರಹಿಸಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ಪ್ರಾಣಗಳನ್ನೇ ಕಳೆದು ಕೊಂಡಿರುತ್ತೇವೆ!



ಫಾಶಿ ಶಿಕ್ಷೆ: ನಿವೃತ್ತ ನ್ಯಾಯಾಧೀಶರ ನೋಟ



ಮರಣದಂಡನೆ ಉಚಿತವೇ? ಎಂಬ ಪ್ರಶ್ನೆಗೆ ಉತ್ತರ - ಶಿಕ್ಷೆಯ ಉದ್ದೇಶವೇನು? ಎಂಬ ಪ್ರಶ್ನೆಗೆ ಕೊಡುವ ಉತ್ತರವನ್ನು ಅವಲಂಬಿಸಿದೆ. ಈ ಶಿಕ್ಷಾ ಮೀಮಾಂಸೆಯನ್ನು ಅನೇಕ ನ್ಯಾಯಶಾಸ್ತ್ರವೇತ್ತರು, ಸಮಾಜ ಸುಧಾರಕರು, ಚಿಂತಕರು, ಬರಹಗಾರರು ಮಾಡುತ್ತಲೆ ಬಂದಿದ್ದಾರೆ. ಆದರೆ.....

■ ಕೋ.ಚೆನ್ನಬಸಪ್ಪ

ಮರಣ ದಂಡನೆ ಉಚಿತವೇ? ಉಪಯುಕ್ತವೇ? ಎಂಬ ಪ್ರಶ್ನೆ ಅಪರಾಧ ಮತ್ತು ಶಿಕ್ಷೆಯ ಪ್ರಶ್ನೆಯಷ್ಟೇ ಪ್ರಾಚೀನ. ಯಾವಾಗ ಮಾನವ ಒಂದು ಸಾಮೂಹಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕಲು ನಿರ್ಧರಿಸಿದನೊ ಆಗಿನಿಂದಲೂ ಅಪರಾಧಗಳು ನಡೆಯುತ್ತಲೆ ಇವೆ. ಅವುಗಳಿಗೆ ಶಿಕ್ಷೆ ವಿಧಿಸುತ್ತಲೆ ಬರಲಾಗುತ್ತಿದೆ. ಮಾನವ ಒಟ್ಟಾಗಿ ಬಾಳಲು ನಿರ್ಧರಿಸಿದಾಗ ಯಾವ ಕೃತ್ಯವನ್ನು ಅಪರಾಧವೆಂದು ವರ್ಗೀಕರಿಸಲಾಯಿತೊ ಆಗ ಅಂಥ ಕೃತ್ಯಗಳನ್ನು ನಿಷೇಧಿಸುವ ನಿಯಮವನ್ನು ರೂಪಿಸಲಾಯಿತು. ಆ ನಿಷೇಧಿತ ಕೃತ್ಯವನ್ನೆಸಗಿದರೆ ಶಿಕ್ಷೆಯನ್ನು ವಿಧಿಸುವ ವ್ಯವಸ್ಥೆಯನ್ನು ಮಾಡಲಾಯಿತು. ವಿಧಿ-ನಿಷೇಧಗಳನ್ನು ಮಾತ್ರ ರೂಪಿಸಿ, ಅವುಗಳ ಉಲ್ಲಂಘನೆ ಮಾಡಿದಾಗ ಶಿಕ್ಷೆಯನ್ನು ಕೊಡದಿದ್ದರೆ ವಿಧಿ ನಿಷೇಧಗಳ ವ್ಯವಸ್ಥೆಯು ವ್ಯರ್ಥ. ಅಂದರೆ ಅಪರಾಧ ಎಸಗಿದಾಗ ಶಿಕ್ಷೆ ಅನಿವಾರ್ಯ. ಇದು ಮೂಲಭೂತ ನ್ಯಾಯಪದ್ಧತಿ.

ಆಗ ಯಾವ ಅಪರಾಧಕ್ಕೆ ಎಷ್ಟು ಶಿಕ್ಷೆ? ಯಾವ ಶಿಕ್ಷೆ? ಎಂಬುದು ಮುಂದಿನ ಪ್ರಶ್ನೆ. ಶಿಕ್ಷೆ, ಮಾಡಿದ ಅಪರಾಧಕ್ಕೆ ತಕ್ಕಂತೆ ಇರಬೇಕೆಂಬುದು ಎಲ್ಲಾ ನ್ಯಾಯ ಪದ್ಧತಿಯೂ ಒಪ್ಪುವ ಸೂತ್ರ. ಅಡಿಕೆಯನ್ನು ಕದ್ದರೂ ಒಂದೆ; ಆನೆಯನ್ನು ಕದ್ದರೂ ಒಂದೆ. ಎರಡೂ ಕಳವು. ಆದರೆ ಸಂತೆಯಲ್ಲಿ ಒಂದು ಹಿಡಿ ಅಡಿಕೆ ಕದ್ದವನಿಗೆ, ಅಸಹಾಯಕ ಮಹಿಳೆಯ ಕೊರಳ ಚಿನ್ನದ ಸರವನ್ನು ಕದ್ದ ಕಳ್ಳನಿಗೆ ಕೊಡುವ ಕಠಿಣ ಶಿಕ್ಷೆಯನ್ನು ವಿಧಿಸುವುದನ್ನು ನ್ಯಾಯಶಾಸ್ತ್ರ ಒಪ್ಪುವುದಿಲ್ಲ. ಅಂದರೆ ಎಸಗಿದ ಅಪರಾಧ ಒಂದೆ ವರ್ಗಕ್ಕೆ ಸೇರಿದ್ದರೂ ಶಿಕ್ಷೆ ಒಂದೇ ರೀತಿಯಾಗಿರುವುದಿಲ್ಲ, ಅಪರಾಧದ ಪ್ರಮಾಣಕ್ಕೆ ಅನುಗುಣವಾಗಿ ಶಿಕ್ಷೆ ಇರುತ್ತದೆ.

ಆದರೆ, ಈ ಸೂತ್ರವು ಒಂದೊಂದು ಸಮಾಜದಲ್ಲೂ ವ್ಯತ್ಯಾಸವಾಗುತ್ತದೆ. ಉದಾಹರಣೆಗೆ - ಮಧ್ಯಪ್ರಾಚ್ಯ ಇಸ್ಲಾಮ್ ಶಾಸನದ ಪ್ರಕಾರ ಕಳವು ಘೋರ ಅಪರಾಧ. ಈಗಲೂ ಅಲ್ಲಿ ಕಳವು ಮಾಡಿದವರ ಕೈ ಕತ್ತರಿಸುವ ಶಾಸನ ಜಾರಿಯಲ್ಲಿದೆ! ಇದು ಅತ್ಯಂತ ಅಮಾನುಷ, ಅನಾಗರಿಕ ಎಂದು ನಮಗೆ ನಿಮಗೆ ಕಾಣಬಹುದು. ಆದರೆ ಆ ರಾಜ್ಯಗಳಲ್ಲಿ, ಅವರ ಸಾಮಾಜಿಕ ಜೀವನದ ನೆಮ್ಮದಿಗೆ ಕಳವು ಘೋರ ಅಪರಾಧ. ಅದನ್ನು ತಡೆಗಟ್ಟಲು ಅಂಥ ಉಗ್ರಶಿಕ್ಷೆ ಸಾಧುವೆಂದು ಆ ಜನರ ನಂಬಿಕೆ. ಇದು ಸರಿ-ಉಚಿತ, ಯೋಗ್ಯ ಎಂದು ಅನ್ಯದೇಶದ ಅನ್ಯ ಸಮಾಜದವರು ಟೀಕಿಸುವುದು, ಖಂಡಿಸುವುದು ಅವರ ದೃಷ್ಟಿಯಲ್ಲಿ ಅನುಚಿತ. ಯಾಕೆಂದರೆ ಅದು ಆ ಸಮಾಜ ಒಪ್ಪಿರುವ ಸಾಮಾಜಿಕ ಮೌಲ್ಯ. ನ್ಯಾಯಶಾಸ್ತ್ರ.

ಮಾನವಹತ್ಯೆ ಅಪರಾಧಗಳಲ್ಲೆಲ್ಲ ಅತ್ಯಂತ ಹೀನ, ಹೇಯ ಎಂದು ಬಹುಶಃ ಎಲ್ಲ ದೇಶದ ನ್ಯಾಯ ಪದ್ಧತಿಯೂ ಒಪ್ಪಿಕೊಂಡಿದೆ. ಆದ್ದರಿಂದ ಮಾನವಹತ್ಯೆ ಅಪರಾಧ ಎಸಗಿದ ಆರೋಪಿಗೆ, ಆರೋಪ ಸಿದ್ಧವಾದಾಗ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ಅಥವಾ ಮರಣ ದಂಡನೆಯನ್ನು ವಿಧಿಸುವ 'ದಂಡ ಸಂಹಿತೆ' ಬಹು ದೇಶಗಳಲ್ಲೂ ಜಾರಿಯಲ್ಲಿದೆ. ಮರಣ ದಂಡನೆ ಉಚಿತವೆ? ಉಪಯುಕ್ತವೆ? ಎಂಬ ಜಿಜ್ಞಾಸೆ ಬಹುಕಾಲದಿಂದಲೂ ಇದ್ದೆ ಇದೆ. ಅದು ಇತ್ತೀಚೆಗೆ ರಾಜೀವ್ ಗಾಂಧಿ ಹತ್ಯೆಯಲ್ಲಿ ಆರೋಪಿಗಳಾಗಿದ್ದ ನಾಲ್ವರಿಗೆ ಮರಣ ದಂಡನೆಯನ್ನು ವಿಧಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ಮೇಲೆ ಈ ಸಮಸ್ಯೆಯ ಬಗ್ಗೆ ಜನ ಆಲೋಚಿಸ ತೊಡಗಿದ್ದಾರೆ.

ಮರಣದಂಡನೆ ಉಚಿತವೆ? ಎಂಬ ಪ್ರಶ್ನೆಗೆ ಉತ್ತರ - ಶಿಕ್ಷೆಯ ಉದ್ದೇಶವೇನು? ಎಂಬ ಪ್ರಶ್ನೆಗೆ ಕೊಡುವ ಉತ್ತರವನ್ನು ಅವಲಂಬಿಸಿದೆ. ಈ ಶಿಕ್ಷಾ ಮೀಮಾಂಸೆಯನ್ನು ಅನೇಕ ನ್ಯಾಯಶಾಸ್ತ್ರ ವೇತ್ತರು, ಸಮಾಜ ಸುಧಾರಕರು, ಚಿಂತಕರು, ಬರಹಗಾರರು ಮಾಡುತ್ತಲೆ ಬಂದಿದ್ದಾರೆ. ಶಿಕ್ಷೆಯ ಉದ್ದೇಶವೇನು? ಪ್ರಥಮತಃ ಅಪರಾಧವೆಸಗುವುದರಿಂದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ; ಮಾನವ ಹತ್ಯೆ ಮಾಡಿದರೆ 'ಮರಣದಂಡನೆಗೂ ಗುರಿಯಾಗಬೇಕಾಗುತ್ತದೆ' ಎಂಬ ಭೀತಿ (Deterrent) ಹುಟ್ಟಿಸುವುದಕ್ಕಾಗಿ, ಅಪರಾಧ ಮಾಡಲಿಚ್ಛಿಸುವವನನ್ನು ಆ ಕೃತ್ಯದಿಂದ ಹಿಂಜರಿಯುವಂತೆ ಮಾಡುವುದು. ಹಾಗೆಯೆ ಇತರರಿಗೆ ಇದೊಂದು ಎಚ್ಚರಿಕೆಯ ಪಾಠವೆನಿಸಿರಬೇಕು. ಶಿಕ್ಷೆಯನ್ನು ವಿಧಿಸುವುದರ ಇನ್ನೊಂದು ಕಾರಣ, ಅಪರಾಧವೆಸಗಿದವನು ತನ್ನ ಕೃತ್ಯಕ್ಕಾಗಿ ಪ್ರಾಯಶ್ಚಿತ್ತವನ್ನು ಅನುಭವಿಸಿ, ತಾನೇ ತನ್ನ ಮನೋವೈಕಲ್ಯವನ್ನು ತಿದ್ದಿಕೊಳ್ಳುವುದು 'ಶಿಕ್ಷೆ ಒಂದು ಶಿಕ್ಷಣ'ವಾಗಬೇಕೆಂಬುದು ಉದ್ದೇಶ.

ಹಾಗಾದರೆ, ನ್ಯಾಯಶಾಸ್ತ್ರ ಒಪ್ಪಿಕೊಂಡಿರುವ ಈ ಮಾನದಂಡದಿಂದ ಮರಣ ದಂಡನೆಯ ಇತಿಹಾಸವನ್ನು ಅವಲೋಕಿಸಿದರೆ ಮರಣ ದಂಡನೆಯ ಭಯದಿಂದ ಮಾನವಹತ್ಯಾ ಅಪರಾಧಗಳು ನಿಂತಿವೆಯೆ? ಕನಿಷ್ಠ ಕಡಿಮೆ ಆಗಿವೆಯೆ? ಇಡೀ ಲೋಕದ ಮಾನವ ಹತ್ಯಾ ಅಪರಾಧಗಳ ಇತಿಹಾಸವನ್ನು ಅವಲೋಕಿಸಿದರೆ - 'ಮಾನವಹತ್ಯಾಪರಾಧಗಳು ಮರಣದಂಡನೆಗೆ ಅಂಜಿ ಕಡಿಮೆಯಾಗಿಲ್ಲ' ಎಂದು ತಿಳಿದು ಬರುತ್ತದೆ. ಅಂದರೆ ಮರಣದಂಡನೆಗೆ ಅಂಜಿ ಮಾನವಹತ್ಯೆ ಮಾಡುವುದೇನೂ ನಿಂತಿಲ್ಲ; ಕಡಿಮೆಯೂ ಆಗಿಲ್ಲ ಎಂಬುದು ಸತ್ಯ. ಅಂದ ಮೇಲೆ ಈ ಮರಣ ದಂಡನೆಯ ಬೆದರು ಬೊಂಬೆಗೆ ಅಂಜುವ, 'ಅಂಜುಕುಳಿ' ಅಪರಾಧಿಗಳಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಹಾಗಾದರೆ ಮರಣದಂಡನೆ ವಿಧಿಸುವುದು ಎಷ್ಟು ಉಪಯುಕ್ತ? ಮರಣದಂಡನೆ ಇಲ್ಲದ ದೇಶಗಳಲ್ಲಿ ಮಾನವ ಹತ್ಯೆ ಅಪರಿಮಿತ ಎಂದೇನೂ ಅಲ್ಲ.

ಈ ವಾಸ್ತವ ಸತ್ಯಕ್ಕೆ ಉತ್ತರವಾಗಿ ಮರಣದಂಡನೆಯ ಪ್ರತಿಪಾದಕರು ಈ ಶಿಕ್ಷೆಯಾಗುತ್ತದೆ ಎಂಬ ಅಂಜಿಕೆ ಇದ್ದರೂ

ಮಾನವಹತ್ಯಾಪರಾಧಗಳು ಆಗುತ್ತಲೆ ಇರುವಾಗ ಒಂದು ವೇಳೆ ಈ ಶಿಕ್ಷೆಯನ್ನೇ ರದ್ದುಪಡಿಸಿದರೆ ಆ ಅಪರಾಧ ಇನ್ನೆಷ್ಟು ಅಧಿಕವಾಗಬಹುದು? ಮಾನವಹತ್ಯೆ ಒಂದೇ ಅಲ್ಲ, ದಂಡಸಂಹಿತೆಯ ಎಲ್ಲ ಅಪರಾಧಗಳೂ ದಂಡಸಂಹಿತೆ ಜಾರಿಯಲ್ಲಿದ್ದರೂ ಅವ್ಯಾಹತವಾಗಿ ನಡೆಯುತ್ತಲೇ ಇವೆ. ಅಂದಮಾತ್ರಕ್ಕೆ ದಂಡಸಂಹಿತೆಯನ್ನೇ ರದ್ದುಪಡಿಸಬಹುದೆ? ಈ ಮಾತನ್ನು ಯಾರೂ ಒಪ್ಪುವುದಿಲ್ಲ. ದಂಡಸಂಹಿತೆಯೂ ಇರಬೇಕು. ಶಿಕ್ಷೆಯೂ ಇರಬೇಕು.

ಹಾಗಾದರೆ ಈ ಮರಣದಂಡನೆಯ ವಿಚಾರವಾಗಿಯೆ ಅಷ್ಟೊಂದು ಆಕ್ಷೇಪವೇಕೆ? ಮರಣದಂಡನೆಯಿಂದ ಶಿಕ್ಷೆಯ ಉದ್ದೇಶವಾದ ಅಪರಾಧಿಯ ಮನಸ್ಸಿನ ಪರಿವರ್ತನೆಗೆ ಅವಕಾಶವೇ ಇಲ್ಲ. ಶಿಕ್ಷೆ ಅನುಭವಿಸಲು ಅವನು ಜೀವಂತವಿದ್ದರಲ್ಲವೆ? ಅವನೇ ಸತ್ತರೆ ಶಿಕ್ಷೆಯನ್ನು ಅನುಭವಿಸುವವರಾರು? ಅವನನ್ನು ಮರಣದಂಡನೆಗೆ ಗುರಿಪಡಿಸಿದರೆ, ಕಷ್ಟ (ಶಿಕ್ಷೆ) ಅನುಭವಿಸುವವರು ಅವನ ಬಂಧು ಬಳಗದವರು, ಅವನ ಅವಲಂಬಿತರು. ಆದ್ದರಿಂದ ಮರಣದಂಡನೆ ಶಿಕ್ಷೆಯ ಉದ್ದೇಶವನ್ನು ಸಾಧಿಸುವುದಿಲ್ಲ ಎಂಬ ವಾದ ಎಲ್ಲ ಕಾಲದಲ್ಲೂ ಇದ್ದೇ ಇದೆ. ಮರಣದಂಡನೆ ನ್ಯಾಯವೆ? ಎಂಬ ಪ್ರಶ್ನೆ ಅಮೆರಿಕಾ, ಇಂಗ್ಲೆಂಡ್, ಭಾರತ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಚರ್ಚಿಸಲ್ಪಟ್ಟಿದೆ. ಮರಣದಂಡನೆ ಸಂವಿಧಾನಬಾಹಿರವಲ್ಲ ಎಂಬುದು ಆ ಶಾಸನ ಜಾರಿಯಲ್ಲಿರುವ ಎಲ್ಲ ದೇಶಗಳ ನ್ಯಾಯಾಂಗದ ತೀರ್ಪು.

ಆದರೂ ಮರಣ ದಂಡನೆಯ ವಿರುದ್ಧ ಹೂಡಿರುವ ಈ ಸಮರದ ನೀತಿ ಯಾವುದು? ಮೇಲೆ ಹೇಳಿದಂತೆ ಈ ಶಿಕ್ಷೆ ತನ್ನ ಉದ್ದೇಶವನ್ನು ಈಡೇರಿಸುವುದರಲ್ಲಿ ವಿಫಲವಾಗಿದೆ. ವಿಫಲವಾದ ಈ ಶಾಸನವನ್ನು ಮುಂದುವರಿಸಿಕೊಂಡು ಹೋಗುವುದರ ಔಚಿತ್ಯ, ಉಪಯುಕ್ತತೆ ಏನು? ಇದು ಮೇಲ್ನೋಟಕ್ಕೆ ನ್ಯಾಯವೆಂದೇ ತೋರಬಹುದು. ಆದರೆ ಎಲ್ಲಿಯವರೆಗೆ ಮಾನವನಲ್ಲಿ ಪಾಶವೀ ಪ್ರವೃತ್ತಿ ಇದೆಯೋ, ಎಲ್ಲಿಯವರೆಗೆ ಇತರರ ಪ್ರಾಣವನ್ನು ರಕ್ಷಿಸಬೇಕಾದ ಹೊಣೆ ರಾಜ್ಯದ ಮೇಲಿದೆಯೊ ಅಲ್ಲಿಯವರೆಗೆ ಮರಣದಂಡನೆ ಇರಬೇಕೆಂಬುದು ತರ್ಕ. ಆದರೂ, ನ್ಯಾಯಾಲಯಗಳು ಯಾವ ಸಂದರ್ಭದಲ್ಲಿ ಮರಣದಂಡನೆ ವಿಧಿಸಬೇಕೆಂಬ ಬಗ್ಗೆ ಎಲ್ಲ ನ್ಯಾಯಶಾಸ್ತ್ರ ಪದ್ಧತಿಯಲ್ಲೂ ಒಂದು ಸೂತ್ರವನ್ನು ಒಪ್ಪಿಕೊಳ್ಳಲಾಗಿದೆ. ಶಿಕ್ಷೆಯನ್ನು ಅತ್ಯಂತ ವಿರಳವಾದ ಕೇಸುಗಳಲ್ಲಿ ಅತ್ಯಂತ ವಿರಳವಾಗಿ (Rarest of rare cases) ವಿಧಿಸಬೇಕೆಂಬುದಾಗಿ ನಮ್ಮ ಸರ್ವೋಚ್ಚ ನ್ಯಾಯಾಲಯ ತೀರ್ಮಾನಿಸಿದೆ. ಎಂಥ ಕೇಸುಗಳನ್ನು ಅತ್ಯಂತ




ಮರಣದಂಡನೆ

ವಿರಳವಾದ ಕೇಸುಗಳೆಂದು ಹೇಳಬೇಕು? ಈ ವಿಚಾರವಾಗಿ ಎರಡು ದಶಕಗಳ ಹಿಂದೆ ಲಾ ಕಮಿಷನ್ (Law commission) ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿ; 'ಮರಣದಂಡನೆಯನ್ನು ಎಂಥಾ ಕೇಸುಗಳಲ್ಲಿ ವಿಧಿಸಬೇಕೆಂಬುದನ್ನು ದಂಡಸಂಹಿತೆಯಲ್ಲೇ ನಿರೂಪಿಸುವುದು ಸೂಕ್ತವೆ? ಅಗತ್ಯವೆ?' ಎಂದು ಕೇಳಲಾಗಿತ್ತು. ಅದಕ್ಕೆ ಉತ್ತರವಾಗಿ - ಯಾವ ಸಂದರ್ಭದಲ್ಲಿ ಮರಣದಂಡನೆ ವಿಧಿಸಬೇಕೆಂಬುದನ್ನು ವಿಚಾರಣೆ ನಡೆಸುವ ನ್ಯಾಯಾಧೀಶರ ವಿವೇಚನೆಗೆ ಬಿಡತಕ್ಕದ್ದೆಂದು ಬಹುಮತ ಬಂತು. ಆ ವರದಿಯ ಪ್ರಕಾರ ದಂಡಸಂಹಿತೆಯನ್ನು ತಿದ್ದುಪಡಿ ಮಾಡಲಿಲ್ಲ. ಅಂದರೆ ಈ ಮರಣ ದಂಡನೆಯ ಶಿಕ್ಷಾಮೀಮಾಂಸೆ ಶತಶತಮಾನಗಳ ಹಿಂದೆ ಇದ್ದಲ್ಲಿಯೇ ಈಗಲೂ ಇದೆ. ಇದರ ಅರ್ಥ ಮಾನವನ ಅಪರಾಧ ಪ್ರವೃತ್ತಿಯೂ ಹಿಂದೆ ಇದ್ದಲ್ಲಿಯೆ ಇದೆ! ನ್ಯಾಯಶಾಸ್ತ್ರವೂ ಇದ್ದಲ್ಲಿಯೆ ನಿಂತಿದೆ!! ಇದೇ ನ್ಯಾಯಶಾಸ್ತ್ರ, ಇದೇ ನ್ಯಾಯ! ■

ಸಾವಿನ ಮನೆಯಿಂದ.....

■ ಎಚ್.ದಂಡಪ್ಪ




ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಸಾವಿರಾರು ಜನರು ಸೆರೆವಾಸ ಅನುಭವಿಸಿದರು. ಹಿಟ್ಲರನ ಹಿಂಸೆಗೆ ಜರ್ಮನಿಯಲ್ಲಿ ವಿರೋಧ ವ್ಯಕ್ತಪಡಿಸಿದರು. ಈ ರೀತಿ ವಿರೋಧ ವ್ಯಕ್ತಪಡಿಸಿದವರನ್ನು ಮರಣ ದಂಡನೆ ವಿಧಿಸಿ ಸಾಯಿಸಲಾಯ್ತು. ಮರಣ ದಂಡನೆಗೆ ಒಳಗಾದ ಬಾಲಕನೊಬ್ಬನು ತನ್ನ ತಂದೆ ತಾಯಿಗಳಿಗೆ ಬರೆದ ಪತ್ರದ ತುಣುಕು ಇಲ್ಲಿದೆ.

ಫೆಬ್ರವರಿ 3, 1944

ಪ್ರೀತಿಯ ತಂದೆ ತಾಯಿಗಳೇ,

ನಾನು ನಿಮಗೊಂದು ಕೆಟ್ಟ ಸುದ್ದಿಯನ್ನು ಕೊಡುವುದು ಅನಿವಾರ್ಯ... ನಾನು ಮರಣ ದಂಡನೆಗೆ ಒಳಗಾಗುತ್ತಿದ್ದೇನೆ. ನನ್ನೊಂದಿಗೆ ಗೊಸ್ಟೊಲ್ ಜಿ ಕೂಡಾ ಗಲ್ಲಿಗೇರುತ್ತಿದ್ದಾನೆ. ನಾವಿಬ್ಬರೂ ಎಸ್.ಎಸ್.ಗೆ ಸಹಿ ಮಾಡದಿರುವುದೇ ಇದಕ್ಕೆ ಕಾರಣ. ಯಾವುದೇ ಕಾರಣಕ್ಕೂ ಎಸ್ ಎಸ್‌ಗೆ ಸಹಿ ಮಾಡಬಾರದೆಂದು ನೀವು ಪತ್ರ



ಮರಣದಂಡನೆ

ಬರೆದಂತೆ ನಾನು ನಡೆದುಕೊಂಡಿದ್ದೇನೆ. ಸಹಿ ಮಾಡಿ ಆತ್ಮವಂಚನೆ ಮಾಡಿಕೊಳ್ಳಲು ನಮಗೆ ಇಷ್ಟವಿರಲಿಲ್ಲ. ಎಸ್ ಎಸ್ ನನಗೆ ಮರಣದಂಡನೆ ವಿಧಿಸುತ್ತದೆಂದು ನನಗೆ ಗೊತ್ತಿತ್ತು. ಓ ನನ್ನ ತಂದೆ ತಾಯಿಗಳೇ ನನಗಾಗಿ ಏನೆಲ್ಲಾ ಕಷ್ಟ ಪಟ್ಟಿರಿ! ನನ್ನನ್ನು ಕ್ಷಮಿಸಿ ನಾನು ನಿಮ್ಮನ್ನು ನೋಯಿಸಿದ್ದಕ್ಕಾಗಿ ದಯಮಾಡಿ ಕ್ಷಮಿಸಿ ಹಾಗೂ ದೇವರಲ್ಲಿ ಪ್ರಾರ್ಥಿಸಿ...... ನಾವು ಯುದ್ಧದಲ್ಲಿ ಸತ್ತಿದ್ದರೆ ಹೇಗೋ ಹಾಗೆ ನೇಣಿನಲ್ಲಿ ಸಾಯುತ್ತಿದ್ದೇವೆ. ಹೌದು ಹೆತ್ತು ಹೊತ್ತು ಸಾಕಿ ಬೆಳೆಸಿದ ನಿಮಗೆ ದುಃಖವಾಗುತ್ತದೆ ನಿಜ. ಆದರೆ ಈಗ ನನ್ನಂತೆಯೇ ಸಾವಿರಾರು ಬಾಲಕರು ಸತ್ತಿದ್ದಾರೆ. ಹಾಗೆಯೇ ಎಸ್‌ಎಸ್‌ನಲ್ಲಿರುವ ವ್ಯಕ್ತಿಗಳೂ ಕೂಡಾ ಸತ್ತಿದ್ದಾರೆ. ನನ್ನ ಬಾಲ್ಯದಿಂದ ಒಳಿತನ್ನೇ ಬಯಸುತ್ತಾ ಪೋಷಿಸುತ್ತಾ ಬಂದಿದ್ದಕ್ಕೆ ತುಂಬಾ ವಂದನೆಗಳು. ನನ್ನನ್ನು ಕ್ಷಮಿಸಿ ದೇವರಲ್ಲಿ ಪ್ರಾರ್ಥಿಸಿ....

○

ಜರ್ಮನಿಯ ಚಳವಳಿಯೊಂದರಲ್ಲಿ ಭಾಗವಹಿಸಿದ್ದಕ್ಕಾಗಿ 'ಕಿಮ್' ಎಂಬ ತರುಣನಿಗೆ ಮರಣ ದಂಡನೆಯನ್ನು ವಿಧಿಸಲಾಗಿತ್ತು. ಆವನು ತನ್ನ ಪ್ರಿಯತಮೆಗೆ ಬರೆದ ಪತ್ರದ ಸಾರ ಇದು:

ಏಪ್ರಿಲ್ 4, 1945

ನನ್ನ ಪುಟ್ಟ ಹೃದಯೇಶ್ವರಿ.

ಈ ದಿನ ನನ್ನನ್ನು ಮರಣದಂಡನೆಗೆ ಗುರಿಪಡಿಸಲಾಗುತ್ತಿದೆ. 20 ವರ್ಷದ ಪುಟ್ಟ ಹೃದಯದ ಪುಟ್ಟಿಗೆ ತಾಳಲಾರದ ನೋವಿನ ಸುದ್ದಿ ಇದು. ವಿದಾಯದ ಪತ್ರವನ್ನು ನಿನಗೆ ಬರೆಯಬೇಕೆನಿಸಿ ಅನುಮತಿ ಪಡೆದು ಬರೆಯಲು ಕುಳಿತಿದ್ದೇನೆ. ನಾನೇನು ಬರೆಯಲಿ? ಯಾವ ರೀತಿಯ ಹಂಸರಾಗವನ್ನು ಬರಹದಲ್ಲಿ ತುಂಬಲಿ? ಕಾಲ ಕಿರಿದಾಗಿದೆ. ಮನಸ್ಸಿನಲ್ಲಿ ಭಾವನೆಗಳ ಒತ್ತಡವಿದೆ. ನಿನಗೆ ಕೊನೆಯ ಮತ್ತು ಅಮೂಲ್ಯವಾದ ಕಾಣಿಕೆಯಾಗಿ ಏನನ್ನು ಕೊಡಲಿ? ಹೇಗೆ ವಿದಾಯ ಹೇಳಲಿ? ನನ್ನ ದುಃಖತಪ್ತ ಹೃದಯವನ್ನೊತ್ತು ಸಂತೋಷದ ಕ್ಷಣಗಳನ್ನು ಹೇಗೆ ಕಾಣಲಿ?

ಪ್ರೀತಿಯೆಂಬ ಸಾಗರದಲ್ಲಿ ಒಬ್ಬರಿಗೊಬ್ಬರು ಪರಿಚಯವಾದೆವು. ಪರಿಚಯವಾಗಿ ಜೊತೆಯಾಗಿ ಪಯಣಿಸುತ್ತಿದ್ದೆವು. ನಂಬಿಕಸ್ಥ ಮಕ್ಕಳು ಒಟ್ಟಾಗಿ ಕಲೆತು ಯಾವುದೇ ಅನುಮಾನ ಸಂಶಯಕ್ಕೆಡೆಯಿಲ್ಲದಂತೆ ಆಟವಾಡುತ್ತಾ ಕಾಲ ಕಳೆಯುವಂತೆ ನಾವು ಪರಸ್ಪರ ಪ್ರೀತಿಸಿದೆವು. ಈ ಪ್ರೀತಿ ಮುಂದುವರಿಯುತ್ತಿದೆ.... ಆದರೀಗ ನಾವಿಬ್ಬರೂ ಪ್ರೀತಿ ಎಂಬ ಸಾಗರದ ಬೇರೆ ಬೇರೆ ದಡಗಳಲ್ಲಿದ್ದೇವೆ. ನಾನೊಂದು ಲೋಕದಲ್ಲಿದ್ದರೆ ನೀನು ಹೊಸದೊಂದು ಲೋಕದಲ್ಲಿರುವೆ. ಬದುಕಿನ ದಾರಿಯಲ್ಲಿ ಸುಂದರವಾದ ವಸ್ತುಗಳೇ ಎದುರಾಗಲಿ.

ನಿನಗೆ ದುಃಖವಾಗುತ್ತಿದೆ ಎಂಬುದು ಗೊತ್ತು. ದುಃಖವನ್ನು ತಡೆಯಬೇಡ ನಿನ್ನಷ್ಟಕ್ಕೆ ನೀನೇ ಅತ್ತುಬಿಡು. ಎಲ್ಲಾ ಸಂತೋಷಗಳು ನಿನ್ನದಾಗಲಿ. ಕಳೆದ ಅಮೂಲ್ಯವಾದ ಆನಂದದ ಕ್ಷಣಗಳನ್ನು ನನಗೆ ಮರೆಯಲಾಗುತ್ತಿಲ್ಲ. ಆದರೆ ನೀನು ಮಾತ್ರ ಆ ಕ್ಷಣಗಳನ್ನು ಮರೆತುಬಿಡು. ಏಕೆಂದರೆ ಆ ಮಧುರವಾದ ಕ್ಷಣಗಳ ನೆನಪುಗಳು ನಿನ್ನ ಬದುಕಿಗೆ ಅಡ್ಡಿಯಾಗಬಾರದು. ನನ್ನ ನೆನಪುಗಳ ಮೂಲಕ ನಿನ್ನ ಬದುಕು ಸುಂದರವಾಗ ಬೇಕೇ ಹೊರತು ಆ ನೆನಪುಗಳು ನಿನ್ನ ಬದುಕನ್ನು ಸುಟ್ಟು ಬೂದಿ ಮಾಡಬಾರದು. ಬದುಕು ದುರ್ಬಲವಾಗಬಾರದು. ಈ ರೀತಿಯಾಗದಂತೆ ನಿನ್ನ ಮನಸ್ಸು ಪ್ರಬುದ್ಧವಾಗಿರಬೇಕು. ಶ್ರೀಮಂತಿಕೆಯಿಂದ ತುಂಬಿರಬೇಕು. ಮಣ್ಣಿನ ಕಣದಲ್ಲಿ ಜೀವಂತಿಕೆ ಇರುವಂತೆ ಚೈತನ್ಯ ತುಂಬಿರಬೇಕು.

ಈ ಪತ್ರವನ್ನು ಓದುತ್ತಿದ್ದರೆ ನಿನ್ನ ಹೃದಯಕ್ಕೆ ಚೂರಿ ಹಾಕಿದಂತಿರಬೇಕಲ್ಲವೇ? ಇದನ್ನೇ ಜನರು ದುಃಖ ಎಂದು ಕರೆಯುವುದು. ಸಾವು ಒಳ್ಳೆಯದಿರಲಿ ಕೆಟ್ಟದಿರಲಿ, ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇ ಬೇಕು. ನಾನು ಇಂದು ನಾಳೆ ನೀನು. ಹೀಗಿರುವಾಗ ನಾನು ಮೊದಲೇ ಸಾಯುತ್ತಿದ್ದೇನೆ. ಸಾಕ್ರೆಟೀಸ್, ಪ್ಲೇಟೋ ವಿಚಾರಗಳು ಮನಸ್ಸಿನಲ್ಲಿ ಮೂಡುತ್ತಿವೆ. ಪ್ಲೇಟೋ ಹೇಳಿರುವ ವಿಚಾರಗಳೆಲ್ಲಾ ಮುತ್ತುತ್ತಿವೆ. ನಿನ್ನನ್ನು ಸಾಗರದ ಆಳದಷ್ಟು ಪ್ರೀತಿಸುತ್ತಿದ್ದೇನೆಂದು ಹೇಳುತ್ತಿದ್ದೆ. ಆದರೆ ಅಂತಹ ಪ್ರೀತಿ ನನ್ನದಾಗಲಿಲ್ಲ.

ಪ್ರಿಯೆ ತಲೆ ಎತ್ತು, ತಗ್ಗಿಸಬೇಡ. ಜಗತ್ತು ವಿಶಾಲವಾಗಿದೆ. ನಿನಗೆ ದುಃಖವಾಗುತ್ತಿದೆ ನಿಜ. ಆದರೆ ದುಃಖವು ಸುಖವಾಗಿ ಮಾರ್ಪಾಡಾಗುತ್ತದೆ. ಇದು ಸತ್ಯ, ದುಃಖದ ನಂತರ ಪ್ರಬುದ್ಧತೆ ಬರುತ್ತದೆ. ಪ್ರಬುದ್ಧತೆಯೇ ಸುಖದ ಫಲ ನೀಡುತ್ತದೆ.


ನಾಳೆ ನಿನ್ನ ಸಂಗಾತಿಯಾಗಲು ಒಬ್ಬ ಬರುತ್ತಾನೆ. ನನ್ನ ನೆನಪುಗಳು ನಿನ್ನನ್ನು ಕಾಡಿಸಬಹುದು. ನನ್ನ ನಗು ಮೊಗದಲ್ಲಿರುವ ನೀಲಿ ಕಣ್ಣುಗಳನ್ನು ನೋಡು. ನಾನೇ ಹೇಳುತ್ತಿದ್ದೇನೆ. ನನ್ನ ನೆನಪುಗಳಿಂದ ಅವನನ್ನು ತಿರಸ್ಕರಿಸಬೇಡ. ನನ್ನ ನೆನಪುಗಳು ನಿನ್ನನ್ನು ಸುಟ್ಟು ಬೂದಿ ಮಾಡುವುದು ಬೇಡ. ಅವನನ್ನು ತುಂಬು ಹೃದಯದಿಂದ ಪ್ರೀತಿಸು. ಅವನೂ ನಿನ್ನನ್ನು ಪ್ರೀತಿಸುತ್ತಾನೆ. ನಿನ್ನ ಬದುಕು ಸುಂದರವಾಗುತ್ತದೆ. ಮಣ್ಣಿನಲ್ಲಿ ಜೀವದ ಕಣಗಳು ಚೈತನ್ಯಯುಕ್ತವಾಗಿರುವಂತೆ ನಿನ್ನಲ್ಲಿ ಚೈತನ್ಯ ಉಕ್ಕಿ ಹರಿಯುತ್ತದೆ. ಅವನ ಬಾಳು ಬೆಳಗಿ ನಿನ್ನ ಬದುಕೂ ಸುಂದರವಾಗುತ್ತದೆ.

ನಿನ್ನವ, ಆದರೆ ಎಂದೆಂದಿಗೂ ನಿನ್ನವನಲ್ಲದ,

ಕಿಮ್

ಪಶ್ಚಿಮ ಸೆರೆಮನೆ

ಜರ್ಮನಿ ಸೆಕ್ಷನ್ ಸೆಲ್ 411



ಮಹಿಳೆಯ ಮಾನಸಿಕ ಸಮಸ್ಯೆಗಳಿಗೆ ಪರಿಹಾರವೆಲ್ಲಿ?

ಸಮಾನತೆಗಾಗಿ ವಿಶೇಷ ಪ್ರಚಾರಗಳು ನಡೆಯುತ್ತಿದ್ದರೂ, ಮಹಿಳೆಗೆ ಪ್ರತ್ಯೇಕ ಹಕ್ಕುಗಳನ್ನು ನೀಡಿರುವುದಾಗಿ ಪ್ರಪಂಚದೆಲ್ಲೆಡೆಯ ದೇಶಗಳು ಘೋಷಿಸುತ್ತಿದ್ದರೂ ''ಲಿಂಗಭೇದ'' ವೈಖರಿಯು ಹಾಗೆಯೇ ಉಳಿದಿದೆ. ಮುಖ್ಯವಾಗಿ ಹೆಣ್ಣು-ಗಂಡಿನತ್ತ ತೋರುವ ದೃಷ್ಟಿಗಳು ವಿಭಿನ್ನವಾಗಿಯೇ ಉಳಿದಿವೆ. ಈ ಪಕ್ಷಪಾತಕ್ಕೆ ಕೊನೆಯಿಲ್ಲದಂತೆ ಮುಂದುವರೆಸಿಕೊಂಡೇ ಬರುತ್ತಿರುವ ಈ ಸಮಾಜಕ್ಕೆ ಹೆಣ್ಣಿನ ಜೀವನ ದಿನಂಪ್ರತಿ ಕೊರಗುವ ದೊಡ್ಡ ಸಮಸ್ಯೆಯಾಗಿಯೇ ಉಳಿದಿದೆ.

ಹೆಣ್ಣುಮಕ್ಕಳಿಗೆ ಸಮಾನತೆಯನ್ನು ನೀಡದೆ, ಚಿಕ್ಕಂದಿನಿಂದಲೂ ಮಾನಸಿಕ ವೇದನೆಯನ್ನು ಅನುಭವಿಸಲು ಕಾರಣ ತಾಯಿ ತಂದೆಯರೆಂದರೆ ಆಶ್ಚರ್ಯವೇನಿಲ್ಲ. ಸಂತಾನದ ಸಮಯದಲ್ಲಿ ಹೆಣ್ಣಿಗಿಂತ ಗಂಡು ಮಕ್ಕಳನ್ನೇ ಬಯಸುವ, ಅದಕ್ಕಾಗಿ ಮೊರೆ ಹೋಗುವ ಪದ್ಧತಿಯು ಅನೇಕಾನೇಕ ಕುಟುಂಬಗಳಲ್ಲಿ ಸದಾ ಕಾಣುವ ದೃಶ್ಯವಾಗಿದೆ.

ತಮಗರಿವಿಲ್ಲದಂತೆ ಸಂತಾನದಲ್ಲಿ ಭೇದ ಭಾವವನ್ನು ತೋರುವ ತಂದೆ-ತಾಯಿಯರು ಚಿಕ್ಕಂದಿನಿಂದಲೂ ಆಚಾರ-ವಿಚಾರ-ಸಂಪ್ರದಾಯಗಳಿಗಾಗಿ ಹೆಣ್ಣು ಮಕ್ಕಳನ್ನು ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ. ಸಹಜವಾಗಿಯೇ ಹೆಣ್ಣು ಮಕ್ಕಳು ತಮ್ಮ ಬಗ್ಗೆ ಪೋಷಕರು ತಳೆದಿರುವ ನಿಲುವನ್ನು ನೆನೆಯುತ್ತಾ ನಿರಾಶೆಗೀಡಾಗುತ್ತಾರೆ. ಶಾರೀರಿಕ ಹಾಗೂ ಮಾನಸಿಕವಾಗಿ ಗಂಡಸರಿಗಿಂತ ಕಡಿಮೆ ಎಂಬ ಅಭಿಪ್ರಾಯಕ್ಕೆ ಒಳಪಡುತ್ತಾರೆ. ವಯಸ್ಸು ಬೆಳೆದಂತೆಲ್ಲಾ ಭೇದವೂ ಬೆಳೆಯುತ್ತಾ ತನ್ನಲ್ಲಿರುವ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಾ ನಿರಾಶೆಯಿಂದ ಮನೋವೇದನೆಗೆ ಒಳಗಾಗುತ್ತಾರೆ.

ಸಾಮಾನ್ಯವಾಗಿ ತಂದೆ-ತಾಯಿಯರು ಗಂಡು ಮಕ್ಕಳ ಆಸೆ-ಆಕಾಂಕ್ಷೆಗಳನ್ನು ನೆರವೇರಿಸಲು ಪ್ರಯತ್ನಿಸುತ್ತಾರೆ. ಅದೇ ರೀತಿ ಹೆಣ್ಣು ಮಕ್ಕಳ ಕೋರಿಕೆಗಳಿಗೆ ಸಮಜಾಯಿಷಿ ನೀಡುತ್ತಾರೆಯೇ ವಿನಾ ಈಡೇರಿಸಲು ಮುಂದಾಗುವುದಿಲ್ಲ.

ಒಂದು ವೇಳೆ ಯಾವುದೇ ಕುಟುಂಬದಲ್ಲಿ ಹೆಣ್ಣು ಮಗು ತನ್ನ ತಂದೆ-ತಾಯಿಯರನ್ನು ''ತನ್ನ ಅಣ್ಣ ಅಥವಾ ತಮ್ಮನಿಗೆ ಎಲ್ಲಾ ತಂದು ಕೊಡುತ್ತೀರಾ, ನನಗೇಕೆ ತರುವುದಿಲ್ಲ'' ಎಂದು ಕೇಳಿದ್ದೇ ಆದರೆ, ಅದಕ್ಕೆ ದೊರೆಯುವ ಉತ್ತರ:''ಅವನು ಗಂಡು ಮಗುವಲ್ಲವೆ - ನೀನು ಹೆಣ್ಣು ಮಗು'' ಎಂದು. ಆಗಲೇ ಅವರ ಮನಸ್ಸಿನಲ್ಲಿ ಸಮಸ್ಯೆ ಎದುರಾಗುತ್ತದೆ. ಹೆಣ್ಣು ತನ್ನ ಮನೋಬಯಕೆಗಳನ್ನು ಮುಂದೊಡ್ಡಬಾರದೆಂದೂ, ಒಂದು ವೇಳೆ ಹೇಳಿದರೂ ತಂದೆ-ತಾಯಿ ಕಾಳಜಿ ವಹಿಸುವುದಿಲ್ಲವೆಂದೂ ತಿಳಿಯುತ್ತದೆ. ಮಗ ಆಲಸ್ಯವಾಗಿ ನಿದ್ರೆಯಿಂದೆದ್ದರೆ ಕಿಂಚಿತ್ತೂ ಮಾತಾಡದ ತಂದೆ-ತಾಯಿಯರು ಮಗಳು ಏಳುವುದು ಸ್ವಲ್ಪ ತಡವಾದರೆ ಬೈಗಳ ಸುರಿಮಳೆಯನ್ನೇ ಸುರಿಸುತ್ತಾರೆ.

ಇದೇ ರೀತಿ ಊಟೋಪಚಾರಗಳಲ್ಲಿಯೂ ಗಂಡುಮಕ್ಕಳಿಗೆ ಮನಸ್ಪೂರ್ವಕವಾಗಿ ತಿನ್ನಿಸಿ ಹೆಣ್ಣು ಮಕ್ಕಳತ್ತ ಅಷ್ಟಕ್ಕಷ್ಟೇ ಗಮನ ಹರಿಸುತ್ತಾರೆ. ಹೀಗೆ ಹೆಣ್ಣು ಮಕ್ಕಳು ಮರೆಯಾಗಿಯೇ ಉಳಿಯಲು ತಂದೆ-ತಾಯಿಯರೇ ಕಾರಣರೆಂಬುದು ವಾಸ್ತವಾಂಶ. ಈ ರೀತಿಯ ಮಾನಸಿಕ ಸಮಸ್ಯೆಗಳು ಹೆಣ್ಣಿನಲ್ಲಿ ಹುಟ್ಟಿಕೊಳ್ಳಲು ತಮ್ಮ ಸಂತಾನಾಭಿವೃದ್ಧಿಯಿಂದಲೇ ತೋರುವ ಲಿಂಗಭೇದ ಅಪೇಕ್ಷೆ-ಉಪೇಕ್ಷೆಗಳೇ ಕಾರಣವೆಂಬುದು ನಿರ್ವಿವಾದ.

ಪ್ರಪಂಚದಲ್ಲಿ ಹೆಣ್ಣುಮಕ್ಕಳನ್ನು ಬಯಸುವ ಹಾಗೂ ಗಂಡುಮಕ್ಕಳನ್ನು ಬೇಡವೆನ್ನುವ ತಂದೆ-ತಾಯಿಯರು ಇರುವರಾದರೂ ತುಂಬಾ ವಿರಳ. ಹೆಣ್ಣಿನಂತೆಯೇ ಗಂಡಿಗೂ ಸಮಸ್ಯೆಗಳು ತಲೆದೋರುವವಾದರೂ ಕೇವಲ ಬೆರಳೆಣಿಕೆಯಷ್ಟು - ಅವೂ ಕಡ್ಡಾಯವೇನಲ್ಲ.

ಮೇಲಿನ ರೀತಿಯ ವಿವಿಧ ಕಾರಣಗಳನ್ನು ತಂದೆ-ತಾಯಿಯರು ಗಮನದಲ್ಲಿಟ್ಟುಕೊಂಡು ಗಂಡು-ಹೆಣ್ಣು ಎಂಬ ಭೇದಭಾವ ಮಾಡದೆ ಬೆಳೆಸಿದರೆ ಚಿಕ್ಕಂದಿನಿಂದಲೂ ನಾವು ಗಂಡಸರಿಗಿಂತ ಕಡಿಮೆ ಎಂಬ ಭಾವನೆಯಿಲ್ಲದೆ ಆತ್ಮವಿಶ್ವಾಸದಿಂದ ಬೆಳೆಯುತ್ತಾರಲ್ಲದೆ ಎಲ್ಲಾ ರಂಗಗಳಲ್ಲೂ ಗಂಡಸರಿಗೆ ಪೈಪೋಟಿಯಾಗಿ ನಿಲ್ಲಬಲ್ಲರು. ಸಮಾನತೆ ಗಳಿಸಬಲ್ಲರು. ಮಗನನ್ನು ಒಂದು ರೀತಿಯಲ್ಲಿ, ಮಗಳನ್ನು ಮತ್ತೊಂದು ರೀತಿಯಲ್ಲಿ ನೋಡುವ, ಹೆಣ್ಣು ಮಕ್ಕಳ ಬಗ್ಗೆ ತಳೆದಿರುವ ಅರ್ಥವಿಲ್ಲದ ಸಂಪ್ರದಾಯ, ಲಕ್ಷ್ಮಣ ರೇಖೆಗಳಿಗೆ ಮಂಗಳ ಹಾಡಿದ್ದೇ ಆದರೆ, ಹೆಣ್ಣು ಮಕ್ಕಳು ಚಿಕ್ಕಂದಿನಿಂದಲೂ ಅಚಲವಾದ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬಲ್ಲರು.

ವಿಶೇಷವಾಗಿ ತಾಯಿಯಾದವಳು ತನ್ನ ಮಗಳ ಬಗ್ಗೆ ಕಾಳಜಿ ವಹಿಸಬೇಕಾದುದು ಅತ್ಯಗತ್ಯ. ಇದನ್ನು ಮರೆತು ಮಗಳ ಬಗ್ಗೆ ಕೀಳು ಭಾವನೆ ಹೊಂದಿ ಮಗನನ್ನು ಶ್ಲಾಘಿಸುವ ಮಟ್ಟಕ್ಕೆ ಇಳಿಯುತ್ತಾಳೆ. ಇಷ್ಟಕ್ಕೇ ನಿಲ್ಲದೆ ನೀನೆಷ್ಟೇ ಓದಿದರೂ ಪಾತ್ರೆ ತೊಳೆಯುವುದು ತಪ್ಪುವುದಿಲ್ಲ ಎಂಬ ಮುದ್ರೆಯನ್ನೊತ್ತಿ, ವಿದ್ಯಾರಂಗದಲ್ಲಿ ಮುಂದುವರೆಯಲು ಅಡ್ಡಗಾಲು ಹಾಕುತ್ತಾಳೆ.

ಹೀಗಾಗಿ ಬಾಲ್ಯಾವಸ್ಥೆಯಿಂದಲೂ ಹೆಣ್ಣು ಮಕ್ಕಳಿಗೆ ಕುಟುಂಬ ಸದಸ್ಯರು ಹಾಗೂ ತಂದೆ-ತಾಯಿಯರು ಗಂಡು-ಹೆಣ್ಣೆಂಬ ಭೇದ-ಭಾವವಿಲ್ಲದ ಪರಿಸ್ಥಿತಿಯನ್ನು ಒದಗಿಸಿದರೆ ಅವರು ಯಾವುದೇ ರೀತಿಯ ಮಾನಸಿಕ ಸಮಸ್ಯೆಗಳಿಗೆ ಬಲಿಯಾಗದೆ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬಲ್ಲರು ಹಾಗೂ ಸಮಾನತೆಯನ್ನು ಗಳಿಸಬಲ್ಲರು. ■



ಪ್ರಪಂಚದೆಲ್ಲೆಡೆ ಸಮಾನತೆಯ ದೃಷ್ಟಿಯಿಂದ ಮಹಿಳೆಯರಿಗೆ ಪ್ರತ್ಯೇಕ ಹಕ್ಕುಗಳನ್ನು ನೀಡಿರುವುದಾಗಿ ಘೋಷಣೆಗಳು ತುಂಬಿ ತುಳುಕುತ್ತಿದ್ದರೂ,ಲಿಂಗಭೇದದಲ್ಲಿ ಸಲ್ಲುವ ಧೋರಣೆಗಳು ಮಾತ್ರ ಹಾಗೆಯೇ ಉಳಿದಿವೆ. ಈಗಲೂ ದೇಶದೆಲ್ಲೆಡೆ ಹೆಂಗಸರನ್ನು ಒಂದು ದೃಷ್ಟಿಯಲ್ಲಿ, ಗಂಡಸರನ್ನೇ ಒಂದು ದೃಷ್ಟಿಯಲ್ಲಿ ಕಾಣುತ್ತಿರುವುದು ಹಾಗೆಯೇ ಉಳಿದಿದೆ. ಮನೆಯಿಂದಲೇ ಆರಂಭವಾಗುವ ಈ ಸ್ತ್ರೀ ಅನಾಧರಣೆಗೆ ಕೊನೆಯಿಲ್ಲವೆ?

■ ಉತ್ತನೂರು ವ್ಯಾಸ್

ಮೊದಲನೆಯದಾಗಿ ಚೆಂಡು ಎಸೆಯುವವರು ಆವಾಗಾವಾಗ ಚೆಂಡಿಗೆ ಉಗುಳನ್ನು ಹಚ್ಚಿ ತಿಕ್ಕುವ ಕ್ರಮ. "ಥೂ! ಥೂ!! ಥೂ!!! ಎಂಜಲಿಲ್ಲಾ ಮುಸರಿ ಇಲ್ಲ" ಅಂತ ಮುಖ ಸಿಂಡರಿಸಿ ಬಿಡುತ್ತಾಳೆ. "ಉಗುಳೇ ಹಾಕಿ ತಿಕ್ಕಬೇಕನ್ನೋದು ಏನು? ನೀರು ಹಾಕಿ ತಿಕ್ಕಿದ್ರಾಯ್ತಪ್ಪ" ಅಂತಾಳೆ. "ಮೈದಾನದಾಗೆ ನೀರೆಲ್ಲಿರ್ತದಜ್ಜೀ?" ಅಂತಂದರೆ, "ಅದೇನು ಮಹಾ, ಸುಮ್ನೆ ಕಂಬ ನಿಂತಂಗೆ ನಿಂತಿರ್ತಾನಲ್ಲಾ ಆ ಅಂಪಯರ್, ಅವನ ಕೈಯಾಗೆ ಕಮಂಡಲ ಕೊಟ್ಟು ನಿಲ್ಲಿಸಿದ್ರಾಯ್ತು.


ನಮ್ಮಜ್ಜಿಯ ಕ್ರಿಕೆಟ್ ಪುರಾಣ

ನಮ್ಮಜ್ಜಿಗೀಗ ಎಂಬತ್ತು ವರ್ಷ ವಯಸ್ಸು, ಮಡಿಹೆಂಗಸು. ಅವಳ ವಯಸ್ಸನ್ನು ಗಮನಿಸಿ ನೀವು "ಇನ್ನೇನಜ್ಜಿ, ಊರು ಹೋಗು ಅಂತದೆ, ಕಾಡು ಬಾ ಅಂತದೆ" ಅಂತ ಅಪ್ಪಿ ತಪ್ಪಿ ಒಣ ವೇದಾಂತದ ಮಾತನಾಡಿದಿರೋ, "ಬಾಯ್ಮುಚ್ಚೋ ರಂಡೆಗಂಡ, ಅಷ್ಟೊಂದು ಹರಕತ್ತು ಬಿದ್ದಿದ್ರೆ ನೀನೇ ಹೋಗು ಕಾಡಿಗೆ, ಬ್ಯಾಡಂದವರ್‍ಯಾರು? ನಾನು ನಮ್ಮ ವಾಜಿ ಹೆಂಡ್ತಿ ಬಾಣಂತನ ಮಾಡದೆ ಜಪ್ಪಯ್ಯ ಅಂದ್ರೂ ಕದಲಲ್ಲ" ಅಂತ ನಿಮ್ಮ ಮುಖದ ಮೇಲೆ ಬೆವರಿಳಿಸಿಬಿಡುತ್ತಾಳೆ. ಹೀಗೆ ಅಜ್ಜಿ ಕಾಡಿಗೆ ಹೋಗಲು ಹಸಿರು ನಿಶಾನೆ ನೀಡಬೇಕಾದ ವಾಜಿ ನನ್ನ ಮೂರು ವರ್ಷದ ಸುಪುತ್ರ, ಅಜ್ಜಿಯ ಮರಿ ಮೊಮ್ಮಗ!

ಇಂತಹ ನಮ್ಮಜ್ಜಿ ರಾಮಾಯಣ, ಮಹಾಭಾರತ ನೋಡ್ಲಿ ಅಂತ ನಮ್ಮಪ್ಪ ಸಾಲ-ಸೋಲ ಮಾಡಿ ಬಣ್ಣದ ಟಿ.ವಿ.ಯೊಂದನ್ನು ತಂದಿಟ್ಟ. ಆದರೆ ನಮ್ಮಜ್ಜಿ ರಾಮ-ಕೃಷ್ಣರನ್ನು ಒಂದೆರಡು ವಾರ ಆಕಳಿಸುತ್ತಾ ನೋಡಿದಂತೆ ಮಾಡಿ, ಆನಂತರ ನಮ್ಮೊಂದಿಗೆ ಕ್ರಿಕೆಟ್ ಆಟವನ್ನು ನೋಡುವ ಚಟ ಬೆಳೆಸಿಕೊಂಡಿದ್ದು ವಿಷಾದವಾದರೂ ಸತ್ಯ!

"ಅಲ್ಲಮ್ಮಾ, ಏನೋ ಕಡಿಗಾಲಕ್ಕೆ ದೇವರ ಕತಿ ನೋಡ್ಲೀ ಅಂತ ನಾನು ಟಿ.ವಿ: ತಂದಿಟ್ರೆ, ಹುಡುಗರ ಜೋಡಿ ಕ್ರಿಕೆಟ್ ನೋಡ್ತಿಯಲ್ಲೇ" ಅಂತ ನಮ್ಮಪ್ಪ ಸಿಡಿಮಿಡಿಗುಟ್ಟಿದರೆ, "ನಿಂಗೇನ್ ಗೊತ್ತಾತ್ತದೋ ಕಿಟ್ಟ, ಆ ರಾಮ-ಕೃಷ್ಣ ಅಂತ ತೋರಿಸೋರು ಖರೇವಂದ್ರೂ ದೇವರೇನು? ಯಾರೋ ನಾಟಕ ಮಾಡ್ತಾರಪ್ಪ. ಅದೇ ಕ್ರಿಕೆಟ್ ಆಟದಾಗೆ ನೋಡು, ಸಚಿನ್ ಅಂದ್ರೆ ಸಚಿನ್ನೇ - ಜಡೇಜ ಅಂದ್ರೆ ಜಡೇಜಾನೇ" ಅಂತ ತನ್ನ ವಿಚಿತ್ರ ವಾದವನ್ನು ಮಂಡಿಸಿ ನಮ್ಮಪ್ಪನ ಬಾಯಿ ಮುಚ್ಚಿಸಿ ಬಿಡುತ್ತಾಳೆ!

ನಮ್ಮಜ್ಜಿ ಕ್ರಿಕೆಟ್ ಆಟವನ್ನು ನೋಡುವ ವಿಧಾನ, ಅರ್ಥ ಮಾಡಿಕೊಳ್ಳುವ ರೀತಿ, ನೀಡುವ ವಿವರಣೆ, ಫಲಿತಾಂಶವನ್ನು ನಿರ್ಧರಿಸುವ ಬಗೆ... ಎಲ್ಲವೂ ನಮ್ಮ ನಿಲುಕಿಗೆ ಸಿಗಲಾರದಂತಹವು. ಹಾಗಂತ ನಾವೇನಾದರೂ ಹೇಳಲು ಹೋದೆವೋ, ಪಟ ಪಟನೆ ಚಿತ್ರ-ವಿಚಿತ್ರ 'ಲಾ' ಪಾಯಿಂಟುಗಳನ್ನು ಹಾಕಿ ನಮ್ಮನ್ನೇ ಮೂರ್ಖರನ್ನಾಗಿಸಿ ಬಿಡುತ್ತಾಳೆ. ಉದಾಹರಣೆಗೆ ಒಂದು ಶನಿವಾರದ ಬೆಳಿಗ್ಗೆ ಕ್ರಿಕೆಟ್ ಆಟ ಆರಂಭವಾಗಿ ನಮ್ಮವರು ಟಾಸ್ ಗೆದ್ದು ಸಚಿನ್‌ನನ್ನು ಆರಂಭದ ಆಟಗಾರನನ್ನಾಗಿ ಕಳುಹಿಸಿದರೆನ್ನಿ, ಜನರೆಲ್ಲಾ ಉತ್ಸಾಹದಿಂದ ಚಪ್ಪಾಳೆ ತಟ್ಟುತ್ತಾ ಇರುವಾಗ, ನಮ್ಮಜ್ಜಿ "ಅಯ್ಯೋ, ಅಯ್ಯೋ, ಏನನ್ಯಾಯ..." ಅಂತ ಉದ್ಗರಿಸಿ ಬಿಡುತ್ತಾಳೆ. "ಏನಾಯ್ತಜ್ಜಿ?" ಅಂತ ನಾವೆಲ್ಲಾ ಬಾಯಿ ತೆಗೆದು ಕೇಳಿದರೆ, "ಅಲ್ಲ, ಸ್ವಲ್ಪನಾದ್ರೂ ತಲೆ ಬೇಡ್ವಾ? ಛಲೋ ಆಟ ಆಡೋ ಹುಡುಗನ್ನ ರಾಹು ಕಾಲದಾಗ ಕಳುಸೋದು?" ಅಂತ ಹೇಳಿ ನಮ್ಮೆಲ್ಲರ ಬಾಯಿ ಮುಚ್ಚಿಸಿಬಿಡುತ್ತಾಳೆ. "ಹೋಗಜ್ಜಿ, ನಿಂದೊಳ್ಳೆ ಕಂತೆ ಪುರಾಣ..." ಅಂತ ನಾವು ಅಜ್ಜಿಯ ಮಾತನ್ನು ಬಹಿಷ್ಕರಿಸಿ ಆಟ ನೋಡಲಾರಂಭಿಸಿದಾಗ. ಕಾಕತಾಳೀಯವೋ ಎಂಬಂತೆ ಸಚಿನ್ ಎರಡನೇ ಬಾಲಿಗೇ ಔಟಾದನೆಂದುಕೊಳ್ಳಿ, ಆಗ ಅಜ್ಜಿ "ನೋಡಿದ್ರೇನೋ ಹುಡುಗು ಮುಂಡೇವಾ, ದೊಡ್ಡೋರ ಮಾತಂದ್ರೆ ನಿಮಗೆ ಚಾಷ್ಟಿ ಆಗ್ಯಾದಲ್ಲಾ?" ಅಂತ ನಮ್ಮನ್ನೆಲ್ಲಾ ಮೂದಲಿಸಿಬಿಡುತ್ತಾಳೆ. ಇಂತಹ ಅಜ್ಜಿಗೆ ಹೇಗೆ ಪ್ರತಿಯುತ್ತರ ಕೊಡೋದು?



ಭರತ ಭೂಮಿಯಲ್ಲಿ ಎಂಬತ್ತು ಗ್ರೀಷ್ಮಗಳನ್ನು ಕಳೆದಿರುವ ನಮ್ಮಜ್ಜಿ ಅಪ್ಪಟ ಭಾರತ ಪ್ರೇಮಿ. ಅದರಲ್ಲಿ ಯಾವುದೇ ಸಂಶಯ ಬೇಡ. ಹೇಗಾ

ದರೂ ಸರಿ, ಭಾರತೀಯರೇ ಗೆಲ್ಲಬೇಕೆಂದು ನಮ್ಮೆಲ್ಲರಂತೆ ಅವಳೂ ಆಶಿಸುತ್ತಾಳೆ. ಪಂದ್ಯದಲ್ಲಿ ಭಾರತವಿದ್ದರೇನೇ ಆಟ ನೋಡೋದು. ಮೊದಲೇ ನಮ್ಮಿಂದ ಆಟ ಯಾವತ್ತು ಎಂದು ತಿಳಿದುಕೊಂಡು, ದೇವರ ಮನೆಯಲ್ಲಿ ಹಾಕಿದ ಪಂಚಾಂಗದಲ್ಲಿ ಆ ದಿನಕ್ಕೆ ಕುಂಕುಮದ ಬೊಟ್ಟನ್ನಿಟ್ಟು, ''ಹಂಗಂದ್ರೆ ಭಾದ್ರಪದ ಮಾಸ ಶುಕ್ಲ ಪಕ್ಷದ ಬಿದಿಗೇನೇ ಫೈನಲ್ಸೇನ್ರೋ?'' ಅಂತ ಮತ್ತೊಮ್ಮೆ ದೃಢ ಪಡಿಸಿಕೊಳ್ಳುತ್ತಾಳೆ.

ಆಟ ನೋಡುವುದಕ್ಕೆ ಅಜ್ಜಿ ಮಾಡುವ ತಯಾರಿ ಮೆಚ್ಚುವಂತಾದ್ದು. ಬೆಳಿಗ್ಗೆಯೇ ಎದ್ದು, ಏನೋ ಸುಲಭದಲ್ಲಿ ಮಾಡಬಹುದಾದ ಅಡಿಗೆಯನ್ನು ಮಾಡಿ, ನಮ್ಮಪ್ಪನನ್ನು ಅವಸರಪಡಿಸಿ ದೇವರ ಪೂಜೆ ಮಾಡಿಸಿ, ದೇವರಿಗೂ ಲಗುಬಗೆಯಿಂದ ಒಂದೆರಡು ತುತ್ತು ತಿನ್ನಿಸಿ, ತಾನೂ ತಿಂದು ''ಉಳಿದ ಕೆಲಸ ಏನಿದ್ರೂ ನಿಂದೇ ನೋಡು ರುಕ್ಮಿಣಿ'' ಅಂತ ನಮ್ಮಮ್ಮಗೆ ಅಪ್ಪಣೆ ಮಾಡಿ ಟಿ.ವಿ.ಯ ಮುಂದೆ ಕುಳಿತುಬಿಡುತ್ತಾಳೆ. ಆ ದಿನ ರಾಯರ ಮಠಕ್ಕೆ ಚಕ್ಕರ್!

ಅಜ್ಜಿಯ ವಯಸ್ಸಿಗೆ ಅವಳ ದೃಷ್ಟಿ ಚೆನ್ನಾಗಿದೆಯೆಂದು ಹೇಳಬಹುದಾದರೂ, ಕಿರುತೆರೆಯ ತುದಿಯಲ್ಲಿ ಬರೆದ ಅಂಕೆ-ಸಂಖ್ಯೆಗಳು ಕಾಣುವಷ್ಟು ಚೆನ್ನಾಗಿಲ್ಲ. ಹುಡುಗರನ್ನು ಪದೇ ಪದೇ ''ಎಷ್ಟಾಯ್ತ್ರೋ...'''ಅಂತ ಕೇಳಿದರೆ, ''ಹೋಗಜ್ಜಿ ನಿಂದೊಂದು'' ಅಂತ ಸಿಡಿಮಿಡಿಗುಟ್ಟುತ್ತಾರೆ. ಹಾಗಂತ ಅಜ್ಜಿ ಸುಮ್ಮನಿರುವ ಜಾಯಮಾನದವಳೇ? ತನ್ನದೇ ಆದ ಒಂದು ಗಣನೆಯ ಪದ್ಧತಿಯನ್ನು ಇಟ್ಟುಕೊಂಡಿದ್ದಾಳೆ. ಆಟ ಶುರುವಾಗುವುದಕ್ಕೆ ಮುಂಚೆ ಒಂದಿಷ್ಟು ಬಿಡಿಸಿದ ಹತ್ತಿಯನ್ನು ಮುಂದಿಟ್ಟು ಕೊಳ್ಳುತ್ತಾಳೆ.

ಪ್ರತಿಯೊಂದು ರನ್ನಿಗೂ ಒಂದು ಹೂಬತ್ತಿ ಮಾಡುತ್ತಾಳೆ. ಹತ್ತು ರನ್ನುಗಳಾದರೆ ಅದನ್ನೊಂದು ಗುಂಪಾಗಿ ಸರಿಸಿಡುತ್ತಾಳೆ. ಕಿರುತೆರೆಯಲ್ಲಿ ಜಾಹೀರಾತು ಬರುತ್ತಿದ್ದು, ನಮಗೆ ಸ್ಕೋರ್ ಮರೆತು ಹೋದರೂ ಅಜ್ಜಿ ಪಟ್ಟೆಂದು ಹೇಳಿ ಬಿಡುತ್ತಾಳೆ. ಇಂತಹ ಒಂದು ಸೃಜನಶೀಲ ಪದ್ಧತಿಯಿಂದಾಗಿ ದಿನದ ಆಟ ಮುಗಿಯುವುದರಲ್ಲಿ ಆಟದ ಗತಿಯನ್ನವಲಂಭಿಸಿ ಮುನ್ನೂರರಿಂದ ಆರು ನೂರರವರೆಗೆ ಹೂಬತ್ತಿಗಳಾಗುತ್ತವೆ! ನಮ್ಮವರು ಬ್ಯಾಟಿಂಗ್ ಮಾಡ್ತಿದ್ದು ಸಿಕ್ಸರ್, ಫೋರ್‌ಗಳನ್ನು ಮೇಲಿಂದ ಮೇಲೆ ಹೊಡೆದರೆಂದುಕೊಳ್ಳಿ, ಅಜ್ಜಿ ಅದೇ ವೇಗದಲ್ಲಿ ಹೂ ಬತ್ತಿಗಳನ್ನು ಮಾಡಿ ''ಹೊಡಿ ರಾಜ ಹೊಡಿ, ಈ ಸಾರಿ ದೀಪಾವಳಿಗೆ ನಿನ್ನ ಹೆಸರೇಳಿ ದೇವರ ಮುಂದೆ ಲಕ್ಷ ದೀಪ ಹಚ್ತೇನಿ'' ಅಂತ ಉತ್ಸಾಹದಿಂದ ಕೂಗುತ್ತಾಳೆ. ಒಂದು ವೇಳೆ ಎದುರಾಳಿಗಳು ಅದೇ ರೀತಿ ರನ್ನಿನ ಮಳೆಗರೆದರೆ, ''ರಂಡೆಗಂಡರು ಹೆಂಗೆ ಹೊಡೀಲಿಕ್ಹತ್ಯಾರ್ನೋಡು... ಅಜ್ಜಿ ಕೈ ನೋವಾಗ್ತದನ್ನೋ ಖಬರು ಕೂಡಾ ಇಲ್ಲ'' ಅಂತ ಸಿಡಿಮಿಡಿಗೊಳ್ಳುತ್ತಾಳೆ.

ಇನ್ನು ಉರುಳಿ ಬಿದ್ದ ವಿಕೆಟ್‌ಗಳ ಲೆಕ್ಕ ಬೇಕಲ್ಲವೆ? ಅದಕ್ಕೂ ಒಂದು ಪದ್ಧತಿಯುಂಟು. ಭಾರತೀಯರಾದರೆ ಹನ್ನೊಂದು ಪುಟಾಣಿ ಕಾಳುಗಳು, ಪಾಕಿಸ್ತಾನಿಯರ್ಹಾಡುತ್ತಿದ್ದರೆ ಶೇಂಗಾ ಕಾಳುಗಳು, ವೆಸ್ಟ್ ಇಂಡೀಸರಾದರೆ ಮೆಣಸಿನ ಕಾಳುಗಳು, ಬ್ರಿಟೀಷರಾದರೆ ಅಕ್ಕಿ ಕಾಳು... ಹೀಗೆ ಗಣನೆಗೆ ಇಟ್ಟುಕೊಳ್ಳುತ್ತಾಳೆ. ಒಂದೊಂದು ವಿಕೆಟ್ ಉದುರಿದಾಗಲೂ ''ತಿನ್ರೋ...'' ಅಂತ ಒಂದು ಕಾಳನ್ನು ಹುಡುಗರಿಗೆ ಕೊಟ್ಟುಬಿಡುತ್ತಾಳೆ.

ಆಟ ನಡೆಯುವಾಗ ಅಜ್ಜಿಯ ಆಲೋಚನೆ ಅಚ್ಚರಿಯನ್ನು ಮೂಡಿಸುತ್ತದೆ. ಒಂದು ವೇಳೆ ಜಡೇಜಾ ಬ್ಯಾಟಿಂಗ್ ಮಾಡುತ್ತಿದ್ದು, ರನ್ನಿನ ಮಳೆಗರೆಯುತ್ತಿರುವಾಗ ಆಕಸ್ಮಾತ್ತಾಗಿ ಯಾರೋ ವೇಗದ ಬೌಲರ್ ಎಸೆದ ಚೆಂಡು ಅವನಿಗೆ ಬಡಿದು ಗಾಯಗೊಂಡು ಆಡಲಾಗದೆ ಹಿಂತಿರುಗಿ ಹೋದನೆಂದು ಕೊಳ್ಳಿ, ಆಗ ನಾವೆಲ್ಲಾ ''ಛೆ! ಛೆ!! ಛೆ!!! ಇನ್ನೊಂದಿಪ್ಪತ್ತು ರನ್ ಮಾಡಿದ್ಮೇಲೆ ಹಿಂಗಾಗಿದ್ರೆ ಪರ್ವಾಗಿರಲಿಲ್ಲ'' ಅಂತಲೋ, ''ಅವನು ಹೆಲ್ಮೆಟ್ ಹಾಕ್ಕೊಳ್ಳದೆ ಆಡಿದ್ದೇ ತಪ್ಪು'' ಅಂತಲೋ ಮಾತನಾಡುವಾಗ, ಅಜ್ಜಿ ''ಅಲ್ಲಾ, ಅವರ ಮನ್ಯಾಗೆ ಅವರಮ್ಮ ಎಷ್ಟು ದುಃಖ ಪಡ್ತಿದ್ದಾಳೋ ಏನೋ? ಕೂಸಿಗೆ ಗಾಯ ಆಗ್ಯದೆ ಅಂತ ಗೊತ್ತಾದ್ರೂ ಏನೂ ಮಾಡಂಗಿಲ್ಲ'' ಅಂತ ಗದ್ಗದಿತಳಾಗಿ ತನ್ನ ಮಾತೃ ಹೃದಯವನ್ನು ತೆರೆದಿಡುತ್ತಾಳೆ.

ಒಮ್ಮೊಮ್ಮೆ ನಮ್ಮ ಹುಡುಗರ್ಯಾರಾದರೂ ಭರ್ಜರಿಯಾಗಿ ಆಟ ಆಡುತ್ತಿದ್ದರೆ ಅಜ್ಜಿಗೆ ಖುಷಿಯಾಗಿ ಅಡಿಗೆ ಮನೆಗೆ ಹೋಗಿ ಒಂದು ಹಿಡಿ ಉಪ್ಪನ್ನು ತಂದು ಟಿ.ವಿ.ಯ ಮುಂದೆ ನಿಂತು ''ಛಿ. ದೃಷ್ಟಿ, ಥೂ ದೃಷ್ಟಿ, ನಾಯಿ ದೃಷ್ಟಿ, ನರಿ ದೃಷ್ಟಿ, ಮಂದಿ ದೃಷ್ಟಿ, ನನ್ನ ದೃಷ್ಟಿ...'' ಅಂತ ಶುರು ಮಾಡಿಬಿಡುತ್ತಾಳೆ. ''ಇತ್ಲಾಗೆ ಬಾರಜ್ಜಿ, ಅಡ್ಡ ನಿಂತೀಯಲ್ಲಾ'' ಅಂತ ನಾವೆಂದರೆ ನಮ್ಮ ಮಾತಿಗೆ ಕೇರ್ ಮಾಡದೆ ''ಸ್ವಲ್ಪ ಸುಮ್ನಿರ್‍ರೋ, ಲಕ್ಷಾಂತರ ಮಂದಿ ನೋಡ್ತಾರೆ. ಯಾರ ಕಣ್ಣು ಹೆಂಗಿರ್ತಾವೋ...'' ಅಂತ ಹೇಳಿ ಬಿಡುತ್ತಾಳೆ.

ಹೀಗಾಗದೆ ಸನ್ನಿವೇಶ ನಮಗೆ ವಿರುದ್ಧವಾಗಿದ್ದು ನಮ್ಮವರು ಒಬ್ಬೊಬ್ಬರೇ ಒಣಗಿದ ತೆಂಗಿನ ಕಾಯಿಯಂತೆ ಬಿದ್ದುಬಿಟ್ಟರೆ, ಅಜ್ಜಿ ಕಂಗಾಲಾಗಿ ಬಿಡುತ್ತಾಳೆ. ಯಾರೊಡನೆಯೂ ಮಾತನಾಡುವುದಿಲ್ಲ. ಸೀದಾ ದೇವರ ಮನೆಗೆ ನುಗ್ಗಿ ತುಪ್ಪದ ದೀಪವನ್ನು ಹಚ್ಚಿಟ್ಟು, ತಿರುಪತಿ ತಿಮ್ಮಪ್ಪನಿಗೆ ಹತ್ತು ಪೈಸೆಯ ಮುಡುಪನ್ನು ಕಟ್ಟಿಟ್ಟು, ''ಏನೂ ಹೆದರ್‍ಕೋಬ್ಯಾಡ್ರೋ ಹುಡುಗ್ರಾ, ವೆಂಕಪ್ಪ ನಮ್ಮ ಕೈ ಬಿಡಂಗಿಲ್ಲ'' ಅಂತ ನಮಗೆ ಆಶ್ವಾಸನೆಯನ್ನು ಕೊಡುತ್ತಾಳೆ.

ಕೆಲವೊಮ್ಮೆ ಅಜ್ಜಿ ಹಠಮಾರಿಯಾಗಿ ಬಿಡುತ್ತಾಳೆ. ಯಾವುದೋ ಸಂಶಯಾತ್ಮಕ ತೀರ್ಪನ್ನು ಕೊಟ್ಟು ಅಂಪಯರ್ ನಮ್ಮ ಹುಡುಗನನ್ನು ಔಟ್ ಮಾಡಿದನೆಂದುಕೊಳ್ಳಿ, ಆಗ ನಾವೆಲ್ಲ ''ಅನ್ಯಾಯ, ಅನ್ಯಾಯ'' ಅಂತ ಕೂಗಿದಾಗ ಅಜ್ಜಿಯೂ ಧ್ವನಿ ಸೇರಿಸುತ್ತಾಳೆ. ''ಅಲ್ಲಾ, ಆ ಅಂಪಯರ್‌ನ ಎರಡರಷ್ಟು ವಯಸ್ಸಾಗಿರೋ ನಾನೇ ಔಟಲ್ಲ ಅಂತ ಹೇಳ್ತಿದ್ದೀನಿ, ಅಂತಹದ್ರಾಗೆ ಅವನ್ಯಾವ ದೊಡ್ಡ ಮನುಷ್ಯ ಅಂತ ಅವನ ಮಾತು ನಾವೆಲ್ಲಾ ಕೇಳ್ಬೇಕು'' ಅಂತ ವೀರಾವೇಶದಿಂದ ನಾವೇ ಅಂಪಯರ್‌ಗಳೇನೋ ಎಂಬಂತೆ ನಮ್ಮ ಮುಂದೆ ವಾದಿಸುತ್ತಾಳೆ.

ಒಂದು ವೇಳೆ ನಮ್ಮವರು ಸಿಕ್ಸರ್ ಬಾರಿಸಲು

ಕಿವಿ ಮಾತು

■ ಹೃದಯದ ಬಡಿತದಲ್ಲಿ ಸಮತೋಲನವಿಲ್ಲದಿದ್ದಾಗ ರೋಗಿಯು ದ್ರಾಕ್ಷಿ ಹಣ್ಣಿನ ರಸ ಸೇವಿಸುವುದು ಉತ್ತಮ. ಮುಂಜಾಗ್ರತಾ ಕ್ರಮವಾಗಿ ಪ್ರತಿದಿನ ದ್ರಾಕ್ಷಿ ಹಣ್ಣಿನ ರಸ ಸೇವಿಸುತ್ತಿದ್ದರೆ ಹೃದಯದ ಬಡಿತ ಸ್ವಾಭಾವಿಕ ಸ್ಥಿತಿಯಲ್ಲಿರುವುದು.

■ ಕೊತ್ತಂಬರಿ ಸೊಪ್ಪು ಹೃದಯಕ್ಕೆ ಒಳ್ಳೆಯದು.

■ ಇಪ್ಪತ್ತು ಗ್ರಾಂ. ಕೊತ್ತಂಬರಿಯನ್ನು ಹುರಿದು ಪುಡಿ ಮಾಡಿ ಎರಡು ಲೋಟ ನೀರಿಗೆ ಹಾಕಿ ಕುದಿಸಿ, ಇದು ಚೆನ್ನಾಗಿ ಕುದಿದು ಒಂದು ಲೋಟದಷ್ಟು ಆದಾಗ ಸಕ್ಕರೆ, ಹಾಲು ಬೆರೆಸಿ ಕುಡಿಯಿರಿ. ಒಂದೆರಡು ತಿಂಗಳುಗಳ ಕಾಲ ದಿನಕ್ಕೆ ಎರಡು ಸಾರಿಯಂತೆ ಸೇವಿಸಿದರೆ ಹೃದಯ ದೌರ್ಬಲ್ಯಗಳಿಗೆ ಒಳ್ಳೆಯದು.

■ ಪಪ್ಪಾಯಿ ಹಣ್ಣನ್ನು ಬೀಜಗಳ ಸಹಿತ ಹಾಗೂ ಸಿಪ್ಪೆಯ ಸಹಿತ ತಿನ್ನಬೇಕು. ಬೇಕಿದ್ದರೆ ಹಣ್ಣನ್ನು ಪೂರ್ತಿ ಮಿಕ್ಸಿಗೆ ಹಾಕಿ, ರುಬ್ಬಿ, ಒಂದಿಷ್ಟು ಜೇನುತುಪ್ಪ ಬೆರೆಸಿ ಕುಡಿಯಬಹುದು. ಕುಡಿದ ಕೂಡಲೇ ಒಂದು ಬಟ್ಟಲು ಬಿಸಿ ಹಾಲನ್ನು ಕುಡಿಯಬೇಕು. ಇದನ್ನು ಸುಮಾರು ಮೂರು ತಿಂಗಳ ಕಾಲ ಮಾಡಬೇಕು. ಹೃದಯದ ದೌರ್ಬಲ್ಯ ದೂರವಾಗಿ ಹೊಸ ಚೈತನ್ಯ ಉಂಟಾಗುತ್ತದೆ.

ಮೇಲಕ್ಕೆತ್ತಿದ ಚೆಂಡು ಎದುರಾಳಿಯ ಕೈಗೆ ಸಿಕ್ಕಿ ಔಟಾದರೆಂದುಕೊಳ್ಳಿ, ಆಗ ಅಜ್ಜಿ ''ಅಲ್ಲಪ್ಪಾ, ನಮ್ಮ ಹುಡುಗರು ಬಾಲು ಹೊಡೆಯೋ ಕಡೀನೇ ಯಾಕೆ ಅವರು ನಿಂತ್ಕೋಬೇಕಂತೀನಿ? ಅವರು ಅಡ್ವೇಕಾದ್ರೆ, ನಾವೂ ಹಂಗೇ ಮಾಡ್ತೀವೇನು? ಎಲ್ಲಾ ಮೋಸ'' ಅಂತ ವಿವರಣೆ ಕೊಡುತ್ತಾಳೆ. ''ಹಂಗಲ್ಲಜ್ಜಿ, ಆ ಆಟಾನೇ ಹಂಗೆ...'' ಅಂತೇನಾದರೂ ನಾವು ಹೇಳ ಹೋದರೆ, ''ಸುಮ್ಮಿರ್ರೋ ಸಾಕು, ಎಲ್ಲಾ ನಿಮಗೇ ಗೊತ್ತಿರೋವ್ರ ಹಂಗೆ ಆಡ್ವೇಡ್ರಿ'' ಅಂತ ಗದರಿಸಿ ಬಿಡುತ್ತಾಳೆ.

ಅಜ್ಜಿ ಉಳಿದೆಲ್ಲಾ ವಿಷಯದಲ್ಲಿ ಆಸಕ್ತಿ ತೋರಿಸಿದರೂ ಎರಡು ವಿಚಾರದಲ್ಲಿ ಮಾತ್ರ ತನ್ನ ಅಸಮ್ಮತಿಯನ್ನು ಸೂಚಿಸುತ್ತಾಳೆ.

ಮೊದಲನೆಯದಾಗಿ ಚೆಂಡು ಎಸೆಯುವವರು ಆವಾಗಾವಾಗ ಚೆಂಡಿಗೆ ಉಗುಳನ್ನು ಹಚ್ಚಿ ತಿಕ್ಕುವ ಕ್ರಮ. ''ಥೂ! ಥೂ!! ಥೂ!!! ಎಂಜಲಿಲ್ಲಾ ಮುಸರಿ ಇಲ್ಲ'' ಅಂತ ಮುಖ ಸಿಂಡರಿಸಿ ಬಿಡುತ್ತಾಳೆ. ''ಉಗುಳೇ ಹಾಕಿ ತಿಕ್ಕಬೇಕನ್ನೋದು ಏನು? ನೀರು ಹಾಕಿ ತಿಕ್ಕಿದ್ರಾಯ್ತಪ್ಪ'' ಅಂತಾಳೆ. ''ಮೈದಾನದಾಗೆ ನೀರೆಲ್ಲಿರ್ತದಜ್ಜೀ?'' ಅಂತಂದರೆ, ''ಅದೇನು ಮಹಾ, ಸುಮ್ನೆ ಕಂಬ ನಿಂತಂಗೆ ನಿಂತಿರ್ತಾನಲ್ಲಾ ಆ ಅಂಪಯರ್, ಅವನ ಕೈಯಾಗೆ ಕಮಂಡಲ ಕೊಟ್ಟು ನಿಲ್ಲಿಸಿದ್ರಾಯ್ತು. ಬೇಕೆಂದಾಗೆಲ್ಲಾ ಒಂದು ಚೂರು ತೀರ್ಥ ಹಾಕಿದಂಗೆ ನೀರು ಹಾಕ್ತಾನೆ'' ಅಂತ ಉತ್ತರ, ಅಜ್ಜಿಗೆ ಏನು ಹೇಳ್ಲಿಕ್ಕಾಗ್ತದೆ?

ಎರಡನೆಯದಾಗಿ ಬಹುಮಾನದ ವಿಷಯ. ಫಳ ಫಳನೆ ಹೊಳೆಯುವ ಕಪ್ಪು ಅಜ್ಜಿಗೆ ಯಾವುದೇ ರೀತಿಯಿಂದಲೂ ಆಕರ್ಷಣೀಯವಾಗಿ ಕಾಣುವುದಿಲ್ಲ. ''ಏನ್ ಕಪ್ಪು ಕಪ್ಪು ಅಂತೀರೋ ಏನೋ. ಅವರು ಕೊಡೋ ಆ ಸುಡುಗಾಡು ಕಪ್ಪಿನಾಗೆ ಕಾಫಿ ಕುಡೀಲಿಕ್ಕೂ ಬರಂಗಿಲ್ಲ. ಅದರ ಬದಲು ಎಲ್ಲಾ ಹುಡುಗರಿಗೆ ಛಲೋ ಬೆಳ್ಳಿ ಅರ್ಘ್ಯ ಪಾತ್ರೆನಾದ್ರೂ ಕೊಟ್ಟರೆ, ಗಂಡು ಹುಡುಗರು ಸಂಧ್ಯಾವಂದನೆ ಮಾಡ್ಲಿಕ್ಕಾದ್ರೂ ಬರ್ತದೆ'' ಅಜ್ಜಿ ತನ್ನ ಅನಿಸಿಕೆಯೇ ಸರಿಯೆನ್ನುವಂತೆ ಖಡಾ ಖಂಡಿತವಾಗಿ ಹೇಳುತ್ತಾಳೆ!

ಇದೇನೇ ಇರಲಿ, ಆಟ ಮುಗಿದು ನಮ್ಮವರೇನಾದರೂ ಗೆದ್ದು ಬಿಟ್ಟರೆ ಆ ರಾತ್ರಿ ಮನೆಯಲ್ಲಿ ಶ್ಯಾವಿಗೆ ಪಾಯಸದ ಊಟ! ''ನಂದೂ ಒಂದು ಲೋಟ ಪಾಯಸ ಕುಡೀರೋ...'' ಅಂತ ಬಲವಂತ ಮಾಡಿ ತಿನ್ನಿಸುತ್ತಾಳೆ. ಹೀಗಾಗದೆ ನಮ್ಮವರು ಸೋತು ಬಿಟ್ಟರೆ ಆ ರಾತ್ರಿ ಹಾಗಲಕಾಯಿ ಪಲ್ಯ, ಮೆಣಸಿನಕಾಯಿ ಚಟ್ನಿ!

ಒಟ್ಟಾರೆ ನಮ್ಮಜ್ಜಿ ಉತ್ಸಾಹದ ಬುಗ್ಗೆ, ಚೇತನದ ಚಿಲುಮೆ. ಈಗ ಹೇಳಿ, ನಿಮ್ಮ ಮನೆಯಲ್ಲೂ ಇಂತಹ ಅಜ್ಜಿಯರು ಇರಲೇಬೇಕಲ್ಲವೆ?

■ ವಿ.ಎಸ್.

ಕನ್ನಡದ ಕಂಪು ಹರಡಿದ ಧರಣಿ



ವಿರಳ ಕನ್ನಡಿಗರ ಮಧ್ಯೆ, ಧರಣಿ ಕನ್ನಡದ ಉಚಿತ ಪಾಠ ಶಾಲೆಯನ್ನು ತೆರೆದು, ಕನ್ನಡವನ್ನು ಕಲಿಸಿ, ಹಳ್ಳಿ ಹಳ್ಳಿಗಳಲ್ಲಿ ಕನ್ನಡ ನಾಟಕಗಳ ತಾಲೀಮು ನಡೆಸಿ, ಪ್ರದರ್ಶಿಸಿ ಒಂದು ಹೋರಾಟವನ್ನೇ ಕೈಗೆತ್ತಿಕೊಂಡಿದ್ದಾರೆ.

■ ಅಶೋಕ ಉಮರಾಣಿಕರ

ಮಹಾರಾಷ್ಟ್ರದ ಮರದಲ್ಲಿ ಕುಳಿತು ಕನ್ನಡದ ಕೋಗಿಲೆ ಹಾಡಿತು. ಅಲ್ಲ ಅಲ್ಲ, ನುಡಿಯಿತು! ಏನೋ ಹೇಳ್ಳಿಕ್ಕೆ ಹೊರಟಿಲ್ಲ. ಕನ್ನಡದಲ್ಲಿ ಕಂಪಿರುವವರು ಬಾಳ ಮಂದಿ ಇದ್ದಾರೆ. ಅವರು ದೇಶ ವಿದೇಶಗಳಲ್ಲೂ ಕನ್ನಡತನವನ್ನು ಸಾರಿದ್ದಾರೆ. ಹಾಗೆಯೆ ಕನ್ನಡದ ಓರ್ವ ಅಪೂರ್ವ ಶಿಕ್ಷಕ ಮಹಾರಾಷ್ಟ್ರದಲ್ಲಿ ಕನ್ನಡತೆಯನ್ನು ಸಾರಿದ್ದಾರೆ.

'ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು' ಎನ್ನುವ ನಾನ್ನುಡಿ ಕನ್ನಡ ಭಾಷೆಯಲ್ಲಿ ಪ್ರಸಿದ್ಧ. ಇದರ ಅರ್ಥಕ್ಕೆ ಅಂಟಿಕೊಂಡ ಅನೇಕರಲ್ಲಿ ವಿಜಯ ಕುಮಾರ ಧರಣಿ ಒಬ್ಬರೆಂದರೆ ಕನ್ನಡ ಜನತೆ ಹೆಮ್ಮೆ ಪಡಬೇಕು. ವಾಣಿಜ್ಯ ವಿಷಯದಲ್ಲಿ ಪದವಿ ಪಡೆದ ಧರಣಿ ನೌಕರಿಯ ಬೆನ್ನು ಹತ್ತದೆ ಕನ್ನಡದ ಸೇವೆಯಲ್ಲಿಯೇ ತೃಪ್ತಿ ಕಂಡುಕೊಂಡು, ಮಾದರಿಯಾಗಿ ಮಹಾರಾಷ್ಟ್ರದ ಹಳ್ಳಿಯಲ್ಲಿ ಕವನ, ನಾಟಕ ಬರೆದು, ಕನ್ನಡ ತಿಳಿಯದವರಿಗೆ ಪತ್ರ ಓದಿ ಹೇಳಿ, ಬರೆದು ಕೊಟ್ಟು, ಭುವನೇಶ್ವರಿಯ ಕೈಂಕರ್ಯದಲ್ಲಿ ಮುಳುಗಿಹೋಗಿದ್ದಾರೆ.

ವಿರಳ ಕನ್ನಡಿಗರ ಮಧ್ಯೆ, ಧರಣಿ ಕನ್ನಡದ ಉಚಿತ ಪಾಠ ಶಾಲೆಯನ್ನು ತೆರೆದು, ಕನ್ನಡವನ್ನು ಕಲಿಸಿ, ಹಳ್ಳಿ ಹಳ್ಳಿಗಳಲ್ಲಿ ಕನ್ನಡ ನಾಟಕಗಳ ತಾಲೀಮು ನಡೆಸಿ, ಪ್ರದರ್ಶಿಸಿ ಒಂದು ಹೋರಾಟವನ್ನೇ ಕೈಗೆತ್ತಿಕೊಂಡಿದ್ದಾರೆ. ಇದಕ್ಕೆ ಆರಂಭದಲ್ಲಿ ವಿರೋಧಗಳಿದ್ದರೂ ಧರಣಿಯ ಸಾಧನೆಯ ಫಲವಾಗಿ ಇಂದು ವಿರೋಧ ಕಡಿಮೆಯಾಗಿದೆ.

'ಬಡವರ ಭವಿಷ್ಯ' 'ಕವಿಕೊಟ್ಟ ಹೊಸಬಾಳು' ಎಂಬೆರಡು ನಾಟಕಗಳ ಮುದ್ರಿಸಿದ್ದಾರಲ್ಲದೆ ಇವರ ಕವನಗಳು ಪ್ರಮುಖ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. 'ಕಲಿಯಲು ಯಾವ ಭಾಷೆಯಾದರೇನು ವಿದ್ಯೆ ಬಲ್ಲವನು ಬದುಕ ಬಲ್ಲವನಲ್ಲವೆ!' ಎಂದು ಮನದಟ್ಟು ಮಾಡಿದ ಧರಣಿ ಕನ್ನಡೇತರರನ್ನು ಅಪಾರ ಸಂಖ್ಯೆಯಲ್ಲಿ ಕನ್ನಡ ಓದು, ಬರಹ ಬಲ್ಲವರನ್ನಾಗಿಸಿದ್ದಾರೆ. 'ಕರ್ನಾಟಕದಲ್ಲಿ ಕನ್ನಡ ಅಳಿಯುತ್ತಿದೆ' ಎಂದು ಬೊಬ್ಬೆ ಹೊಡೆಯುವ ಸಾಹಿತಿಗಳಿದ್ದಾರೆ ವಿನಾ ಧರಣಿಯಂತೆ ಕನ್ನಡದ ಕಂಪು ಹರಡುವ ಸಾಹಿತಿಗಳು ಕೊರತೆಯಲ್ಲಿದ್ದಾರೆ. ಸರಕಾರವೂ ಬರಿಯ ಬೊಬ್ಬೆ ಹೊಡೆಯುವುದು ಬಿಟ್ಟು ಧರಣಿಯಂತಹ ಕನ್ನಡಿಗರನ್ನು ಗುರ್ತಿಸಿ ಕಂಪಡರಿಸಲು ಇಂಬು ನೀಡಬೇಕಾಗಿದೆ. ಕನ್ನಡ ಜನತೆ ಭಾಷಾ ಅಭಿಮಾನ, ಸಹೃದಯತೆ ಮೆರೆಯಬೇಕಾಗಿದೆ. ■

ಹೊಸ ಪುಸ್ತಕ



ಜೈವಿಕ ವೈವಿಧ್ಯ

ಲೇ: ಎಚ್.ಆರ್.ಕೃಷ್ಣಮೂರ್ತಿ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 104, ಬೆಲೆ: 30/-



ಚಿನ್ನದ ಬೆನ್ನೇರಿ

(ಬಿಡಿ ಲೇಖನಗಳು)

ಲೇ: ಪರಂಜ್ಯೋತಿ
ಪ್ರ: ಇಂಚರ ಪ್ರಕಾಶನ
ನಂ. 167, 10ನೇ ಮುಖ್ಯರಸ್ತೆ, 3ನೇ ಘಟ್ಟ,
ಪೀಣ್ಯ ಕೈಗಾರಿಕಾ ಪ್ರದೇಶ,
ಬೆಂಗಳೂರು - 560 058.
ಪುಟ: 120, ಬೆಲೆ: 40/-



ವಜ್ರ ವ್ಯಾಮೋಹ

(ಸಾಹಸಮಯ ಕಾದಂಬರಿ)

ಲೇ: ಡಾ.ವಿರುಪಾಕ್ಷ ಕೆ. ಬಣಕಾರ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 160, ಬೆಲೆ: 55/-



ಏಡ್ಸ್


ಪ್ರಳಯ ಎದುರಿಸಲು ಸಿದ್ಧರಾಗಿ!

ಲೇ: ಡಾ.ವಸುಂಧರಾ ಭೂಪತಿ
ಪ್ರ: ಅಂಕುರ ಪ್ರಕಾಶನ
473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ,
ಬಸವೇಶ್ವರನಗರ, ಬೆಂಗಳೂರು - 560 079.
ಪುಟ: 72, ಬೆಲೆ: 45/-




ಬೇಕರಿ ಖಾದ್ಯಗಳು

ಲೇ: ಡಾ.ಹೆಚ್.ಬಿ. ಶಿವಲೀಲಾ
ಮತ್ತು ಎಸ್.ಮೀನಾ ಕುಮಾರಿ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 160, ಬೆಲೆ: 50/-



ಹಣ್ಣುಗಳಲ್ಲಿ ಔಷಧಿಯ ಗುಣಗಳು

ಲೇ: ಡಾ.ವಸುಂಧರಾ ಭೂಪತಿ
ಪ್ರ: ದಿವ್ಯಚಂದ್ರ ಪ್ರಕಾಶನ
ಕೆ.ಹೆಚ್.ಬಿ. ಕಾಲೋನಿ, 2ನೇ ಹಂತ,
(ಪಾಪಣ್ಣನ ತೋಟ) ಬಸವೇಶ್ವರನಗರ,
ಬೆಂಗಳೂರು - 560 079.
ಪುಟ: 100, ಬೆಲೆ: 25/-



ಅವಾರ್ಡ್ ಬೇಕೇ ಬೇಕು


ಲೇ: ಎಂ.ಪಿ.ಮನೋಹರ ಚಂದ್ರನ್
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001.
ಪುಟ: 144, ಬೆಲೆ: 45/-



ನಿಲುವುಗಳು ನಿರ್ಧಾರಗಳು

ಬುದ್ಧಿವಂತರಿಗಾಗಿ

ಲೇ: ಜಿ.ಎಂ. ರಾಜಶೇಖರ
ಪ್ರ: ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು
ರಾಣೆಬೆನ್ನೂರು, ಹಾವೇರಿ ಜಿಲ್ಲೆ.
ಪುಟ: 46, ಬೆಲೆ: 30/-



ದೂರವಾಣಿ, ಫ್ಯಾಕ್ಸ್, ಇ-ಮೇಲ್, ಕಂಪ್ಯೂಟರ್ ಮುಂತಾದವುಗಳನ್ನು ಉಪಯೋಗಿಸಿಕೊಂಡು ಮಾಡುವ ವ್ಯಾಪಾರವೇ ಎಲೆಕ್ಟ್ರಾನಿಕ್ ವಾಣಿಜ್ಯ.

■ ವಸುಧೇಂದ್ರ

ಕಂಪ್ಯೂಟರ್ ಮೂಲಕ ವ್ಯಾಪಾರ

ಕೆಲವು ಮಾಹಿತಿಗಳ ಪ್ರಕಾರ ಒಂದು ವಿಶ್ವದಲ್ಲಿ ಸುಮಾರು 9 ಬಿಲಿಯನ್ ಡಾಲರ್ (33600 ಕೋಟಿ ರೂಪಾಯಿ) ವ್ಯವಹಾರ ಎಲೆಕ್ಟ್ರಾನಿಕ್ ವಾಣಿಜ್ಯದಲ್ಲಿ ನಡೆಯುತ್ತಿದೆ ಮತ್ತು ಸುಮಾರು 60,000 ಈ ತರಹದ ಅಂಗಡಿಗಳು ಇಂಟರ್‌ನೆಟ್‌ನಲ್ಲಿವೆ. ಮೊದಮೊದಲು ಪ್ರಾರಂಭವಾದ ಅಂಗಡಿಗಳು ಹೆಚ್ಚು ಹಣ ಮಾಡದಿದ್ದರೂ, ಈಗ ಸುಮಾರು ಶೇಕಡ 46ರಷ್ಟು ಅಂಗಡಿಗಳು ಲಾಭವನ್ನು ಗಳಿಸುತ್ತಿವೆ. 21ನೇ ಶತಮಾನದ ಪ್ರಾರಂಭದ ಹೊತ್ತಿಗೆ ಸುಮಾರು 220 ಬಿಲಿಯನ್ (22000 ಕೋಟಿ) ವ್ಯಾಪಾರದ ಅಂಗಡಿಗಳನ್ನು ಅಂತರ್‌ಜಾಲದಲ್ಲಿ ಕಾಣುವ ನಿರೀಕ್ಷೆಯಿದೆ. ಭಾರತದಲ್ಲಿಯೂ ಇಂದು ಖಾಸಗಿ ಅಂತರ್‌ಜಾಲ ಸೇವಾ ಸಂಸ್ಥೆಗಳು ಪ್ರಾರಂಭವಾಗಿರುವುದರಿಂದ ಮತ್ತು ಕೇಬಲ್ ಮೂಲಕವೇ ಅಂತರ್‌ಜಾಲವನ್ನು ಜಾಲಾಡಿಸುವ ಸೌಲಭ್ಯ ದೊರೆಯಬಹುದಾದ್ದರಿಂದ ಈ ತರಹದ ವ್ಯಾಪಾರ ಹೆಚ್ಚಾಗುವ ನಿರೀಕ್ಷೆಯಿದೆ.

ಎಲೆಕ್ಟ್ರಾನಿಕ್ ವಾಣಿಜ್ಯ

ಪ್ರತಿಯೊಬ್ಬ ವ್ಯಾಪಾರಿಗೂ ಹೆಚ್ಚು ಹೆಚ್ಚು ಗ್ರಾಹಕರನ್ನು ಆಕರ್ಷಿಸುವ, ತಮ್ಮ ವ್ಯಾಪಾರಿ ವಲಯವನ್ನು ವಿಸ್ತರಿಸುವ ಆಸೆಯಿರುತ್ತದೆ. ಅದೇ ರೀತಿ ಗ್ರಾಹಕನಿಗೂ ಸುಲಭವಾಗಿ, ಅತ್ಯಂತ ಕಡಿಮೆ ಬೆಲೆಯಲ್ಲಿ, ಯಾವುದೇ ಜಂಜಾಟಗಳಿಲ್ಲದೆ, ಸಾಕಷ್ಟು ವೈವಿಧ್ಯಮಯ ವಸ್ತುಗಳ ಆಯ್ಕೆಯ ಸ್ವಾತಂತ್ರದಲ್ಲಿ ಕೊಳ್ಳುವ ಆಸೆಯಿರುತ್ತದೆ. ಈ ರೀತಿಯ ಆಸೆ ಆಕಾಂಕ್ಷೆಗಳಿಗೆ ಯಾವುದೇ ಮಿತಿಗಳಿರುವುದಿಲ್ಲ. ಇದು ಗ್ರಾಹಕ-ವ್ಯಾಪಾರಿ ಸಂಬಂಧದ ಮೂಲಭೂತ ಗುಣ. ವ್ಯಾಪಾರಿ ವಿಶ್ವದ ಗ್ರಾಹಕರೆಲ್ಲಾ ತನ್ನ ಬಳಿಯೇ ವ್ಯವಹಾರ ಮಾಡಲಿ ಎಂದರೆ, ಗ್ರಾಹಕ ತನಗೆ ಅತ್ಯಂತ ಕಡಿಮೆ ದರದಲ್ಲಿ (ಸಾಧ್ಯವಾದರೆ ಪುಕ್ಕಟೆ!) ವಸ್ತುಗಳು ಸಿಗುವಂತಿರಲಿ ಎನ್ನುತ್ತಿರುತ್ತಾನೆ. ಇವರಿಬ್ಬರ ಆಸೆಗಳನ್ನು ಪೂರೈಸಲು ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಈ ನಿಟ್ಟಿನಲ್ಲಿ ಎಲೆಕ್ಟ್ರಾನಿಕ್ ವಾಣಿಜ್ಯ (ಇ-ಕಾಮರ್ಸ್) ಅತ್ಯಂತ ಮಹತ್ವವಾದದ್ದು.


ಎಲೆಕ್ಟ್ರಾನಿಕ್ ವಾಣಿಜ್ಯವೆಂದರೇನು?

ನಾವಿಂದು ಎಲೆಕ್ಟ್ರಾನಿಕ್ ಯುಗದಲ್ಲಿ ಜೀವಿಸುತ್ತಿದ್ದೇವೆ. ನಮ್ಮ ದೈನಂದಿನ ಎಷ್ಟೋ ವಹಿವಾಟುಗಳು ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನದಿಂದಲೇ ನಡೆಯುತ್ತವೆ. ಇಂತಹ ವಿಶೇಷ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಮ್ಮ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವುದೇ ಎಲೆಕ್ಟ್ರಾನಿಕ್ ವಾಣಿಜ್ಯವೆಂದು ಹೇಳಬಹುದು. ಎಲೆಕ್ಟ್ರಾನಿಕ್ ತಂತ್ರಜ್ಞಾನದ ಕೊಡುಗೆಗಳಾದ ದೂರವಾಣಿ, ಫ್ಯಾಕ್ಸ್, ಇ-ಮೇಲ್, ಕಂಪ್ಯೂಟರ್ ಮುಂತಾದವುಗಳನ್ನು ಉಪಯೋಗಿಸಿಕೊಂಡು ಮಾಡುವ ವ್ಯಾಪಾರವನ್ನೂ ಎಲೆಕ್ಟ್ರಾನಿಕ್ ವಾಣಿಜ್ಯವೆಂದು ಕರೆಯಬಹುದಾದರೂ, ಇಂದು ಅಂತರ್‌ಜಾಲ (ಇಂಟರ್‌ನೆಟ್) ಮೂಲಕ ಮಾಡುವ ವಾಣಿಜ್ಯವನ್ನೇ ನಾವು ಹೆಚ್ಚಾಗಿ ಎಲೆಕ್ಟ್ರಾನಿಕ್ ವಾಣಿಜ್ಯವೆಂದು ಕರೆಯುತ್ತೇವೆ.

ಇದೆಂತಹ ಪುಸ್ತಕದಂಗಡಿ?

ಎಲೆಕ್ಟ್ರಾನಿಕ್ ವಾಣಿಜ್ಯವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಅಂತರ್‌ಜಾಲದಲ್ಲಿರುವ ಒಂದು ಪುಸ್ತಕದ ಅಂಗಡಿಯನ್ನು ನೋಡಬಹುದು. ಈ ಪುಸ್ತಕದ ಅಂಗಡಿಯನ್ನು http://www.amazan.com ಎಂಬ ಅಂತರ್‌ಜಾಲದ ವಿಳಾಸದಲ್ಲಿ ಭೇಟಿ ಮಾಡಬಹುದು. ಈ ಪುಸ್ತಕದಂಗಡಿಯಲ್ಲಿ ಸುಮಾರು 10 ಲಕ್ಷ ಪುಸ್ತಕಗಳಿವೆ. ನೀವು ಈ ಪುಸ್ತಕದಂಗಡಿಯ ಒಳ ಹೊಕ್ಕು ಅದರಲ್ಲಿರುವ ಪುಸ್ತಕಗಳನ್ನೆಲ್ಲಾ ಜಾಲಾಡಬಹುದು. ನಿಮಗೆ ಬೇಕಾದ ಪುಸ್ತಕದ ಹೆಸರನ್ನು ಸೂಚಿಸಿಯೋ, ಅದರ ಲೇಖಕರ ಹೆಸರನ್ನು ತಿಳಿಸಿಯೋ, ಇಲ್ಲವೇ ಪ್ರಕಾಶಕರ

ಇಲ್ಲಿ ಎಲ್ಲಾ ವಸ್ತುಗಳಿಗೂ ಅತ್ಯಂತ ಕಡಿಮೆ ಬೆಲೆ ಎಂದು ಗೊತ್ತಾದಾಕ್ಷಣ ಜನ ಈ ಅಂಗಡಿಗೆ ಮುಗಿ ಬೀಳುತ್ತಾರೆ. ಹೆಚ್ಚು ಜನಕ್ಕಾಗಿ ವ್ಯಾಪಾರಿ ದೊಡ್ಡ ಮಳಿಗೆ ಕಟ್ಟಿಸಬೇಕೆಂಬ ಗೊಡವೆಯಂತೂ ಇಲ್ಲವಾದ್ದರಿಂದ ಎಷ್ಟೇ ರಾಶಿ ರಾಶಿ ಜನ ನಿಮ್ಮ ಅಂಗಡಿಗೆ ನುಗ್ಗಿದರೂ ನಿಮಗ್ಯಾವ ತೊಂದರೆಯೂ ಇಲ್ಲ.




ಹೆಸರನ್ನು ತಿಳಿಸಿಯೋ ಕ್ಷಣಮಾತ್ರದಲ್ಲಿ ಆ ಪುಸ್ತಕವನ್ನು ಹುಡುಕಿಬಿಡಬಹುದು. ನಿಮಗೆ ಸರಿಯಾಗಿ ಪುಸ್ತಕದ ಬಗ್ಗೆ ತಿಳಿದಿಲ್ಲದಿದ್ದರೂ, ಗೊತ್ತಿದ್ದಷ್ಟೇ ತಿಳಿಸಿ ಆ ಮಾಹಿತಿಯ ಆಧಾರಕ್ಕೆ ಸರಿಹೊಂದುವ ಪುಸ್ತಕಗಳನ್ನೆಲ್ಲಾ ಪಟ್ಟಿ ಮಾಡಲು ಕಂಪ್ಯೂಟರ್‌ಗೆ ಆಜ್ಞಾಪಿಸಬಹುದು. ಈ ರೀತಿಯಾಗಿ ನೀವು ಹುಡುಕಿದ್ದ ಪುಸ್ತಕದ ಬೆಲೆ, ಮುಖಪುಟ, ಹಿನ್ನುಡಿ, ಬೆನ್ನುಡಿ, ಅದರ ಬಗ್ಗೆ ವಿಶ್ವದ ಎಲ್ಲೆಡೆಯಲ್ಲಿ ಲಭ್ಯವಿರುವ ಮುಖ್ಯ ವಿಮರ್ಶೆಯನ್ನೂ ನೋಡಿಕೊಳ್ಳಬಹುದು. ಅನಂತರ ನಿಮಗೆ ಬೇಕೆನಿಸಿದರೆ, ನಿಮ್ಮ ಕ್ರೆಡಿಟ್ ಕಾರ್ಡಿನ ಸಂಖ್ಯೆಯನ್ನು ತಿಳಿಸಿ ಅದನ್ನು ಖರೀದಿ ಮಾಡಬಹುದು. ಈ ಪುಸ್ತಕದಂಗಡಿಯಲ್ಲಿ ನಿಮಗೆ ಬೇಕಾದಷ್ಟು ಹೊತ್ತು ಸುತ್ತಾಡಿ, ಕಡೆಗೆ ಯಾವುದೇ ಪುಸ್ತಕವನ್ನು ಕೊಳ್ಳದಿದ್ದರೂ ನಿಮ್ಮನ್ನು ಕೆಂಗಣ್ಣಿನಿಂದ ನೋಡುವ ಜನರ್‍ಯಾರೂ ಇರುವುದಿಲ್ಲ. ಈ ಪುಸ್ತಕದಂಗಡಿ ಸಂಜೆ ಆರಕ್ಕೆ ಮುಚ್ಚಿ ಬಿಡುತ್ತದೆ, ಆದಿತ್ಯವಾರ ರಜಾದಿನ, ಅಂಗಡಿಯಲ್ಲಿ ನಿಶ್ಯಬ್ದವನ್ನು ಪಾಲಿಸಿರಿ ಮುಂತಾದ ಗೊಡವೆಗಳಿಲ್ಲ. ನೀವು ಖರೀದಿ ಮಾಡುವ ಪುಸ್ತಕ ಕೆಲವೇ ಗಂಟೆಗಳಲ್ಲಿ (ನೀವಿರುವ ಊರು, ದೇಶದ ಮೇಲೆ ಅವಲಂಬಿತ) ನಿಮ್ಮ ಮನೆಬಾಗಿಲಿಗೆ ಬಂದುಬಿಡುತ್ತದೆ.

ಆದರೆ ತಮಾಷೆಯ ವಿಷಯವೆಂದರೆ ವಾಸ್ತವವಾಗಿ ಈ ಅಂಗಡಿಯ ಯಜಮಾನನ ಬಳಿ ಈ ರೀತಿಯ ಒಂದು ಪುಸ್ತಕದಂಗಡಿಯಾಗಲಿ, ಇಷ್ಟೊಂದು ಪುಸ್ತಕಗಳಾಗಲಿ, ಅದನ್ನು ನೋಡಿಕೊಳ್ಳುವ ಜನರಾಗಲಿ ಇಲ್ಲ. ಕೇವಲ ಕಂಪ್ಯೂಟರ್‌ನಲ್ಲಿ ಇವೆಲ್ಲವನ್ನು ಸೃಷ್ಟಿಸಿ ಒಂದು ಕಾಲ್ಪನಿಕ ಅಂಗಡಿಯನ್ನು ತೆರೆದಿರುತ್ತಾನೆ. ಹಾಗಾದರೆ ನೀವು ಕೊಂಡ ಪುಸ್ತಕ ನಿಮಗೆ ಹೇಗೆ ತಲುಪುತ್ತದೆ? ಎಂದು ಆಶ್ಚರ್ಯವೆ. ಅದೇ ಎಲೆಕ್ಟ್ರಾನಿಕ್ ವಾಣಿಜ್ಯದ ಹಿರಿಮೆ! ಇಲ್ಲಿ ನೀವು ಇಂತಹ ಪುಸ್ತಕ ನಿಮಗೆ ಬೇಕು ಎಂದ ತಕ್ಷಣ, ಆ ಮಾಹಿತಿ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ನೇರವಾಗಿ ಆ ಪುಸ್ತಕದ ಪ್ರಕಾಶಕರನ್ನು ತಲುಪಿಬಿಡುತ್ತದೆ. ಅದೇ ರೀತಿ ಅವರಿಂದ ಈ ಪುಸ್ತಕವನ್ನು ಕೊಂಡ ವ್ಯಕ್ತಿಯ ಊರಿಗೆ ಸಮೀಪವಿರುವ ಅವರ ವಿತರಕರಿಗೆ ಮಾಹಿತಿಯ ವರ್ಗಾವಣೆಯಾಗಿ, ಅಲ್ಲಿಂದ ಪುಸ್ತಕವು ಯಾವುದಾದರೂ ನಿಗದಿತ ಕೊರಿಯರ್‌ಗಳ ಮೂಲಕ ನಿಮ್ಮ ಮನೆಬಾಗಿಲಿಗೆ ಬರುತ್ತದೆ. ಒಂದು ವೇಳೆ ಕೊರಿಯರ್ ಕಂಪನಿಯವರೂ ಅವರ ಅಂಗಡಿಯನ್ನು ಅಂತರ್‌ಜಾಲದಲ್ಲಿ ಇಟ್ಟುಕೊಂಡಿದ್ದರೆ, ನೀವು ಆ ಅಂಗಡಿಯನ್ನು ಪ್ರವೇಶಿಸಿ ನಿಮಗೆ ಸಿಗಬೇಕಾದ ಪುಸ್ತಕ ಯಾವ ದಿನ, ಎಷ್ಟು ಗಂಟೆಗೆ ಬಂದು ಸೇರುತ್ತದೆಂಬುದನ್ನೂ ನೋಡಬಹುದು. ಪುಸ್ತಕವನ್ನು ನಿಮಗೆ ಹಸ್ತಾಂತರಿಸುವ ಕೆಲಸವೊಂದನ್ನು ಬಿಟ್ಟರೆ

ಎಲೆಕ್ಟ್ರಾನಿಕ್ ವಾಣಿಜ್ಯ

ಸಿಹಿ	ಕಹಿ
ಹೆಚ್ಚಿನ ಬಂಡವಾಳವಿಲ್ಲದೆ ಈ ತರಹದ ವ್ಯಾಪಾರವನ್ನು ಪ್ರಾರಂಭಿಸಬಹುದು. ವಿಶ್ವದ ಎಲ್ಲೆಡೆಯಿಂದ ಗಿರಾಕಿಗಳನ್ನು ಗಿಟ್ಟಿಸಬಹುದು. ಬೇರೆ ಬೇರೆ ಅಂಗಡಿಗಳಲ್ಲಿ ಲಭ್ಯವಿರುವ ವಸ್ತುವಿನೊಂದಿಗೆ ಹೋಲಿಸಿ ನೋಡಿ, ನಿಮಗೆ ಸರಿಯೆನಿಸುವ ಅಂಗಡಿಯಿಂದಲೇ ವ್ಯಾಪಾರ ಮಾಡಬಹುದು. ಈ ತರಹದ ಅಂಗಡಿಗಳ ಯಜಮಾನರು ಹೆಚ್ಚಿನ ಬಂಡವಾಳವನ್ನು ಹೂಡುವುದಿಲ್ಲವಾದ ಕಾರಣ ನಾವು ಖರೀದಿಸುವ ವಸ್ತುಗಳ ಬೆಲೆ ಮಾಮೂಲಿ ಅಂಗಡಿಗಳಿಗಿಂತಲೂ ಕಡಿಮೆಯಿರುತ್ತದೆ. ಗ್ರಾಹಕ ತನ್ನ ಮನೆಯಿಂದಲೇ ನೆಮ್ಮದಿಯಾಗಿ, ಹೆಚ್ಚು ಸಮಯವನ್ನು ಹಾಳು ಮಾಡಿಕೊಳ್ಳದೆ ವ್ಯಾಪಾರ ಮಾಡಬಹುದು. ದಿನದ 24 ಗಂಟೆಗಳ ಕಾಲವೂ ಅಂಗಡಿಯನ್ನು ತೆರದಿರಬಹುದಾದ್ದರಿಂದ, ನಮಗೆ ರಾತ್ರಿ, ನಿದ್ದೆ ಮಾಡುವ ಸಮಯ ಬಂದಾಗ, ಬೇರೊಂದು ದೇಶದ ವ್ಯಕ್ತಿಗೆ ಬೆಳಗಾಗುವುದರಿಂದ ಅವನು ನಿಮ್ಮ ಅಂಗಡಿಯನ್ನು ಹೊಕ್ಕು ವ್ಯಾಪಾರ ಮಾಡಬಹುದು. ಗ್ರಾಹಕರ ಮನಸ್ಸಂತೋಷ ಪಡಿಸಬಹುದು.	ನಿಮ್ಮ ಕ್ರೆಡಿಟ್‌ಕಾರ್ಡ್ ಸಂಖ್ಯೆಗಳನ್ನು ಬಳಸಿಕೊಂಡು ನಿಮ್ಮನ್ನು ಮೋಸ ಮಾಡುವ ಸಾಧ್ಯತೆಗಳಿವೆ. ಬರೀ ಭ್ರಮಾ ಲೋಕದಲ್ಲಿ ವ್ಯಾಪಾರ ಮಾಡುವುದರಿಂದ ಗ್ರಾಹಕನಿಗೆ ಬೇಸರವಾಗಬಹುದು. ವಿಶ್ವದ ಎಲ್ಲಾ ಕಡೆಯ ಗ್ರಾಹಕರನ್ನು ಸಂಪರ್ಕಿಸಬಹುದಾದರೂ, ವಸ್ತುಗಳ ವಿನಿಮಯವನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಮಾಡುವುದು ಅಷ್ಟೊಂದು ಸುಲಭವಿಲ್ಲ. ದಿಢೀರನೆ ಬೇಕೆಂದ ವಸ್ತುಗಳನ್ನು ಇಲ್ಲಿ ಕೊಳ್ಳಲಾಗುವುದಿಲ್ಲ.



ನೀವೇನಾದರೂ ತಪ್ಪು ಮಾಹಿತಿ ಕೊಟ್ಟು ಪುಸ್ತಕ ಖರೀದಿಸಲು ಪ್ರಯತ್ನಿಸಿದರಾದರೆ, ನಿಮ್ಮ ಮನೆ ಬಾಗಿಲಿಗೆ ಪುಸ್ತಕ ಬರುವುದರ ಬದಲು ಪೊಲೀಸರು ಬಂದಾರು!

ಉಳಿದದ್ದೆಲ್ಲಾ ಎಲೆಕ್ಟ್ರಾನಿಕ್ಸ್ ವ್ಯಾಪಾರದಲ್ಲಿಯೇ ನಡೆದುಹೋಗುತ್ತದೆ.

ನಿಮಗೆ ಪುಸ್ತಕ ತಲುಪುವ ಸಡಗರ ನಡೆಯುತ್ತಿರುವಾಗಲೇ, ಅದಕ್ಕೆ ಸಂಬಂಧಿಸಿದ ಮತ್ತೊಂದು ವ್ಯವಹಾರವನ್ನು ಗಮನಿಸೋಣ. ನೀವು ತಣ್ಣಗೆ ಮನೆಯಲ್ಲಿ ಕುಳಿತು ನಿಮ್ಮ ಕ್ರೆಡಿಟ್ ಕಾರ್ಡ್‌ನ ಸಂಖ್ಯೆಯನ್ನು ಕೊಟ್ಟು ಪುಸ್ತಕವನ್ನು ಖರೀದಿಸಿದಿರಲ್ಲವೆ? ನೀವು ಸತ್ಯಹರಿಶ್ಚಂದ್ರರೆಂದು ಹೇಗೆ ನಂಬಬೇಕು? ಅದಕ್ಕೂ ಎಲೆಕ್ಟ್ರಾನಿಕ್ ಲೋಕದಲ್ಲಿ ಉತ್ತರವುಂಟು. ನೀವು ಪುಸ್ತಕವನ್ನು ಖರೀದಿಸಿ ಕ್ರೆಡಿಟ್ ಕಾರ್ಡ್ ಸಂಖ್ಯೆಯನ್ನು ಕೊಟ್ಟ ಕ್ಷಣವೇ, ನಿಮ್ಮ ಈ ವಿವರಗಳೆಲ್ಲಾ ಆ ಕ್ರೆಡಿಟ್ ಕಾರ್ಡ್ ಬ್ಯಾಂಕಿಗೆ ಸೇರುತ್ತವೆ. ಅವರು (ಅಥವಾ ಅವರ ಕಂಪ್ಯೂಟರ್) ನಿಮ್ಮ ಈ ವಿವರಗಳೆಲ್ಲಾ ಸರಿ ಹೌದೋ ಅಲ್ಲವೋ ಎಂದು ಪರಿಶೀಲಿಸಿ, ಸರಿಯಿದ್ದರೆ ಸರಿಯೆಂದೂ, ತಪ್ಪಿದ್ದರೆ ತಪ್ಪೆಂದೂ ಹೇಳಿಬಿಡುತ್ತಾರೆ. ನೀವೇನಾದರೂ ತಪ್ಪು ಮಾಹಿತಿ ಕೊಟ್ಟು ಪುಸ್ತಕ ಖರೀದಿಸಲು ಪ್ರಯತ್ನಿಸಿದರಾದರೆ, ನಿಮ್ಮ ಮನೆ ಬಾಗಿಲಿಗೆ ಪುಸ್ತಕ ಬರುವುದರ ಬದಲು ಪೊಲೀಸರು ಬಂದಾರು!

ಇನ್ನೆಂತಹ ವ್ಯಾಪಾರಗಳಿವೆ?

ಯಾವುದೇ ಬಗೆಯ ವಾಣಿಜ್ಯಕ್ಕಾದರೂ ನಾವು ಎಲೆಕ್ಟ್ರಾನಿಕ್ ಮಾಧ್ಯಮಗಳ ಸಹಾಯವನ್ನು ಪಡೆಯಬಹುದು. ಇಂದು ಅಂತರ್‌ಜಾಲದಲ್ಲಿ ಎಂಥ ವಿಚಿತ್ರಗಳಿವೆಯೆಂಬುದಕ್ಕೆ http://www.buy.com ಎಂಬ ವ್ಯಾಪಾರವನ್ನು ನೋಡಬಹುದು.

ಈ ವ್ಯಾಪಾರಿ ಮಳಿಗೆಯಲ್ಲಿ ಥರಾವರಿ ವಸ್ತುಗಳಿವೆ. ಈ ವಸ್ತುಗಳ ಬೆಲೆಗಳು ತಯಾರಿಕೆಯ ವೆಚ್ಚಕ್ಕೆ ಸಮನಾಗಿಯೋ ಅಥವಾ ಅದಕ್ಕಿಂತ ಕಡಿಮೆಯೋ ಇರುವುದನ್ನು ಕಂಡರೆ ಶ್ರೀಸಾಮಾನ್ಯನಿಗೆ ಈ ವ್ಯಾಪಾರದ ಒಡೆಯನಿಗೆ ತಲೆ ಕೆಟ್ಟಿದೆಯೋ ಎಂಬ ಅನುಮಾನ ಬರುತ್ತದೆ. ಆದರೆ ನಿಲ್ಲಿ, ಈ ವ್ಯಾಪಾರ ನಾವಂದುಕೊಂಡಷ್ಟು ಸರಳವಾಗಿಲ್ಲ. ಅತ್ಯಂತ ಚಾಣಾಕ್ಷತನವನ್ನು ಉಪಯೋಗಿಸಿ ಮಾಡುತ್ತಿರುವ ಒಂದು ವ್ಯವಹಾರವಿದು. ಇಲ್ಲಿ ಎಲ್ಲಾ ವಸ್ತುಗಳಿಗೂ ಅತ್ಯಂತ ಕಡಿಮೆ ಬೆಲೆ ಎಂದು ಗೊತ್ತಾದಾಕ್ಷಣ ಜನ ಈ ಅಂಗಡಿಗೆ ಮುಗಿ ಬೀಳುತ್ತಾರೆ. ಹೆಚ್ಚು ಜನಕ್ಕಾಗಿ ವ್ಯಾಪಾರಿ ದೊಡ್ಡ ಮಳಿಗೆ ಕಟ್ಟಿಸ ಬೇಕೆಂಬ ಗೊಡವೆಯಂತೂ ಇಲ್ಲವಾದ್ದರಿಂದ ಎಷ್ಟೇ ರಾಶಿ ರಾಶಿ ಜನ ನಿಮ್ಮ ಅಂಗಡಿಗೆ ನುಗ್ಗಿದರೂ ನಿಮಗ್ಯಾವ ತೊಂದರೆಯೂ ಇಲ್ಲ. ಆದರೆ ಆದರ ಬದಲಿಗೆ ನೀವು ನಿಮ್ಮ ಅಂಗಡಿಯಲ್ಲಿ ಭೇಟಿ ನೀಡುವ ಪ್ರತಿಯೊಬ್ಬರ ಕಣ್ಣಿಗೂ ಒಂದಿಷ್ಟು ಜಾಹೀರಾತುಗಳು ಬೀಳುವಂತೆ ಮಾಡಿದರಾಯ್ತು. ನೀವು ಈ ಜಾಹೀರಾತುಗಳನ್ನು ನೀಡಿದ ಕಂಪನಿಯಿಂದ ಪಡೆದ ಹಣ ಎಷ್ಟಿರುತ್ತದೆಂದರೆ, ನೀವು ನಿಮ್ಮಂಗಡಿಯ ಎಲ್ಲಾ ವಸ್ತುಗಳನ್ನು ಪುಕ್ಕಟೆಯಾಗಿ ಕೊಟ್ಟರೂ ಲಾಭವನ್ನೇ ಮಾಡುವಂತಿರುತ್ತದೆ!

ಸಾಮಾನ್ಯವಾಗಿ ಈ ಎಲೆಕ್ಟ್ರಾನಿಕ್ ವಾಣಿಜ್ಯದಲ್ಲಿ ಪ್ರವೇಶಿಸಬೇಕೆಂದರೆ, ನಾವು ನಮ್ಮ ವ್ಯವಹಾರದ ರೀತಿ ನೀತಿಗಳನ್ನು ಅದಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬೇಕಾಗುತ್ತದೆ. ನಾವು ಇದ್ದಂತೆಯೇ ಇರುತ್ತೇವೆ, ಆದರೆ ಎಲೆಕ್ಟ್ರಾನಿಕ್ ವಾಣಿಜ್ಯ ಇಂದು ಅತ್ಯಂತ ಆಕರ್ಷಕವಾದ್ದರಿಂದ ಅದನ್ನೂ ಉಪಯೋಗಿಸಿಕೊಳ್ಳುತ್ತೇವೆಂದರೆ ಅದರಿಂದ ಹೆಚ್ಚಿನ ಉಪಯೋಗವಾಗಲಿಕ್ಕಿಲ್ಲ.

ಉದಾಹರಣೆಗೆ ಕಂಪ್ಯೂಟರ್‌ಗಳನ್ನು ಮಾರಾಟ ಮಾಡುವುದು ನಿಮ್ಮ ವ್ಯವಹಾರ ವೆಂದಿಟ್ಟುಕೊಳ್ಳಿ, ಆಗ ನಿಮ್ಮ ಅಂತರ್‌ಜಾಲದ ಅಂಗಡಿಗೆ ಭೇಟಿ ಕೊಟ್ಟವನು ತನಗೆ ಬೇಕಾದ ಬಿಡಿ ಭಾಗಗಳನ್ನು ಆಯ್ಕೆ ಮಾಡಿಕೊಂಡು ತನಗೆ ಬೇಕಾದ ರೀತಿಯಲ್ಲಿ ಒಂದು ಕಂಪ್ಯೂಟರನ್ನು ತಯಾರಿ ಮಾಡಿಕೊಳ್ಳುವ, ಅದರ ಬೆಲೆಯನ್ನು ಕಂಡುಕೊಳ್ಳುವ ಒಂದು ಅವಕಾಶವನ್ನು ನೀವು ಮಾಡಿಕೊಡಬೇಕು. ಅಂದರೆ ನನಗೆ ಈ ಕಂಪನಿಯ ಮಾನಿಟರ್ ಬೇಕು, ಇದೇ ಕೀಲಿಮಣೆ (ಕೀಬೋರ್ಡ್) ಯಾಗಬೇಕು, ಇಂತಹ ಪ್ರಾಸಸರ್ ಬೇಕು ಎಂದೆಲ್ಲಾ ಆಯ್ಕೆ ಮಾಡಿಕೊಳ್ಳುವಂತಿರಬೇಕು. ಈ ರೀತಿ ಅವನು ಆಯ್ಕೆ ಮಾಡಿಕೊಳ್ಳುವ ವಿಧಾನ ಅತ್ಯಂತ ಸುಲಭವಾಗಿರಬೇಕಲ್ಲದೆ, ಅವರಿಗೆ ಆಕರ್ಷಣೀಯವಾಗಿಯೂ ಇರಬೇಕು. ಇಷ್ಟೇ ಅಲ್ಲದೆ ನಿಮ್ಮ ಅಂಗಡಿಯ ಅಂದ ಚೆಂದಗಳನ್ನು ನೀವು ಆಗಿಂದಾಗ್ಗೆ ಬದಲಾಯಿಸುತ್ತಲೇ ಇರಬೇಕು. ಇಲ್ಲದಿದ್ದರೆ ಗ್ರಾಹಕ ಮತ್ತೆ ಮತ್ತೆ ಭೇಟಿ ಕೊಡದೇ ಹೋಗಬಹುದು. ನಿಮ್ಮ ಅಂಗಡಿಗೆ ಹೊಸ ಹೊಸ ಗ್ರಾಹಕರನ್ನು ಆಕರ್ಷಿಸುವುದು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ನಿಮ್ಮ ಹಳೆಯ ಗಿರಾಕಿಯನ್ನು ಉಳಿಸಿಕೊಳ್ಳುವುದಾಗಿರುತ್ತದೆ.

ಬ್ಯಾಂಕ್ ವ್ಯವಹಾರ, ವಿಮಾ ವಹಿವಾಟು, ಆಹಾರ, ಲಘುವರ ಮಾರಾಟ (software selling), ಪ್ರಕಾಶನ, ಮಾಹಿತಿ ಮಾರಾಟ (information selling), ರೈಲ್ವೆ- ಬಸ್ ಟಿಕೆಟ್ ಕಾದಿರಿಸುವಿಕೆ, ಶೇರು ಮಾರುಕಟ್ಟೆ ವ್ಯವಹಾರ, ವೈದ್ಯಕೀಯ, ಟೆಲಿಪೋನ್ ಮತ್ತು ವಿದ್ಯುತ್ ಬಿಲ್ ಕಟ್ಟುವ ಅನುಕೂಲ, ಜ್ಞಾನದ ಹಂಚಿಕೆ (knowledge exchange) ಮನೋರಂಜನೆ

ಮುಂತಾದ ನಾನಾ ವಿಧವಾದ ವ್ಯಾಪಾರಗಳನ್ನು ಅಂತರ್‌ಜಾಲದಲ್ಲಿ ಕಾಣಬಹುದಾಗಿದೆ. ನಿಜ ಹೇಳಬೇಕೆಂದರೆ ಯಾವುದೇ ತರಹದ ವ್ಯಾಪಾರವನ್ನಾದರೂ ಅಂತರ್‌ಜಾಲದಲ್ಲಿ ಮಾಡಬಹುದು. ನಾವೇ ಹೊಸ ಹೊಸ ಬಗೆಯ ವ್ಯಾಪಾರವನ್ನೂ ಸೃಷ್ಟಿಸಬಹುದಾಗಿದೆ. ಉದಾಹರಣೆಗೆ ನಿಮ್ಮ ಊರಿನ ಎಲ್ಲಾ ಎಲೆಕ್ಟ್ರಾನಿಕ್ಸ್ ಅಂಗಡಿಗಳ ಬೆಲೆ ಪಟ್ಟಿಯನ್ನು ನೋಡಿ, ಅದನ್ನು ಗ್ರಾಹಕರಿಗೆ ನೀಡಿ, ಯಾವ ಅಂಗಡಿಯಲ್ಲಿ ಅತ್ಯಂತ ಕಡಿಮೆ ಬೆಲೆಯ ವಸ್ತುಗಳು ನಿಮಗೆ ಈ ದಿನ ಸಿಗುತ್ತವೆ ಎಂದು ಹೇಳಬಹುದು. ಆ ರೀತಿಯ ಮಾಹಿತಿಯನ್ನು ಗ್ರಾಹಕ ಪಡೆಯಬೇಕೆಂದರೆ, ಅವನು ಸ್ವಲ್ಪ ಹಣವನ್ನು ನಿಮಗೆ ಕೊಡಬೇಕು ಎಂದು ಕಡ್ಡಾಯ ಮಾಡಬಹುದು. ಅದೂ ಕಷ್ಟದ ಕೆಲಸವೆಂದರೆ, ಸುಮ್ಮನೆ ದಿನ ಭವಿಷ್ಯವನ್ನು ಹೇಳುವ ಒಂದು ವ್ಯವಹಾರ ಮಾಡಿದರೂ ಸಾಕು. ಸಾವಿರಾರು ಜನ ಅಂತಹ ದಿನ ಭವಿಷ್ಯಗಳನ್ನು ಓದುವುದಕ್ಕಾಗಿ ನಿಮ್ಮಲ್ಲಿಗೆ ಬರುತ್ತಾರೆ. ನೀವು ಜಾಹೀರಾತಿನ ಮೂಲಕ ಕಾಸು ಮಾಡಿದರಾಯ್ತು!

ಇದೆಷ್ಟು ಸುರಕ್ಷಿತ?

ಈ ಎಲೆಕ್ಟ್ರಾನಿಕ್ ವಾಣಿಜ್ಯದ ಬಣ್ಣ ಬಣ್ಣದ ಮಾತುಗಳು ಕೇಳಲು ಚೆನ್ನಾಗಿಯೇ ಇವೆ. ಆದರೆ ಈ ರೀತಿಯ ವ್ಯವಹಾರ ಎಷ್ಟು ಸುರಕ್ಷಿತ? ನಮ್ಮ ಕ್ರೆಡಿಟ್‌ಕಾರ್ಡಿನ ಮಾಹಿತಿಯನ್ನು ನಾವು ಹೀಗೆ ಎಲ್ಲೆಂದರಲ್ಲಿ, ಗೊತ್ತುಗುರಿಯಿಲ್ಲದ ಅಂಗಡಿಗಳಿಗೆ ಕೊಟ್ಟುಬಿಟ್ಟರೆ ಅದನ್ನು ಯಾರಾದರೂ ಲಪಟಾಯಿಸಿ ಮೋಸ ಮಾಡಿದರೇನು ಗತಿ? ಯಾರೋ ಒಬ್ಬರು ಸುಳ್ಳು ಸುಳ್ಳೇ ಅಂತರ್‌ಜಾಲದಲ್ಲಿ ಒಂದು ಅಂಗಡಿಯನ್ನು ತೆರೆದು, ಅತ್ಯಾಕರ್ಷಕ ಬೆಲೆಗಳನ್ನಿಟ್ಟು ನೀವೆಲ್ಲಾ ಖರೀದಿಸುವಂತೆ ಪ್ರಚೋದಿಸಿ, ನಂತರ ಮಟಾಮಾಯವಾದರೆ ಯಾರಿಗೆ ಮೊರೆ ಇಡುವುದು? ಕೊನೆಗೆ ನಾವು ಇಷ್ಟೆಲ್ಲಾ ವ್ಯವಹಾರ ಮಾಡುತ್ತಿರುವುದು ಕಂಪ್ಯೂಟರ್ ಎಂಬ ಯಃಕಶ್ಚಿತ್ ಯಂತ್ರವನ್ನು ನಂಬಿ. ಯಾವುದೋ ದೋಷದಿಂದ ಮುಖ್ಯ ಕಂಪ್ಯೂಟರ್ (server) ಕೈಕೊಟ್ಟು ವ್ಯವಹಾರವೇ ದಿವಾಳಿಯೆದ್ದು ಹೋದರೆ ಕಂಪ್ಯೂಟರನ್ನು ಜೈಲಲ್ಲಿ ಕೂಡಿಸಲಾಗುತ್ತದೆಯೇ?

ನಿಮ್ಮ ಈ ಎಲ್ಲಾ ಸಂಶಯಗಳು ಸತ್ಯ. ಜಗತ್ತಿನಲ್ಲಿ ಸಾಕಷ್ಟು ಜನರು ಈ ರೀತಿಯ ವ್ಯವಹಾರಕ್ಕೆ ನಕಾರ ಸೂಚಿಸುತ್ತಿರುವುದು ಈ ಎಲ್ಲಾ ಕಾರಣಗಳಿಗಾಗಿಯೇ!

ಆದರೆ ಇಂತಹ ಮೋಸಗಳನ್ನು ತಡೆಗಟ್ಟಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ಬ್ಯಾಂಕುಗಳು ಹೊಸ ಹೊಸ ಸುರಕ್ಷಾ ವಿಧಾನಗಳನ್ನು ತರುತ್ತಿವೆ. ಅತ್ಯಂತ ಗೌಪ್ಯವಾಗಿ ನಿಮ್ಮ ಕ್ರೆಡಿಟ್ ಕಾರ್ಡಿನ ಅಂಕಿಯನ್ನು ಗುರುತಿಸುವ ಲಘುವರಗಳು ತಯಾರಾಗುತ್ತಿವೆ. ನಿಮಗೊಬ್ಬರಿಗೇ ಗೊತ್ತಿರುವಂತಹ ಗುಪ್ತ ಪದಗಳನ್ನು ನೀಡಿ, ನೀವು ಅದನ್ನು ಉಪಯೋಗಿಸಿದಾಗ ಅದು ಮತ್ಯಾವುದೋ ಸೂತ್ರಕ್ಕೆ ತಕ್ಕಂತೆ ಬದಲಾವಣೆಗೊಂಡು ಹೊಸ ಪದವಾಗುವಂತೆ ಮಾಡುತ್ತಾರೆ. ನಿಮ್ಮ ಧ್ವನಿಯಿಂದ ಮಾತ್ರ ನಿಮ್ಮನ್ನು ಗುರುತಿಸುವಂತಹ ವಿಧಾನಗಳೂ ನಡೆಯುತ್ತಿವೆ. ಸರಕಾರಗಳು ಮಧ್ಯೆ ಪ್ರವೇಶಿಸಿ ಸಂಸ್ಥೆಯೊಂದನ್ನು ಸ್ಥಾಪಿಸಿ ಸುರಕ್ಷತೆಗೆ ಸಂಬಂಧಿಸಿದ ನಿಯಮಗಳನ್ನು ಸಿದ್ಧ ಮಾಡಿಸುತ್ತಿವೆ.

ಏನೇ ಆದರೂ ಅಂತರ್‌ಜಾಲದಲ್ಲಿ ಒಂದು ಅಂಗಡಿಯನ್ನು ಸ್ಥಾಪಿಸುವುದು ಕಡ್ಡಿಯಷ್ಟು ಹಗುರುವಾದ ಕೆಲಸವಾದರೆ, ಅದಕ್ಕೆ ರಕ್ಷಾ ಕವಚವನ್ನು ಹೊದಿಸಿ ಜನರನ್ನು ನಂಬಿಸುವುದು ಗುಡ್ಡ ಕಡಿದಷ್ಟು ಶ್ರಮದಾಯಕ! ಆದರೆ ಹಿಂದೊಮ್ಮೆ ಬ್ಯಾಂಕುಗಳು ಶುರುವಾದಾಗ ಜನರು ಅದರಲ್ಲಿ ಹಣ ಹೂಡಲು ಅಷ್ಟೇ ಹೆದರಿಕೊಳ್ಳುತ್ತಿದ್ದರೆಂಬುದನ್ನು ನಾವು ಮರೆಯುವಂತಿಲ್ಲ. ನಿಧಾನಕ್ಕೆ ಬದಲಾವಣೆಗಳಾಗಿ, ಎಲೆಕ್ಟ್ರಾನಿಕ್ ವಾಣಿಜ್ಯ ನಮ್ಮ ಎಲ್ಲಾ ದೈನಂದಿನ ವ್ಯವಹಾರಗಳಲ್ಲೂ ತಲೆಹಾಕುವ ಕಾಲ ದೂರವಿಲ್ಲ.



ಕವನ

ಏನ್ ಶೆಟ್ರೆ! ಹಿಂದೆ ಪತ್ರಿಕೇಲಿ ಒಳ್ಳೊಳ್ಳೆ ಕವನ ಬರೀತಿದ್ರಿ. ಈಗ್ಲೂ ಬರೀರಿ.

ಗಿರಾಕಿಗಳು ಸಾಲ ಮಾಡಿ ಹೋದುದನ್ನೇ ಬರೆದಿಡಲು ಸಮಯವಿಲ್ಲ. ಅಂತಹದರಲ್ಲಿ ಕವನ ಹೇಗೆ ಬರೀಲಿ ಹೇಳಿ.

ಭಾರತದಲ್ಲಿ ಹೇಗೆ?


ಭಾರತದಲ್ಲಿ ಇದೀಗ ಎಲೆಕ್ಟ್ರಾನಿಕ್ ವಾಣಿಜ್ಯ ಕಾಲಿಡುತ್ತಿದೆ.

ಅಂತರ್‌ಜಾಲ ಸೌಲಭ್ಯವನ್ನು ಖಾಸಗೀಕರಣಗೊಳಿಸಿದ ನಂತರ ಮತ್ತು ಸದ್ಯದಲ್ಲೇ ಕೇಬಲ್‌ಗಳ ಮೂಲಕ ಅಂತರ್‌ಜಾಲದ ಸೌಲಭ್ಯ ಒದಗುವ ಸಾಧ್ಯತೆಗಳಿರುವುದರಿಂದ ಭಾರತದಲ್ಲಿಯೂ ಅಂತರ್‌ಜಾಲವನ್ನು ಉಪಯೋಗಿಸುವ ಜನರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರಿಂದಾಗಿ ಅಂತರ್‌ಜಾಲದ ಮೂಲಕ ಎಲೆಕ್ಟ್ರಾನಿಕ್ ವಾಣಿಜ್ಯವನ್ನು ಪ್ರಾರಂಭಿಸುವುದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಈಗಾಗಲೇ ಕೆಲವು ದೊಡ್ಡ ದೊಡ್ಡ ಕಂಪನಿಗಳು, ಬ್ಯಾಂಕುಗಳು ತಮ್ಮ ಅಂಗಡಿಗಳನ್ನು ಅಂತರ್‌ಜಾಲದಲ್ಲಿ ತೆರೆದಿದ್ದರೂ, ಗಮನೀಯ ಸಂಖ್ಯೆಯಲ್ಲಿ ಕಾಣುತ್ತಿಲ್ಲ. ಕೆಲವೊಂದು ಚಿಕ್ಕ ಪುಟ್ಟ ಕಂಪನಿಗಳು ಈ ಕ್ಷೇತ್ರಕ್ಕೆ ನುಗ್ಗಿದ್ದರೂ, ಅವುಗಳಿಗೆ ತಾವು ಎಲೆಕ್ಟ್ರಾನಿಕ್ ವಾಣಿಜ್ಯವನ್ನು ಮಾಡಲು ಪ್ರಯತ್ನಿಸುತ್ತಿದ್ದೀವೆಯೋ ಅಥವಾ ಬರೀ ತಮ್ಮ ಕಂಪನಿಯ ವಿವರಗಳನ್ನು ಅಂತರ್‌ಜಾಲದಲ್ಲಿ ಪ್ರಕಟಿಸುತ್ತಿದ್ದೇವೆಯೋ ಎಂಬ ಗಲಿಬಿಲಿಯಿದ್ದಂತೆ ಕಾಣುತ್ತದೆ.

ಭಾರತದಲ್ಲಿ ಎಲೆಕ್ಟ್ರಾನಿಕ್ ವಾಣಿಜ್ಯ ಇನ್ನೂ ಕುಂಟುತ್ತಿರುವುದಕ್ಕೆ ಇಲ್ಲಿ ಕ್ರೆಡಿಟ್‌ಕಾರ್ಡಿನ ಬಳಕೆ ಅತ್ಯಂತ ಕಡಿಮೆಯಿರುವುದು ಮುಖ್ಯ ಕಾರಣವಾಗಿದೆ. ಸಾಮಾನ್ಯವಾಗಿ ಎಲೆಕ್ಟ್ರಾನಿಕ್ ವಾಣಿಜ್ಯದಲ್ಲಿ ಹಣದ ವಿನಿಮಯ ಕ್ರೆಡಿಟ್ ಕಾರ್ಡ್‌ಗಳ ಮೂಲಕವೇ ಆಗುತ್ತದೆ. ಆದ್ದರಿಂದ ಈ ಕ್ರೆಡಿಟ್ ಕಾರ್ಡ್ ವ್ಯವಸ್ಥೆ ಭಾರತದಲ್ಲಿ ಹೆಚ್ಚು ಪ್ರಚಲಿತವಾಗಬೇಕಾಗಿದೆ. ಆದರೆ ದಿನದಿಂದ ದಿನಕ್ಕೆ ಕ್ರೆಡಿಟ್‌ಕಾರ್ಡ್ ಹೊಂದಿರುವ ಜನರ ಸಂಖ್ಯೆ ಬೆಳೆಯುತ್ತಿರುವ ವೇಗವನ್ನು ನೋಡಿದರೆ, ಇನ್ನು ಕೆಲವೇ ದಿನಗಳಲ್ಲಿ ಭಾರತದಲ್ಲಿ ಭಿಕ್ಷುಕನೂ ಕ್ರೆಡಿಟ್‌ಕಾರ್ಡ್ ಸ್ವೀಕರಿಸಬಹುದೇನೋ ಎಂಬ ಅನುಮಾನವಾಗುತ್ತದೆ.

ಈ ಎಲೆಕ್ಟ್ರಾನಿಕ್ ವಾಣಿಜ್ಯ ಕೇವಲ ದೊಡ್ಡ ದೊಡ್ಡ ಕಂಪನಿಗಳಿಗೆ ಮಾತ್ರ ಸೀಮಿತವಲ್ಲ. ಎಂತಹ ಚಿಕ್ಕ ಕಂಪನಿಯಾದರೂ ಇದರ ಉಪಯೋಗವನ್ನು ಪಡೆಯಬೇಕಾಗಿದೆ. ಆದರೆ ಈ ತರಹದ ವಾಣಿಜ್ಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಇದು ನಮ್ಮ ವ್ಯಾಪಾರಕ್ಕೆ ಸರಿಹೊಂದುತ್ತದೆಯೋ ಇಲ್ಲವೋ ಎಂದು ಅರ್ಥ ಮಾಡಿಕೊಳ್ಳುವುದು ಅವಶ್ಯಕ. ■

■ ಬಿ.ವಿಲ್ಸನ್



ಹಾಸ್ಯ ಕಲಾವಿದ

ವಸಂತ ಬಾಂದೇಕರ

“ಜೀವನದಲ್ಲಿ • ನಗು ಇಲ್ಲದಿದ್ದರೆ ನಾನೆಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ” ಎಂದವರು ಬೇರೆ ಯಾರೂ ಅಲ್ಲ ನಮ್ಮೆಲ್ಲರ ಪೂಜ್ಯ ಬಾಪೂಜಿ-ಮಹಾತ್ಮಾ ಗಾಂಧೀಜಿಯವರು. ನಗು ಇಲ್ಲದಿದ್ದರೆ ತಮ್ಮ ಅಮೂಲ್ಯ ಜೀವವನ್ನೇ ಬಲಿ ಕೊಡಲು ಸಿದ್ಧರಿದ್ದರು ಎಂಬುದು ನಗುವಿನ ಬೆಲೆಯನ್ನು ಸ್ಪಷ್ಟಪಡಿಸುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಬದುಕು ದುಃಖಮಯವಾಗಿ ವಿವಿಧ ಸಮಸ್ಯೆಗಳಲ್ಲಿ ಸಿಲುಕಿ ಮಾನವನ ಬದುಕಿನಲ್ಲಿ ಹಾಸ್ಯವೇ ಮಾಯವಾಗಿದೆ. ಇಂಥ ಕಠಿಣವಾದ ಪರಿಸ್ಥಿತಿಯಲ್ಲಿ ಕಾರವಾರದ ಸದಾಶಿವಗಡ ಗ್ರಾಮದ ವಸಂತ ಬಾಂದೇಕರ ಜನರನ್ನು ತಮ್ಮ ಹಾಸ್ಯ ಕಲೆಯಿಂದ ನಗಿಸುತ್ತಾ ಯಶಸ್ವಿಯಾಗಿ ಮುನ್ನಡೆದಿದ್ದಾರೆ.

ಪ್ರಸಿದ್ಧ ಸಿನೇಮಾ ಕಲಾವಿದರ ನಡೆಯುವ, ನಗುವ, ಅಳುವ, ಮಾತನಾಡುವ ವಿವಿಧ ಶೈಲಿಗಳು, ಹಿನ್ನೆಲೆ ಗಾಯಕರ ಅನುಕರಣೆ, ಶಹನಾಯಿ, ಕೊಳಲು, ಪಿಟೀಲು, ಸಿತಾರ್ ಮುಂತಾದ 26 ವಾದ್ಯಗಳ ಅನುಕರಣೆ (26 ವಾದ್ಯಗಳ ಅನುಕರಣೆಗಾಗಿ ಗಿನ್ನಿಸ್ ವಿಶ್ವದಾಖಲೆಯ ಪುಟ ಸೇರುವ ನಿರೀಕ್ಷೆಯಲ್ಲಿದ್ದಾರೆ) ಏಕಪಾತ್ರಾಭಿನಯ, ಜಾನಪದ ತಂಡಗಳಾದ ಸೋಬಾನೆ-ಚೌಡಿಕಿ, ಗೀಗಿ, ಲಾವಣಿ ಮುಂತಾದ ಶೈಲಿಗಳ ಅನುಕರಣೆಯನ್ನು ಬಾಂದೇಕರ ಮಾಡುತ್ತಾರೆ.

ವಿವಿಧ ರಾಜ್ಯಗಳ ಜಾನಪದ ಶೈಲಿಗಳಾದ ಭಾಂಗಡಾ-ದಾಂಡಿಯಾ, ಕವ್ವಾಲಿ, ಕೊಹಳಿ ಗೀತೆಗಳ ಅನುಕರಣೆ, ಕನ್ನಡ ಸಿನೇಮಾ 60 ವರ್ಷಗಳಿಂದ ನಡೆದು ಬಂದ ವಿವಿಧ ಹಾಸ್ಯ ನೃತ್ಯ ಶೈಲಿಗಳು, ಏಡ್ಸ್, ಪರಿಸರ, ಸಾಕ್ಷರತೆ, ವರದಕ್ಷಿಣೆ, ಜನಸಂಖ್ಯಾ ಸ್ಫೋಟ ಕುರಿತು ವಿವಿಧ ನವ್ಯ ಗೀತೆಗಳು ಅಲ್ಲದೇ ವಿವಿಧ ಹಾಸ್ಯಭರಿತ ಸನ್ನಿವೇಶಗಳಿಂದ ಕೂಡಿದ ತಡೆರಹಿತ 100 ನಿಮಿಷಗಳವರೆಗೆ ಪ್ರೇಕ್ಷಕರನ್ನು ನಗೆಲೋಕದಲ್ಲಿ ತೇಲಿಸುತ್ತಾರೆ.

ಬಿ.ಎ. ಪದವಿಧರರಾಗಿದ್ದೂ ಇವರು ಸುಮಾರು 30 ವರ್ಷಗಳಿಂದ ರಂಗಕಲಾಸೇವೆ ಮಾಡುತ್ತ ಬಂದಿರುವ ಅಪರೂಪದ ಹಿರಿಯ ಅನುಭವಿ ಕಲಾವಿದ. ಈವರೆಗೆ ಸುಮಾರು 1200 ಯಶಸ್ವಿ ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಅಲ್ಲದೆ ನೆರೆಯ ರಾಜ್ಯಗಳಾದ ಗೋವಾ, ಮಹಾರಾಷ್ಟ್ರದಲ್ಲಿ ನೀಡಿದ್ದಾರೆ.

ಹಲವಾರು ಬಹುಮಾನ ಮತ್ತು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿರುವ ಇವರಿಗೆ ಇತ್ತೀಚೆಗೆ ಗದಗಿನ-ಪುಟ್ಟರಾಜ ಗವಾಯಿಗಳವರ ವೀರೇಶ್ವರ ಪುಣ್ಯಾಶ್ರಮದಲ್ಲಿ ಮೂಗು-ಬಾಯಿಂದ ಹೊರಡಿಸಿದ 26 ವಾದ್ಯಗಳ ಅನುಕರಣೀಯ ಆಶ್ಚರ್ಯಕರ ಕಲಾಪ್ರದರ್ಶನಕ್ಕಾಗಿ ಪಂ.ಪುಟ್ಟರಾಜ ಗವಾಯಿಗಳು 'ಸ್ವರಗಳ ಸರದಾರ' ಎಂಬ ಬಿರುದು ನೀಡಿ ಸನ್ಮಾನಿಸಿದ್ದಾರೆ. ಇವರ ಕಲಾಸೇವೆ ಗುರುತಿಸಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯವರು ಇವರನ್ನು ಸನ್ಮಾನಿಸಿದ್ದಾರೆ.

> ಏಕಪಾತ್ರಾಭಿನಯನಕ್ಕಾಗಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದರೆ, ರಾಷ್ಟ್ರಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದು ಕಾರವಾರಕ್ಕೆ ಕೀರ್ತಿ ತಂದಿದ್ದಾರೆ.

ದೂರದರ್ಶನ (ಗೋವಾ, ಬೆಂಗಳೂರು) ಕೇಂದ್ರಗಳಿಂದ ಇವರ ಹಲವಾರು ಹಾಸ್ಯಭರಿತ ಕಾರ್ಯಕ್ರಮಗಳು ಪ್ರಸಾರವಾಗಿವೆಯಲ್ಲದೆ ಆಕಾಶವಾಣಿ (ಕಾರವಾರ, ಧಾರವಾಡ, ಮಂಗಳೂರು) ಕೇಂದ್ರಗಳಿಂದ ಸಂದರ್ಶನದ ಜೊತೆಗೆ ವಿವಿಧ ಕಾರ್ಯಕ್ರಮಗಳು ಭಿತ್ತರಗೊಂಡಿವೆ.

ಕಾರವಾರದಲ್ಲಿ ಜರುಗುವ 'ಕರಾವಳಿ ಉತ್ಸವ'ದಲ್ಲಿ ಸತತ 5 ವರ್ಷ ಕಾರ್ಯಕ್ರಮ ನೀಡಿದ್ದಾರೆ. ವಾರ್ತಾಪ್ರಚಾರ-ಆರೋಗ್ಯ ಕುಟುಂಬ ಇಲಾಖೆಯೂ ಸೇರಿದಂತೆ ಸರಕಾರದ ವಿವಿಧ ಯೋಜನೆ ಕುರಿತು ಸುಮಾರು 600ಕ್ಕೂ ಮೀರಿ ಯಶಸ್ವಿ ಕಾರ್ಯಕ್ರಮ ನೀಡಿದ್ದಾರೆ. ಬೆಳಗಾವಿ ವಿಭಾಗ ಮಟ್ಟದ ವಾರ್ತಾಪ್ರಚಾರ ಇಲಾಖೆಯ ಜನಜಾಗೃತಿ ಕುರಿತ ಆಂದೋಲನದಲ್ಲಿ ಪಾಲ್ಗೊಂಡು 30 ಹಳ್ಳಿಗಳಲ್ಲಿ ಯಶಸ್ವಿ ಕಾರ್ಯಕ್ರಮ ನೀಡಿದ್ದಾರೆ.

ವಸಂತ ಬಾಂದೇಕರ ಏಕಪಾತ್ರಾಭಿನಯನಕ್ಕಾಗಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದರೆ, ರಾಷ್ಟ್ರಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದು ಕಾರವಾರಕ್ಕೆ ಕೀರ್ತಿ ತಂದಿದ್ದಾರೆ.

ಬಹುಮುಖ ಪ್ರತಿಭೆ ಹೊಂದಿರುವ ಇವರು ಹಾಸ್ಯ ಕ್ಷೇತ್ರದಲ್ಲಿ ಹೆಚ್ಚಿನದನ್ನು ಸಾಧಿಸುವ ಛಲ ಹೊಂದಿದ್ದಾರೆ. ಹಾಸ್ಯದ ಮೂಲಕ ಮನರಂಜನೆ ನೀಡುವುದಲ್ಲದೇ ಸಮಕಾಲೀನ ಸಮಸ್ಯೆಗಳ ಬಗೆಗೆ ತಿಳುವಳಿಕೆ ನೀಡಬೇಕು ಎಂಬುದು ಇವರ ಹಂಬಲ. ಇಂಥ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡ ವಸಂತ ಬಾಂದೇಕರ ಅವರು ನಮ್ಮ ಯುವಪೀಳಿಗೆಗೆ ಆದರ್ಶವಾಗಬಲ್ಲರು. ■

ಕ್ವಿಜ್-23ರ ಬಹುಮಾನ ವಿಜೇತರು

ಗಿರೀಶ ಬಾಳಪ್ಪ ಅಂಗಡಿ
ಮುಪ್ಪೆ ಕಲ್ಲೋಳಿ
ತಾ. ಗೋಕಾಕ,
ಬೆಳಗಾವಿ ಜಿಲ್ಲೆ 591 224

ಶಿರಿನ್ ತಾಜ ಇಂಗಳಗಿ
D/o ಹೆಚ್.ಎಫ್.ಇಂಗಳಗಿ
ಕೃಷಿ ಪಾಠಶಾಲೆ, ದೇವಿ ಹೊಸೂರ
ತಾ:ಜಿಲ್ಲೆ: ಹಾವೇರಿ 581 152

ವಿಜಯಲಕ್ಷ್ಮಿ ಬಿ. ರಾಜು
ನಂ.368, 16ನೇ ಕ್ರಾಸ್,
1ನೇ ಮುಖ್ಯರಸ್ತೆ,
ದೇವರಾಜ ಅರಸು ನಗರ,
ಬೆಂಗಳೂರು - 560 026.

ಸಂತೋಷ ಕುಮಾರ್
D/o ಎಸ್.ಎನ್.ಪ್ರೇಮಲತ
ಆಯಿಲ್ ಮಿಲ್ ರೋಡ್,
ಭಜನೆ ಮಂದಿರದ ಪಕ್ಕ,
ತುಮಕೂರು - 572 102

ಕೆ.ಆರ್.ಜ್ಯೋತಿ
D/o ವಿ.ರಾಜು (ಸಿ.ಎಸ್. ಐಜಿಪಿ)
ಕ.ವಿ.ನಿ.ನಿ. ಜ್ಯೋತಿನಗರ
ಗೇರುಸೊಪ್ಪ
ಹೊನ್ನಾವರ
ತಾ:ಜಿ: ಉತ್ತರ ಕನ್ನಡ 581 334

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 23ರ ಸರಿಯುತ್ತರ

1. ಉಮಾ ಬೆಳ್ತಂಗಡಿ
2. ಜಯಲಲಿತಾ
3. ಬೆಂಗಳೂರು ನಗರಕ್ಕೆ
4. ನಾಲ್ಕು (ಎನ್.ಹೆಚ್-4)
5. ಮಹಮದ್ ಅಜರುದ್ದಿನ್

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್‌ನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 -6 - 1999**

ವಿಜೇತರಿಗೆ 500 ರೂ. ಪುಸ್ತಕ ಬಹುಮಾನ

ಕ್ವಿಜ್ - 24

ಪ್ರವೇಶ ಪತ್ರ

ಹೆಸರು...

ವಿಳಾಸ...

....

....

ಪಿನ್ ಕೋಡ್........................ ದೂರವಾಣಿ........................

1. 'ಬಿಸಿಲ ಬದುಕು' ಮೇ 1999ರ ಸಂಚಿಕೆಯಲ್ಲಿ ಪ್ರಕಟವಾದ 'ಉಣ್ಣದ ಮಗುವಿಗೆ ಔಷಧಿ ಬೇಕೆ?' ಲೇಖನ ಬರೆದವರು ಯಾರು?

   ....

2. ವಿದೇಶದಲ್ಲಿ ಜನಿಸಿದವರು ಪ್ರಧಾನಿಯಾಗಬಾರದು ಎಂದು ವಾದ ಮಂಡಿಸಿ ಕಾಂಗ್ರೆಸ್‌ನಿಂದ ಉಚ್ಚಾಟನೆಯಾದ ಮಹಾರಾಷ್ಟ್ರದ ರಾಜಕಾರಣಿ ಯಾರು?

   ....

3. ಮಧುಗಿರಿ ತಾಲೂಕು ಯಾವ ಜಿಲ್ಲೆಗೆ ಸೇರುತ್ತದೆ?

   ....

4. ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಪಂದ್ಯ ಎಂದು ಇರುತ್ತದೆ?

   ....

5. ವಿದ್ಯಾರ್ಥಿ-ನಿರುದ್ಯೋಗಿಗಳಿಗಾಗಿ 'ಬದುಕು' ಮಾಸಪತ್ರಿಕೆ ಬಳಗ ಹೊರತರಲಿರುವ ವಾರಪತ್ರಿಕೆ ಹೆಸರೇನು?

   ....

ಪ್ರವೇಶ ಪತ್ರವನ್ನು 15.6.99ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, ಬಿಸಿಲ ಬದುಕು, ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.



ಘೋರ್ಪಡೆಯವರ ಕ್ಯಾಮರಾ ಕಣ್ಣಿನಲ್ಲಿ

ವನ್ಯ ಮೃಗಗಳು

■ ಮಂಜುನಾಥ ನಾಯ್ಕ



ಉಳಿದ ರಾಜ ಮನೆತನದವರು ಬಂದೂಕಿನೊಂದಿಗೆ ವನ್ಯಮೃಗಗಳ ಬೇಟೆಗೆ ಕಾಡಿಗೆ ಹೋಗುತ್ತಾರೆ. ಸಂಡೂರು ರಾಜ ಮನೆತನದ ಎಂ.ವೈ. ಘೋರ್ಪಡೆಯವರು ವನ್ಯಮೃಗ ಬೇಟೆಗೆ ಬಂದೂಕಿನೊಂದಿಗೆ ಹೋಗ್ಲೋಲ್ಲ; ಅವರು ತಮ್ಮ ಮೂರನೇ ಕಣ್ಣಿನೊಂದಿಗೆ ಹೋಗುತ್ತಾರೆ.

ಮೂರನೇ ಕಣ್ಣಿನ ಸಹಾಯದಿಂದ ಅವರು ಹುಲಿ, ಸಿಂಹ, ಆನೆಗಳ ಹಿಂಡು, ಜಿಂಕೆ, ಕಡವೆ, ಚಿರತೆ, ಮಂಗ, ಮುಳ್ಳು ಹಂದಿ ಮೊದಲಾದ ಕ್ರೂರ ಹಾಗೂ ಸಾಧು ಪ್ರಾಣಿಗಳನ್ನು ಯಶಸ್ವಿಯಾಗಿ ಬೇಟೆಯಾಡಿ ಸೆರೆ ಹಿಡಿಯುತ್ತಾರೆ. ಅವುಗಳ ರುಚಿಯನ್ನು ಜಗತ್ತಿನ ಲಕ್ಷಾಂತರ ಮೃಗಪ್ರೇಮಿ ಕಣ್ಣುಗಳಿಗೆ ಉಣಬಡಿಸುತ್ತಾರೆ.

ಮೂರನೇ ಕಣ್ಣು ಸೆರೆಹಿಡಿದ ನೂರಾರು ವನ್ಯ ಪ್ರಾಣಿಗಳು ಆಧುನಿಕ ಕಾಡಾದ ಮಾನವರ ನಡುವೆ ಇಂದು ಸ್ವಚ್ಛಂದವಾಗಿ ವಿಹರಿಸುತ್ತಿವೆ.

ಸಂಡೂರಿನ ಈ ಯುವರಾಜ ರಾಜಮನೆತನದ ಸಂಪ್ರದಾಯದಿಂದ ದೂರವಾಗಿ, ರಾಜನ ಪಾಳೆಗಾರಿಕೆ ಮತ್ತು ದರ್ಪಗಳಿಂದ ಮುಕ್ತರಾಗಿ ಜನಸಾಮಾನ್ಯರೊಂದಿಗೆ ಸಾಮಾನ್ಯನಾಗಿ, ಉದ್ಯಮಿಯಾಗಿ, ರಾಜಕಾರಣಿಯಾಗಿ ಬಿಡುವಿಲ್ಲದ ಚಟುವಟಿಕೆಗಳ ನಡುವೆಯೂ ತಮ್ಮ ಹವ್ಯಾಸವಾದ ವನ್ಯ ಮೃಗ ಛಾಯಾಗ್ರಹಣದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ್ದಾರೆ.

ಘೋರ್ಪಡೆಯವರು ವರ್ಷದಲ್ಲಿ ಎರಡು ಬಾರಿ ಅರಣ್ಯಗಳಲ್ಲಿ ಹತ್ತು ಹದಿನೈದು ದಿನಗಳ ತನಕ ಸುತ್ತಾಡಿ ವನ್ಯಪ್ರಾಣಿಗಳ ಅಪರೂಪದ ಮತ್ತು ದಿನನಿತ್ಯದ ವರ್ತನೆಗಳನ್ನು ಸೆರೆ ಹಿಡಿಯುತ್ತಾರೆ. ಅವುಗಳಲ್ಲಿ ಗುರುಗುಟ್ಟುವ ಹುಲಿ, ತನ್ನ ಮರಿಯನ್ನು ಮುದ್ದಿಸುವ ಚಿರತೆ. ಮಲಗಿರುವ ಸಿಂಹ, ನರ್ತಿಸುವ ನವಿಲು, ತಿವಿದು ಕೊಳ್ಳುತ್ತಿರುವ ಆನೆಗಳು, ಸಂಬಾರ ಪ್ರಾಣಿಗಳು ಹೀಗೆ ಅಪರೂಪದ ಚಿತ್ರಗಳೊಂದಿಗೆ ಹಿಂದಿರುಗುತ್ತಾರೆ.

ಒಮ್ಮೆ ಬಂಡಿಪುರ ಅರಣ್ಯದಲ್ಲಿ ಸುತ್ತಾಡುವಾಗ ಜೀಪ್ ಕೆಟ್ಟು ನಿಂತಿತು. ಆಗ ಆನೆಯೊಂದು ಜೀಪಿನ ಹತ್ತಿರ ಬರಲು ಹೆಜ್ಜೆ ಹಾಕುತ್ತಿತ್ತು. ಆ ಸಮಯದಲ್ಲಿ ಮಳೆ ಜಿನುಗುತ್ತಿತ್ತು. ಮಳೆಯಲ್ಲಿ ನೆನೆಯುತ್ತ ಬರುತ್ತಿರುವ ಆನೆಯನ್ನು ಕ್ಯಾಮರಾದಲ್ಲಿ ಸೆರೆ ಹಿಡಿದರು. ಈ ಅಪರೂಪದ ಛಾಯಾ ಚಿತ್ರಕ್ಕೆ ಸಿಡ್ನಿಯ ಅಂತಾರಾಷ್ಟ್ರೀಯ ಸೆಲೂನ ಆಫ್ ಫೋಟೋಗ್ರಫಿಯವರು 1977ರಲ್ಲಿ ಆಸ್ಟ್ರೇಲಿಯನ್ ಮ್ಯೂಜಿಯಂ ಪ್ರಶಸ್ತಿ ನೀಡಿದ್ದಾರೆ. ಫಿನ್‌ಲೆಂಡಿನ 1988ರ ಅಂತಾರಾಷ್ಟ್ರೀಯ ಪ್ರಾಕೃತಿಕ ಛಾಯಾ ಚಿತ್ರಗಳ ಪ್ರದರ್ಶನದಲ್ಲಿ ಎಫ್‌ಐಎಪಿ ಚಿನ್ನದ ಪದಕವನ್ನು ಗಳಿಸಿತು ಎಂದು ತಾವು ಛಾಯಾಚಿತ್ರ ತೆಗೆದ ಸಂದರ್ಭ ಮತ್ತು ಅದು ಗಳಿಸಿದ ಪ್ರಶಸ್ತಿಗಳ ಬಗ್ಗೆ ಘೋರ್ಪಡೆ ವಿವರಿಸುತ್ತಾರೆ.

ಛಾಯಾಗ್ರಾಹಕನ ರೋಮಾಂಚಕ ಅನುಭವ

ವನ್ಯ ಮೃಗಗಳ ಛಾಯಾಚಿತ್ರಗಳನ್ನು ಸೆರೆ ಹಿಡಿಯುವಾಗ ಘೋರ್ಪಡೆಯವರು ಅನೇಕ ರೋಮಾಂಚಕಾರಿ ಅನುಭವಗಳನ್ನು ಪಡೆದಿದ್ದಾರೆ. ಹುಲಿ, ಸಿಂಹ, ಆನೆ, ಚಿರತೆಗಳ ಚಿತ್ರಗಳನ್ನು ಸೆರೆ ಹಿಡಿಯುವ ಸಂದರ್ಭಗಳಲ್ಲಿ ಪ್ರಾಣಾಪಾಯ ಒದಗುವ ಸನ್ನಿವೇಶಗಳು ಎದುರಾಗಿದ್ದವು. ಆದರೂ ಇಂತಹ ಸಂದರ್ಭಗಳಲ್ಲಿ ಅವರು ಧೈರ್ಯಗುಂದದೆ ಏಕಾಗ್ರತೆಯಿಂದ ಚಿತ್ರಗಳನ್ನು ಸೆರೆ ಹಿಡಿಯುತ್ತಿದ್ದರು.

ಕೆಲವೊಮ್ಮೆ ಅಪರೂಪದ ಚಿತ್ರಗಳನ್ನು ಪಡೆಯಬೇಕಾದರೆ ಸಮಯದ ಪರಿವೆಯಿಲ್ಲದೆ ವಾರ, ತಿಂಗಳುಗಳ ತನಕ ತಾಳ್ಮೆಗೆಡದೆ

ಕಾಯಬೇಕು. ಆ ಸಮಯ ಮಳೆ, ಬಿಸಿಲು, ಚಳಿ, ಹಸಿವು ಯಾವುದು ಅರಿವಿಗೆ ಬರುತ್ತಿರಲಿಲ್ಲ. ಅಪರೂಪದ ಚಿತ್ರಕ್ಕಾಗಿ ಜೀವವನ್ನು ಒತ್ತೆಯಿಡಬೇಕಾಗುತ್ತದೆ. ಸಾವಿನ ಸಮೀಪ ನುಸುಳಬೇಕಾಗುತ್ತದೆ. ಹೆದರಿದವನಿಗೆ ಉತ್ತಮ ಚಿತ್ರಗಳು ದೊರಕಲಾರವು.

ಬಂಧ್ವಾಘರ ಅರಣ್ಯದಲ್ಲಿ ಘೋರ್ಪಡೆಯವರು ವನ್ಯ ಮೃಗಗಳ ಛಾಯಾಚಿತ್ರ ಪಡೆಯಲು ಸಾಕಿದ ಆನೆಯ ಮೇಲೆ ಕುಳಿತುಕೊಂಡು ಹೋಗುತ್ತಿದ್ದರು. ಆ ಸಮಯದಲ್ಲಿ ಭಯಂಕರ ಹುಲಿಯೊಂದು ಆನೆಯ ಮೇಲೆರಗಲು ಹವಣಿಸುತ್ತಾ ಸಮೀಪ ಬರತೊಡಗಿತು. ಸನ್ನಿವೇಶವನ್ನು ಅರಿತ ಮಾವುತ ಆನೆಯನ್ನು ಹುಲಿಯ ಎದುರಾಗಿ ನಿಲ್ಲಿಸಿದ. ಹೆದರಿದ ಹುಲಿ ಓಡಿ ಹೋಯಿತು. ಸ್ವಲ್ಪ ಸಮಯದ ನಂತರ ಹುಲಿ ಪುನಃ ಅದೇ ಸ್ಥಳಕ್ಕೆ ಬಂದಿತು. ನಿಂತ ಆನೆಯನ್ನು ನೋಡಿ ತನ್ನ ಪಾಡಿಗೆ ತಾನು ಬೇರೆ ಕಡೆ ಹೆಜ್ಜೆ ಹಾಕಿತು. ಇದು ರೋಮಗಳನ್ನು ನಿಮಿರಿಸುವಂತಹ ಅನುಭವ. ಈ ಅಪಾಯಕಾರಿ ಸನ್ನಿವೇಶದಲ್ಲೂ ಅವರು ಆಕ್ರಮಣಕ್ಕೆ ಸಜ್ಜಾದ ಹುಲಿಯನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯಲು ಮರೆಯಲಿಲ್ಲ.

ಸಾಸನ ಗಿರಿಧಾಮದ ಅರಣ್ಯಕ್ಕೆ ಹೋದ ಸಂದರ್ಭದಲ್ಲಿ ಎರಡು ಹೆಣ್ಣು ಸಿಂಹಗಳು ಮಲಗಿದ್ದವು. ಅವುಗಳಲ್ಲಿ ಒಂದು ಸಿಂಹಕ್ಕೆ ಐದು ಮರಿಗಳು ಇನ್ನೊಂದಕ್ಕೆ ನಾಲ್ಕು ಮರಿಗಳಿದ್ದವು. ಅವು ತಾಯಿಯ ಮೈಹತ್ತಿ ಆಡುತ್ತಿದ್ದವು. ಆ ಸಮಯದಲ್ಲಿ ಛಾಯಾಗ್ರಾಹಕನ ಅನಿರೀಕ್ಷಿತ ಬೂಟಿನ ಸಪ್ಪಳದಿಂದ ಬೆದರಿದ ಮರಿಗಳು ತಾಯಿ ಸಿಂಹವನ್ನು ಎಬ್ಬಿಸಿದವು. ಕೋಪಗೊಂಡ ತಾಯಿ ಸಿಂಹವು ಘರ್ಜಿಸುತ್ತಾ ಛಾಯಾಗ್ರಾಹಕನ ಸಮೀಪ ಬರತೊಡಗಿತು. ಸುಮ್ಮನೆ ನಿಂತ ಘೋರ್ಪಡೆಯವರನ್ನು ನೋಡಿ ಅಪಾಯ ಇಲ್ಲದ್ದು ಮನಗಂಡು ಹಿಂತಿರುಗಿ ಮರಿಯನ್ನು ಸೇರಿ ಕೊಂಡಿತು. ಆ ಸಮಯದಲ್ಲಿ ತಾಯಿಯೊಂದಿಗೆ ಇರುವ ಮರಿ ಸಿಂಹಗಳ ಸುಂದರವಾದ ಅಪರೂಪದ ಚಿತ್ರವನ್ನು ಸೆರೆ ಹಿಡಿದರು.

ಘೋರ್ಪಡೆಯವರು 1977ರಲ್ಲಿ ದೇವರಾಜ ಅರಸು ಮಂತ್ರಿ ಮಂಡಲದಲ್ಲಿ ಹಣಕಾಸು ಮಂತ್ರಿಗಳಾಗಿದ್ದಾಗ ತಮ್ಮ ಬಿಡುವಿನ ಸಮಯವನ್ನು ಅರಣ್ಯಗಳಲ್ಲಿ ಕಳೆಯುತ್ತಿದ್ದರು. ತಮ್ಮ ಬಜೆಟ್ ವರದಿಯನ್ನು ಅರಣ್ಯ ಅತಿಥಿ ಗೃಹಗಳಂತಹ ಏಕಾಂತ ಪ್ರದೇಶಗಳಲ್ಲಿ ಉಳಿದುಕೊಂಡು ತಯಾರಿಸುತ್ತಿದ್ದರು. ಒಮ್ಮೆ ಬಿಡುವಿನ ಸಮಯದಲ್ಲಿ ಬಂಡೀಪುರ ಅಭಯಾರಣ್ಯಕ್ಕೆ ಹೋದಾಗ, ಅಲ್ಲಿನ ಕೊಳಕಮಲಕಟ್ಟೆಯ ಕೆರೆಯ ಹತ್ತಿರ ಪ್ರಾಣಿಗಳು ನೀರು ಕುಡಿಯಲು ಬರಬಹುದೆಂಬ ಕುತೂಹಲದಿಂದ ಹೋದರು. ಆ ಸಮಯದಲ್ಲಿ ಆನೆಯ ಹಿಂಡು ನೀರು ಕುಡಿಯುತ್ತಾ ಇತ್ತು. ಇವರು ಆ ದೃಶ್ಯವನ್ನು ಸೆರೆಹಿಡಿಯುವ ಸಿದ್ಧತೆಯಲ್ಲಿದ್ದಾಗಲೇ ಮದವೇರಿದ ಆನೆಯೊಂದು ಕೆರೆಯ ಸುತ್ತ ಅಪಾಯಕಾರಿಯಾಗಿ ಓಡತೊಡಗಿತ್ತು. ಗಾಬರಿಗೊಂಡು ಅರಣ್ಯ ಇಲಾಖೆ ಸಿಬ್ಬಂದಿ ಘೋರ್ಪಡೆಯವರಿಗೆ ಅಪಾಯದ ಸೂಚನೆ ನೀಡಿ ಜೀಪಿನ ಹತ್ತಿರ ಬರುವಂತೆ ವಿನಂತಿಸಿಕೊಂಡರು. ಆದರೆ ಅಪಾಯವನ್ನು ಲಕ್ಷಿಸದೆ ಅವರು ಆನೆ ಹಿಂಡುಗಳ ವಿವಿಧ ಭಂಗಿಗಳನ್ನು ಸೆರೆ ಹಿಡಿಯುವುದರಲ್ಲಿ ನಿರತರಾಗಿದ್ದರು. ಕೆಲ ಸಮಯದ ನಂತರ ಆನೆ ಹಿಂಡು ಅಲ್ಲಿಂದ ಹೆಜ್ಜೆ ಕಿತ್ತವು. ಅವುಗಳ ಸಂಗಡ ಮದವೇರಿದ ಆನೆಯು ಹೋಯಿತು. ಸಮಾಧಾನದ ನಿಟ್ಟುಸಿರುಬಿಟ್ಟ ಅರಣ್ಯಾಧಿಕಾರಿಗಳು, ಘೋರ್ಪಡೆಯವರ ಹತ್ತಿರ ಬಂದು ''ಸರ್, ಅಪಾಯಕಾರಿ ಮದವೇರಿದ ಕಾಡಾನೆ ನಿಮ್ಮ ಸಮೀಪಕ್ಕೆ ಬಂದರೂ ಅದರ ಪರಿವೆಯೆ



ಆನೆಯ ಹಿಂಡು ನೀರು ಕುಡಿಯುವ ದೃಶ್ಯವನ್ನು ಸೆರೆ ಹಿಡಿಯುವ ಸಿದ್ಧತೆಯಲ್ಲಿದ್ದಾಗಲೇ ಮದವೇರಿದ ಆನೆಯೊಂದು ಕೆರೆಯ ಸುತ್ತ ಅಪಾಯಕಾರಿಯಾಗಿ ಓಡತೊಡಗಿತ್ತು. ಗಾಬರಿಗೊಂಡ ಅರಣ್ಯ ಇಲಾಖೆ ಸಿಬ್ಬಂದಿ ಘೋರ್ಪಡೆಯವರಿಗೆ ಅಪಾಯದ ಸೂಚನೆ ನೀಡಿ ಜೀಪಿನ ಹತ್ತಿರ ಬರುವಂತೆ ವಿನಂತಿಸಿ ಕೊಂಡರು. ಆದರೆ ಅಪಾಯವನ್ನು ಲಕ್ಷಿಸದೆ ಅವರು ಆನೆ ಹಿಂಡುಗಳ ವಿವಿಧ ಭಂಗಿಗಳನ್ನು ಸೆರೆ ಹಿಡಿಯುವುದರಲ್ಲಿ ನಿರತರಾಗಿದ್ದರು.





ಘೋರ್ಪಡೆಯವರು ಅಂತಾರಾಷ್ಟ್ರೀಯ ಫೆಡರೇಶನ್ ಡಿ.ಲಾರಟ್ ಫೋಟೋಗ್ರಾಫಿಕ್ಯೂಯಿಂದ 'ಮಾಸ್ಟರ್ ಫೋಟೋಗ್ರಾಫರ್' ಎಂಬ ಬಿರುದು ಪಡೆದ ಪ್ರಥಮ ಭಾರತೀಯ.



ಇಲ್ಲದೆ ಛಾಯಾಚಿತ್ರ ಪಡೆಯುವುದರಲ್ಲಿ ನಿರತರಾಗಿದ್ದಿರಿ. ನಿಮ್ಮ ರಕ್ಷಣೆಯ ಜವಾಬ್ದಾರಿಯಲ್ಲಿದ್ದ ನಮಗೆ ತುಂಬಾ ಹೆದರಿಕೆಯಾಗಿತ್ತು'' ಎಂದರು. ಆಗ ಘೋರ್ಪಡೆಯವರು ''ಅದರಿಂದ ಏನಾಯಿತು? ಅದು ಸಾಮಾನ್ಯ ವಿಷಯ'' ಎಂದು ತಮ್ಮ ಪ್ರತಿಕ್ರಿಯೆ ನೀಡಿದರು. ಅರಣ್ಯಾಧಿಕಾರಿಗಳಿಗೆ ಮಾತೇ ಹೊರಡಲಿಲ್ಲ.

ಈ ರೀತಿ ಘೋರ್ಪಡೆಯವರ ಒಂದೊಂದು ಛಾಯಾಚಿತ್ರಗಳ ಹಿಂದೆ ಅದನ್ನು ಪಡೆಯಲು ಪಟ್ಟ ಕಷ್ಟಗಳ ಕತೆಯೇ ತುಂಬಿಕೊಂಡಿದೆ. ಅದನ್ನು ವಿವರಿಸಿದರೆ ದೊಡ್ಡ ಗ್ರಂಥ ಬರೆಯುವಷ್ಟು ಸರಕುಗಳು ಸಿಗುತ್ತವೆ. ಅವರ ಚಿತ್ರಗಳನ್ನು ಕೂಲಂಕಷವಾಗಿ ವೀಕ್ಷಿಸಿದರೆ ಅವು ತಮ್ಮ ಕತೆಯನ್ನು ಹೇಳುತ್ತವೆ.

ಅದೇ ರೀತಿ ರಣತಂಬೂರಿನ ಅರಣ್ಯದಲ್ಲಿ ಚಳಿಗಾಲದಲ್ಲಿ ಸೆರೆ ಹಿಡಿದ ಹುಲಿಯ ಚಿತ್ರ, ಕೇರಳದ ಪೆರಿಯಾರ ಅರಣ್ಯದಲ್ಲಿ ಬೇಸಿಗೆಯಲ್ಲಿ ಸೆರೆ ಹಿಡಿದ ಆನೆಯ ಚಿತ್ರ, ರಾಜಸ್ಥಾನದ ತಾಲಚಾಪುರ ಅರಣ್ಯದಲ್ಲಿ ಕ್ಯಾಮರಾದಲ್ಲಿ ಬಂಧಿಯಾದ ಕಡವೆ, ನಾಗರ ಹೊಳೆ ಅರಣ್ಯದಲ್ಲಿ ಕೆರೆಹಾಯುತ್ತ ಇರುವ ಆನೆಯ ಚಿತ್ರ ಮತ್ತು ಭರತ ಪುರ ಅರಣ್ಯದಲ್ಲಿ ಸೆರೆ ಹಿಡಿದ ಪಕ್ಷಿಯ ಚಿತ್ರಗಳು ತಮ್ಮ ಛಾಯಾಚಿತ್ರ ಸೃಷ್ಟಿಯ ಹಿಂದಿನ ಕತೆಯನ್ನು ಹೇಳುತ್ತವೆ.

ಪ್ರಶಸ್ತಿ, ಪುರಸ್ಕಾರಗಳು

ಇವರ ವನ್ಯ ಪ್ರಾಣಿಗಳ ಛಾಯಾ ಚಿತ್ರಕ್ಕೆ ಅನೇಕ ರಾಷ್ಟ್ರೀಯ ಅಂತಾರಾಷ್ಟ್ರೀಯ ಪ್ರಶಸ್ತಿಗಳು ದೊರೆತಿವೆ. ಅವುಗಳಲ್ಲಿ ಪ್ರತಿಷ್ಠಿತ ಇಂಟರ್‌ನ್ಯಾಷನಲ್ ಅವಾರ್ಡ್ ಆಫ್ ಮಾಸ್ಟರ್ ಫೋಟೋಗ್ರಫಿಕ್ ಪ್ರಶಸ್ತಿ, ಗ್ರೇಟ್ ಬ್ರಿಟನ್ ರಾಯಲ್ ಫೋಟೋಗ್ರಫಿಕ್ ಸೊಸೈಟಿ ಪ್ರಶಸ್ತಿ, ಪ್ರೀಮಿಯರ್ ಸಮೂಹದ ಅಂತಾರಾಷ್ಟ್ರೀಯ ಛಾಯಾಗ್ರಹಣ ಪ್ರಶಸ್ತಿ, ಸಿಡ್ನಿ ಹಾಗೂ ತೈವಾನಿನ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಪ್ರಮುಖವಾದವು.

ಫ್ರಾನ್ಸ್‌ನ ಆರ್ಥರ್ಸ್ ಅಂತಾರಾಷ್ಟ್ರೀಯ ಛಾಯಾ ಚಿತ್ರ ಪ್ರದರ್ಶನ ಸಂಸ್ಥೆ ಮತ್ತು ಆಸ್ಟ್ರೇಲಿಯಾದ ಫೋಟೋಗ್ರಫಿಕ್ ಸೊಸೈಟಿಯವರು ಘೋರ್ಪಡೆಯವರ ವನ್ಯ ಮೃಗಗಳ ಛಾಯಾಚಿತ್ರಗಳನ್ನು ತಮ್ಮ ಸಂಸ್ಥೆಯಲ್ಲಿ ಪ್ರದರ್ಶನಕ್ಕಾಗಿ ಇರಿಸಿಕೊಂಡಿದ್ದಾರೆ. ಸಿಡ್ನಿಯ ಅಂತಾರಾಷ್ಟ್ರೀಯ ಸಮೂಹದ ನಾಲ್ಕು ಛಾಯಾಚಿತ್ರಗಳ ಪ್ರಶಸ್ತಿಗಳಲ್ಲಿ ಮೂರನ್ನು ಪಡೆದಿರುವುದು ಜಾಗತಿಕವಾಗಿ ಈವರೆಗೆ ಯಾರೂ ಮುರಿಯದ ದಾಖಲೆಯಾಗಿದೆ.

ಇವರು ಕಪ್ಪು ಬಿಳುಪಿನ ವನ್ಯ ಮೃಗ ಛಾಯಾಚಿತ್ರಗಳ ಜಾಗತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ನಾಲ್ಕು ಬಾರಿ ಜಾಗತಿಕ ಪದಕ ಪಡೆದಿದ್ದಾರೆ. ಈ ಸ್ಪರ್ಧೆಯಲ್ಲಿ 21 ರಾಷ್ಟ್ರಗಳ ಛಾಯಾಚಿತ್ರಗ್ರಾಹಕರು ಪಾಲ್ಗೊಂಡಿದ್ದರು. ಘೋರ್ಪಡೆಯವರು ಅಂತಾರಾಷ್ಟ್ರೀಯ ಫೆಡರೇಶನ್ ಡಿ.ಲಾರಟ್ ಫೋಟೋಗ್ರಾಫಿಕ್ಯೂಯಿಂದ 'ಮಾಸ್ಟರ್ ಫೋಟೋಗ್ರಾಫರ್' ಎಂಬ ಬಿರುದು ಪಡೆದ ಪ್ರಥಮ ಭಾರತೀಯ. ಕರ್ನಾಟಕ ಸರಕಾರ 'ರಾಜ್ಯೋತ್ಸವ' ಪ್ರಶಸ್ತಿ ನೀಡಿ ಗೌರವಿಸಿದೆ.

ಘೋರ್ಪಡೆಯವರು ತಮ್ಮ ವನ್ಯಮೃಗ ಛಾಯಾಗ್ರಹಣ ಹವ್ಯಾಸದಿಂದ ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದು ಭಾರತದ ಹೆಸರನ್ನು ವನ್ಯಮೃಗ ಛಾಯಾಗ್ರಹಣದಲ್ಲಿ ಅಂತಾರಾಷ್ಟ್ರೀಯವಾಗಿ ಗುರುತಿಸುವಂತೆ ಮಾಡಿದ್ದಾರೆ. ಅವರ ಸಾಧನೆ ಛಾಯಾಗ್ರಹಣ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ■

ಟೊಮೊಟೊ ಫ್ರಾಯ್

ಬೇಕಾದ ಸಾಮಗ್ರಿಗಳು :

ಅರ್ಧ ಕೆಜಿ ಟೊಮೊಟೊ, 2 ಈರುಳ್ಳಿ, 7-8 ಹಸಿಮೆಣಸಿನಕಾಯಿ, 2 ಚಮಚ ಹುರಿಗಡಲೆ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಖಾರ, ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ :



ಟೊಮೊಟೊ ಹಣ್ಣನ್ನು ಸಣ್ಣ ತುಂಡುಗಳನ್ನಾಗಿ ಹೆಚ್ಚಿಕೊಂಡು ಈರುಳ್ಳಿ ಮೆಣಸಿನಕಾಯಿ, ಕೊತ್ತಂಬರಿ ಕೂಡ ಕತ್ತರಿಸಿಟ್ಟುಕೊಳ್ಳಿ, 2 ಟೇಬಲ್ ಸ್ಪೂನ್ ಎಣ್ಣೆಯನ್ನು ಒಂದು ಬಾಣಲೆಯಲ್ಲಿ ಕಾಯಿಸಿ ಸಾಸಿವೆ ಚಟಪಟ ಎನಿಸಿ ಮೆಣಸಿನಕಾಯಿ, ಈರುಳ್ಳಿ, ಕೊತ್ತಂಬರಿ ನಂತರ ಟೊಮೊಟೊ ಹಾಕಿ ಸ್ವಲ್ಪ ಬೇಯಿಸಿ. ಉಪ್ಪು, ಖಾರಪುಡಿ, ಹುರಿಗಡಲೆ ಪುಡಿ ಹಾಕಿ ಇಳಿಸಿ. ಇದನ್ನು ಬಿಸಿ ಇರುವಾಗಲೇ ಚಪಾತಿ ಅಥವಾ ರೊಟ್ಟಿಯ ಜತೆ ತಿಂದರೆ ಬಲು ರುಚಿ.

-ಆರ್.ಜಯಶ್ರೀ ರಡರಟ್ಟಿ
ಬಾಗಲಕೋಟೆ.

ಧಿಡೀರ್ ಪಾಪಡ ಪಚಡಿ

ಬೇಕಾಗುವ ಸಾಮಗ್ರಿಗಳು:



5-6 ಹಪ್ಪಳ (ರೆಡಿಮೇಡ ಅಥವಾ ಮನೇಲಿ ತಯಾರಿಸಿದ್ದು), ಈರುಳ್ಳಿ, 5-6 ಹಸಿ ಮೆಣಸಿನ ಕಾಯಿ, 2 ಟೊಮಾಟೊ, ಕೊತ್ತಂಬರಿ ಸೊಪ್ಪು, ಸ್ವಲ್ಪ ಖಾರಪುಡಿ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ :

ಮೊದಲು ಹಪ್ಪಳಗಳನ್ನು ಎಣ್ಣೆಯಲ್ಲಿ ಕರಿದುಕೊಳ್ಳಬೇಕು. ಈರುಳ್ಳಿ, ಮೆಣಸಿನಕಾಯಿ, ಕೊತ್ತಂಬರಿ, ಟೊಮಾಟೊ ಎಲ್ಲವನ್ನು ಸಣ್ಣಗೆ ಕತ್ತರಿಸಬೇಕು. ನಂತರ ಹಪ್ಪಳ ಸಣ್ಣ ಸಣ್ಣ ಚೂರು ಮಾಡಿ ಕತ್ತರಿಸಿದ ಎಲ್ಲ ಸಾಮಾನು ಹಾಕಿ ಕಲಸಿ 1 ಟೇಬಲ್ ಚಮಚ ಎಣ್ಣೆ ಕಾಯಿಸಿ ಹಾಕಿರಿ. ರುಚಿಗೆ ತಕ್ಕಷ್ಟು ಉಪ್ಪು, ಖಾರ ಸೇರಿಸಿ. ಧಿಡೀರನೆ ಯಾರಾದರೂ ಅತಿಥಿಗಳು ಬಂದು ಇಳಿದರೆ ಇದು ಒಂದು ಪಲ್ಯವಾಗುತ್ತದೆ.

-ಪುಷ್ಪಾವತಿ ಪ.ಲದವಾ, ಗುಳೇದಗುಡ್ಡ.

ಫಿಶ್ ಫ್ರಾಯ್

ಬೇಕಾಗುವ ಸಾಮಗ್ರಿಗಳು :

1 ಕೆಜಿ ದೊಡ್ಡ ಮೀನು, 2 ಟೇಬಲ್ ಚಮಚ ಅಕ್ಕಿಹಿಟ್ಟು, 1 ತುಂಡು ಹಸಿ ಶುಂಠಿ, ಸಣ್ಣ ಕಟ್ಟು ಕೊತ್ತಂಬರಿ, 25 ಗ್ರಾಂ ಹಸಿ ಮೆಣಸಿನಕಾಯಿ, 2 ಗಡ್ಡೆ ಬೆಳ್ಳುಳ್ಳಿ, ಹುರಿಯಲು ಎಣ್ಣೆ, ಹುಣಸೆ ಹಣ್ಣಿನ ರಸ 1 ಚಮಚ.

ಮಾಡುವ ವಿಧಾನ :

ಮೊದಲು ಮೀನನ್ನು ತೆಳ್ಳಗೆ ಕತ್ತರಿಸಿ ಚೆನ್ನಾಗಿ ತೊಳೆದು ಎರಡೂ ಕಡೆ ಉಪ್ಪು ಸವರಿ 1 ಗಂಟೆ ಇಡಬೇಕು. ಹಸಿ ಮೆಣಸಿನಕಾಯಿ ಸ್ವಲ್ಪ ಹುರಿದುಕೊಂಡು ಬೆಳ್ಳುಳ್ಳಿ, ಕೊತ್ತಂಬ್ಬರಿ, ಹಸಿ ಶುಂಠಿ ಹಾಕಿ ಸಣ್ಣಗೆ ರುಬ್ಬಿಕೊಂಡು ಅದನ್ನು ಎಲ್ಲಾ ಮೀನು ಚೂರುಗಳಿಗೆ ಹತ್ತುವಂತೆ ಕಲಸಿಕೊಳ್ಳಬೇಕು. ನಂತರ ತವೆಯಲ್ಲಿ ಹುಣಸೆಹಣ್ಣಿನ ರಸವನ್ನು ಹಾಕಿ ಹೊರಳಾಡಿಸಿ ಎರಡೂ ಮೈ ಕೆಂಪಗೆ ಆಗುವಂತೆ ಹುರಿಯಬೇಕು. ಆಗಾಗ ಎಣ್ಣೆ ಹಾಕುತ್ತಾ ಚೂರುಗಳನ್ನು ಹೊರಳಿಸುತ್ತಾ ಬೇಯಿಸಬೇಕು.

-ಭುವನೇಶ್ವರಿ ಬ್ಯಾಳಿ (ಹೊಟ್ಟಿ),
ಗುಳೇದಗುಡ್ಡ.

ಬಾಂಬಿನೊ ಹಲ್ವಾ

ಬೇಕಾಗುವ ಸಾಮಗ್ರಿಗಳು :



ಬಾಂಬಿನೊ ಶಾವಿಗೆ 200 ಗ್ರಾಂ, ಸಕ್ಕರೆ 250 ಗ್ರಾಂ, ಹಾಲು 1/2 ಲೀಟರ್, 50 ಗ್ರಾಂ ಒಣ ಕೊಬ್ಬರಿ ಪುಡಿ, ಗೋಡಂಬಿ 50 ಗ್ರಾಂ, ದ್ರಾಕ್ಷಿ 10 ಗ್ರಾಂ, 6 ಏಲಕ್ಕಿ ಚಿಟಿಕೆ ಬಣ್ಣ, ಸ್ವಲ್ಪ ವನಸ್ಪತಿ.

ಮಾಡುವ ವಿಧಾನ :

ಕಂದುಬಣ್ಣಕ್ಕೆ ತಿರುಗುವವರೆಗೆ ಶಾವಿಗೆಯನ್ನು ವನಸ್ಪತಿಯಲ್ಲಿ ಕರಿದು, ಬಸಿದು, ಒಂದೆಡೆ ಇಡಿ. ಕಡಿಮೆ ಉರಿಯಲ್ಲಿ ಶಾವಿಗೆಯನ್ನು ಕುದಿಯುವ ಹಾಲಿನಲ್ಲಿ ಬೇಯಿಸಿ, ಹಾಲು ಇಂಗಿಸಿರಿ. ಸಕ್ಕರೆ ಬಣ್ಣ ಮತ್ತು ಕೊಬ್ಬರಿ ಪುಡಿ ಸೇರಿಸಿ, 3-4 ನಿಮಿಷಗಳವರೆಗೆ ಬೆರೆಸಿ, ದ್ರಾಕ್ಷಿ, ಗೋಡಂಬಿಗಳಿಂದ ಅಲಂಕರಿಸಿ ಸೇವಿಸಿರಿ.

-ಎಸ್.ಕೊಟ್ರೇಶ್, ಜಿ.ಕೋಡಿಹಳ್ಳಿ

ತರಕಾರಿ ಗೊಜ್ಜು

ಬೇಕಾಗುವ ಸಾಮಗ್ರಿಗಳು :

250 ಗ್ರಾಂ ಎಳೆ ಬೆಂಡೆಕಾಯಿ, 100 ಗ್ರಾಂ ಹುರುಳಿಕಾಯಿ, ಎರಡು ಬಟ್ಟಲು ತೆಂಗಿನಕಾಯಿ ತುರಿ, ಎರಡು ದಪ್ಪ ಗಾತ್ರದ ಈರುಳ್ಳಿ, 10 ಗ್ರಾಂ ಗರಂ ಮಸಾಲೆ, 10 ಗ್ರಾಂ ಖಾರದಪುಡಿ, ಸ್ವಲ್ಪ ಕೊತ್ತಂಬರಿ ಸೊಪ್ಪು, ಚಿಟಿಕೆ ಅರಿಶಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, 5 ಗ್ರಾಂ ಸೇಂಗಾ ಎಣ್ಣೆ, ನೀರು.

ಮಾಡುವ ವಿಧಾನ :

ಬೆಂಡೆಕಾಯಿ ಹಾಗೂ ನಾರು ತೆಗೆದ ಹುರುಳಿಕಾಯನ್ನು ಒಂದೂವರೆ ಇಂಚು ತುಂಡುಗಳಾಗಿ ಕತ್ತರಿಸಿ. ಈರುಳ್ಳಿಯನ್ನು ಉದ್ದುದ್ದವಾಗಿ ಸಣ್ಣ ಎಳೆಯಂತೆ ಹೆಚ್ಚಿಕೊಳ್ಳಿರಿ. ತೆಂಗಿನಕಾಯಿ ತುರಿ ಹಾಗೂ ಈರುಳ್ಳಿಯನ್ನು ಬೇರೆ ಬೇರೆಯಾಗಿ ಹುರಿದುಕೊಳ್ಳಿ. ನಂತರ ಕಾಯಿ ತುರಿ, ಮಸಾಲೆ ಪುಡಿ, ಖಾರದಪುಡಿ, ನೀರು, ಕೊತ್ತಂಬರಿ ಸೊಪ್ಪು, ಅರಿಶಿನ ಪುಡಿ, ಉಪ್ಪು ಸೇರಿಸಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಿ. ಬಾಣಲೆಯಲ್ಲಿ ರುಬ್ಬಿಕೊಂಡ ರಸಾಯನಕ್ಕೆ ಬೆಂಡೆ, ಹುರುಳೀಕಾಯಿ ಮತ್ತು ಈರುಳ್ಳಿ ಸೇರಿಸಿ ಹದವಾಗಿ ಬೇಯಿಸಿದಾಗ, ರುಚಿಯಾದ ಆರೋಗ್ಯ ಪೂರ್ಣ ತರಕಾರಿ ಗೊಜ್ಜು ಸಿದ್ಧ.

-ಶರಣಾಂಬಾ ಬಸವರಾಜ ಹುಡೇದಗಡ್ಡಿ
ಧಾರವಾಡ.

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4.

ನಮ್ಮ ಮಕ್ಕಳು ಮತ್ತು ಚಿತ್ರಕಲೆ

ಬೆಂಗಳೂರಿನಲ್ಲಿ ಬೇಸಿಗೆ ಬಿಸಿ ಪ್ರಾರಂಭವಾಗುತ್ತಿದ್ದಂತೆ ಮಕ್ಕಳಿಗೆ ಶಾಲೆಗಳಿಂದ ತಾತ್ಕಾಲಿಕ ವಿಶ್ರಾಂತಿ ಸಿಗುತ್ತದೆ. ತಂದೆ, ತಾಯಂದಿರು ತಮ್ಮ ಕೆಲಸದ ರಜೆಗಳನ್ನು ಹೊಂದಿಸಿಕೊಂಡು ಪ್ರವಾಸ ಹೋಗುತ್ತಾರೆ; ಗ್ರಾಮೀಣ ಪ್ರದೇಶದಿಂದ ಉದ್ಯೋಗ ನಿಮಿತ್ತ ವಲಸೆ ಬಂದ ತಂದೆ-ತಾಯಂದಿರು ತಾವು ಚಿಕ್ಕಂದಿನಲ್ಲಿ ಆನಂದಿಸಿದ ಗ್ರಾಮದ ಸೊಗಸನ್ನು ಮಕ್ಕಳೂ ಅನುಭವಿಸಲೆಂದು, ಮಕ್ಕಳು ತಮ್ಮ ಅಜ್ಜಿ, ಅಜ್ಜಂದಿರ ಪ್ರೀತಿಯನ್ನು ಪಡೆಯಲೆಂದು ತಮ್ಮ ಹಳ್ಳಿ, ಊರುಗಳಿಗೆ ಭೇಟಿ ಕೊಡಲು ಈ ಬೇಸಿಗೆ ದಿನಗಳನ್ನು ಕಾಯ್ದಿರಿಸುತ್ತಾರೆ. ಇನ್ನು ಕೆಲವರು ನಗರದಲ್ಲೇ ಹುಟ್ಟಿ ಬೆಳೆದ ತಮ್ಮ ಮಕ್ಕಳು ಮನೆಯಲ್ಲೇ ಉಳಿದು ಇಲ್ಲದ ರಾದ್ಧಾಂತ ಮಾಡುವುದನ್ನು ತಪ್ಪಿಸಿಕೊಳ್ಳಲೆಂಬಂತೆ 'ಮಕ್ಕಳ ಬೇಸಿಗೆ ಶಿಬಿರ'ಗಳಿಗೆ ಸಾಗಿಸಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ.

ಒಂದೂವರೆ ಎರಡು ತಿಂಗಳ ಅವಧಿಯಲ್ಲಿ ಮಕ್ಕಳನ್ನು ಕಲಾವಿದರನ್ನಾಗಿ, ಕ್ರೀಡಾಪಟುಗಳನ್ನಾಗಿ, ಬುದ್ಧಿವಂತರನ್ನಾಗಿ ಮಾಡಿ ಬಿಡುವ ಈ 'ಬೇಸಿಗೆ ಶಿಬಿರ' ಎನ್ನುವ ಕಾರ್ಖಾನೆಗಳು ನಗರದ ಅಸಹಾಯಕ ಜನರಿಗಾಗಿಯೇ ಸೃಷ್ಟಿಯಾಗಿ ಸ್ವಲ್ಪ ಅವಧಿಯಲ್ಲಿ ಒಂದು ಮೊತ್ತ ಮಾಡಿಕೊಂಡು ಮತ್ತೆ ಮುಂದಿನ ಬೇಸಿಗೆಯವರೆಗೂ ಕಾಣಿಸಿಕೊಳ್ಳದೆ ಮಾಯವಾಗುತ್ತವೆ.


ಇಂತಹ ದಂಧೆಗಳನ್ನು ನಾನು ಚಿಕ್ಕವನಿದ್ದಾಗಿನಿಂದಲೂ ಗಮನಿಸುತ್ತಾ ಬಂದಿದ್ದೇನೆ. ಆಗ ಬೇಸಿಗೆ ಶಿಬಿರಗಳಿಗೆ ನಾನು ಹೋಗಿಲ್ಲವಾದರೂ ಅಲ್ಲಲ್ಲಿ ನಡೆಯುವ 'ಮಕ್ಕಳ ಚಿತ್ರಕಲಾ ಸ್ಪರ್ಧೆ'ಗಳಲ್ಲಿ ಭಾಗವಹಿಸುತ್ತಿದ್ದೆ; ನನ್ನ ಚಿತ್ರ ಒಂದರಲ್ಲೂ ಬಹುಮಾನ ಗಳಿಸಿರಲಿಲ್ಲ; ಬಹುಮಾನ ಗಳಿಸುವ ಯಾವ ಪ್ರತಿಭೆಯೂ ಇಲ್ಲದ ಸಾಮಾನ್ಯ ಹುಡುಗನಾಗಿದ್ದೆ. ಅಲ್ಲಿಂದ, ಇಲ್ಲಿಯವರೆಗೂ 'ಮಕ್ಕಳ ಚಿತ್ರಕಲೆ' ಅವರಿಗಾಗಿ ನಡೆಸುವ 'ಕಲಾ ಸ್ಪರ್ಧೆ'ಗಳ ಕುರಿತು ನನ್ನ ಕುತೂಹಲ, ಆಸಕ್ತಿಯ ಫಲವಾಗಿ ಸುಮಾರು ಹನ್ನೆರಡು ವರ್ಷಗಳ ಕಾಲ ದೀರ್ಘವಾಗಿ 'ಮಕ್ಕಳ ಚಿತ್ರಕಲೆ'ಯನ್ನು ಕುರಿತು ಗಂಭೀರವಾಗಿ ಸಂಶೋಧನೆ ಮಾಡುವಂತಾಯಿತು. ನಿಧಾನಗತಿಯ ನನ್ನ ಜೀವನ ಕ್ರಮದಿಂದಲೋ, ನನ್ನ ಸೋಮಾರಿತನದಿಂದಲೋ ತುಂಬಾ ತಡವಾಗಿ ಈ ವಿಷಯ ಕುರಿತ ಸಂಶೋಧನಾ ಪ್ರಬಂಧ ಅಂತಿಮವಾಗಿ ಪೂರ್ಣವಾಗುತ್ತಿದೆ.

ಇಷ್ಟು ವರ್ಷಗಳು ಈ ಕಾರಣಕ್ಕಾಗಿ ಅನೇಕ ಶಾಲೆ, ಮಕ್ಕಳ ಶಿಬಿರಗಳಿಗೆ ಭೇಟಿ ನೀಡಿದ್ದೇನೆ. ಅನೇಕ ವರ್ಗದ ಮಕ್ಕಳ ಸಾವಿರಾರು ಚಿತ್ರಗಳನ್ನು ಅವಲೋಕಿಸಿದ್ದೇನೆ. ಅನೇಕ ವಿದ್ವಾಂಸರನ್ನು ಈ ಕುರಿತಂತೆ ಮಾತನಾಡಿಸಿದ್ದೇನೆ. ಈ ಎಲ್ಲ ಅನುಭವದ ಆಧಾರದ ಮೇಲೆ ಇಂದಿನ ಕಲಾ ಶಿಬಿರಗಳನ್ನು, ಮಕ್ಕಳಿಗಾಗಿ ನಡೆಯುವ ತಾತ್ಕಾಲಿಕ ಚಟುವಟಿಕೆಗಳನ್ನು ನೋಡುವುದಾದರೆ ಪ್ರತಿವರ್ಷದಂತೆ ಈ ವರ್ಷವೂ ಮಕ್ಕಳ ಬೇಸಿಗೆ ಶಿಬಿರಗಳು ಹೆಚ್ಚಿನ ಸಂಖ್ಯೆಯಲ್ಲಿ ತಲೆ ಎತ್ತಿವೆ. ಇವೆಲ್ಲವೂ ಎಷ್ಟರ ಮಟ್ಟಿಗೆ ನಮ್ಮ ಮಕ್ಕಳ ಮನಸ್ಸನ್ನು ನಿರ್ಮಲವಾಗಿಸಬಲ್ಲವು? ಎನ್ನುವುದು ನನ್ನ ಸಾಮಾನ್ಯ ಪ್ರಶ್ನೆ. ಈ ಸಾಮಾನ್ಯ ಪ್ರಶ್ನೆಗೆ ಉತ್ತರ ಪಡೆದುಕೊಳ್ಳುವ ಪ್ರಯತ್ನವೇ ನನ್ನ ಈ ದೀರ್ಘ ಅವಧಿಯ ಸಂಶೋಧನೆಯ ಉದ್ದೇಶ. 'ಮಕ್ಕಳ ಚಿತ್ರಕಲೆ'ಯ ಮೂಲಕ ಮಕ್ಕಳನ್ನು ಅರಿಯುವ ವಿಷಯ ಕುರಿತಂತೆ ವಿಸ್ತಾರವಾದ ಪ್ರಬಂಧದ ಸಾರಾಂಶವನ್ನು ಲೇಖನದ ರೂಪಕ್ಕಿಳಿಸಿ ಈ ಶತಮಾನದ ಕೊನೆಯ ಬೇಸಿಗೆಯ ಕೊನೆಯಲ್ಲಿ ಮೊದಲ ಬಾರಿಗೆ ಪ್ರಕಟಣೆ ನೀಡುತ್ತಿದ್ದೇನೆ.


'ಚಿತ್ರಕಲೆ' ಎಂದಾಕ್ಷಣ ಅದೊಂದು ಪ್ರತಿಭೆ ಎಂತಲೂ ಅದನ್ನು ಎಲ್ಲರೂ ಕಲಿಯಲಾಗುವುದಿಲ್ಲ; ಕೇವಲ ಕೆಲವೇ ಮಕ್ಕಳು ಮಾತ್ರ ಕಲಿಯಲು ಸಾಧ್ಯ; ಅದು ಅನುವಂಶಿಕವಾಗಿ ಬರಬೇಕು; ಇತ್ಯಾದಿಯಾಗಿ ಅನೇಕ ವರ್ಷಗಳಿಂದ ಅನೇಕರು ಮಾತನಾಡುವುದನ್ನು ಕೇಳಿದ್ದೇವೆ. ಈ



ಮನೆಯ ವಾತಾವರಣ ಮತ್ತು ಪರಿಸರವನ್ನು ಹೆಚ್ಚು ಪ್ರೀತಿಸುವ ಮಗು ಚಿತ್ರಿಸಿದ ಮನೆಯ ಹೂವಿನ ಸಾಂಕೇತಿಕ ಚಿತ್ರ



ಅದೇ ಮಗು ಬಾಹ್ಯ ಪ್ರಪಂಚದಲ್ಲಿ ಕಾರಿನ ವ್ಯಾಮೋಹದಿಂದ ರಚಿಸಿದ ಕಾರಿನ ಚಿತ್ರ



ನಾಲ್ಕು ವರ್ಷದ ಮಗು ಮೊದಲ ಬಾರಿಗೆ ಬಸ್ಸು ಪ್ರಯಾಣದ ಅನುಭವದಿಂದ ಸ್ಫೂರ್ತಿಗೊಂಡು ರಚಿಸಿದ ಬಸ್ಸಿನ ಸರಳವಾದ ಚಿತ್ರ

ಚಿತ್ರಕಲಾ ಮಾಧ್ಯಮ ಕೇವಲ ಪ್ರತಿಭೆಯಲ್ಲ; ಮಕ್ಕಳು ಶೈಶವಾವಸ್ಥೆಯ ಹಂತದಿಂದಲೂ ತಮ್ಮ ಸುಪ್ತ ಚೇತನದಲ್ಲಿನ ಅಸಂಖ್ಯಾತ ಉಚಿತ ಅನುಚಿತ ನೆನಪುಗಳಿಗೆ ರೂಪ ನೀಡಿ ಬಾಹ್ಯ ಪ್ರಪಂಚದೊಂದಿಗೆ ಸಂವಾದಿಸುವ 'ಸಂವಹನ' ಮಾಧ್ಯಮ. ಮಗುವಿನ ತಹ ತಹ ಮನಸ್ಸು ತಾನು ಅಭಿವ್ಯಕ್ತಗೊಳಿಸಿದ ಚಿತ್ರದ ಮೂಲಕ ತನ್ನನ್ನೇ ತಾನು ಸಂತೈಸಿಕೊಳ್ಳುವ ಒಂದು ಸಂಕೀರ್ಣ ಪ್ರಕ್ರಿಯೆ. ಮಗು ಈ ಮೂಲಕ ಹೊರ ಜಗತ್ತಿಗೆ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಹೀಗೆ ಚಿತ್ರಗಳ ಅಥವಾ ಯಾವುದೇ ಕಲಾ ಪ್ರಕಾರಗಳ ಮೂಲಕ ಸೃಷ್ಟಿಯಾಗುವ ಮಕ್ಕಳ ಕಲಾಕೃತಿಗಳನ್ನು ಅಧ್ಯಯನ ಮಾಡಿದಲ್ಲಿ ಮುಂದಿನ ಜನಾಂಗವನ್ನು ಅರಿತು, ಭವಿಷ್ಯ ರೂಪಿಸುವಲ್ಲಿ ಸಹಕಾರಿಯಾಗಬಲ್ಲದು. ಮಕ್ಕಳ ಚಿತ್ರಗಳು ಅವರ ಮನಸ್ಸನ್ನು ಅರಿಯುವ ಒಂದು ಅಮೂಲ್ಯ ಸಾಧನವಾಗಿ ಗೋಚರಿಸುತ್ತದೆ.

ಮಕ್ಕಳ ಚಿತ್ರಗಳು ಮಗುವಿನ ಮೂಲ ಭಾಷೆ. ಈ ಕುರಿತು ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಚರ್ಚೆಯಾಗಿಯೇ ಇಲ್ಲ (ಕಲಾ ಸಮುದಾಯದಲ್ಲಿ ಕೂಡ). ಒಂದೆರಡು ವರ್ಷಗಳ ಹಿಂದೆ ನಡೆದ ಒಂದೆರಡು ಮಕ್ಕಳ ಕಲಾ ಪ್ರದರ್ಶನ ಹೊರತುಪಡಿಸಿ ಈ ಕುರಿತು ನಮ್ಮ ಆಸಕ್ತಿ ಏನೇನೂ ಸಾಲದು. ಇಂತಹ ಪರಿಸ್ಥಿತಿಯಲ್ಲಿ 'ಮಕ್ಕಳ ಚಿತ್ರಕಲೆ'ಯ ಮೂಲಕ ಮಗುವಿನ ಅಮೂರ್ತ ಒಳ ನೋಟವನ್ನು, ಇಂಗಿತಗಳನ್ನು ಕಾಲಕಾಲಕ್ಕೆ ಅರ್ಥೈಸಿಕೊಳ್ಳಲು ಸಾಧ್ಯ ಎಂದು ನನ್ನ ವಾದ.

ನಮ್ಮಲ್ಲಿ 'ಕಲೆ' ಇನ್ನೂ ಶೈಕ್ಷಣಿಕವಾಗಿ ಗಂಭೀರ ಮಾಧ್ಯಮವಾಗಿ ಬೆಳೆದಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಸಮಾಜದ ಶೇ.90ರಷ್ಟು ತಂದೆ-ತಾಯಂದಿರು ತಮ್ಮ ಮಕ್ಕಳ ಚಿತ್ರಕಲೆಯ ಆಸಕ್ತಿಯನ್ನು ಪ್ರೋತ್ಸಾಹಿಸಿಲ್ಲ - ಪ್ರೋತ್ಸಾಹಿಸಿದರೂ ಹವ್ಯಾಸಕ್ಕಾಗಿ, ಕಲಾ ಸ್ಪರ್ಧೆಗಳಿಗಾಗಿ ಮಾತ್ರ ಸೀಮಿತಗೊಳಿಸಿರುವುದು ಒಂದು ದುರಂತ. ಅನೇಕ ಅಧ್ಯಯನಗಳಿಂದ ತಿಳಿದು ಬಂದ ಅಂಶವೆಂದರೆ ಕೇವಲ ಕೆಲವು ವಾರಗಳ ಎಳೆಯ ಮಕ್ಕಳೂ ಕೂಡ ಅಮೂರ್ತ ಆಕಾರಗಳಿಗೆ ಕಣ್ಣುಗಳ ಚಲನೆಯ ಮೂಲಕ ಪ್ರತಿಕ್ರಿಯಿಸುತ್ತವೆ. ಕ್ರಮೇಣ ಬೆಳೆದಂತೆಲ್ಲ ತನ್ನ ಸುತ್ತಲಿನ ಪರಿಸರದಲ್ಲಿ ಆಪ್ತವಾಗುವ ಎಲ್ಲವನ್ನು ಕೇವಲ ದೃಶ್ಯಗ್ರಹಿಕೆಯ ಮೂಲಕ ಅರಿಯುವುದನ್ನು ಕಲಿಯುತ್ತದೆ. ಹೀಗಿರುವಾಗ ಮಗು ಪ್ರತಿಯೊಂದನ್ನು ನೋಡಿ ವಸ್ತುವಿವರಗಳನ್ನು ಗ್ರಹಿಕೆಗೆ ತಂದುಕೊಳ್ಳುವ ಬದಲು ವಸ್ತುವಿನ ಬಗ್ಗೆ ಸಿಕ್ಕಬಹುದಾದ ವಿವರಗಳನ್ನು ಭಾಷೆಯ ಮೂಲಕ ಮಕ್ಕಳ ಅರಿವನ್ನು ಬೆಳೆಸುವ ವ್ಯರ್ಥ ಪ್ರಯತ್ನ ನಮ್ಮಲ್ಲಿನ ಹೆಚ್ಚಿನ ತಂದೆ-ತಾಯಿಗಳು ಮಾಡುತ್ತಿದ್ದಾರೆ. ಉದಾ: 'ಸೇಬು' ಎಂದ ಕೂಡಲೇ ಆ ಹಣ್ಣಿನ ಆಕಾರ, ಬಣ್ಣ, ರುಚಿ ಇತ್ಯಾದಿ ವಿವರಗಳು ನೆನಪಾಗದೆ 'ಸೇ,ಬು,' ಎಂಬ ಎರಡಕ್ಷರದಿಂದ ಹಣ್ಣನ್ನು ಕಲ್ಪಿಸಿಕೊಳ್ಳುವ ಕುರುಡುಪಾಠದ ಮೂಲಕ ಮಗುವಿನ ಶಿಕ್ಷಣ ಪ್ರಾರಂಭವಾಗುತ್ತದೆ. ಇದರಿಂದ ಕಾಲ ಸರಿದಂತೆ ದೃಶ್ಯಭಾಷೆಯ ಅವಶ್ಯಕತೆ ಮರೆಯುವಂತಾಗುತ್ತದೆ. **ಮಕ್ಕಳ ಶಿಕ್ಷಣ ಯಾವತ್ತೂ ದೃಶ್ಯ ಭಾಷೆಯ ಮೂಲಕ ಪ್ರಾರಂಭವಾಗಿ ಭಾಷೆಯ ಮೂಲಕ ಬೆಳೆಯಬೇಕು.**

'ಕಲೆ ಕೇವಲ ನಿಜವನ್ನು ಚಿತ್ರಿಸುವುದಲ್ಲ' ಎಂದು ಹಿರಿಯರಿಗೆ ಮನವರಿಕೆ ಮಾಡುವುದು ಬಹಳ ಕಷ್ಟ. ಮಕ್ಕಳು ಗೀಚುವುದು ಅಥವಾ Scribblingನ ಮಹತ್ವ ನಮ್ಮ ಸಮಾಜದ ತಂದೆ-ತಾಯಿಗಳಿಗೇ ಆಗಲಿ ಅಧ್ಯಾಪಕರಿಗೇ ಆಗಲಿ ತಿಳಿದಿಲ್ಲವಾದ್ದರಿಂದ ಮಕ್ಕಳಿಗೆ ಅವಶ್ಯಕವಾಗಿ ಬೇಕಾದ ಕಲಾತ್ಮಕ, ಸೃಜನಾತ್ಮಕ ಸೃಷ್ಟಿಯ ವಾತಾವರಣ; ಮಾಹಿತಿ, ಪ್ರೋತ್ಸಾಹ ಒದಗಿಸುವಲ್ಲಿ ವಿಫಲರಾಗುತ್ತಾರೆ. ಮಕ್ಕಳ ಚಿತ್ರಗಳನ್ನು ಕುರಿತು ಹೊಗಳುವುದೋ ಅಥವಾ ತೆಗಳುವುದೋ ಮಾಡಿ ಸಹಜವಾಗಿ ಬೆಳೆಯಬೇಕಾದ ಮಗುವಿಗೆ ಪೂರ್ವಗ್ರಹ ತುಂಬುತ್ತಾರೆ. 6 ವರ್ಷದ ಮಕ್ಕಳಲ್ಲಿ ಇಂತಹ ಗೊಂದಲಗಳು ಹೆಚ್ಚಾಗುತ್ತದಲ್ಲದೆ ತಂದೆ-ತಾಯಿಯರ, ಮಕ್ಕಳ ನಡುವಿನ ಬೌದ್ಧಿಕ ಸಾಮರಸ್ಯ ಕೆಡುತ್ತದೆ. ಇದರ ಪರಿಣಾಮ ಮಗು ಶಾಲೆಯ ಕಲಿಕೆ ಮತ್ತು ಶಿಸ್ತಿನಲ್ಲಿ ಹಿಂದೆ ಬೀಳುತ್ತದೆ.

ಚಿತ್ರಕಲೆ ಬಹುಶಃ ಆದಿಕಾಲದಿಂದಲೂ ಮಾನವ ಅಭಿವ್ಯಕ್ತಗೊಳಿಸಿದ, ಪ್ರತಿಕ್ರಿಯಿಸಿದ ಮೊದಲ ಮಾಧ್ಯಮ. ಹಾಗಾಗಿ ಈ ಮಾಧ್ಯಮ ಮಕ್ಕಳ ಮನಸ್ಸಿನಷ್ಟೇ ಸರಳ-ಸಂಕೀರ್ಣ. ಆ ಮೂಲಕ ಈ ಸಮಾಜದ ಎಲ್ಲವನ್ನು ಮೌನವಾಗಿ ಅರಿತುಕೊಳ್ಳಲು ಹಿರಿಯರು ಸಹಕರಿಸಬೇಕು. ಹುಟ್ಟಿನಿಂದ ಎಲ್ಲ ಮಕ್ಕಳಿಗೂ ಈ ಚೈತನ್ಯ ಇರುತ್ತದೆ. ಬೆಳೆದಂತೆ ಮಕ್ಕಳ 'ನಿಷ್ಕಲ್ಮಷ ದೃಶ್ಯ ಗ್ರಹಿಕೆ'ಯ ಪ್ರಜ್ಞೆಯನ್ನು ಹೆತ್ತವರು ತಮ್ಮ ಅಜ್ಞಾನದಿಂದ ಮಕ್ಕಳ ಈ ಸೂಕ್ಷ್ಮ ಶಕ್ತಿಯನ್ನು ಮುರುಟಿ ಹಾಕುತ್ತಾರೆ.

ಪ್ರತಿಯೊಂದು ತಲೆಮಾರು ಸಹ ತನಗೆ ಪ್ರಿಯವಾದ Gestaltsನ್ನು ಮುಂದಿನ ತಲೆಮಾರಿಗೆ ಕಲಿಸುತ್ತದೆ. Universal nature of self taught child artನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬಹುದು. ಹಿರಿಯರ ಮಾರ್ಗದರ್ಶನವಿಲ್ಲದೆ ತಮ್ಮ ಪಾಡಿಗೆ ಸಹಜವಾಗಿ ಚಿತ್ರಿಸುವ ಮಕ್ಕಳಲ್ಲಿ ಪ್ರತಿಮೆಗಳು (Gestalts)ನ ಒಂದು ಉಗ್ರಾಣವೇ ಸೃಷ್ಟಿಯಾಗಿರುತ್ತದೆ. ಇದು ಮಗು ಪ್ರೌಢವಾದಂತೆ ಎಲ್ಲ ವಿಷಯಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಲು ಅನುವು ಮಾಡಿಕೊಡುತ್ತದೆ.

ಮಗು ಗೀಚುವುದು, ಚಿತ್ರಿಸುವುದರ ಪರಿಣಾಮ ಕೇವಲ ಕಲಾವಿದರಾಗುವುದಿಲ್ಲ, ಆ ಚಿತ್ರಗಳಲ್ಲಿ ಕುಶಲತೆಯೂ ಮುಖ್ಯವಾಗುವುದಿಲ್ಲ. ಅಮೂರ್ತವಾಗಿ ಗ್ರಹಿಸಿದ ಗ್ರಹಿಕೆಯನ್ನು ಪ್ರತಿಮೆಗಳ ಮೂಲಕ ಚಿತ್ರಿಸಲು ಸ್ವತಂತ್ರ ಪಡೆದ ಮಗುವಿನಲ್ಲಿ ಸಾಂಕೇತಿಕ ಭಾಷೆ ಕಲಿಯಲು ಬೇಕಾದ ಮನಸ್ಥಿತಿ ಬೆಳೆದಿರುತ್ತದೆ ಮತ್ತು ಅಮೂರ್ತವನ್ನು ಅರಿತುಕೊಳ್ಳುವ ಸಾಮರ್ಥ್ಯ ಕೂಡ ವೃದ್ಧಿಸುತ್ತದೆ. ಮಕ್ಕಳ ಅಕ್ಷರ ಕಲಿಕೆಗೆ ಮಾತ್ರ ಗಮನ ನೀಡುವ

ಕಿವಿ ಮಾತು

■ ಒಂದು ಟೀ ಚಮಚ ಬಿಲ್ವ ಪತ್ರದ ರಸವನ್ನು ಅಷ್ಟೇ ಪ್ರಮಾಣದ ಜೇನು ತುಪ್ಪದೊಂದಿಗೆ ಸೇವಿಸುತ್ತಿದ್ದರೆ ಅರಿಶಿನ ಕಾಮಾಲೆ ರೋಗ ನೀಗುವುದು. ದಿನಕ್ಕೆ ಮೂರು ಸಲದಂತೆ ಏಳೆಂಟು ದಿನಗಳ ಚಿಕಿತ್ಸೆ ಅಗತ್ಯ.

■ ಅರ್ಧ ಚಮಚೆ ಶುಂಠಿ ರಸಕ್ಕೆ ಒಂದೊಂದು ಚಮಚೆ ನಿಂಬೆರಸ ಮತ್ತು ಪುದಿನಾ ರಸ ಮತ್ತು ಸ್ವಲ್ಪ ಜೇನುತುಪ್ಪದೊಂದಿಗೆ ದಿನಕ್ಕೆ ಮೂರು ಸಲ ಸೇವಿಸುವುದು ಫಲಕಾರಿ.

■ ತೊಗರಿ ಗಿಡದ ಎಲೆಗಳ ರಸವನ್ನು ಹಿಂಡಿ, ಅದನ್ನು ಸ್ವಲ್ಪ (60.ಮಿ.ಮೀ) ತೆಗೆದುಕೊಂಡು, ಅದಕ್ಕೆ ಸ್ವಲ್ಪ ಉಪ್ಪು ಬೆರೆಸಿ ಕುಡಿಯುವುದು ಕಾಮಾಲೆಯವರಿಗೆ ಒಳ್ಳೆಯದು.

■ ಕಳಿತ ಬಾಳೆಹಣ್ಣಿಗೆ ಸುಣ್ಣ ಸವರಿ ಹಿಮದಲ್ಲಿಡಿ, ಬೆಳಿಗ್ಗೆ ತಿನ್ನಲು ಕೊಡಿ. ಒಂದು ವಾರ ಕಾಲ ಹೀಗೆ ತಿನ್ನುತ್ತ ಬಂದರೆ ಕಾಮಾಲೆ ಗುಣವಾಗುತ್ತದೆ.

■ ಬೆಂಡೆಕಾಯಿ ಸೇವನೆಯಿಂದ ಕಾಮಾಲೆ ರೋಗದಲ್ಲಿ ಗುಣ ಕಂಡು ಬರುವುದು.

■ ಸುಮಾರು ಒಂದು ಅಂಗುಲ ಉದ್ದದ ಅರಿಶಿನದ ಕೊಂಬನ್ನು ನೀರಿನಲ್ಲಿ ತೇದು ಮಜ್ಜಿಗೆಯಲ್ಲಿ ಕದಡಿ ಕುಡಿಯಿರಿ. ಒಂದು ವಾರ ಕಾಲ ಈ ಚಿಕಿತ್ಸೆಯನ್ನು ಮಾಡುವುದರಿಂದ ಕಾಮಾಲೆ ರೋಗದಲ್ಲಿ ಗುಣ ಕಂಡು ಬರುವುದು.

ಎಲ್ಲ ಹಿರಿಯರು - ಅಕ್ಷರಗಳೂ ಕೂಡ ಚಿತ್ರಕಲೆಯ ನಿರ್ದಿಷ್ಟ ಸಂಕೇತದ ರೂಪಾಂತರ ಎಂಬುದನ್ನು ತಿಳಿಯಬೇಕು.

ಮಕ್ಕಳ ಮನಸ್ಸು ಶುಭ್ರ ಕಾಗದದಂತೆ. ಅಲ್ಲಿ **ಹಿರಿಯರಿಗೆ ತಮ್ಮ ಅನುಭವದ ಆಧಾರದ ಮೇಲೆ ಚಿತ್ರ ರಚಿಸಲು; ಮಕ್ಕಳು ರಚಿಸಿದ ಚಿತ್ರಗಳನ್ನು ತಿದ್ದಲು ಯಾವುದೇ ಅರ್ಹತೆ ಇರುವುದಿಲ್ಲ. ಅಲ್ಲಿ ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯ** ಇರಬೇಕು. ಮಕ್ಕಳು ತಮ್ಮ ಸುತ್ತಲ ದೃಶ್ಯ ಅನುಭವ ಇತ್ಯಾದಿಗಳನ್ನು ಮೊದಲು ರೇಖೆಗಳ ಮೂಲಕ ಹೊರಹಾಕುತ್ತವೆ. ಹೀಗೆ ಅಭಿವ್ಯಕ್ತಗೊಂಡ ಸಂದರ್ಭದಲ್ಲಿ ತಂದೆ-ತಾಯಿಗಳು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೂ ಸಾಕು ಮಗು ತನ್ನ ಸುತ್ತಲಿನ ಪರಿಸರ ಕುರಿತು ಹೇಗೆ ಪ್ರತಿಕ್ರಿಯಿಸುತ್ತದೆ ಎಂದು ತಿಳಿಯಬಹುದು. ಸುಮಾರು 2 ವರ್ಷದ ಮಗು ಕೂಡ Scribbling(ಗೀಚುಗಳ) ಮೂಲಕ ತನ್ನ ಅಭಿವ್ಯಕ್ತಿಯನ್ನು ಪ್ರಾರಂಭಿಸಬಲ್ಲದು. ನಂತರ 3 ವರ್ಷವಾಗುವಷ್ಟರಲ್ಲಿ ಸಂಪೂರ್ಣವಾಗಿ ವೃತ್ತ, ಚೌಕ, ಆಕಾರಗಳನ್ನು ಚಿತ್ರಿಸುವಷ್ಟು ಸಾಮರ್ಥ್ಯ ಪಡೆಯುತ್ತವೆ. ಈ ಹಂತಗಳಲ್ಲಿ ಮಗು ಯಾವುದೇ ರೀತಿಯ ಚಿತ್ರ ರಚಿಸಬಹುದು. ಅದಕ್ಕೆ ಇಂತಹುದೇ ವಿಷಯ, ರೀತಿ, ವಸ್ತುಗಳ ಕುರಿತು ಚಿತ್ರಿಸಬೇಕೆಂಬ ನಿರ್ದಿಷ್ಟ ಗುರಿ ಇರುವುದಿಲ್ಲ. ಅದು ಮಗುವಿನ ಆರೋಗ್ಯ ಮತ್ತು ಪರಿಸರವನ್ನು ಅವಲಂಬಿಸಿರುತ್ತದೆ. **ಮಗು ಗೀಚುವುದು, ಚಿತ್ರಿಸುವುದರ ಪರಿಣಾಮ ಕೇವಲ ಕಲಾವಿದ ಆಗುವುದಿಲ್ಲ; ಅದೊಂದು ಮಗುವಿನ ಖಾಸಗಿಯಾದ ಅನುಭವಗಳ ಅಭಿವ್ಯಕ್ತಿ ಮಾಧ್ಯಮ. ಇಂತಹ ಚಿತ್ರಗಳಲ್ಲಿ ಕುಶಲತೆ ಅಮುಖ್ಯ.**

ಹಿರಿಯರು ಮಾಡಬೇಕಾದ್ದು

ಮಕ್ಕಳ ದೃಶ್ಯಭಾಷೆ ಬೆಳೆಸುವುದಾದರೆ ಪರಿಸರ ನೋಡುವುದನ್ನು ಮೊದಲು ಕಲಿಸಬೇಕು. ಹಿರಿಯರು ಮಕ್ಕಳಿಗೆ ಚಿತ್ರಬರೆವುದನ್ನು ಹೇಳಿಕೊಡಬಾರದು. ಬಿಳಿಕಾಗದ, ಪೆನ್ಸಿಲ್ ಎರಡನ್ನು ಒದಗಿಸಿ ಮಗು ಗೀಚುಗಳನ್ನು (Scribble) ಕಾಗದದ ಮೇಲೆ ರಚಿಸುವ ಸೂಕ್ತ ವಾತಾವರಣ ಸೃಷ್ಟಿಸಬೇಕು ಮತ್ತು ಮಗು ಚಿತ್ರ ಬರೆದು ತಾನಾಗಿ ನಿಲ್ಲಿಸುವವರೆಗೂ ಸಾವಧಾನದಿಂದ ಕಾಯಬೇಕು. ನಂತರ ಪ್ರತಿ ಚಿತ್ರದ ಬಲಗಡೆ ಅಂದಿನ ದಿನಾಂಕ ಬರೆದು ಸಂಗ್ರಹಿಸಿಡಬೇಕು. ಹೀಗೆ ಸಂಗ್ರಹಿಸಿದ ಚಿತ್ರಗಳನ್ನು ಸುಮಾರು ಎರಡು ತಿಂಗಳಿಗೊಮ್ಮೆ ಪರಿಶೀಲಿಸಿದಲ್ಲಿ ಮಗುವಿನ ಮನಸ್ಸಿನಲ್ಲಿ ಸುಪ್ತವಾಗಿ ನಡೆದ ಪ್ರಕ್ರಿಯೆಗಳನ್ನು ತಿಳಿದುಕೊಳ್ಳಬಹುದು. ಅನಂತರ ಅವುಗಳ ಆಧಾರದ ಮೇಲೆ ಮಗುವಿನೊಂದಿಗೆ ಹಿರಿಯರು ಮುಂದೆ ವ್ಯವಹರಿಸುವಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಂಡು ಮಗು ಉತ್ತಮ ರೀತಿಯಲ್ಲಿ ಮಾನಸಿಕ, ಬೌದ್ಧಿಕ ಹಾಗೂ ಸಾಮಾಜಿಕವಾಗಿ ಬೆಳೆಯಲು ಸಹಕರಿಸಬಹುದು. ಕಲಾಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸಲು ಪ್ರೋತ್ಸಾಹಿಸಬಾರದು. ಅದರಿಂದ ಮಕ್ಕಳಲ್ಲಿ ಒಂದು ಕೀಳರಿಮೆ ಅಥವಾ ಅಗತ್ಯಕ್ಕಿಂತ ಹೆಚ್ಚಿನ ಅಹಂ ಬೆಳೆಯಬಹುದು. ಎರಡೂ ಕೂಡ ಮಕ್ಕಳಲ್ಲಿನ ಸಹಜ ಕಲಾಪ್ರಜ್ಞೆಯನ್ನು ಕುಂಠಿತಗೊಳಿಸುತ್ತದೆ. ಮಕ್ಕಳು ಅಪ್ರಜ್ಞಾಪೂರಕವಾಗಿ ಚಿತ್ರ ರಚಿಸುತ್ತಾ ಪ್ರಜ್ಞೆಗೆ ತಲುಪುವ ಸಹಜ ಪ್ರಕ್ರಿಯೆಗೆ ಇಂತಹ ಸಾರ್ವಜನಿಕ ಕಲಾಸ್ಪರ್ಧೆಗಳು ಮತ್ತು ಮಕ್ಕಳಿಗೆ ಚಿತ್ರ ಬಿಡಿಸುವುದನ್ನು ಹೇಳಿಕೊಡುವ ಶಿಕ್ಷಕರ ಅಲ್ಪಜ್ಞಾನದ ಬೋಧನೆಗಳಿಂದ ಧಕ್ಕೆಯುಂಟಾಗುತ್ತದೆ.

ಚಿತ್ರಕಲೆ ಮಗುವಿನ ತೀರಾ ಖಾಸಗಿಯಾದ ಭಾಷೆ ಎಂದು ಮೊದಲೇ ಹೇಳಿದಂತೆ ಮಗು ಚಿತ್ರ ಬರೆಯುವ ಮೂಲಕ ಆಂತರಿಕವಾಗಿ ತನಗೆ ಇಷ್ಟವಾದುದನ್ನು, ಇಷ್ಟವಾಗದೇ ಇರುವುದನ್ನು ಸಮಾನವಾಗಿ ಅಭಿವ್ಯಕ್ತಗೊಳಿಸುತ್ತಿರುತ್ತದೆ. ಇದನ್ನು ಅನೇಕ ಮಕ್ಕಳಲ್ಲಿ ಅನೇಕ ಹಂತಗಳಲ್ಲಿ ಗಮನಿಸಿದ್ದೇನೆ.

ನಾನು ಗಮನಿಸಿದ ಒಂದು ನೈಜ ಘಟನೆಯಲ್ಲಿ 6 ವರ್ಷದ ಮಗುವಿನ ತಂದೆ ಮಗುವನ್ನು ಪ್ರೀತಿಯಿಂದ ಕಾಣದೆ ತನ್ನ ಇತರ ಸಮಸ್ಯೆಗಳಿಂದ ಮಗುವನ್ನು ಸಿಟ್ಟು ತಾತ್ಸಾರದಿಂದ ಕಾಣುತ್ತಿದ್ದ. ಇದರಿಂದ ಮಗುವಿಗೆ ತಂದೆ 'ಕ್ರೂರಿ' ಎಂದು ಅನಿಸಿರಬೇಕು. ಆದರೆ ಪ್ರತಿಭಟಿಸುವ ಮನಸ್ಥೈರ್ಯ, ಸಹಿಸುವ ಶಕ್ತಿ ಇಲ್ಲದೆ ಎಳೆಯ ಮನಸ್ಸಿನಲ್ಲಿ ಬೇರೂರಿದ ಈ ಅನುಭವ-ಚಿತ್ರದ ಮೂಲಕ ವ್ಯಕ್ತಪಡಿಸಿತ್ತು. ತಾಯಿಯನ್ನು ಹೆಚ್ಚು ಕೂಲಂಕಷ ವಿವರಗಳೊಂದಿಗೆ ಚಿತ್ರಿಸಿ, ತಂದೆಯನ್ನು ಸರಳವಾಗಿ ಚಿತ್ರಿಸಿ ನಂತರ ಆ ಚಿತ್ರದ ಮೇಲೆ ಪಟ್ಟೆಗಳನ್ನು ಎಳೆದಿತ್ತು. ಆ ಪಟ್ಟೆಗಳು ಹುಲಿಯ ಮೈಮೇಲಿನ ಪಟ್ಟೆಗಳನ್ನು ಸಂಕೇತಿಸಿದ್ದು, ಕೆಲವು ತಿಂಗಳ ಹಿಂದೆಯಷ್ಟೇ ಹುಲಿಯನ್ನು ಮೃಗಾಲಯದಲ್ಲಿ ಪ್ರತ್ಯಕ್ಷ ಕಂಡು ಹಿರಿಯರ ಮೂಲಕ ಹುಲಿಯ ಪ್ರವೃತ್ತಿಯ ವಿವರಗಳನ್ನು ಅರಿತಿತ್ತು. ಮಗುವಿಗೆ ಕೆಟ್ಟ ಪ್ರಾಣಿ, 'ಕ್ರೂರಿ' ಎಂದರೆ ಹುಲಿ ಎಂಬ ಗ್ರಹಿಕೆಯ ಆಧಾರದಿಂದ ತಂದೆಯ ಚಿತ್ರದ ಮೈಮೇಲೆ ಹುಲಿಯ ಪಟ್ಟೆಯನ್ನು ಸಾಂಕೇತಿಕವಾಗಿ ಚಿತ್ರಿಸುವ ಮೂಲಕ ತಂದೆಯ ನಡವಳಿಕೆಯಿಂದ ತನ್ನ ಮೇಲೆ ಆದ ಪರಿಣಾಮವನ್ನು ಅಭಿವ್ಯಕ್ತಗೊಳಿಸಿತ್ತು.

ಇದೊಂದು ಅಪ್ರಜ್ಞಾವಸ್ಥೆಯಲ್ಲಿ ಮಗು ಹೊರಗೆಡಹಿದ ಅಭಿವ್ಯಕ್ತಿ; **ಹೀಗೆ ಯಾರಲ್ಲೂ ಹೇಳಿಕೊಳ್ಳಲಾಗದ ಅಸಹಾಯಕ ಪರಿಸ್ಥಿತಿಯಲ್ಲಿ ಮಗುವಿಗೆ ಚಿತ್ರಕಲೆಯೊಂದು ಆಪ್ತವಾದ ಇಷ್ಟವಾಗುವ ಮಾಧ್ಯಮವಾಗಿ ತನ್ನ ಎಲ್ಲಾ ಅನುಭವವನ್ನು ನೇರವಾಗಿ ಸುಲಭವಾಗಿ ವ್ಯಕ್ತಪಡಿಸುವ ಸಹ್ಯಕ್ರಿಯೆಯಾಗಿ ಬೆಳೆಯುತ್ತದೆ.** ಇಂದಿನ ಯಾವ ಆಧುನಿಕ ತಂತ್ರಜ್ಞಾನದಲ್ಲೂ ಸಾಧ್ಯವಾಗದ್ದು 'ಚಿತ್ರಕಲೆ'ಯ ಮೂಲಕ ಮಗುವಿನ ಸಂಕೀರ್ಣ ಮನಸ್ಸನ್ನು ಅರಿತು ನಮ್ಮ ಮುಂದಿನ ಜನಾಂಗವನ್ನು ಉತ್ತಮವಾಗಿ, ಶ್ರೀಮಂತವಾಗಿ ಬೆಳೆಸಲು ಸಾಧ್ಯವಿದೆ. ಇದನ್ನು, ಮಕ್ಕಳ ಇಷ್ಟಪಡುವ ಎಲ್ಲಾ ತಂದೆ-ತಾಯಿಗಳು, ಕಲಿಸುವ ಅಧ್ಯಾಪಕರು ಗಮನದಲ್ಲಿರಿಸಿಕೊಳ್ಳಬೇಕು. ■

ಕಿವಿ ಮಾತು

■ ಒಂದು ಸಲಕ್ಕೆ ಏಳೆಂಟು ಎಲೆಗಳಂತೆ ದಿನಕ್ಕೆ ಮೂರು ಸಲ ತುಳಸಿ ಎಲೆಗಳನ್ನು ಅಗಿದು ತಿನ್ನುತ್ತಿದ್ದರೆ ಬಾಯಿಯಲ್ಲಿ ಕಾಣಿಸಿಕೊಳ್ಳುವ ಬೊಕ್ಕೆಗಳು ನಿವಾರಣೆಯಾಗುವುದು.

■ ಒಂದು ಬಟ್ಟಲು ನೀರಿಗೆ ಒಂದು ಹೋಳು ನಿಂಬೆಹಣ್ಣಿನ ರಸ ಹಿಂಡಿ, ಕಾಲು ಟೀ ಚಮಚದಷ್ಟು ಶ್ರೀಗಂಧವನ್ನು ತೇದು ಆ ನೀರಿನಲ್ಲಿ ಕದಡಿ. ಹೀಗೆ ತಯಾರಿಸಿದ ದ್ರಾವಣದಿಂದ ಬಾಯಿ ಮುಕ್ಕಳಿಸುತ್ತಿದ್ದರೆ ಬಾಯಿಯಲ್ಲಿ ಬೊಕ್ಕೆಗಳು ಮಾಯವಾಗುವುದು.

■ ಬಸಳೆಸೊಪ್ಪನ್ನು ಸಣ್ಣಗೆ ಹೆಚ್ಚಿ, ತುಪ್ಪದಲ್ಲಿ ಹುರಿಯಿರಿ, ಹುರಿದ ಸೊಪ್ಪನ್ನು ಮೊಸರಿನೊಂದಿಗೆ ಬೆರೆಸಿ, ಅನ್ನ ಕಲಸಿ ಉಂಡರೆ ಬಾಯಿಹುಣ್ಣು ನಿವಾರಣೆಯಾಗುವುದು.

■ ಕ್ಯಾರೆಟ್ ರಸ ಬಾಯಹುಣ್ಣನ್ನು ಆರಿಸುತ್ತದೆ.

■ ಒಂದು ಚಮಚದಷ್ಟು ಒಣದ್ರಾಕ್ಷಿ, ಅರ್ಧ ಚಮಚ ಜೀರಿಗೆ ಪುಡಿಯನ್ನು ಸೇರಿಸಿ ಅರೆದುಕೊಳ್ಳಬೇಕು. ಇದನ್ನು ದಿನಕ್ಕೆ ಮೂರು ವೇಳೆ ಸೇವಿಸಿದರೆ, ಪಿತ್ತವು ಶಮನವಾಗಿ, ಬಾಯಿಹುಣ್ಣು ಗುಣವಾಗುವುದು.

■ ಮೆಂತ್ಯ ಸೊಪ್ಪನ್ನು ಹೆಚ್ಚಿ, ಬೇಯಿಸಿ ಜೇನು, ತುಪ್ಪ ಕಲೆಸಿ ಅದನ್ನು ಚೆನ್ನಾಗಿ ಮಿಕ್ಸಿಯಲ್ಲಿ ನುಣುಪು ಮಾಡಿ ಸೇವಿಸುತ್ತಿದ್ದರೆ ಬಾಯಿಹುಣ್ಣು ಗುಣವಾಗುತ್ತದೆ.



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಏಡ್ಸ್ ಹೇಗೆ ಬರುತ್ತದೆ

ನಾನೊಬ್ಬ ಅನನುಭವಿ ಯುವಕ ಒಂದೆರಡು ತಿಂಗಳಲ್ಲಿ ಮದುವೆ ಆಗುತ್ತೇನೆ. ಮದುವೆಯ ರಾತ್ರಿಯೇ ಲೈಂಗಿಕ ಕ್ರಿಯೆ ನಡೆಸಬೇಕಾ? ಒಮ್ಮೆ ಸಂಪರ್ಕ ಹೊಂದಿದರೆ ಒಂದು ಮಗು, ಪುನಃ ಸಂಪರ್ಕ ಹೊಂದಿದರೆ ಇನ್ನೊಂದು ಮಗು ಆಗುತ್ತದೆಯಾ?

'ಒಬ್ಬ ವ್ಯಕ್ತಿ ಒಂದಕ್ಕಿಂತ 'ಹೆಚ್ಚು ಸ್ತ್ರೀಯರೊಂದಿಗೆ ಲೈಂಗಿಕ ಕ್ರಿಯೆ ನಡೆಸಿದರೆ ಏಡ್ಸ್ ಬರುತ್ತದೆ'. ಹಾಗಾದರೆ ಇಬ್ಬರು ಹೆಂಡಿರು ಹೊಂದಿರುವ ವ್ಯಕ್ತಿಗೆ ಏಡ್ಸ್ ಬರುವುದಿಲ್ಲವೇ? ನನಗೆ ಇದರ ಬಗೆಗೆ ಅವಶ್ಯವಾಗಿ ಹೆಚ್ಚು ಮಾಹಿತಿ ಕೊಟ್ಟು ನನ್ನ ಜೀವನಕ್ಕೆ ಸಹಾಯ ಮಾಡಿ.

- ಹೆಸರುಬೇಡ, ಊರುಬೇಡ.


ಸಲಹೆ

ಮದುವೆಯಾದ ಮೊದಲ ರಾತ್ರಿ ಲೈಂಗಿಕ ಕ್ರಿಯೆ ನಡೆಸುವುದು ಅಥವಾ ಬಿಡುವುದು ನಿಮ್ಮಿಚ್ಛೆಗೆ ಬಿಟ್ಟದ್ದು. ನೀವು ಲೈಂಗಿಕ ಸಂಪರ್ಕ ಹೊಂದಿದ ದಿನವೇ ನಿಮ್ಮ ಸಂಗಾತಿಯ ದೇಹದಲ್ಲಿ ಅಂಡಾಣು ಬಿಡುಗಡೆಯಾಗಿದ್ದರೆ, ಆಗ ಮಾತ್ರ ಒಂದೇ ಬಾರಿಯ ಲೈಂಗಿಕ ಸಂಪರ್ಕದಿಂದ ಗರ್ಭ ಧರಿಸುವ ಸಾಧ್ಯತೆ ಇರುತ್ತದೆ. ಪ್ರತಿ ಬಾರಿಯೂ ಗರ್ಭ ಧರಿಸುವುದು ಅಸಾಧ್ಯ. ಗರ್ಭಿಣಿಯಾದ ನಂತರ ಹೆರಿಗೆಯಾಗಿ ಮೂರು ತಿಂಗಳಾಗುವವರೆಗೆ ಮತ್ತೊಮ್ಮೆ ಗರ್ಭ ಧರಿಸುವುದೂ ಅಸಾಧ್ಯ. ಪತ್ನಿಯಲ್ಲದೇ ಬೇರೆ ಸ್ತ್ರೀಯರೊಡನೆ ಸಂಪರ್ಕ ಬೆಳೆಸಿದರೆ ಲೈಂಗಿಕ ರೋಗಗಳಲ್ಲದೆ, ಅವರಿಗೆ 'ಏಡ್ಸ್' ಸೋಂಕು ತಗಲಿದ್ದಲ್ಲಿ ನಿಮಗೂ ಬರುವ ಸಾಧ್ಯತೆ ಇರುತ್ತದೆ. ಇಬ್ಬರು ಪತ್ನಿಯರಿದ್ದರೆ ಇಬ್ಬರಲ್ಲಿ ಮಕ್ಕಳನ್ನು ಹೊಂದಬಹುದು. ಮೊದಲೇ ತಿಳಿಸಿದಂತೆ ಅವರಲ್ಲಿ ಯಾರಿಗಾದರೂ ಏಡ್ಸ್ ಸೋಂಕು ಇದ್ದರೆ ಮಾತ್ರ ಬರುತ್ತದೆ. ನಿಮಗೆ ಲೈಂಗಿಕ ವಿಷಯದ ಬಗ್ಗೆ ಹೆಚ್ಚಿನ ತಿಳುವಳಿಕೆ ಬೇಕಿದ್ದರೆ 'ಡಾ.ಸಿ.ಆರ್.ಚಂದ್ರಶೇಖರ್‌ರವರು ಬರೆದಿರುವ ಲೈಂಗಿಕ ಅರಿವು 106 ಪ್ರಶ್ನೆಗಳು' ಪುಸ್ತಕ ಓದಿ.

ನೀರು ತುಂಬಿದ ವೃಷಣ ಚಿಕಿತ್ಸೆ ಸೂಚಿಸಿ

ನಾನು 23 ವರ್ಷದ ಯುವಕ, ವೃಷಣದ ತೊಂದರೆಯಿಂದ ಡಾಕ್ಟರಲ್ಲಿ ತೋರಿಸಿದೆ. ನೀರು ತುಂಬಿದೆ ಶಸ್ತ್ರ ಚಿಕಿತ್ಸೆ ಇರದ ನೀರು ತೆಗೆಯಬಹುದೆಂದರು, ಹಾಗೂ ತೆಗೆದರು. ದಿನೇ ದಿನೇ ಬಾವು ಕಡಿಮೆಯಾಯಿತು. ಹದಿನೈದು ದಿನಗಳ ನಂತರ ಪುನಃ ಬಾವು ಮತ್ತು ನೋವಿನಿಂದ ನರಳುತ್ತಿದ್ದೇನೆ. ಇದರಿಂದ ಲಿವರ್‌ಗೇನಾದರೂ ತೊಂದರೆ ಇದೆಯೇ. ದಯವಿಟ್ಟು ನನ್ನ ಸಮಸ್ಯೆಗೆ ಚಿಕಿತ್ಸೆಯನ್ನು ಸೂಚಿಸಿ. ಮಾನಸಿಕವಾಗಿ ಬಹಳ ಕೊರಗು ಉಂಟಾಗಿದೆ. ಇದಕ್ಕೆ ಪರಿಹಾರ ಇಲ್ಲವೇ? ನಿಮ್ಮ ಸಲಹೆ ನನಗೆ ವರದಾನವಾಗಲಿ.

- ಹೆಸರುಬೇಡ, ಊರುಬೇಡ.



ಸಲಹೆ

ನಿಮಗೆ ಹೈಡ್ರೋಸೀಲ್ ತೊಂದರೆ ಇರಬಹುದು. ನಿಮಗೆ ಹತ್ತಿರದಲ್ಲಿರುವ ಶಸ್ತ್ರಚಿಕಿತ್ಸಾ ತಜ್ಞವೈದ್ಯರ (ಸರ್ಜನ್) ಬಳಿ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಿರಿ. ಶಸ್ತ್ರಚಿಕಿತ್ಸೆಯಿಂದ ಖಂಡಿತ ಸರಿಹೋಗುತ್ತದೆ. ಅದಿಲ್ಲದೇ ಹಾಗೆಯೇ ನೀರು ತೆಗೆಯುವುದರಿಂದ ಮತ್ತೆ ಮತ್ತೆ ನೀರು ತುಂಬಿಕೊಳ್ಳುತ್ತದೆ. ಅಲ್ಲದೇ ಸರಿಯಾಗಿ ಕುದಿಸದೇ ಇರುವ ಮತ್ತು ಸಂಸ್ಕರಿಸದಿರುವ ಉಪಕರಣಗಳನ್ನುಪಯೋಗಿಸಿ ನೀರು ತೆಗೆಯುವುದರಿಂದ ಸೋಂಕು (infection) ಉಂಟಾಗುವ ಸಾಧ್ಯತೆ ಅಧಿಕ. ಈ ತೊಂದರೆಗಳಿಗೆ ನೀವು ಹೆದರುವ ಅಥವಾ ಕೊರಗುವ ಅವಶ್ಯಕತೆಯಿಲ್ಲ. ಶಸ್ತ್ರಚಿಕಿತ್ಸೆಯಿಂದ ಸುಲಭವಾಗಿ ತೊಂದರೆ ನಿವಾರಣೆಯಾಗುತ್ತದೆ. ಯಕೃತ್ತಿಗೆ (ಲಿವರ್) ಇದರಿಂದ ಯಾವುದೇ ತೊಂದರೆಯಿಲ್ಲ.

ಹಸ್ತ ಮೈಥುನ ಅಪಾಯವೇ

ನಾನು ದಿನಕ್ಕೊಂದು ಅಥವಾ ಎರಡು ಬಾರಿ ಹಸ್ತಮೈಥುನ ಮಾಡಿಕೊಳ್ಳೇನೆ. ಇದರಿಂದ ನನ್ನ ಶಿಶ್ನದ ತೂತು ದಪ್ಪವಾಗಿದೆ. ಬಲಭಾಗಕ್ಕೆ ಬಾಗಿದೆ, ನನಗೆ ಮದುವೆ ಇದೇ ತಿಂಗಳಿದೆ. ಇದರಿಂದ ಅಪಾಯವೇ, ನನ್ನ ಆತಂಕ ಪರಿಹರಿಸಿ.

- ಗಂಡಬೇರುಂಡ, ಈಚನೂರು.

ಸಲಹೆ

ಹಸ್ತಮೈಥುನದಿಂದ ಯಾವುದೇ ತೊಂದರೆಯಾಗುವುದಿಲ್ಲ, ಶಿಶ್ನ ಬಾಗಿರುವುದರಿಂದ ಮದುವೆಯಾಗಿ ದಾಂಪತ್ಯ ಜೀವನ ನಡೆಸುವುದಕ್ಕೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ವೃಥಾ ಚಿಂತಿಸಬೇಡಿ.

ಚಿಕಿತ್ಸೆಗೆ ತಗಲುವ ಖರ್ಚೆಷ್ಟು?

ನಾನು ಇಪ್ಪತ್ನಾಲ್ಕು ವರ್ಷದ ಅವಿವಾಹಿತ ಯುವಕ, ಸದ್ಯದಲ್ಲೇ ವಿವಾಹವಾಗುತ್ತಿದ್ದೇನೆ. ನನ್ನ ಶಿಶ್ನದ ತೊಗಲು ಹಿಂದೆ ಸರಿಯುವುದಿಲ್ಲ. ಇದರಿಂದ ಬಹಳ ಅನಾನುಕೂಲವಾಗಿದೆ ಪರಿಹಾರ ಸೂಚಿಸಬೇಕೆಂದು ಬೇಡುವೆ. ಹಣದ ಕೊರತೆ ಇರುವುದರಿಂದ ಇದಕ್ಕೆ ಆಗುವ ಖರ್ಚಿನ ಮೊತ್ತ ತಿಳಿಸಿ. ಹೀಗಿದ್ದರೆ ಸಂಭೋಗ ನಡೆಸಲು ಸಾಧ್ಯವಿಲ್ಲವೇ ತಿಳಿಸಿ.

- ಕೆ.ಜಿ.ಆರ್., ಮದ್ದೂರು

ಸಲಹೆ

ನೀವು ಶಸ್ತ್ರಚಿಕಿತ್ಸಾ ತಜ್ಞ ವೈದ್ಯರನ್ನು (ಸರ್ಜನ್) ಭೇಟಿಯಾದರೆ ಅವರು ಸಣ್ಣ ದೊಂದು ಶಸ್ತ್ರಚಿಕಿತ್ಸೆ (ಸರ್‌ಕಮ್‌ಸಿಶನ್) ಮಾಡಿ ನಿಮ್ಮ ತೊಂದರೆ ನಿವಾರಿಸುತ್ತಾರೆ. ಅದಕ್ಕೆ ಹೆಚ್ಚೇನೂ ಖರ್ಚು ತಗಲುವುದಿಲ್ಲ. ಯಾವುದೇ

ಇವು ಏಡ್ಸ್‌ಗೆ ಔಷಧಿಗಳೇ ?

ನಾನು ಇಪ್ಪತ್ತನಾಲ್ಕು ವರ್ಷದ ಹೆಚ್‌ಐವಿ ಪೀಡಿತ ಬಿಸಿಲ ಬದುಕು ಓದುಗ ಹೆಚ್.ಐ.ವಿ. ನಾಶಪಡಿಸುವ, ಏಡ್ಸ್ ಬರದಂತೆ ತಡೆಯುವ ಚಿಕಿತ್ಸೆ ಲಸಿಕೆ ಇದೆಯೇ? ಈ ಕೆಳಗೆ ಬರೆದಿರುವ ಚಿಕಿತ್ಸೆಗಳು ನಿಜವೂ ಸುಳ್ಳೋ ತಿಳಿಸಿ? ಈ ಚಿಕಿತ್ಸೆಗೆ ಯಾರಲ್ಲಿ ಸಂಪರ್ಕಿಸಲಿ ತಿಳಿಸಿ.

1. ಹೈಪರ್ ಥರ್ಮಿಯಾ 42°(ಡಿಗ್ರಿ) ಶಾಖದ ಮುಖಾಂತರ ಎರಡು ಗಂಟೆಗಳ ಹೀಟರ್ ಚಿಕಿತ್ಸೆ!
2. ಅಬಕಾವಿರ್ ಎಂಬ ಮದ್ದು ಹೆಚ್.ಐ.ವಿ. ನಾಶಪಡಿಸುತ್ತದೆಯೇ?
3. ಸಂಯುಕ್ತ ಕರ್ನಾಟಕದಲ್ಲಿ ಪ್ರಕಟಿಸಿದಂತೆ ಚಿತ್ರ, ಎನ್ನುವವಳು ಏಡ್ಸ್‌ಗೆ ಬಲಿಯಾಗಿ ಕೇರಳದ ತಿರುವನಂತಪುರದಲ್ಲಿ ಇಮ್ಯುನೋಕ್ರೋ ಚಿಕಿತ್ಸೆ ಪಡೆದು ಏಡ್ಸ್‌ನಿಂದ ಮುಕ್ತಳಾದಳಂತೆ ಹೌದೇ?
4. ಪ್ರಜಾವಾಣಿಯಲ್ಲಿ ಬಂದಂತೆ 'ಲೈಸೋಜೈಮ್' ಎಂಬ ಗರ್ಭಿಣಿಯರ ಜೊಲ್ಲು ಕಣ್ಣೀರು ಮೂತ್ರದಿಂದ ಬೇರ್ಪಡಿಸಿ, ಹೆಚ್.ಐ.ವಿ.ಯನ್ನು ನಾಶಪಡಿಸುತ್ತದೆ ಹೌದೇ?
5. ಅಮೆರಿಕಾದ ಮಹಿಳಾ ವಿಜ್ಞಾನಿ ಗೆಟ್ರುಡ್‌ಬಿಲ್ಲೆ ಏಡ್ಸ್‌ಗೆ ಚಿಕಿತ್ಸೆ ಕಂಡು ಹಿಡಿದು ನೊಬಲ್ ಗಿಟ್ಟಿಸಿಕೊಂಡಿದ್ದಾಳೆ. ಇದು ಸತ್ಯವೆ ?

ಹೆಚ್.ಐ.ವಿ. ಬಂದರೆ ಏಡ್ಸ್ ಆಗಿ ಎಷ್ಟು ದಿನಗಳಲ್ಲಿ ಪರಿವರ್ತಿಸುತ್ತದೆ? ನನ್ನ ಪ್ರಶ್ನೆಗೆ ಉತ್ತರಿಸಿ ನನ್ನ ಸಾವನ್ನು ತಡೆಯುವ ಚಿಕಿತ್ಸೆ ಇದ್ದರೆ ಅವಶ್ಯ ಹೇಳಿರಿ, ನಿಮ್ಮನ್ನೇ ನಂಬಿರುತ್ತೇನೆ.

- XYZ, Positive.

ಸಲಹೆ

ನೀವು ತಿಳಿಸಿದ ಎಲ್ಲ ವಿಧದ ಚಿಕಿತ್ಸೆಗಳೂ ವೈರಸ್ ವಿರೋಧಿ ಚಿಕಿತ್ಸೆಗಳಾದರೂ ಅವು ಯಾವುವೂ ವೈರಸ್‌ನ್ನು ಸಂಪೂರ್ಣ ನಾಶ ಮಾಡುವಂತಹವುಗಳಲ್ಲ.

1. *ವೈರಸ್ ಹೊರಗಡೆ ಗಾಳಿಯ ಸಂಪರ್ಕಕ್ಕೆ ಬಂದರೂ ಸಾಯುತ್ತವಾದ್ದರಿಂದ ಹೈಪರ್ ಥರ್ಮಿಯಾದ ಅವಶ್ಯಕತೆಯಿಲ್ಲ. ಆದರೆ ಈ ಚಿಕಿತ್ಸೆ ದೇಹದೊಳಗಡೆ ಕೊಡುವುದಕ್ಕೆ ಸಾಧ್ಯವಿಲ್ಲ.*
2. *ಲಿಬಕಾವಿರ್ ವೈರಸ್ ವಿರೋಧಿ ಏಜೆಂಟ್ ಯಾವುದೇ ವೈರಸ್‌ನ ಚಿಕಿತ್ಸೆಯಲ್ಲೂ ಇದನ್ನು ಬಳಸಲಾಗುತ್ತದೆ ಇದೇನೂ ಹೊಸ ಔಷಧಿ ಅಲ್ಲ.*
3. *ಇಮ್ಯುನೆಕ್ಸ್ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವಂತಹದೇ ಹೊರತು ವೈರಸ್‌ನ್ನು ನಾಶಪಡಿಸುವಂತಹದಲ್ಲ.*
4. *ಲೈಸೋಜೈಮ್ ಕೂಡ ರೋಗ ನಿರೋಧಕ ಶಕ್ತಿ ಹೆಚ್ಚಿಸಿ ವೈರಸ್‌ನ ಹಾವಳಿ ಹೆಚ್ಚಾಗದಂತೆ ತಡೆಯಬಲ್ಲದಷ್ಟೇ.*
5. *ಈ ವಿಷಯ ನಿಜವೇ ಆಗಿದ್ದಲ್ಲಿ ಎಲ್ಲ ಪತ್ರಿಕೆಗಳಲ್ಲಿ ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಬಿತ್ತರವಾಗುತ್ತಿತ್ತು.*

ನಿಮಗೆ ಹೆಚ್.ಐ.ವಿ. ಹಾಗೂ ಏಡ್ಸ್ ಬಗ್ಗೆ ಸಂಪೂರ್ಣ ವಿವರಣೆ ತಿಳಿದುಕೊಳ್ಳಬೇಕೆಂಬ ಇಚ್ಛೆಯಿದ್ದಲ್ಲಿ ನಾನು ಬರೆದಿರುವ ಅಂಕುರ ಪ್ರಕಾಶನದವರು ಪ್ರಕಟಿಸಿರುವ 'ಏಡ್ಸ್! ಪ್ರಳಯ ಎದುರಿಸಲು ಸಿದ್ಧರಾಗಿ!' ಪುಸ್ತಕ ಓದಿ. ನೀವು ಬಿಸಿಲ ಬದುಕು ಪತ್ರಿಕೆಯ ವಿಳಾಸಕ್ಕೆ ಸಂಪರ್ಕಿಸಿದರೆ ಪುಸ್ತಕ ದೊರಕುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಬದುಕಬೇಕು. ಸಾವು ಹುಟ್ಟಿದ ಪ್ರತಿಯೊಬ್ಬರಿಗೂ ಬರುವಂತಹದು. ಯಾವತ್ತೋ ಬರುವ ಸಾವಿಗಾಗಿ ಇಂದಿನಿಂದಲೇ ಬದುಕುವ ಆಸಕ್ತಿ ಕಳೆದುಕೊಂಡರೆ ಹೇಗೆ? ಪುಸ್ತಕವು ಸ್ವಲ್ಪಮಟ್ಟಿಗಾದರೂ ನಿಮ್ಮಲ್ಲಿನ ನಿರಾಶೆಯನ್ನು ಹೋಗಲಾಡಿಸಿದರೆ ನಾನು ಪಟ್ಟ ಶ್ರಮ ಸಾರ್ಥಕವಾಯಿತೆಂದು ಭಾವಿಸುವೆ.

ಸರಕಾರಿ ಆಸ್ಪತ್ರೆಯಲ್ಲಿ ಇದನ್ನು ಉಚಿತವಾಗಿಯೇ ಮಾಡುತ್ತಾರೆ.

ಲೈಂಗಿಕ ಸಂಪರ್ಕಕ್ಕೆ ಯೋಗ್ಯ ಕಾಲ ಯಾವುದು

ಅ. ನಾನು ವಿವಾಹಿತ ವಯಸ್ಕರ, ಹೆಣ್ಣು ಗರ್ಭಧರಿಸಿದ ನಂತರ ಎಷ್ಟು ತಿಂಗಳು ಲೈಂಗಿಕ ಕ್ರಿಯೆ ನಡೆಸಬಾರದು.

ಆ. ಹೆರಿಗೆಯ ನಂತರ ಎಷ್ಟು ತಿಂಗಳ ಕಾಲ ಬಿಟ್ಟು ಸಂಪರ್ಕ ಮುರಿದುವರೆಸಬಹುದು, ದಯವಿಟ್ಟು ಉತ್ತರಿಸಿ.

- ಹೆಸರುಬೇಡ, ಊರುಬೇಡ.

ಸಲಹೆ

ಗರ್ಭಿಣಿಯಾದಾಗ ಮೊದಲ ಮೂರು ತಿಂಗಳು ಹಾಗೂ ಕೊನೆಯ ಎರಡು ತಿಂಗಳು ಲೈಂಗಿಕ ಸಂಪರ್ಕಕ್ಕೆ ಯೋಗ್ಯವಲ್ಲ. ಹೆರಿಗೆಯಾದ ನಂತರ ಮೂರು ತಿಂಗಳ ಬಳಿಕ ಲೈಂಗಿಕ ಸಂಪರ್ಕ ಹೊಂದಬಹುದು.

ಮೀಸೆ ಬೆಳೆದಿಲ್ಲ

ನಾನು ಇಪ್ಪತ್ತೆರೆಡು ವರ್ಷದ ವಿದ್ಯಾರ್ಥಿ ನಾಲ್ಕು ವರ್ಷಗಳಿಂದ ಹಸ್ತಮೈಥುನದ ಚಟವಿದ್ದು ಸದ್ಯ ಆರು ತಿಂಗಳಿಂದ ಬಿಟ್ಟಿದ್ದೇನೆ. ನನ್ನ ಹದಿನಾರು-ಹದಿನೇಳರ ಹರೆಯದಲ್ಲಿ ಮೀಸೆ ಬಂದಿತ್ತು, ಗುಳ್ಳೆಗಳ ಕಾರಣ ಕಿತ್ತು ಹಾಕಿದೆ. ಈಗ ಗಡ್ಡ ಬರುತ್ತಿದೆ. ಮೀಸೆ ಬೆಳೆಯುತ್ತಿಲ್ಲ. ಯಾರಿಗಾದರು ಮುಖ ತೋರಿಸಲು ನಾಚಿಕೆಯಾಗುತ್ತೆ. ದಯವಿಟ್ಟು ಪರಿಹಾರ ಸೂಚಿಸಿ.

- ಪ್ರಸಾದ್, ಊರುಬೇಡ.


ಸಲಹೆ

ಮುಖದಲ್ಲಿನ ಕೂದಲ ಬೆಳವಣಿಗೆಯು ಅನುವಂಶೀಯ ಕಾರಣಗಳಿಂದ ಹಾಗೂ ಹಾರ್ಮೋನಿನಿಂದ ಆಗುವಂತಹದು. ಅದಕ್ಕಾಗಿ ಚಿಂತಿಸುವುದನ್ನು ಬಿಟ್ಟು ಬಿಡಿ. ಅದಕ್ಕೆ ಯಾವುದೇ ಮಾತ್ರೆ ಅಥವಾ ಔಷಧಿಯಾಗಲಿ ಇಲ್ಲ.

ನಮ್ಮ ವಿರೋಧಿಗಳಾದ ಪಟೇಲ್ ಮತ್ತು ಒಕ್ಕಲಿಗರನ್ನು ನಮ್ಮತ್ತ ಸೆಳೆಯಲು ಆದಷ್ಟು ಬೇಗ ಯಜ್ಞ ಮಾಡೋಣವೇ?



ನನ್ನ ಪ್ರೀತಿ ನನಗೆ ದಕ್ಕೀತೆ?



ಮೇಡಂ ನಾನು ಪಿಯುಸಿ ಓದುತ್ತಿದ್ದೇನೆ. ನಾನು ಒಂದು ಹುಡುಗಿಯನ್ನು ಮನಸಾರೆ ಪ್ರೀತಿಸುತ್ತಿದ್ದೇನೆ. ಆ ಹುಡುಗಿಯೂ ನನ್ನ ಪ್ರೀತಿಸಿದ್ದಾಳೆ. ಸಮಸ್ಯೆ ಅಂದರೇ ನಮ್ಮ ಮಧ್ಯೆ ಆ ಹುಡುಗಿಯ ತಂದೆ-ತಾಯಿಯರಿಗೆ ಬೇಕಾದ ಒಬ್ಬ ಹುಡುಗ ಅವನು ಅವಳೊಂದಿಗೆ ಮಾತನಾಡುತ್ತಾನೆ. ಮನೆಗೆ ಹೋಗ್ತಿರ್‍ತಾನೆ. ಅಲ್ಲದೆ ಮುಂದಿನ ವರ್ಷ ಅವರಿಬ್ಬರ ಮದುವೆ ಅಂತಲೂ ಕೇಳಲ್ಪಟ್ಟೆ, ಆದರೆ ಅವನು ಆ ಹುಡುಗಿಗೆ ಸುತಾರಾಂ ಇಷ್ಟ ಇಲ್ಲ. ಈಗ ನಾವು ಏನು ಮಾಡಬಹುದು. ದಯವಿಟ್ಟು ಚಿಕ್ಕ ಸಮಸ್ಯೆ ಅಂತ ಪರಿಗಣಿಸಿ, ಉತ್ತರಿಸಿರಿ.

- ಎಂ.ಶರಣುಸ್ವಾಮಿ, ಸಿರ್ಸಿ.

ಸಲಹೆ

ನೀವಿನ್ನೂ ಪಿಯುಸಿ ವಿದ್ಯಾರ್ಥಿ ಈಗಲೇ ಏಕೆ ಮದುವೆ ಬಗ್ಗೆ ಯೋಚಿಸುವಿರಿ? ಮೊದಲು ವಿದ್ಯಾವಂತರಾಗಿ ಆರ್ಥಿಕ ಸ್ವಾವಲಂಬಿಯಾಗಿ, ನಂತರವೇ ಮದುವೆ. ನೀವು ಪ್ರೀತಿಸುತ್ತಿರುವ ಹುಡುಗಿಗೆ ಅವರ ಅಪ್ಪ ಅಮ್ಮ ಒಂದು ವರ್ಷದ ನಂತರ ಮದುವೆ ಮಾಡುವವರಿದ್ದಾರೆಂದು ತಿಳಿಸಿದ್ದೀರಿ. ಅಷ್ಟರಲ್ಲಿ ನಿಮ್ಮಿಬ್ಬರ ಮಧ್ಯೆ ಆಗಮಿಸಿರುವ ಆ ಇನ್ನೊಬ್ಬ ಹುಡುಗನಿಗೆ ನಿಮ್ಮಿಬ್ಬರ ಪ್ರೀತಿಯ ವಿಷಯ ತಿಳಿದು ಅವನೇ ದೂರವಾಗಬಹುದು. ಇಲ್ಲದಿದ್ದರೆ ನೀವು ಪ್ರೀತಿಸುತ್ತಿರುವ ಹುಡುಗಿಯೇ ಧೈರ್ಯವಾಗಿ ಅವರ ತಂದೆ-ತಾಯಿಗೆ ವಿಷಯ ತಿಳಿಸಲಿ. ಏನೇ ಆದರೂ ಇನ್ನೂ 3-4 ವರ್ಷಗಳವರೆಗೆ ಮದುವೆಯ ಬಗ್ಗೆ ಯೋಚಿಸಬೇಡಿ. ಅಲ್ಲಿಯವರೆಗೆ ನೀವಿಬ್ಬರೂ ದೂರವಿರುವುದೇ ಕ್ಷೇಮ.

ನಿರುದ್ಯೋಗಿಗೆ ದಾರಿ ತೋರಿಸಿ




ನಾನು ಕುಬೇರ ಡಿಡಬ್ಲ್ಯೂಆರ್, ಬಿ.ಎ., ಓದಿದ್ದೇನೆ. 44 % ಗಳಿಸಿ. ಎಲ್ಲ ಉದ್ಯೋಗಕ್ಕೆ ಯತ್ನಿಸಿದರೂ ಉದ್ಯೋಗ ದೊರೆಯದೆ ವಿಫಲನಾಗಿದ್ದೇನೆ. 6 ತಿಂಗಳು ಕಂಪ್ಯೂಟರ್ ಕಲಿತು ಮುಂದೆ ಓದುವ ಆಸೆ ಇದ್ದರೂ ಹಣಕಾಸಿನ ಕೊರತೆಯಿಂದ ನಿರಾಶಾವಾದಿಯಾಗಿದ್ದೇನೆ. ಹೀಗಾಗಿ 2-3 ಬಾರಿ ಆತ್ಮಹತ್ಯೆಯ ಪ್ರಯತ್ನ ಮಾಡಿದ್ದೂ ಇದೆ. ಆದರೆ ಯಾರಿಗೂ ತಿಳಿದಿಲ್ಲ, ನಾನು ಕೆ.ಎ.ಎಸ್., ಐ.ಎ.ಎಸ್ ಮಾಡಲು ಈ ಅಂಕಗಳ ಕೊರತೆಯೇ ಮತ್ತು ವಯಸ್ಸಿನ ಮಿತಿ ಇದೆಯೇ ತಿಳಿಸಿ. ಸ್ನೇಹಿತರಿಗೆ ಬುದ್ಧಿ ಹೇಳುವ ನಾನೇ ಹೀಗೆ ವಿಮುಖನಾಗಲು ಕಾರಣವೇನು? ದಯವಿಟ್ಟು ಉತ್ತರಕೊಡಿ. ನನ್ನ ಯಾರೂ ಅರ್ಥಮಾಡಿಕೊಳ್ಳಲಿಲ್ಲ. ದುಃಖದಲ್ಲಿರುವ ನಾನು ಆತ್ಮಹತ್ಯೆಯೇ ಜೀವನದ ಕೊನೆಯ ಗುರಿ ಎಂದು ಭಾವಿಸಿದ್ದೇನೆ.

- ಕುಬೇರ ಡಿಡಬ್ಲ್ಯೂಆರ್.

ಸಲಹೆ

ವಿದ್ಯಾವಂತರಾಗಿರುವ ನೀವು ಪ್ರಯತ್ನಪಟ್ಟರೆ ಎಲ್ಲಿಯಾದರೂ ಖಂಡಿತ ಉದ್ಯೋಗ ದೊರಕುತ್ತದೆ. ಯಾವುದೂ ಸಿಗದಿದ್ದರೆ ಒಂದು ಸ್ವಂತ ಸಣ್ಣ ಉದ್ಯಮವನ್ನಾದರೂ ಪ್ರಾರಂಭಿಸಿ, ಜೀವನದಲ್ಲಿ ಆಶಾವಾದಿಯಾಗಿರಬೇಕೇ ಹೊರತು ನಿರಾಶಾವಾದಿಯಲ್ಲ. ಆತ್ಮಹತ್ಯೆಯ ಯೋಚನೆ ಸಲ್ಲದು. ನಿಮ್ಮ ಸಮಸ್ಯೆ ತಾತ್ಕಾಲಿಕವಾದುದು. ತಾಳ್ಮೆ ಬಹಳ ಮುಖ್ಯ. ತಾಳ್ಮೆ ಹಾಗೂ ಪ್ರಯತ್ನ ಎರಡೂ ಇದ್ದರೆ ಎಂತಹ ಕಾರ್ಯವಾದರೂ ಸಿದ್ಧಿಸುತ್ತದೆ. ನೀವು ಕೆ.ಎ.ಎಸ್. ಹಾಗೂ ಐ.ಎ.ಎಸ್. ಪರೀಕ್ಷೆ ಬರೆಯಬಹುದು ನಿಮಗಿನ್ನೂ ಅವಕಾಶವಿದೆ, ಅಂಕಗಳೇನೂ ಪರೀಕ್ಷೆಗೆ ಅಡ್ಡ ಬರುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು. ನೀವು ಈ ಕ್ಷಣದಿಂದಲೇ ನಿರಾಶೆ, ದುಃಖ ಹಾಗೂ ಆತ್ಮಹತ್ಯೆ ಎಂಬ ಮೂರು ಭೂತಗಳನ್ನು ಹೊಡೆದೋಡಿಸಿ ಆ ಜಾಗದಲ್ಲಿ ಶಾಂತಿ, ನೆಮ್ಮದಿ ಹಾಗೂ ಚಟುವಟಿಕೆಗಳಿಗೆ ಆಹ್ವಾನ ನೀಡಿ. ಖಂಡಿತ ಯಶಸ್ಸು ದೊರೆಯುತ್ತದೆ.

ಅಂತರ ಜಾತಿ ವಿವಾಹ ಸಮ್ಮತವೇ?




ಅಕ್ಕಾ ನಾನು 20 ವರ್ಷದ ಯುವಕ 17 ವರ್ಷದ ಯುವತಿಯನ್ನು ಪ್ರೀತಿಸುತ್ತಿದ್ದೇನೆ. ಅವಳಿಗೆ ಬೇರೆ ಹುಡುಗ ಗೊತ್ತು ಮಾಡುತ್ತಿದ್ದಾರೆ ನಾವು ಓಡಿ ಹೋಗೋಣವೆಂದರೆ. ಕಾನೂನು ಒಪ್ಪುತ್ತಾ ನನಗೆ ನೌಕರಿಯೂ ಇಲ್ಲ, ಮನೆಯಲ್ಲಿ ಅವಳ ತಾಯಿ ಬೇರೆ ಖಾಯಿಲೆಯಿಂದಿದ್ದಾಳೆ. ಪ್ರೀತಿಸಿದ ಹುಡುಗ ನನ್ನ ಮದುವೆ ಆಗಲಿಲ್ಲವಾದರೆ ವಿಷ ತೆಗೆದುಕೊಂಡು ಸಾಯುವೆ ಅನ್ನುತ್ತಾಳೆ. ಜಾತಿಯವರು ಆಕೆಯ ಸಂಬಂಧ ಬೆಳೆಸಿದರೆ ನನ್ನ ಮನೆಗೆ ಸೇರಿವುದಿಲ್ಲವೆನ್ನುತ್ತಾರೆ. ಮತ್ತು ನನ್ನ ತಾಯಿ ನೀ ಪ್ರೀತಿಸಿದ ಹುಡುಗಿಯನ್ನು ಮದುವೆಯಾಗದಿದ್ದರೆ ನಾನೂ ಉಳಿಯುವುದಿಲ್ಲವೆನ್ನುತ್ತಾರೆ. ಜಾತಿಯಲ್ಲಿ ಆಕೆ ನಮಗಿಂತ ಕೀಳು ದಯವಿಟ್ಟು ಉತ್ತರಿಸಿ, ಈ ಮದುವೆ ಆಗದಿದ್ದರೆ ಯಾರಾದರೂ ಸಾಯುತ್ತಾರೆ. ನಿಮ್ಮ ಉತ್ತರ ಸಾವನ್ನು ತಪ್ಪಿಸಬಹುದು.

- ಎ.ಜಿ.ಸಿಕೆಡಿ., ಊರು ಬೇಡ.

ಸಲಹೆ

ನೀವು ಮೊದಲು ಆರ್ಥಿಕ ಸ್ವಾವಲಂಬಿಯಾಗಿ ನಂತರ ಮದುವೆ ಮಾಡಿಕೊಳ್ಳಿ. ಆ ಹುಡುಗಿಗೆ ಇನ್ನೂ 17 ವರ್ಷ ಎಂದಿರುವಿರಿ. 18 ವರ್ಷ ತುಂಬುವುದರೊಳಗೆ ಮದುವೆಯಾಗುವುದು ಕಾನೂನಿನ ಹಾಗೂ ಆರೋಗ್ಯದ ದೃಷ್ಟಿಯಿಂದ ತಪ್ಪು. ಆ ಹುಡುಗಿಯ ಮನೆಯವರಿಗೆ ಇದೇ ಕಾರಣಗಳನ್ನು ನೀಡಿ ಇನ್ನೂ ಒಂದೆರಡು ವರ್ಷ ಮದುವೆ ಮಾಡದಿರುವ ಹಾಗೆ ಒಪ್ಪಿಸಲು ಹುಡುಗಿಗೆ ತಿಳಿಸಿ. ಸಧ್ಯ ಅವಳು ಓದನ್ನು ಮುಂದುವರೆಸಲಿ ನಿಮ್ಮ ಮೇಲಿನ ಅತಿಯಾದ ವ್ಯಾಮೋಹದಿಂದ ಹಾಗೂ ಪ್ರೀತಿಯಿಂದ ನಿಮ್ಮ ತಾಯಿ ಸಾಯುತ್ತೇನೆ ಎಂದು ಹೇಳಿರಬಹುದು. ಅವರಿಗೆ ನಿಧಾನವಾಗಿ ವಿಷಯ ತಿಳಿಸಿ, ಒಪ್ಪಿಸಿ. ಹಾಗೆಯೇ ಆ ಹುಡುಗಿಗೂ ಎಲ್ಲ ವಿಷಯ ಮನವರಿಕೆಯಾಗುವಂತೆ ವಿವರಿಸಿ ಒಂದೆರಡು ವರ್ಷ ಕಾಯಲು ಹೇಳಿ.

ಸೌಂದರ್ಯದ ಕೊರತೆ



ನಾನು 32 ವರ್ಷದ ಯುವಕ ಮದುವೆಯಾಗಿ 2 ವರ್ಷ ಕಳೆಯಿತು, ಮಕ್ಕಳಾಗಿಲ್ಲ. ಮದುವೆಯಾದಾಗಿನಿಂದ ಮಾನಸಿಕ ನೆಮ್ಮದಿ ಇಲ್ಲ. ಅರೇಂಜ್‌ಡ್ ಮದುವೆಯಾದ್ದರಿಂದ ಅವರು ನನಗೆ ಅವಳನ್ನು ಬಹಳ ಸುಂದರಿ ಎಂದು ನಂಬಿಸಿದರು. ಆದರೆ ಪುನಃ ಆಕೆ ಸುಂದರಳಲ್ಲ ಅನಿಸಿದೆ ಅಲ್ಲದೇ ನಿನಗೆ ಮೋಸವಾಗಿದೆ ಅಂತ ನನ್ನ ಹಿರಿಯರೇ ಹೇಳುತ್ತಾರೆ. ಬದುಕೇ ಬೇಸರವಾಗಿದೆ ಅಂದು ನೋಡುವಾಗ ಎಲ್ಲರಿಗೂ ಅಂದವಾಗಿ ಕಂಡ ಅವಳು ಇಂದು ಅಂದವಾಗಿಲ್ಲ ಕಾರಣವೇನು? ನನಗೆ ಮೋಸಹೋದೆ ಅನಿಸುತ್ತದೆ. ನಿಮ್ಮ ಅಂಕಣದ ಉತ್ತರಕ್ಕಾಗಿ ಕಾಯುತ್ತಿರುತ್ತೇನೆ.

- ಕೆ.ರಾಜಶೇಖರ, ಊರುಬೇಡ.

ಸಲಹೆ

ನಿಮ್ಮ ಮನೆಯವರೆಲ್ಲ ನೋಡಿ ಒಪ್ಪಿ ಮದುವೆಯಾಗಿರುವಾಗ ಅವರು ಮೋಸ ಮಾಡಲು ಹೇಗೆ ಸಾಧ್ಯ? ಮುಂಚೆ ಅಂದವಾಗಿ ಕಂಡವಳು ನಂತರ ಹೇಗೆ ಕುರುಪಿಯಾಗಿ ಕಾಣಲು ಸಾಧ್ಯ? ರೂಪವು ನಾವು ನೋಡುವ ದೃಷ್ಟಿಯಲ್ಲಿ ಅಡಗಿರುತ್ತದೆ ಎಂಬುದನ್ನು ಮರೆಯಬೇಡಿ. ಸೃಷ್ಟಿಯಲ್ಲಿ

ಕುರೂಪವೆಂಬುದು ಇಲ್ಲವೇ ಇಲ್ಲ. ಒಬ್ಬೊಬ್ಬರಲ್ಲಿ ಒಂದೊಂದು ವಿಧಧ ಆಕರ್ಷಣೆ ಇದ್ದೇ ಇರುತ್ತದೆ. ಮನುಷ್ಯನಿಗೆ ಬಾಹ್ಯ ರೂಪಕ್ಕಿಂತ ಆರೋಗ್ಯ, ಗುಣ ಹಾಗೂ ನಡತೆ ಬಹು ಮುಖ್ಯ. ಎರಡು ವರ್ಷ ಅವಳೊಂದಿಗೆ ಜೀವನ ನಡೆಸಿಯೂ ಅವಳ ಮನಸ್ಸನ್ನು ಅರಿಯುವುದಕ್ಕೆ ಪ್ರಯತ್ನಿಸುವುದು ಬಿಟ್ಟು ರೂಪದ ಬಗ್ಗೆ ಚಿಂತಿಸುತ್ತಿದ್ದೀರಲ್ಲ. ಒಂದು ಕ್ಷಣ ನೀವು ನಿಮ್ಮ ಸ್ಥಾನದಲ್ಲಿ ನಿಮ್ಮ ಪತ್ನಿಯಿದ್ದಿದ್ದರೆ ಹೇಗಿತ್ತೆಂದು ಕಲ್ಪಿಸಿ ನೋಡಿ. ಖಂಡಿತ ಅವಳು ನೀವೀಗ ಯೋಚಿಸುವ ರೀತಿಯಲ್ಲಿ ಯೋಚಿಸುತ್ತಿರಲಿಲ್ಲ. ನೀವೀಗ ಗೃಹಸ್ಥರು, ಭವಿಷ್ಯದ ಜೀವನದ ಬಗ್ಗೆ ಯೋಚನೆ ಮಾಡಿ. ಮಕ್ಕಳಾಗದೇ ಇದ್ದುದಕ್ಕೆ ಕಾರಣವೇನೆಂದು ಅರಿಯಲು ಸ್ತ್ರೀರೋಗ ತಜ್ಞವೈದ್ಯರನ್ನು (ಗೈನಕಾಲಜಿಸ್ಟ್) ಭೇಟಿಯಾಗಿ ಚಿಕಿತ್ಸೆ ಪಡೆಯಿರಿ. ನಿಮ್ಮ ಪತ್ನಿಯೊಂದಿಗೆ ಸುಮಧುರ ಬಾಂಧವ್ಯ ಬೆಸೆದು ಹಾಲು ಜೇನಿನಂತೆ ಬೆರೆತು ಬದುಕಿ ಸಮಾಜದಲ್ಲಿ ಇತರರಿಗೆ ಮಾದರಿಯಾಗಿ ಬಾಳಿ.

ಗೊಂದಲದಿಂದ ಬಿಡುಗಡೆ ಮಾಡಿ



ನನ್ನ ವಯಸ್ಸು 15, 9ನೇ ತರಗತಿ ಪರೀಕ್ಷೆ ಬರೆದಿದ್ದೇನೆ. ನಾನು ಎತ್ತರವಾಗಿ, ದಪ್ಪವಾಗಿ ಒಳ್ಳೆಯ ಮೈಮಾಟವಿರಬೇಕೆಂದು ಬಯಸುತ್ತೇನೆ. ಆದರೆ ತೆಳ್ಳಗಿದ್ದು ಅಷ್ಟೇನೂ ಎತ್ತರವೂ ಇಲ್ಲದಿರುವುದು ನನಗೆ ಸಮಸ್ಯೆಯಾಗಿದೆ. ನನ್ನ ತ್ವಚೆ ಬೆಳ್ಳಗಿದೆ ಆದರೂ ಅಷ್ಟೊಂದು ಆರೋಗ್ಯಕರವಾಗಿಲ್ಲ. ಮುಖದ ಮೇಲೆ ಚಿಕ್ಕಚಿಕ್ಕ ಗುಳ್ಳೆಗಳಿವೆ. ಒಳ್ಳೆಯ ಹಾಗೂ ಆರೋಗ್ಯಕರ ತ್ವಚೆ ಪಡೆಯಲು ಏನು ಮಾಡಬೇಕು? ಡಾಕ್ಟರರ ಹತ್ತಿರ ಹೋಗಲು ಖಂಡಿತಾ ಹೇಳಬೇಡಿ. ಮನೆಯಲ್ಲಿ ಒಪ್ಪುವುದಿಲ್ಲ ನಾನು ವೃಂದಾ ಸೋಪನ್ನು ಬಳಸುತ್ತೇನೆ. ಚಿಕ್ಕವಳಿಂದ ಮೈಸೂರ್ ಸ್ಯಾಂಡಲ್ ಬಳಸುತ್ತಿದ್ದೆ. ನಾನು ಯಾವ ಕ್ರೀಮ್, ಸೋಪು ಬಳಸಲಿ ಹೇಳಿರಿ. ಹೆಚ್ಚು ಹೊತ್ತು ನಿದ್ದೆ ಮಾಡಲು? ಯೋಗಾಸನಗಳಿದ್ದರೆ ಹೇಳಿರಿ? ಇದಕ್ಕೆ ಪೂರಕವಾದ ಎಲ್ಲಾ ವಿಷಯಗಳನ್ನು 'ವೃಂದಾ' ಸೋಪಿನ ಉಪಯೋಗ ಮಾಡಲಾ ಬೇಡವಾ ಎಂಬುದನ್ನು ನಿಮ್ಮ ಸಲಹೆಯಲ್ಲಿ ತಿಳಿಸಿ.


– ಮಗಳ ಸಮಾನಳು, ಹರಪನಹಳ್ಳಿ

ಸಲಹೆ

ನಿಮಗಿನ್ನೂ 15 ವರ್ಷ ವಯಸ್ಸಿರುವುದರಿಂದ ಇನ್ನೂ ಮುರು ವರ್ಷ ಎತ್ತರವಾಗಿ ಬೆಳೆಯುವ ಅವಕಾಶವಿದೆ. ಎತ್ತರವು ಅನುವಂಶಿಕವಾಗಿ ನಿರ್ಧರಿಸಲ್ಪಟ್ಟಿರುತ್ತದೆ. ಹಗ್ಗ (ಸ್ಕಿಪ್ಪಿಂಗ್) ಈಜುವುದರಿಂದ ಸ್ವಲ್ಪಮಟ್ಟಿಗೆ ಎತ್ತರ ಹೆಚ್ಚಬಹುದು. ತೂಕ ಹೆಚ್ಚಿಸಿಕೊಳ್ಳಲು ಆಹಾರದಲ್ಲಿ ಹಾಲು, ಮೊಸರು, ಬೆಣ್ಣೆ, ತುಪ್ಪ, ಹಣ್ಣು ಹಾಗೂ ಸಿಹಿ ಪದಾರ್ಥವನ್ನು ಯಥೇಚ್ಛವಾಗಿ ಬಳಸಿ. ನಿಯಮಿತವಾಗಿ ಅಂದರೆ ಕನಿಷ್ಟ 8 ಗಂಟೆಗಳಾದರೂ ನಿದ್ರಿಸಿ. ಸರಳ ವ್ಯಾಯಾಮ ಇಲ್ಲವೇ ಯೋಗಾಸನ ಮಾಡಿ. ಸಾಬೂನಿನಿಂದ ತ್ವಚೆ ಎಂದಿಗೂ ಕಾಂತಿಯುಕ್ತವಾಗುವುದಿಲ್ಲ. ಅದೆಲ್ಲಾ ಜಾಹೀರಾತಿನಲ್ಲಿ ಮಾತ್ರ ಸಾಧ್ಯ. ಸ್ನಾನಕ್ಕೆ ಯಾವುದೇ ಸೌಮ್ಯ ಸಾಬೂನನ್ನು ಬಳಸುವುದು, ತ್ವಚೆ ಕಾಂತಿಯುಕ್ತವಾಗಬೇಕೆಂದರೆ ಹೆಚ್ಚು ಪೌಷ್ಠಿಕಾಂಶಯುಕ್ತವಾಗಿರುವ ಆಹಾರ (ನಾನು ಈ ಮೊದಲೇ ತಿಳಿಸಿದಂತೆ) ಸೇವಿಸಿ. ವಾರಕ್ಕೊಂದು ಬಾರಿ ಮೈಗೆಲ್ಲ ಎಣ್ಣೆ ಹಚ್ಚಿಕೊಂಡು ಅಭ್ಯಂಜನ ಸ್ನಾನ ಮಾಡಿ. ಪ್ರತಿದಿನ ರಾತ್ರಿ ಮಲಗುವಾಗ ಅರಶಿನವನ್ನು ಹಾಲಿನ ಕೆನೆಯಲ್ಲಿ ಬೆರೆಸಿಕೊಂಡು ಮುಖ ಕೈಗಳಿಗೆ ಸವರಿಕೊಳ್ಳಿ. ದಿನಕ್ಕೆರಡು ಬಾರಿ ನಿಂಬೆಯ ಶರಬತ್ ಇಲ್ಲವೇ ಯಾವುದಾದರೊಂದು ಹಣ್ಣಿನ ರಸ ಕುಡಿಯಿರಿ. ಮುಖದಲ್ಲಿರುವ ಚಿಕ್ಕ ಗುಳ್ಳೆಗಳನ್ನು ಹೋಗಲಾಡಿಸಲು ದಿನಕ್ಕೆರಡು ಬಾರಿ ಬಿಸಿ ನೀರಿನಿಂದ ಮುಖ ತೊಳೆಯಿರಿ. ಮುಖ ತೊಳೆಯಲು ಕಡಲೆಹಿಟ್ಟು ಉಪಯೋಗಿಸಿ ಗುಳ್ಳೆಗಳನ್ನು ಉಗುರಿನಿಂದ ಚಿವುಟಿಕೊಳ್ಳಬೇಡಿ.

ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ **'ಆಪ್ತ ಸಮಾಲೋಚನೆ'** ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವ **''ವಯಸ್ಕರ ಸಂದೇಹ ಸಲಹೆ''** ಅಂಕಣಗಳನ್ನು ಪ್ರತಿ ತಿಂಗಳು ನಿಗದಿತ ಮಧ್ಯ ಪುಟಗಳಲ್ಲೇ ಪ್ರಕಟಿಸಲಾಗುವುದು. ಓದುಗರು ಈ ಪುಟಗಳಲ್ಲಿನ ಮಾಹಿತಿಯನ್ನು ಸಮಯಾನುಸಾರ ಬಳಸಿಕೊಳ್ಳಲು ಅನುವಾಗುವಂತೆ ಬಿಡಿಸಿಟ್ಟುಕೊಳ್ಳಬಹುದು.

ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ :
ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951 ಬಸವೇಶ್ವರನಗರ,
ಬೆಂಗಳೂರು - 560 079.



ಸ್ನಾತಕೋತ್ತರ ಪದವಿಗಾಗಿ ಅರ್ಜಿ ಆಹ್ವಾನ

ಮೌಲಾನ ಆಜಾದ್ ಕಾಲೇಜ್ ಆಫ್ ಟೆಕ್ನಾಲಜಿ, ಭೂಪಾಲ್

ಕೈಗಾರಿಕಾ ಕ್ಷೇತ್ರ ಮೂಲದ M.tech/M.Arch. Full Time (1 1/2 ವರ್ಷ) ಹಾಗೂ Part time (2 1/2 ವರ್ಷ) ಕೋರ್ಸುಗಳಿಗೆ ಸೇರಲು ಅರ್ಜಿಗಳನ್ನು ಕರೆಯಲಾಗಿದೆ. GATE ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗುವುದು. GATE ಮೆರಿಟ್‌ನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಮಾತ್ರ ಮೆರಿಟ್ ಆಧಾರದ ಮೇಲೆ GATE ಮೆರಿಟ್‌ನ ಅಭ್ಯರ್ಥಿಗಳು ಪರಿಗಣಿಸಲಾಗುವುದು. ಆದರೆ ಸ್ಟೈಫಂಡ್ ಪಡೆಯಲು ಅವಕಾಶವಿರುವುದಿಲ್ಲ. ಅರ್ಜಿಗಳನ್ನು ಕೆಳಕಾಣಿಸಿದ ವಿಳಾಸದಲ್ಲಿ ಪಡೆದು ಸಲ್ಲಿಸಿರಿ.

ಕ್ರ.ಸಂ.	ಕೋರ್ಸ್	ಅವಧಿ	ಪದವಿಯಲ್ಲಿರಬೇಕಾದ ವಿಷಯಗಳು
1.	ಡಿಸೈನ್ ಮತ್ತು ಪ್ರೊಡಕ್ಷನ್ ಇಂಜಿನಿಯರಿಂಗ್ ಹೆವಿ ಎಲೆಕ್ಟ್ರಿಕಲ್ ಇಕ್ವಿಪ್‌ಮೆಂಟ್	F.T. & P.T.	ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್ ಎಲೆಕ್ಟ್ರಿಕಲ್
2.	ಡಿಸೈನ್ ಮತ್ತು ಪ್ರೊಡಕ್ಷನ್ ಇಂಜಿನಿಯರಿಂಗ್ ಪವರ್ ಪ್ಲಾಂಟ್ ಮೆಷಿನರಿ ಹೈಡ್ರೋ ಎಲೆಕ್ಟ್ರಿಕ್	F.T. & P.T.	ಸಿವಿಲ್/ಮೆಕಾನಿಕಲ್/ ಎಲೆಕ್ಟ್ರಿಕಲ್/ಅಗ್ರಿಕಲ್ಚರಲ್ ಇಂಜಿನಿಯರಿಂಗ್
3.	ಡಿಸೈನ್ ಮತ್ತು ಪ್ರೊಡಕ್ಷನ್ ಇಂಜಿನಿಯರಿಂಗ್ ಪವರ್ ಪ್ಲಾಂಟ್ ಮೆಷಿನರಿ ಥರ್ಮಲ್	F.T. & P.T.	ಮೆಕ್ಯಾನಿಕಲ್/ಎಲೆಕ್ಟ್ರಿಕಲ್/ಆಟೋಮೊಬೈಲ್/ ಕೆಮಿಕಲ್/ಅಗ್ರಿಕಲ್ಚರಲ್
4.	ಇಂಜಿನಿಯರಿಂಗ್ ಮೆಟೀರಿಯಲ್ಸ್, ಫಾರ್ ಡಿಸೈನ್ ಅಂಡ್ ಪ್ರೊಡಕ್ಷನ್ ಆಫ್ ಹೆವಿ ಇಂಜಿನಿಯರಿಂಗ್ ಇಕ್ವಿಪ್‌ಮೆಂಟ್	F.T. & P.T.	ಇಂಜಿನಿಯರಿಂಗ್‌ನ ಬೇರೆ ಯಾವುದೇ ವಿಭಾಗ
5.	ಫೌಂಡೇಶನ್ ಇಂಜಿನಿಯರಿಂಗ್ ಅಪ್ಲೈಡ್ ಟು ವೈಬ್ರೇಟರ್ವ್ ಸಿಸ್ಟಮ್	F.T. & P.T.	ಸಿವಿಲ್ ಇಂಜಿನಿಯರಿಂಗ್
6.	ಸ್ಟ್ರೆಸ್ ಅಂಡ್ ವೈಬ್ರೇಶನ್ ಅನಾಲಿಸಿಸ್ ಆಫ್ ಮೆಷಿನರಿ ಅಂಡ್ ಸ್ಟ್ರಕ್ಚರ್	F.T. & P.T.	ಸಿವಿಲ್/ ಮೆಕ್ಯಾನಿಕಲ್/ಏರೋನಾಟಿಕಲ್ ಇಂಜಿನಿಯರಿಂಗ್
7.	ಡಿಜಿಟಲ್ ಕಮ್ಯೂನಿಕೇಶನ್ ಇಂಜಿನಿಯರಿಂಗ್	F.T. & P.T.	ಎಲೆಕ್ಟ್ರಾನಿಕ್ಸ್/ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್/ ಎಲೆಕ್ಟ್ರಿಕಲ್ ಇಂಜಿನಿಯರಿಂಗ್
8.	ಎನರ್ಜಿ ಇಂಜಿನಿಯರಿಂಗ್	F.T. & P.T.	ಇಂಜಿನಿಯರಿಂಗ್‌ನ ಬೇರೆ ಯಾವುದೇ ವಿಭಾಗ/ ಆರ್ಕಿಟೆಕ್ಚರ್
9.	ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇನ್‌ಕ್ಲೂಡಿಂಗ್ ಎನ್ವೈರ್ನಮೆಂಟಲ್ ಇಂಜಿನಿಯರಿಂಗ್ ಅಂಡ್ ಪ್ಲ್ಯಾನಿಂಗ್	F.T.	ಸಿವಿಲ್ ಇಂಜಿನಿಯರಿಂಗ್ ಆರ್ಕಿಟೆಕ್ಚರ್
10.	ಅರ್ಬನ್ ಡೆವಲಪ್‌ಮೆಂಟ್ ಪ್ಲ್ಯಾನಿಂಗ್	F.T.	ಆರ್ಕಿಟೆಕ್ಚರ್/ಸಿವಿಲ್
11.	ಮೇಂಟೆನನ್ಸ್ ಇಂಜಿನಿಯರಿಂಗ್	F.T.	ಮೆಕ್ಯಾನಿಕಲ್/Prod./Agri/ಕೆಮಿಕಲ್/ ಆಟೋಮೊಬೈಲ್/ಇಂಡಸ್ಟ್ರಿಯಲ್ ಇಂಜಿನಿಯರಿಂಗ್
12.	ಮೈಕ್ರೋವೇವ್ ಅಂಡ್ ಮಿಲಿಮೀಟರ್ ವೇವ್ಸ್	P.T.	ಎಲೆಕ್ಟ್ರಾನಿಕ್ಸ್/ಎಲೆಕ್ಟ್ರಾನಿಕ್ಸ್ ಅಂಡ್ ಇನ್‌ಸ್ಟ್ರುಮೆಂಟೇಷನ್ ಇಂಜಿನಿಯರಿಂಗ್
13.	ಇಂಡಸ್ಟ್ರಿಯಲ್ ಡಿಸೈನ್ ಗಮನಕ್ಕೆ (Ft- Full time, Pt- Part time)	P.T.	ಮೆಕ್ಯಾನಿಕಲ್/ಆಟೋಮೊಬೈಲ್/ಇಂಡಸ್ಟ್ರಿಯಲ್/ ಪ್ರೊಡಕ್ಷನ್/ಎಲೆಕ್ಟ್ರಿಕಲ್ ಇಂಜಿನಿಯರಿಂಗ್

ಕೋರ್ಸಿನ ಬಗ್ಗೆ ಹೆಚ್ಚಿನ ವಿವರ, ಸ್ಥಾನಗಳ ಸಂಖ್ಯೆ, ಸ್ಟೈಫೆಂಡ್, ಅರ್ಹತೆಯ ಷರತ್ತು, ಮತ್ತು ಖಾಲಿ ಅರ್ಜಿಗಳಿಗಾಗಿ 100/- ರೂ.ಗಳ ಕ್ರಾಸ್ ಮಾಡಿದ ಇಂಡಿಯನ್ ಪೋಸ್ಟಲ್ ಆರ್ಡರ್ ಬ್ಯಾಂಕ್ ಡ್ರಾಫ್ಟ್‌ನ್ನು MACT Bhopal ಹೆಸರಿನಲ್ಲಿ ಕೊಂಡು, ಡೆಪ್ಯುಟಿ ರಿಜಿಸ್ಟ್ರಾರ್ Maulana Azad College of Technology, (An Autonomous Regional Engineering College) Bhopal - 162007 (M.P)ಗೆ ಕಳಿಸಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು **ಕೊನೆಯ ದಿನಾಂಕ 26 ಜೂನ್ 1999.** ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ■

ಪ್ರವಾಸ ಸಾಹಿತ್ಯ ಕೃತಿಗಳ ಆಹ್ವಾನ

ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ (ರಿ) ತನ್ನ ವಾರ್ಷಿಕೋತ್ಸವ ಸಂದರ್ಭದಲ್ಲಿ ಪ್ರವಾಸ ಸಾಹಿತ್ಯ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಿ, ಲೇಖಕರಿಗೆ ಪ್ರವಾಸ ಸಾಹಿತ್ಯ ಕೃತಿಗಳನ್ನು ಸ್ಪರ್ಧೆಗೆ ಕಳಿಸಲು ವಿನಂತಿಸಿದೆ.

ಅತ್ಯಂತ ನಿರ್ಲಕ್ಷ್ಯಗೊಳಗಾಗಿರುವ ಪ್ರವಾಸ ಸಾಹಿತ್ಯ ಕೃತಿಗಳ ಈ ಸ್ಪರ್ಧೆಗೆ ಕೃತಿಗಳು ಪ್ರಕಟಿತವಾಗಿದ್ದು, 1980ರಿಂದ ಇದುವರೆಗೆ ಪ್ರಕಟವಾಗಿರುವ ಎಲ್ಲಾ ಕೃತಿಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದು. ಪುರುಷ ಮತ್ತು ಮಹಿಳೆ ಹೀಗೆ ಎರಡು ಪ್ರಶಸ್ತಿಗಳಿಗೆ ತಲಾ ರೂ. 2,000.00 ನಗದು ಬಹುಮಾನ, ಬೆಳ್ಳಿ ಪದಕ, ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ಹಾಗೂ ರಾಜ್ಯ ಮಟ್ಟದ ಸನ್ಮಾನವನ್ನು ಒಳಗೊಂಡಿರುತ್ತದೆ.

ಲೇಖಕರು ಹಾಗೂ ಪ್ರವಾಸ ಸಾಹಿತ್ಯ ಪ್ರಿಯರು ಸ್ಪರ್ಧೆಗೆ ಕೃತಿಗಳನ್ನು ತಮ್ಮ ಎರಡು ಭಾವಚಿತ್ರ ಹಾಗೂ ಸ್ವ ಪರಿಚಿತ ಲೇಖನದೊಂದಿಗೆ(ಲೇಖಕರ ಬಯೋಡೆಟಾ) ಜೂನ್ 30ರ ಒಳಗೆ ಮೂರು (3) ಪ್ರತಿಯೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ಕೋರಿದೆ. ರಮೇಶ್ ಸುರ್ವೆ, ಅಧ್ಯಕ್ಷರು, ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್(ರಿ) ನಂ.290, 3ನೇಮುಖ್ಯ ರಸ್ತೆ, 3ನೇ ಹಂತ, ಮಂಜುನಾಥನಗರ, ಬೆಂಗಳೂರು- 560 010.

ಕರ್ನಾಟಕ ಲೋಕಸೇವಾ ಆಯೋಗ 'ಎ' ಗುಂಪಿನ 188 ಹುದ್ದೆಗಳಿಗೆ ಅರ್ಜಿ ಕರೆದಿದೆ

ಕರ್ನಾಟಕ ಲೋಕ ಸೇವಾ ಆಯೋಗ ಅರ್ಜಿ ನಮೂನೆ -1 ರಲ್ಲಿ (ಪರಿಷ್ಕೃತ) ಈ ಕೆಳಗೆ ನಮೂದಿಸಿರುವ ಪತ್ರಾಂಕಿತ 'ಎ' ಗುಂಪಿನ ಹುದ್ದೆಗಳಿಗೆ ದಿನಾಂಕ 30.6.99 ಅಥವಾ ಅದಕ್ಕೂ ಮುಂಚಿತವಾಗಿ ಕರ್ನಾಟಕ ಲೋಕ ಸೇವಾ ಆಯೋಗದ ಕಛೇರಿಗಳಿಗೆ ತಲುಪುವಂತೆ ದ್ವಿಪ್ರತಿಯಲ್ಲಿ ಎಲ್ಲಾ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಅರ್ಹ ಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ.

ಪತ್ರಾಂಕಿತ 'ಎ' ಗುಂಪಿನ ಹುದ್ದೆಗಳು

ಕರ್ನಾಟಕ ರಾಜ್ಯ ವಿಮಾ ಯೋಜನಾ (ವೈದ್ಯಕೀಯ) ಸೇವೆಗಳ ನಿರ್ದೇಶನಾಲಯದಲ್ಲಿ ವಿಮಾ ವೈದ್ಯಾಧಿಕಾರಿಗಳ 188 ಹುದ್ದೆಗಳು.

1) **ವಿದ್ಯಾರ್ಹತೆ :**
   ಅ) ಎಂ.ಬಿ.ಬಿ.ಎಸ್. ಪದವಿ ಪಡೆದಿರಬೇಕು.
   ಆ) ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು.
   ಇ) ಇಂಟರ್ನ್‌ಷಿಪ್ ಹೌಸ್ ಮೆನ್‌ಷಿಪ್ ಕಡ್ಡಾಯ.

2) **ವಯೋಮಿತಿ :** ಕನಿಷ್ಠ 18 ವರ್ಷಗಳು. ಗರಿಷ್ಠ 35 ವರ್ಷಗಳು. ಪ್ರ. 2 (ಎ), 2(ಬಿ) 3(ಎ) ಮತ್ತು 3(ಬಿ) ವರ್ಗದವರಿಗೆ 38 ವರ್ಷಗಳು. ಪ್ರ - 1 ಪ.ಜಾ. ಪ.ಪಂ. ವರ್ಗದವರಿಗೆ 40 ವರ್ಷಗಳು.

3) **ಹುದ್ದೆಗಳ ವರ್ಗೀಕರಣ :** ಪ.ಜಾ. 17, ಪಪಂ -03, ಪ್ರ- 1-05, ಪ್ರ- 2 (ಎ) - 17, ಪ್ರ-2(ಬಿ)05, ಪ್ರ-3(ಎ) -04, ಪ್ರ.3(ಬಿ)-05, ಸಾ. ಅ. 55. **ಮಹಿಳೆಯರಿಗೆ :** ಪಜಾ -09, ಪಪಂ-02, ಪ್ರ- 1-02, ಪ್ರ-2 (ಎ) -08, ಪ್ರ-2 (ಬಿ)-02, ಪ್ರ-3(ಎ)-03, ಪ್ರ-3(ಬಿ)-03, ಸಾ.ಅ.29 **ಮಾಜಿ ಸೈನಿಕರಲ್ಲಿ :** ಪಜಾ -02, ಪಪಂ-01 ಪ್ರ- 1-01, ಪ್ರ-2(ಎ)-03, ಪ್ರ-2(ಬಿ)-01. ಪ್ರ -3 (ಎ)-01, ಪ್ರ- 3(ಬಿ)-01, ಸಾ. ಅ. -09.

ಮೀಸಲಾತಿ

ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕ ಸೌಲಭ್ಯ ಇತರೆ ಇತ್ಯಾದಿ ವಿವರಗಳಿಗೆ **ದಿನಾಂಕ 30.04.99ರ** ವಿಶೇಷ ಕರ್ನಾಟಕ ರಾಜ್ಯ ಪತ್ರದ ಭಾಗ - VIII ನ್ನು ಹಾಗೂ ಭಾಗ -2ನ್ನು ಸಹ ಅವಲೋಕಿಸಲು ಸೂಚಿಸಿದೆ.

ವಿಶೇಷ ಸೂಚನೆ

ಅಭ್ಯರ್ಥಿಯು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕೋರುವ ಪ್ರಮಾಣ ಪತ್ರವನ್ನು ಆಯೋಗದ ಅಧಿಸೂಚನೆಯನ್ನು ಜಾರಿ ಮಾಡಿದ ದಿನಾಂಕದ ನಂತರ ಆದರೆ, ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದೊಳಗಾಗಿ ನಿಗದಿಪಡಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

ಅಭ್ಯರ್ಥಿಯು ತಾನು ಸಲ್ಲಿಸುವ ಅರ್ಜಿಯ ಹಾಗೂ ಅಡಕಗಳ ಒಂದು ಪ್ರತಿಯನ್ನು (ಜೆರಾಕ್ಸ್) ಕಾಯ್ದಿರಿಸಿಕೊಳ್ಳತಕ್ಕದ್ದು.

ಎಲ್ಲಾ ಅಡಕಗಳೊಂದಿಗಿನ ಭರ್ತಿ ಮಾಡಿದ ಅರ್ಜಿಯನ್ನು ಅಂಚೆ ಮೂಲಕ ಸಲ್ಲಿಸಬಯಸುವ ಅಭ್ಯರ್ಥಿಗಳು ನೇರವಾಗಿ ಆಯೋಗದ ಕೇಂದ್ರ ಕಚೇರಿ, ಪಾರ್ಕ್ ಹೌಸ್, ಬೆಂಗಳೂರು - 560 001. ಇಲ್ಲಿಗೆ ಮಾತ್ರ ಕಳುಹಿಸತಕ್ಕದ್ದು.

ಖುದ್ದಾಗಿ (ಮುದ್ದಾಂ) ಅರ್ಜಿಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು, ಕಾರ್ಯದರ್ಶಿ ಕರ್ನಾಟಕ ಲೋಕಾ ಸೇವಾ ಆಯೋಗ, ಪಾರ್ಕ್ ಹೌಸ್, ಬೆಂಗಳೂರು - ಅಥವಾ ಸಹಾಯಕ ಕಾರ್ಯದರ್ಶಿ, ಪ್ರಾಂತೀಯ ಕಛೇರಿ, ಮೈಸೂರು/ ಬೆಳಗಾವಿ ಗುಲ್ಬರ್ಗಾ ಕಛೇರಿಗಳಿಗೆ ತಲುಪುವಂತೆ ಕಳುಹಿಸತಕ್ಕದ್ದು. ■

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ

ಸಾಮಾನ್ಯ ಜ್ಞಾನ

1. 'ಸಿಖ್' ಮತ ಸ್ಥಾಪಿಸಿದವರು ಯಾರು?
2. ಹಾಲು ಉತ್ಪಾದನೆಯಲ್ಲಿ ಭಾರತ ಜಗತ್ತಿನಲ್ಲಿ ಎಷ್ಟನೇ ಸ್ಥಾನದಲ್ಲಿದೆ?
3. ನ್ಯಾಷನಲ್ ಡಿಫೆನ್ಸ್ ಅಕಾಡಮಿ ಎಲ್ಲಿದೆ?
4. ಭಾರತದಲ್ಲಿ ನಾಗರೀಕ ಸೇವೆಗಳನ್ನು ಪ್ರಾರಂಭಿಸಿದವರು ಯಾರು?
5. 'ನಾಕ್ ಔಟ್' ಈ ಪದ ಯಾವ ಕ್ರೀಡೆಗೆ ಸಂಬಂಧಿಸಿದ್ದು?
6. ರುಮೇನಿಯಾದ ಕರೆನ್ಸಿ ಹೆಸರೇನು?
7. ಭಾಷಾವಾರು ಆಧಾರದ ಮೇಲೆ ರಚಿಸಿದ ಮೊದಲ ರಾಜ್ಯ ಯಾವುದು?
8. 'ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ' ಎಲ್ಲಿದೆ?
9. ಭಾರತದ ಮೊದಲ ದಿನಪತ್ರಿಕೆ ಯಾವುದು?
10. 'ವ್ಯಾಟ್' ಇದು ಯಾವುದನ್ನು ಅಳೆಯುವ ಮಾಪಕ...?
11. ನಮ್ಮ ದೇಹದಲ್ಲಿರುವ ಬಿಳಿ ರಕ್ತಕಣಗಳ ಮುಖ್ಯ ಕೆಲಸ ಏನು?
12. ಗುರುದೇವ ಎಂದು ಜನಪ್ರಿಯರಾದವರು ಯಾರು?
13. ದ್ರೋಣಾಚಾರ್ಯ ಪ್ರಶಸ್ತಿ ಯಾವ ಕ್ಷೇತ್ರದಲ್ಲಿ ನೀಡಲಾಗುತ್ತದೆ?
14. ಆನಂದ ಮಠ ಕೃತಿ ರಚಿಸಿದವರು ಯಾರು?
15. ನಮ್ಮ ಸೇನಾಪಡೆಗೆ ಇತ್ತೀಚೆಗೆ ಸೇರ್ಪಡೆಯಾದ ಯುದ್ಧವಿಮಾನದ ಹೆಸರು?
16. ಉಪರಾಷ್ಟ್ರಪತಿಯನ್ನು ಯಾರು ಆಯ್ಕೆ ಮಾಡುತ್ತಾರೆ?
17. ಪ್ರಸ್ತುತದಲ್ಲಿ ಭಾರತೀಯರ ಸರಾಸರಿ ಜೀವಿತಾವಧಿ ಎಷ್ಟು?
18. 1998ನೇ ಸಾಲಿನ ಮಿಸ್‌ಯೂನಿವರ್ಸ್ ಯಾರು?
19. ನಮ್ಮ ದೇಶದ ವಿಜ್ಞಾನಿಗಳೇ ಸೃಷ್ಟಿಸಿದ ಸೂಪರ್ ಕಂಪ್ಯೂಟರ್?
20. ಷೇರ್‌ಷಹನ ಸಮಾಧಿ ಇರುವ ಸ್ಥಳ?
21. 'ಉಬರ್‌ಕಪ್' ಯಾವ ಆಟಕ್ಕೆ ಸಂಬಂಧಿಸಿದ್ದು?
22. ಜಿ-7 ಇದರ ಹೊಸ ಸದಸ್ಯತ್ವ ಪಡೆದ ರಾಷ್ಟ್ರ ಯಾವುದು?
23. ಮದರ್ ತೆರೇಸಾರ ಮೂಲ ಹೆಸರೇನು?
24. ಮೊದಲ ಬಾರಿಗೆ ಸುವರ್ಣ ನಾಣ್ಯವನ್ನು ಚಲಾವಣೆಗೆ ತಂದವರು ಯಾರು?
25. ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಯಾವಾಗ ಜಾರಿಗೆ ತರಲಾಯಿತು?
26. ಮೆಶಿನ್‌ಗನ್ ಕಂಡು ಹಿಡಿದವರು ಯಾರು?
27. ಶಂಕರಾಚಾರ್ಯರ ಜನ್ಮಸ್ಥಳ ಯಾವುದು?
28. 'ಚೋಮನದುಡಿ'ಯ ಕರ್ತೃ?
29. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ರುವಾರಿ?
30. ಮೊದಲ ಪ್ರನಾಳ ಶಿಶುವಿನ ಹೆಸರು?
31. ವಿಶ್ವದಲ್ಲೇ ಅತಿ ದೊಡ್ಡ ವಿಮಾನ ನಿಲ್ದಾಣ ಇರುವ ದೇಶ?
32. ಕರ್ನಾಟಕದ ಕಾಶ್ಮೀರ ಯಾವುದು?
33. ಛಿರಾ ಯಾವ ರಾಜ್ಯದ ನೃತ್ಯ?
34. ಎರಡು ರಾಜಧಾನಿಗಳನ್ನು ಹೊಂದಿದ ರಾಜ್ಯ ಯಾವುದು?
35. ಪ್ರಥಮ ಸತ್ಯಾಗ್ರಹವನ್ನು ಗಾಂಧೀಜಿಯವರು ಎಲ್ಲಿ ಆರಂಭಿಸಿದರು?
36. ಭೂದಾನ ಚಳುವಳಿಯನ್ನು ಯಾರು ಆರಂಭಿಸಿದರು?
37. ಯೋಜನಾ ಆಯೋಗವನ್ನು ಯಾವಾಗ ಸ್ಥಾಪಿಸಲಾಯಿತು?
38. 'ಪಂಚಶೀಲ ಒಪ್ಪಂದ' ಆದದ್ದು?
39. ಬಂಗಾಳದ ವಿಭಜನೆ ನಡೆದದ್ದು ಯಾವ ವರ್ಷದಲ್ಲಿ?
40. ರಾಮಕೃಷ್ಣ ಮಿಷನ್ ಸ್ಥಾಪಿಸಿದವರಾರು?
41. ಮನುಷ್ಯನ ರಕ್ತದಲ್ಲಿರುವ ಮದ್ಯಸಾರದ ಪ್ರಮಾಣವನ್ನು ಅಳೆಯುವ ಮಾಪಕ?
42. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆ ಯಾವಾಗ ಆರಂಭಿಸಲಾಯಿತು?
43. ವಿಶ್ವದಲ್ಲೇ ಅತಿ ಹೆಚ್ಚು ವಿಸ್ತಾರವಾದ ದೇಶ?
44. ಕೊಂಕಣ ರೈಲು ಮಾರ್ಗದ ಉದ್ದ?
45. ಮೊಗಲ್ ಸಾಮ್ರಾಜ್ಯದ ಅಂತ್ಯ ಯಾವ ವರ್ಷದಲ್ಲಾಯಿತು?
46. ಜಪಾನ್ ದೇಶದ ಸಂಸತ್ತಿನ ಹೆಸರೇನು?
47. ಥಿಂಪು ಯಾವ ದೇಶದ ರಾಜಧಾನಿ?
48. ಎಸ್ಕಿಮೊಗಳ ಜನ್ಮಸ್ಥಳ ಯಾವುದು?
49. 'ಎನ್‌ಐಸಿ'ಯ ವಿಸ್ತೃತ ರೂಪ?
50. ಭಾರತದ ಜ್ಯೋತಿಷ್ಯಕಲೆಯ ಪಿತಾಮಹ?

ಉತ್ತರಗಳು

1. ಗುರುನಾನಕ್ 2. ಎರಡನೆ 3. ಪುಣೆ 4. ಲಾರ್ಡ್ ಕಾರ್ನವಾಲಿಸ್ 5. ಬಾಕ್ಸಿಂಗ್ 6. ಲೇವ್ 7. ಆಂಧ್ರ ಪ್ರದೇಶ 8. ದೆಹಲಿ 9. ಬೆಂಗಾಲ ಗೆಜೆಟ್ 10. ವಿದ್ಯುತ್ 11. ದೇಹವನ್ನು ರೋಗಾಣುಗಳಿಂದ ರಕ್ಷಿಸುವುದು 12. ರವೀಂದ್ರನಾಥ ಟಾಗೋರ್ 13. ಕ್ರೀಡೆ 14. ಬಂಕಿಮ ಚಂದ್ರ ಚಟರ್ಜಿ 15. ಸುಕೋಯ್-30 16. ಸಂಸತ್ತಿನ ಎರಡು ಸದನಗಳ ಸದಸ್ಯರು 17. 66ವರ್ಷ 18. ವೆಂಡಿ ಫಿರುವಿಲಿಯಮ್ 19. ಪರಮ್-10,000 20. ಸಸೆರಾಮ್ 21. ಬ್ಯಾಡ್ಮಿಂಟನ್ 22. ರಶಿಯಾ 23. ಅಗ್ನೆಸ್ ಗೂಂಜಾ ಬೋಜಾಕ್ಸಿ 24. ಮೌರ್ಯರು 25. 1975 ಜುಲೈ ಒಂದರಂದು 26. ಅಮೆರಿಕದ ರಿಚರ್ಡ್ ಗ್ಯಾಡ್ಲಿಂಗ್ 27. ಕೇರಳದ ಕಾಲಟಿ 28. ಶಿವರಾಮ ಕಾರಂತ 29. ಜನರಲ್ ಡಯರ್ 30. ಲೂಯಿಸ್ ಬ್ರೌನ್ 31. ರಿಯಾದ್ (ಅರಬ್‌ದೇಶ) 32. ಕೊಡಗು 33. ಮಿಜೋರಾಂ 34. ಜಮ್ಮು-ಕಾಶ್ಮೀರ 35. ಚಂಪಾರಣ್ಯ 36. ಆಚಾರ್ಯ ವಿನೋಬಾ ಭಾವೆ 37. 1950ರಲ್ಲಿ 38. 1954ರಲ್ಲಿ 39. 1905 ರಲ್ಲಿ 40. ಸ್ವಾಮಿ ವಿವೇಕಾನಂದ 41. ಆಲ್ಕೋ ಮೀಟರ್ 42. 1993 ಅಕ್ಟೋಬರ್ 2 ರಂದು 43. ರಶಿಯಾ 44. 760 ಕಿ.ಮೀ. 45. 1858 46. ಡೈಟ್ 47. ಭೂತಾನ್ 48. ಗ್ರೀನ್‌ಲ್ಯಾಂಡ್ 49. ನ್ಯಾಷನಲ್ ಇಂಟಗ್ರೇಷನ್ ಕೌನ್ಸಿಲ್ 50. ವರಾಹ ಮಿಹಿರ.

■ ಕಲಾಲ ವಾಸುದೇವ

ನೀವೂ ಇಂಗ್ಲಿಷ್ ಕಲಿಯಿರಿ

ಭಾಗ 17

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಜಾನಕಿ : ಜಾನ್ ಹಿಂದಿನ ಪಾಠದಲ್ಲಿ, ನಾವು ಏನು ಕಲಿತೆವು ಎಂದು ಹೇಳಲ್ವೇನು?

ಜಾನ್ : ಈಗ ವಿವಿಧ ವಾಕ್ಯಗಳನ್ನು ಕಲಿತಾ ಇದ್ದೇವೆ. ಅಂದರೆ,
i) Simple sentence
ii) Complex sentence
iii) Compound sentence

ಜಾನಕಿ : ನಾನು ಹೇಳ್ತೇನೆ ಕೇಳು. ಈಗ Complex sentence ಶುರು ಮಾಡಿ ಮತ್ತು ಅದರಲ್ಲಿ ಮೂರು ವಾಕ್ಯಗಳು (Subordinate Clause)ನ್ನು ಕಲಿಯುತ್ತೇವೆ. ಅಂದರೆ,
i) Noun clause
ii) Adjective clause
iii) Adverb clause.

ಜಾನ್ : ನೀನು ಹೇಳಿದ್ದು ಸರಿ, ಆದರೆ ಇವನ್ನೆಲ್ಲ ಅಭ್ಯಾಸ ಮಾಡಿಲ್ಲ. ಬರೇ Noun Clauseನ ವಿವರಣೆ ಹೇಳಿದ್ದೇನೆ. ಅದನ್ನು ಹೇಳಿದರೆ ಸಾಕು.

ಜಾನಕಿ : **1) Subject of a Verb: What action the leaders took** was very much unexpected.
2) Object of Transitive Verb.: These leaders told **that they wanted not go against the decision of committee.**
3) Object of Preposition : These leaders did not need to **what followers said.**
4) Complement of verb : The leaders desire was **that the others should follow them.**

ಜಾನ್ : Very correct. ಈ ರೀತಿಯಾಗಿ Noun Clauseನಲ್ಲಿ ಪ್ರಮುಖವಾಗಿ ನಾಲ್ಕು ವಾಕ್ಯಗಳನ್ನು ಓದಿದ್ದೇವೆ. (Subordinate Clause)

ಜಾನಕಿ : ಈಗ ಮುಂದಿನ Subordinate Clause ಯಾವುದು ಹೇಳುವೆಯಾ?

ಜಾನ್ : ಈಗ Adjective Clause ಕಲಿಯೋಣ. ಉದಾಹರಣೆ ಕೇಳು.
1. The house **that I live in belongs** to one Ramappa.
2. The Dog **that barks** does not bite.
ಮೇಲಿನ ವಾಕ್ಯದಲ್ಲಿ ದಪ್ಪಕ್ಷರದ ವಾಕ್ಯಾಂಗಗಳು ವಿಶೇಷಣದ ಕೆಲಸವನ್ನು ಮಾಡುತ್ತವೆ. ಅಂದರೆ 1ನೇ ವಾಕ್ಯದಲ್ಲಿ The house, 2ನೇ ವಾಕ್ಯದಲ್ಲಿ The dog ಇವುಗಳ ವರ್ಣನೆ ಮಾಡುವವು. ಈ ವಾಕ್ಯಾಂಗದಲ್ಲಿ Subject ಮತ್ತು Predicate ಇರುವುದರಿಂದ ಇವುಗಳನ್ನು Adjective Clause ಎನ್ನುವರು. ನಿನಗೀಗ ತಿಳಿಯಿತಲ್ಲ, ಉದಾಹರಣೆ ಹೇಳು.

ಜಾನಕಿ : The pen **that you gave me** does not write.

ಜಾನ್ : ಏನು, ನನಗೆ ಕೀಟಲೆ ಮಾಡ್ತಿಯಾ?

ಜಾನಕಿ : ಇಲ್ಲಪ್ಪಾ! ಸುಮ್ಮನೆ ಒಂದು ಉದಾಹರಣೆ ಹೇಳಿದೆ.
Here is the best book that you gave me.
Your good teaching is the reason why I learn so easily.

ಜಾನ್ : ಸರಿ. Complex sentenceನಲ್ಲಿ Adjective Clause ಇದು Subordinate Clause ಇದ್ದು Adjective (ವಿಶೇಷಣ)ದ ಕಾರ್ಯ ಅಂದರೆ Main Clauseನಲ್ಲಿರುವ Noun ಅಥವಾ Pronoun ಇದನ್ನು ವರ್ಣಿಸುವುದು. (Qualify) ಉದಾ.
The School **where I learnt** is near my house.
Where I learnt ಇದು Noun ಪದ (The school) ವನ್ನು qualify ಮಾಡುವುದು.

ಜಾನಕಿ : ನಾನು ಒಂದು ಹೇಳ್ತೀನೆ. My father brought the fruits. **which were sweet.**

ಜಾನ್ : ತಡೆ, ಇಲ್ಲಿ ಒಂದು ಮಾತನ್ನು ನೆನಪಿಡಬೇಕು. ಕೆಲವು ಸಲ Pronoun -ಸರ್ವನಾಮ - ಇದು co-ordinate Clauseನ್ನು ಸೂಚಿಸುವುದು. ನೀನು ಹೇಳಿದ್ದು ಏನು ಅಂದ್ರೆ, ಅದು ಹೀಗೆ- My father brought the fruits **and** they were sweet. ವಿಚಾರ ಮಾಡು.

ಜಾನಕಿ : ಹೌದಲ್ವಾ, ಸರಿ ಇದೆ.

ಜಾನ್ : ಕೆಲವು ಸಲ Adjective Clauseನ್ನು ಹೇಳತಕ್ಕಂತಹ Pronoun ಬರೆಯದಿದ್ದರೂ ಅದು understood, ಉದಾ.
i) Tell all you learnt. - Tell all **that** you learnt.
ii) I met a man I know - I met a man **whom** I know.
ಇಲ್ಲಿ (i) that (ii) whom ಇವು understood. ಇಂತವುಗಳನ್ನು ಬಹಳ ಗಮನವಿಟ್ಟು ತಿಳಿದುಕೊಳ್ಳಬೇಕು.

ಜಾನಕಿ : ಇನ್ನು Adverb Clauseನ್ನು ಕಲಿಸು.

ಜಾನ್ : ಅವಸರ ಬೇಡಾ. ನಾನು ಏನು ಮಾಡ್ತಾ ಇದ್ದೇನೆ.
Adverb Clause ಇದು ಕ್ರಿಯಾವಿಶೇಷಣ (Adverb)ದ ಕೆಲಸವನ್ನು ಮಾಡುವುದು. ಮತ್ತು Adverbನ್ನು ಯಾವ ರೀತಿ ವಿವಿಧ ನಮೂನೆಯಲ್ಲಿ ತಿಳಿದುಕೊಂಡಿದ್ದೇವೆ. ಅದೇ ರೀತಿ

ಇಲ್ಲಿಯೂ ತಿಳಿದುಕೊಳ್ಳಬೇಕು. ಉದಾ. (i) ಅಲ್ಲಿ Adverb of Time ಇದ್ದದ್ದು ಇಲ್ಲಿ Adverb Clause of Time ಆಗುವುದು. (ii) Adverb of Place - ಇಲ್ಲಿ Adverb Clause of Place.

ಜಾನಕಿ : ತಿಳಿಯಿತು ಬಿಡು, ಅವುಗಳಲ್ಲಿ ಎಷ್ಟು ವಿಧಗಳು ಮತ್ತು ಅವುಗಳ ಹೆಸರುಗಳನ್ನು ಹೇಳು. ಉದಾಹರಣೆ ಮರೆಯಬೇಡಾ.

ಜಾನ್ : ಎಲ್ಲರೂ ನಿನ್ನಷ್ಟು ಬುದ್ಧಿವಂತರು ಇರುವುದಿಲ್ಲ, (ನೀನು ಏಕಪಾಠಿ). ಆದಕ್ಕೆ ನಿಧಾನವಾಗಿ ಕಲೀಬೇಕು. ಸಾವಧಾನವಾಗಿ ಊಟ ಮಾಡಬೇಕು.

ಜಾನಕಿ : ಇದು ತತ್ವ ಆಯಿತು. ಪಾಠ?

ಜಾನ್ : Adverb Clause ದಲ್ಲಿ ಒಟ್ಟು ಎಂಟು ವಿಧಗಳಿವೆ

i) Adverb Clause of Time
ii) Adverb Clause of Place
iii) Adverb Clause of Purpose
iv) Adverb Clause of Cause
v) Adverb Clause of Condition
vi) Adverb Clause of Comparison
vii) Adverb Clause of Result
viii) Adverb Clause of Supposition or Concession.

ಜಾನಕಿ : ಇಲ್ಲಿಯೂ ಸಹ ವಿವಿಧ ನಮೂನೆ Adverbಗೆ ಯಾವ ಪದ ಉಪಯೋಗಿಸುವುದೋ ಅವುಗಳನ್ನೇ ಇಲ್ಲಿಯೂ ಬಳಸುವುದು ತಾನೆ?

ಜಾನ್ : ಈಗ ಬಹಳ Smart ಆಗಬೇಡಾ. Adjective Clause ನಾಮಪದವನ್ನು ಅಥವಾ ಸರ್ವನಾಮಪದವನ್ನು ವರ್ಣಿಸುವುದು. Qualify ಮಾಡುವುದು ಅನ್ನುತ್ತಾರೆ. ಉದಾ. We love **those** who love us.

ಇಲ್ಲಿ (i) Who love those - ಇದು Main clause

ii) Who love us - ಇದು Subordinate Adjective clause qualify 'those' in Main clause. ಹೀಗೆ ನೀನು ಉತ್ತರ ಹೇಳ್ತಿಯಾ.

ಕೊನೆಹನಿ

ಜಾನ್ : ಕೆಳಗಿನ ವಾಕ್ಯಗಳಲ್ಲಿ ಯಾವ Noun ಅಥವಾ Pronoun ವರ್ಣಿಸಲಾಗುವುದು.

i) It is a long lane **that has no turning.**
ii) This is the house **that I built last year.**
iii) We obeyed the order **that teacher gave us.**
iv) He **that is down** need no fear.

ಜಾನಕಿ : i)........... lane
i)............ house
i)............ order
i)............ He

ಜಾನ್ : good, Adverb Clauseನ ವಿವರಣೆ ಮುಂದಿನ ಪಾಠದಲ್ಲಿ.

ನುಡಿಗಟ್ಟು

'ಕನ್ನಡಿಯಲ್ಲಿ ಕರಿಯನ್ನು ತೋರಿಸಿದಂತೆ.' ಕಡಿಮೆ ಶಬ್ದಗಳಲ್ಲಿ ವಿಶಾಲ, ವ್ಯಂಗ್ಯ ಇತ್ಯಾದಿ ಅರ್ಥಗಳನ್ನು ಒಳಗೊಂಡಿರುತ್ತವೆ. ಅವು ವಾಕ್ಯಗಳಿಗೆ ಅಲಂಕಾರವೂ ಹೌದು.

i) **Break down** - ಹಿಂದುಳಿ, ಅಪಯಶಸ್ಸು.
Rama broke down in her maiden speech.

ii) **Bring about** - ಕಾರಣವಾಗು
His idleness brought about his ruin.

iii) **Call in** - ಕರೆಕಳುಹಿಸು
The student did not call in a peon to bring water.

iv) **Carry out** - ಕಾರ್ಯ ನಿರ್ವಹಿಸು
All the soldiers carried out the captain's order.

v) **Come about** - ಸಂಭವಿಸು
We did not know how these thing came about.

vi) **Cut down** - ಕಡಿಮೆ ಮಾಡು
He cut down his expenditure after his examination.

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟಿದ್ದು, ಕೊಟ್ಟ ಶಬ್ದದ ಸಮಾನಾರ್ಥ ಪದ ಹುಡುಕಿರಿ, ನಂತರ ಉತ್ತರ ನೋಡಿ.

a. Moat - ಅ. ಕೋಟೆಸುತ್ತ ರಕ್ಷಣೆಗಾಗಿ ನೀರಿನಿಂದ ತುಂಬಿದ ಕೊಳ್ಳ ಬ. ತೋಟದ ಭಾಗ ಕ. ಆಹಾರ ಡ. ದೋಣಿ

b. Potion - ಅ. ಭಾಗ ಬ. ವೇಗದಿಂದ ಚಲಿಸು ಕ. ಸಾವಕಾಶ ಡ. ವಿಷ ಅಥವಾ ದ್ರವ ಔಷಧದ ಭಾಗ.

c. Cheep - ಅ. ಚಿಕ್ಕ ಪಕ್ಷಿಯ ಒದರುವಿಕೆ ಬ. ತುಟ್ಟಿ ಕ. ಸೋವಿ ಡ. ವಸ್ತು

d. Harbinger - ಅ. ಭವಿಷ್ಯ ಹೇಳುವ ಬ. ಕಥೆ ಹೇಳುವ ಕ. ಬಂದರು ಡ. ಪ್ರವಾಸಿ ಬಂಗ್ಲೆ

e. Yonder - ಅ. ಹಳೆಯದಾದ ಬ. ದೂರದ ಕ. ಸಮೀಪ ಡ. ಕೊಳ್ಳ

f. Jumble - ಅ. ಮುಚ್ಚಿಡು ಬ. ಮಿಶ್ರಣ ಕ. ರೂಪ ಬದಲಿಸು ಡ. ಯಾವುದೂ ಅಲ್ಲ

ಉತ್ತರಗಳು :

a. ಅ b. ಬ c. ಅ d. ಅ e. ಬ f. ಬ

■ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.



ಮಾರ್ಗದರ್ಶಿ

ಮಾರ್ಗದರ್ಶಿ ವಿಭಾಗದ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ.
ವಿಳಾಸ: **ಬಿಸಿಲ ಬದುಕು** ಮಾಸಪತ್ರಿಕೆ, **ಮಾರ್ಗದರ್ಶಿ** ವಿಭಾಗ,
ಅಂಚೆ ಪೆಟ್ಟಿಗೆ - 7951, ಬಸವೇಶ್ವರನಗರ, ಬೆಂಗಳೂರು- 560 079.

ಜಿ. ಗುರುಪಾದ್, ಹುಬ್ಬಳ್ಳಿ

ನಾನು ಈಗ I year Diploma in Mechanical Engineering ಮಾಡುತ್ತಿರುವೆ. ಇದಾದ ಮೇಲೆ BE ಮೂರು ವರ್ಷ ಎನ್ನುತ್ತಾರೆ. ಇದಲ್ಲದೆ ಬೇರೆ ಯಾವ ಕೋರ್ಸ್‌ಗಳನ್ನು ಮಾಡಬಹುದು. ಈ ಕೋರ್ಸ್‌ಗಳಿಂದ ಆಗುವ ಉಪಯೋಗಗಳನ್ನು ತಿಳಿಸಿ. America-ದವರು ಬೆಂಗಳೂರಿನಲ್ಲಿ ಮಾಡುವ Welding Exam ಅನ್ನು ಯಾವಾಗ ಮಾಡುವರು ತಿಳಿಸಿ.

ನೀವು B.E. ಅಲ್ಲದೆ AMIE ಮಾಡಬಹುದು. ಮಾರ್ಕೆಟಿಂಗ್ ಮೇನೇಜ್‌ಮೆಂಟಿನಲ್ಲಿ ಡಿಪ್ಲೊಮಾ ಪಡೆಯಬಹುದು. ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ, ಡಿಪ್ಲೊಮಾ ಇನ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಟೂಲ್ ಅಂಡ್ ಡೈಮೇಕಿಂಗ್ ಅಲ್ಲದೇ ಪ್ಲಾಸ್ಟಿಕ್ ಇನ್‌ಜೆಕ್ಷನ್ ಮೌಲ್ಡ್ ಟೆಕ್‌ನಿಕ್‌ನಲ್ಲೂ ಡಿಪ್ಲೊಮಾ ಪೂರೈಸಬಹುದು.

ಜಿ. ಶೇಖರ ಸಂಚಾರಿ, ಪುತ್ತೂರು

ನಾನು 9ನೇ ತರಗತಿಯವರೆಗೆ ಕಲಿತಿದ್ದೇನೆ. ಆರ್ಥಿಕ ತೊಂದರೆಯಿಂದ ಮುಂದೆ ಓದಲಿಲ್ಲ. ಈಗ ನಾನು ರೂ. 30ರಿಂದ 40 ಸಾವಿರದವರೆಗೆ ಬಂಡವಾಳ ಹಾಕಬಲ್ಲೆ. ಈ ಬಂಡವಾಳವನ್ನು ತೊಡಗಿಸಿ ಯಾವುದಾದರೂ ಸ್ವ-ಉದ್ಯೋಗ ಕೈಗೊಳ್ಳಬಹುದೆ. ಮಾಹಿತಿ ನೀಡಿ.

ನೀವು ಅವಶ್ಯಕವಾಗಿ ಸ್ವಂತ ಉದ್ಯೋಗವನ್ನು ಮಾಡಬಹುದು. ನೀವು ಕಿರಾಣಿ ಅಂಗಡಿ ಮಾಡಬಹುದು. ಆಟೋ, ಕಾರ್ ಮುಂತಾದ ಬಾಡಿಗೆ ವಾಹನಗಳನ್ನು ನಡೆಸಬಹುದು. ಜೆರಾಕ್ಸ್ ಎಸ್.ಟಿ.ಡಿ.ಯಂತಹ ಶಾಪ್ ಪ್ರಾರಂಭಿಸಬಹುದು. ಒಳ್ಳೆಯ ಸ್ಥಳಗಳನ್ನು ನೋಡಿ ತರಕಾರಿ ಅಂಗಡಿಯನ್ನು ಮಾಡಬಹುದು.

ಧೃತಿ ಕೆ. ನಾರಾಯಣ್, ಶಿವಮೊಗ್ಗ

ಪಿ.ಯು.ಸಿ ಪೂರ್ವಭಾವಿ ಪರೀಕ್ಷೆಯಲ್ಲಿ 92% ತೆಗೆದಿದ್ದವಳು ಮುಖ್ಯ ಪರೀಕ್ಷೆಯಲ್ಲಿ ಫೇಲಾದೆ. ಈಗ ಪ್ರಥಮ ಪದವಿ ಸಿ.ಬಿ.ಜೆಡ್ ಕಲಿಯುತ್ತಿರುವೆ. ನನ್ನ ಪಿಯುಸಿ ವಿಫಲತೆ ನನಗೆ ಬಹಳ ಬೇಸರ ತರಿಸಿದೆ. ನಾನು ನನ್ನ ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ವೈದ್ಯಕೀಯ ಕ್ಷೇತ್ರ ಪ್ರವೇಶಿಸುವ ಮಾರ್ಗವಿದೆಯೇ?

ಭೂದಳ, ವಾಯುದಳ, ನೌಕಾದಳ.... ಇವುಗಳಲ್ಲಿ ವೈದ್ಯರುಗಳಿಗೆ, ಇಂಜಿನಿಯರುಗಳಿಗೆ ಸೇವೆ ಸಲ್ಲಿಸುವ ಅವಕಾಶ ಪಡೆಯಲು ಯಾವ ಯಾವ ಅರ್ಹತೆ ಹೊಂದಿರಬೇಕು ಹಾಗೂ ಪೂರ್ಣ ವಿವರ ಪಡೆಯುಲು ಎಲ್ಲಿ ಸಂಪರ್ಕಿಸಬೇಕು ಎಂಬ ವಿವರವನ್ನು ನೀಡುವಿರಾ?

ವೈದ್ಯಕೀಯ ಅಥವ ಇಂಜಿನಿಯರಿಂಗ್ ಕ್ಷೇತ್ರ ಪ್ರವೇಶಿಸಬೇಕಿದ್ದಲ್ಲಿ ಪಿ.ಯು.ಸಿ.ಮಾಡಿ ಸಿಇಟಿ ಪರೀಕ್ಷೆ ತೆಗೆದುಕೊಂಡಿರಬೇಕು. ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ಮೆಡಿಕಲ್ ಅಥವ ಇಂಜಿನಿಯರಿಂಗ್ ಓದಲು ಸಾಧ್ಯವಿಲ್ಲ. ಭೂದಳ, ವಾಯುದಳ, ನೌಕಾದಳ ಇವುಗಳಲ್ಲಿ ವೈದ್ಯರುಗಳಾಗಿ, ಇಂಜಿನಿಯರುಗಳಾಗಿ ಸೇವೆ ಸಲ್ಲಿಸಬೇಕಾದರೆ ಕ್ರಮವಾಗಿ ಎಂ.ಬಿ.ಬಿ.ಎಸ್. ಹಾಗು ಬಿ.ಇ. ಮಾಡಿರಬೇಕು.ಇದರ ಬಗ್ಗೆ ವಿವರ ತಿಳಿಯಲು ಮೆಡಿಕಲ್ ಅಥವ ಇಂಜಿನಿಯರಿಂಗ್ ಕಾಲೇಜುಗಳನ್ನು ಸಂಪರ್ಕಿಸಿ.

ಆರ್. ಮಂಜುನಾಥ, ಭದ್ರಾವತಿ

ನಾನು ದ್ವಿತೀಯ ಬಿ.ಎ. ಓದುತ್ತಿದ್ದೇನೆ. ಈಗ ನಾನು ಮಿಲಿಟರಿಗೆ ಸೇರಬೇಕು. ಅದಕ್ಕೆ ಬೇಕಾದ ಅರ್ಹತೆಗಳೇನು? ತಯಾರಿ ಹೇಗೆ ನಡೆಸಬೇಕು, ಲಿಖಿತ ಪರೀಕ್ಷೆಯಲ್ಲಿ ಯಾವ ಯಾವ ವಿಷಯದ ಬಗ್ಗೆ ಕೇಳುತ್ತಾರೆ ತಿಳಿಸಿ.

ಮಿಲಿಟರಿಯಲ್ಲಿ ಸೇರಬೇಕಾದರೆ ಅನೇಕ ಕೆಟಗರಿಯಲ್ಲಿ ಹುದ್ದೆಗಳು ಇರುತ್ತವೆ. ಕನಿಷ್ಠ ವಿದ್ಯಾರ್ಹತೆ ಎಂದರೆ ಎಸ್.ಎಸ್.ಎಲ್.ಸಿ. ಮತ್ತು ದೈಹಿಕ ಅರ್ಹತೆ ಮುಖ್ಯ. ಆಫೀಸರ್ ಹುದ್ದೆಗಳಿಗೆ ಪ್ರವೇಶ ಪರೀಕ್ಷೆ ಇರುತ್ತದೆ.

ಅರುಣ್ ಕುಮಾರ್

ನಾನು JODC ಮುಗಿಸಿದ್ದೇನೆ. ಪಿ.ಯು.ಸಿ. ಓದಿಲ್ಲ, ನಾನು JODC ಮೇಲೆ MBBS ಓದಬಹುದೇ? ಹಿಂದಿಯಲ್ಲಿ ಎಲ್ಲಾ ಪರೀಕ್ಷೆಗಳಲ್ಲಿ ಪಾಸಾಗಿದ್ದೇನೆ. JODC ಮೇಲೆ ಹಿಂದಿ B.ED ಮಾಡಬಹುದೇ? ನಾನು TV ಯಲ್ಲಿ ಕನ್ನಡ ವಾರ್ತೆ ಓದಲು ಇಷ್ಟಪಡುತ್ತೇನೆ. ಇದರ ಬಗ್ಗೆ ವಿವರ ನೀಡಿ.

ಜೆ.ಓ.ಡಿ.ಸಿ. ಆಧಾರದ ಮೇಲೆ ಎಂ.ಬಿ.ಬಿ.ಎಸ್. ಮಾಡಲು ಬರುವುದಿಲ್ಲ. ಹಿಂದಿ ಬಿ.ಎಡ್. ಮಾಡಲು ಹಿಂದಿ ಬಿ.ಎ. ಮಾಡಿರಬೇಕು. ದೂರದರ್ಶನದಲ್ಲಿ ವಾರ್ತೆ ಓದಬೇಕಾದರೆ ಅವರು ಕಾಲಕಾಲಕ್ಕೆ ನೀಡುವ ಜಾಹೀರಾತನ್ನು ಗಮನಿಸುತ್ತಿರಬೇಕು. ನಂತರ ಯತ್ನಿಸಬೇಕು.

ಬಿ. ಶ್ರೀಶೈಲನ್, ಹೊಸೂರು

ನಾನು ಪಿ.ಯು.ಸಿ. ಮುಗಿಸಿದ್ದೇನೆ. ಬಿ.ಎಸ್ಸಿ.ಯನ್ನು ಪುಣೆಯಲ್ಲಿ ಮಾಡಬೇಕೆಂದಿದ್ದೇನೆ. ನಂತರ ಅಲ್ಲೇ MBBS ಮಾಡಬೇಕೆಂದಿದ್ದೇನೆ.

1. ಬಿ.ಎಸ್ಸಿ.ನಂತರ MBBS ಪುಣೆಯಲ್ಲಿ ಉಚಿತವಾಗಿದೆಯೇ?
2. ಬಿ.ಎಸ್ಸಿ.ಯಲ್ಲಿ ಎಷ್ಟು ಪ್ರತಿಶತ ಅಂಕ ಗಳಿಸಿರಬೇಕು?
3. ಪುಣೆಯಲ್ಲಿ ಬಿ.ಎಸ್ಸಿ. ಕಾಲೇಜಿದೆಯೇ? MBBS ಉಚಿತವಾಗಿದ್ದರೆ ಆ ಕಾಲೇಜಿನ ವಿಳಾಸ ತಿಳಿಸಿ.

ಪುಣೆಯ ಆರ್ಮ್‌ಡ್ ಮೆಡಿಕಲ್ ಫೋರ್ಸಸ್ ಕಾಲೇಜಿನವರು 17-22 ವಯಸ್ಸಿನವರಿಗೆ ಲಿಖಿತ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಉತ್ತೀರ್ಣರಾದವರಿಗೆ ಉಚಿತವಾಗಿ ಶಿಕ್ಷಣವನ್ನು ನೀಡುತ್ತಾರೆ. ಈ ಬಗ್ಗೆ ಜನವರಿ ತಿಂಗಳಲ್ಲಿ ಎಲ್ಲ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹೀರಾತು ಬರುತ್ತದೆ. ಹೆಚ್ಚಿನ ಮಾಹಿತಿಗೆ ಆರ್ಮ್‌ಡ್ ಫೋರ್ಸಸ್ ಮೆಡಿಕಲ್ ಕಾಲೇಜ್, ಸೊಲ್ಲಾಪುರ ರೋಡ್, ಪೂನಾ-411 040 ಇಲ್ಲಿ ಸಂಪರ್ಕಿಸಿ. ಮೆಡಿಕಲ್ ಓದಲು ಬಿ.ಎಸ್ಸಿ. ಆಗಿರಬೇಕಿಲ್ಲ. ಪಿ.ಯು.ಸಿ. ಆಗಿದ್ದರೆ ಸಾಕು.

ಶಿವಕುಮಾರ

ನಾನು ಈಗ ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿ (ಕಲಾ ವಿಭಾಗ). ನನಗೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಟಿಕೆಟ್ ತಪಾಸಣಾ ಅಧಿಕಾರಿ ಆಗಬೇಕೆಂಬ ಆಸೆ. ಈ ಹುದ್ದೆಗೆ ಇರಬೇಕಾದ ವಿದ್ಯಾರ್ಹತೆ ಏನು? ಯಾವ ರೀತಿ ಆಯ್ಕೆ ಮಾಡುತ್ತಾರೆ, ಯಾವಾಗ ಅರ್ಜಿ

ಪಿ.ರೀನಾ, ನಗರ

ನನಗೆ 20 ವರ್ಷ. ನಾನು ಹಿಂದಿ ಬಿ.ಎ. ಮಾಡಿದ್ದೇನೆ. ಮುಂದೆ ನಾನು ಏನು ಮಾಡಬಹುದು ಅಂದರೇ ಹಿಂದಿ ಬಿ.ಎ. ಆದವರಿಗೆ ಯಾವುದಾದರೂ ಜಾಬ್ ಇದೆಯೇ ಇದ್ದರೆ ಅದಕ್ಕೆ ಏನು ಮಾಡಬೇಕು ಮತ್ತು ಎಲ್ಲಿ? ದಯವಿಟ್ಟು ತಿಳಿಸಿ.

ಹಿಂದಿಯಲ್ಲಿ ನೀವು ಬಿ.ಎ ಮಾಡಿರುವುದರಿಂದ ಪ್ರೌಢಶಾಲೆಗೆ ಅಧ್ಯಾಪಕರಾಗುವುದು. ಈ ಪದವಿಯ ಆಧಾರದ ಮೇಲೆ ಸರ್ವಿಸ್ ಪರೀಕ್ಷೆಗಳನ್ನು ಹಾಗು ಬ್ಯಾಂಕಿಂಗ್ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು.

ಆಹ್ವಾನಿಸುತ್ತಾರೆ ತಿಳಿಸಿ.

ಕೆ.ಎಸ್.ಆರ್.ಟಿ.ಸಿ.ಯಲ್ಲಿ ತಪಾಸಣಾ ಅಧಿಕಾರಿಯಾಗಲು ಕನಿಷ್ಠ ಪದವಿಯಾಗಿರಬೇಕು. ಅವರಿಗೆ ಅವಶ್ಯಕತೆಯಿದ್ದಲ್ಲಿ ಇದರ ಬಗೆಗೆ ದಿನಪತ್ರಿಕೆಯಲ್ಲಿ ಅರ್ಜಿ ಆಹ್ವಾನಿಸುತ್ತಾರೆ. ಹಾಗು ಬಡ್ತಿಯ ಆಧಾರದ ಮೇಲೂ ಆಯ್ಕೆ ಮಾಡುತ್ತಾರೆ.

ನಿಂಗಪ್ಪ, ಕೆಂಗನೂರ

ನಾನು ಪಿ.ಯು.ಸಿ. ಪ್ರಥಮ ವರ್ಷದಲ್ಲಿ ಓದುತ್ತಿರುವೆನು. ನನಗೆ ಈಗ 21 ವರ್ಷ. ಶಾಲೆಗೆ ಸೇರಿಸುವಾಗ ನನ್ನ ಜನ್ಮ ದಿನಾಂಕ 5.8.77 ಎಂದು ಬರೆಸಿದ್ದಾರೆ. ನನ್ನ ಜನ್ಮ ದಿನಾಂಕ 5.8.81 ಆಗಿರುತ್ತದೆ. ಆದ ಕಾರಣ ಮುಂದೆ ಡಿಗ್ರಿ ಮುಗಿಸಿದ ನಂತರ ಕೆಲಸಕ್ಕೆ ಏನಾದರೂ ತೊಂದರೆ ಆಗುವುದೇ? ಪಿ.ಎಸ್.ಐ. ಆಗಬೇಕೆಂಬ ಆಸೆ. ಆದರಿಂದ ಏನಾದರೂ ತೊಂದರೆಯಾಗುತ್ತದೆಯೇ?

ನಿಮ್ಮ ಜನ್ಮ ದಿನಾಂಕ ಬದಲಾಗಿರುವುದರಿಂದ ನಿಮ್ಮ ಕೆಲಸಕ್ಕೆ ಏನೂ ತೊಂದರೆಯಿಲ್ಲ. ನಿಮ್ಮ ಜನ್ಮ ದಿನಾಂಕವನ್ನು ಸರಿಪಡಿಸಬೇಕಿದ್ದಲ್ಲಿ ನಿಮ್ಮ ಜನ್ಮ ಪ್ರಮಾಣಪತ್ರದ ಸಹಾಯದಿಂದ ಮಾಡಿಸಬಹುದು.

ಯೊಗೇಂದ್ರ, ರಾಣೇಬೆನ್ನೂರು

ನಾನು ದ್ವಿತೀಯ ಪಿ.ಯು.ಸಿ. ಓದುತ್ತಿದ್ದೇನೆ. ಮುಂದೆ ಇಂಜಿನಿಯರ್ ಅಥವಾ NTTF or GT & TC ಸೇರಬೇಕೆಂದಿದ್ದೇನೆ. ಇವುಗಳಲ್ಲಿ ಯಾವುದು ಮಾಡಿದರೆ ಮುಂದೆ ಉತ್ತಮ ಅವಕಾಶಗಳಿವೆ. ಇವುಗಳ ಪ್ರವೇಶ ಪರೀಕ್ಷೆಗೆ ಯಾವುದಾದರೂ ಪುಸ್ತಕವಿದೆಯೇ?

ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ಎನ್.ಟಿ.ಟಿ. ಎಫ್. ಇಲ್ಲವೆ ಜಿ.ಟಿ.ಟಿ.ಸಿ. ಮಾಡಬಹುದು. ಇವೆರಡೂ ಕೋರ್ಸ್‌ಗಳು ಉತ್ತಮವಾದದ್ದಾಗಿವೆ. ಪ್ರವೇಶ ಪರೀಕ್ಷೆಗೆ ಬೇಕಾದ ಪುಸ್ತಕಗಳು ವಿವಿಧ ಪುಸ್ತಕ ಅಂಗಡಿಗಳಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ವಿವರಗಳನ್ನು GTTC, West of Chord Road, Rajajinagar Industrial area, Bangalore ಹಾಗು NTTF, 4th Phase, Peenya Industrial area, Bangalore. ಇಲ್ಲಿಂದ ಪಡೆಯಬಹುದು.

ಕೆ.ಎಸ್. ನೀಲಕಂಠ, ಬೆಂಗಳೂರು

ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಷಯದಲ್ಲಿ ಪಾಸಾಗಿರುವೆ. ಭೂಮಾಪನ ಇಲಾಖೆಗೆ ಸಂಬಂಧಪಟ್ಟ ಕೋರ್ಸ್ 'ಲ್ಯಾಂಡ್ ಅಂಡ್ ಸಿಟಿ ಸರ್ವೆ' ಕಲಿಯಲು ಇಚ್ಛಿಸುವೆ. ಇದರ ಪೂರ್ಣ ವಿವರ ತಿಳಿಸಿ. ಕೋರ್ಸಿನ ಅವಧಿ, ವಿದ್ಯಾರ್ಹತೆ, ಪಾರ್ಟ್ ಟೈಂನಲ್ಲಿ ಕಲಿಯಬಹುದೇ? ಬಿಜಾಪುರದ ವಿದ್ಯಾರ್ಥಿಗಳಿಗೆ ಹತ್ತಿರವಾದ ಈ ಕೋರ್ಸ್ ಹೊಂದಿದ ಕಾಲೇಜುಗಳಾವುವು?

ನೀವು ಲ್ಯಾಂಡ್ ಅಂಡ್ ಸಿಟಿ ಸರ್ವೆ ಕಲಿಯಬೇಕಾದಲ್ಲಿ ಸರ್ವೆಯಿಂಗ್ ಕೋರ್ಸ್ ಮಾಡಬೇಕು. ಇದು 1 ವರ್ಷದ ಕೋರ್ಸ್ ಆಗಿರುತ್ತದೆ. ಇದು ಅನೇಕ ಸರ್ಕಾರಿ ಹಾಗು ಖಾಸಗಿ ಕಾಲೇಜುಗಳಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗೆ East West College of Surveying, near KSDC, Subramanyanagar, ಇಲ್ಲಿ ಸಂಪರ್ಕಿಸಿ.

ಪುಂಡಲೀಕ ಎನ್. ಪೂಜಾರ, ಮೂಡಲಗೇರಿ

ನನಗೆ ಈಗ 24 ವರ್ಷ. ಬಿ.ಎ ಅಂತಿಮ ವರ್ಷದವರೆಗೂ ಓದಿದ್ದು, ಅನುತ್ತೀರ್ಣನಾಗಿರುತ್ತೇನೆ. ಅದರಲ್ಲಿ ಇಂಗ್ಲಿಷ್ ವಿಷಯ ಹೊರತು ಪಡಿಸಿ, ಎಲ್ಲಾ ವಿಷಯ ಪಾಸಾಗಿದ್ದೇನೆ. ಆದ್ದರಿಂದ ಬಿ.ಎ. ಪೂರ್ಣಗೊಳಿಸದೇ ಎಂ.ಎ. ಮಾಡಲು ಬರುವುದೆ? ತಿಳಿಸಿರಿ. ಮತ್ತು ಎಂ.ಎ.ದಲ್ಲಿ ಇಂಗ್ಲಿಷ್ ವಿಷಯವು ಅಲ್ಲಿಯೂ ಕಡ್ಡಾಯವಾಗಿರುತ್ತದೆಯೇ? ತಿಳಿಸಿರಿ. ಎಂ.ಎ.ದಲ್ಲಿ ಎಷ್ಟು ವಿಷಯಗಳನ್ನು ಓದಬೇಕು? ತಿಳಿಸಿ. ಒಂದು ವೇಳೆ ಅರ್ಹತೆ ಇದ್ದರೆ ಎಂ.ಎ. ಪ್ರವೇಶ ಪಡೆಯಲು ಯಾವ ತಿಂಗಳಲ್ಲಿ ಪ್ರಾರಂಭವಾಗುತ್ತದೆ. ದಯವಿಟ್ಟು ಇದಕ್ಕೆ ಉತ್ತರ ತಿಳಿಸಿ.

ನೀವು ಬಿ.ಎ.ನಲ್ಲಿ ಎಲ್ಲಾ ವಿಷಯಗಳಲ್ಲಿ ಪಾಸಾಗದೇ ಎಂ.ಎ. ಮಾಡಲು ಬರುವುದಿಲ್ಲ. ಇಂಗ್ಲಿಷ್ ವಿಷಯವನ್ನು ಪಾಸುಮಾಡಿಕೊಳ್ಳಿ, ಎಂ.ಎ. ಕನ್ನಡ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ ಇವುಗಳಲ್ಲಿ ಯಾವುದಾದರರೂ ಒಂದಕ್ಕೆ ಸೇರಿ ತಮ್ಮ ವಿದ್ಯಾಭ್ಯಾಸ ಮುಂದುವರೆಸಬಹುದು. ವಯಸ್ಸಿನ ಆಧಾರದ ಮೇಲೆ ಬಿ.ಎ. ಎಲ್ಲವೇ ಎಂ.ಎ.ಗೆ ಸೇರಬಹುದು. ಇದಕ್ಕೆ ಮುಕ್ತವಿಶ್ವವಿದ್ಯಾಲಯಗಳ ಪತ್ರಿಕಾ ಪ್ರಕಟಣೆಗಳನ್ನು ಗಮನಿಸಿ.

ಗೋಪಾಲ ಎನ್. ಭಟ್ಟ, ಭದ್ರಕೇರಿ

ನಾನು ಸಂಸ್ಕೃತ ವಿದ್ವಾನ್ ಪದವಿ ಪಡೆದು ಎಂ.ಎ. ಮುಗಿಸಿದ್ದೇನೆ. ನಾನು ಕೆ.ಇ.ಎಸ್. ಮಾಡಬಹುದೇ?

ಕೆ.ಇ.ಎಸ್. ಮಾಡಲು ಬಿ.ಇ. ಮಾಡಿರಬೇಕು. ಎಂ.ಎ. ಆಧಾರದ ಮೇಲೆ ಕೆ.ಇ.ಎಸ್. ಮಾಡಲು ಆಗುವುದಿಲ್ಲ.

ಹನುಮನಗೌಡ, ಬಳ್ಳಾರಿ

96ರಲ್ಲಿ 7ನೇ ತರಗತಿ ಪಾಸಾದೆ. 98ರಲ್ಲಿ ಎಸ್.ಎಸ್.ಎಲ್.ಸಿ. ನೇರವಾಗಿ ಕಟ್ಟಿ ಪಾಸಾದೆ. ಪಿ.ಯು.ಸಿ. ಮಾಡಿದೆ. ಬಿ.ಎ. ಮಾಡಬೇಕೆಂದಿದ್ದೇನೆ ಸಾಧ್ಯವೇ? ಈಗ ನನ್ನ ವಯಸ್ಸು 20. ವಯಸ್ಸಿನ ಆಧಾರದ ಮೇಲೆ ಬರೆಯಬಹುದೆ. ಯಾವುದೇ ವಿಶ್ವವಿದ್ಯಾಲಯದಲ್ಲಿ ನಾನು ಪಿ.ಎಸ್.ಐ. ಆಗಬೇಕೆಂದಿರುವ ಹಾಗಿದ್ದರೆ ಬಿ.ಎ.ಯಲ್ಲಿ ಯಾವ ವಿಷಯ ತೆಗೆದುಕೊಳ್ಳಬೇಕು. ದಯವಿಟ್ಟು ನಾನು ಕೇಳಿದ ವಿಷಯಗಳನ್ನು ತಿಳಿಸಿರಿ.

ಬಿ.ಎ. ಯನ್ನು ವಯಸ್ಸಿನ ಆಧಾರದ ಮೇಲೆ ಮಾಡಲು ನಿಮಗೆ 21 ವರ್ಷ ವಯಸ್ಸಾಗಿರಬೇಕು. ಪಿ.ಎಸ್.ಐ. ಆಗಲು ಕನಿಷ್ಠ ಪದವಿಯಾಗಿರಬೇಕು.

ಹೆಸರು ಇಲ್ಲ, ಚಿಕ್ಕಮಗಳೂರು

ಬಿ.ಎ. ದ್ವಿತೀಯ ವರ್ಷದಲ್ಲಿ ನಾನು ಓದು ಬಿಟ್ಟಿದ್ದೇನೆ. ನನಗೆ ಆರ್ಥಿಕವಾಗಿ ತುಂಬಾ ತೊಂದರೆಯಿದೆ. ಹಾಗಾಗಿ ಪಿ.ಯು.ಸಿ. ಆಧಾರದ ಮೇಲೆ ನಾನು ಯಾವ ಯಾವ ಕೆಲಸಗಳನ್ನು ಮಾಡಬಹುದು? ದಯವಿಟ್ಟು ತಿಳಿಸಿ. ನಾನು ಪಿ.ಯು.ಸಿ.ಯಲ್ಲಿ 1ನೇ ಕ್ಲಾಸ್ ಇದ್ದೇನೆ. ಅಥವಾ ಸಂಜೆ ಕಾಲೇಜಿನಲ್ಲಿ ಈ ನನ್ನ ಡಿಗ್ರಿ ಮುಂದುವರೆಸಬಹುದೆ?

ನೀವು ಉದ್ಯೋಗದಲ್ಲಿದ್ದುಕೊಂಡೇ ಓದನ್ನು ಮುಂದುವರೆಸಬಹುದು. ಸಂಜೆ ಕಾಲೇಜಿನಲ್ಲಿ ಇಲ್ಲವೆ ಅಂಚೆ ತೆರಪಿನ ಶಿಕ್ಷಣದ ಮೂಲಕ ನಿಮ್ಮ ವಿದ್ಯಾಭ್ಯಾಸ ಮುಂದುವರೆಸಬಹುದು. ಆದರೆ ಮೊದಲ ಬಿ.ಎ.ಗೆ ಪ್ರವೇಶ ಪಡೆಯಬೇಕಾಗುತ್ತದೆ. ಪಿ.ಯು.ಸಿ. ನಂತರ ಡಿಪ್ಲೊಮಾ ಇಲ್ಲವೆ ಜೆ.ಓ.ಸಿ. ಕೋರ್ಸ್‌ಗಳನ್ನು ಸಹ ಮಾಡಬಹುದು.

ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ನೋಂದಾಯಿಸಿಕೊಳ್ಳಿರಿ

ಅಣ್ಣಾಮಲೈ ಮುಕ್ತ ವಿಶ್ವವಿದ್ಯಾಲಯದವರು 1999-2000 ಸಾಲಿನ ಅಂಚೆ ಮತ್ತು ತೆರಪಿನ ಶಿಕ್ಷಣ ಪಡೆಯಲು ಈ ಕೆಳಕಂಡ ಕೋರ್ಸ್‌ಗಳಿಗೆ ಅರ್ಜಿ ಕರೆದಿದ್ದಾರೆ. ಅರ್ಜಿ ಸಲ್ಲಿಸಲು ಕನಿಷ್ಠ ವಿದ್ಯಾರ್ಹತೆಯ ಅಗತ್ಯವಿಲ್ಲ.

1. ಸ್ನಾತಕೋತ್ತರ ಪದವಿಗಳು : ಅವಧಿ - 2 ವರ್ಷ

ಎಂ.ಎ. : *ಅರ್ಥಶಾಸ್ತ್ರ, *ಇತಿಹಾಸ, *ಸಮಾಜಶಾಸ್ತ್ರ, ಇಂಗ್ಲಿಷ್, ತಮಿಳು, ಸಾರ್ವಜನಿಕ ಆಡಳಿತ, ಜನಸಂಖ್ಯಾ ಅಧ್ಯಯನ*.

ಎಂ.ಕಾಂ. : ಕೋ. ಆಪರೇಟಿವ್ ಮ್ಯಾನೇಜ್‌ಮೆಂಟ್

ಅರ್ಹತೆ : ಅರ್ಜಿ ಸಲ್ಲಿಸಲು ಅಭ್ಯರ್ಥಿಗೆ 1.7.1999 ರಂದು 21 ವರ್ಷ ತುಂಬಿರಬೇಕು.

2. ಪದವಿಗಳು : ಅವಧಿ 3 ವರ್ಷ

ಬಿ.ಎ. : ಇತಿಹಾಸ*, ಸಮಾಜಶಾಸ್ತ್ರ*, ಮನಃಶಾಸ್ತ್ರ ಅರ್ಥಶಾಸ್ತ್ರ*, ರಾಜ್ಯಶಾಸ್ತ್ರ*, ಇಂಗ್ಲಿಷ್, ತಮಿಳು, ಜನಸಂಖ್ಯಾಶಾಸ್ತ್ರ*.

ಬಿ.ಲಿಟ್ (ತಮಿಳು), ಬಿ.ಕಾಂ*, ಬಿ.ಎಸ್ಸಿ (ಗಣಿತಶಾಸ್ತ್ರ) ಮತ್ತು ಬಿ.ಬಿ.ಎ.

3. ಡಿಪ್ಲೊಮಾ : ಅವಧಿ 1 ವರ್ಷ

ಶೈವ ಸಿದ್ಧಾಂತ*

ಅರ್ಹತೆ : ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳಿಗೆ 1.7.1999ಕ್ಕೆ 18 ವರ್ಷ ತುಂಬಿರಬೇಕು. *ಇಂಗ್ಲಿಷ್ ಅಥವಾ ತಮಿಳು ಮಾಧ್ಯಮದಲ್ಲಿ ಓದಲು ಅವಕಾಶವಿದೆ.

ಅರ್ಜಿಗಳನ್ನು The Special Officer, Open University system, Directorate of Distance Education, Annamalai University, Annamalainagar-608002 ಇವರಿಗೆ 50/- ರೂ.ಗಳ ಡಿಮ್ಯಾಂಡ್ ಡ್ರಾಫ್ಟ್‌ನ್ನು The Director, D.D.E. Annamalai University ಹೆಸರಿನಲ್ಲಿ ಅಣ್ಣಾಮಲೈ ಅಥವಾ ಚಿದಂಬರನಲ್ಲಿ ಸಂದಾಯವಾಗುವಂತೆ ಬರೆದು ಕಳಿಸಬೇಕು. ಇದರೊಟ್ಟಿಗೆ 27 ಸೆ.ಮೀ X 21 ಸೆ.ಮೀ.ನ ಸ್ವವಿಳಾಸವಿರುವ ಲಕೋಟೆಯನ್ನು ನೀವು ಮಾಡಲಿಚ್ಛಿಸುವ ಕೋರ್ಸಿನ ವಿವರವನ್ನೊಳಗೊಂಡ ಮನವಿ ಪತ್ರದೊಂದಿಗೆ ಕಳಿಸಿ. **ಅರ್ಜಿ ಪಡೆಯಲು ಕಡೆಯ ದಿನಾಂಕ 22.06.1999. ತುಂಬಿದ ಅರ್ಜಿ ತಲುಪಲು ಕಡೇ ದಿನಾಂಕ 29.06.1999.**

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಕಂಡ ಸ್ಥಳಗಳಲ್ಲಿ ಮಾಡಲಾಗುವುದು

ಚೆನ್ನೈ : 19, ರುಕ್ಮಿಣಿ ಲಕ್ಷ್ಮೀಪತಿ ರೋಡ್, ಎಗ್ಮೋರ್-600 008
27, ನಾರ್ತ್ ಪಾರ್ಕ್ ರೋಡ್, ವೆಂಕಟಪುರಮ್, ಅಂಬತ್ತೂರು-600 053.
138, ಜಿ.ಎಸ್.ಟಿ. ರೋಡ್, ಕ್ರೋಂಪೇಟೆ-600 044.

ತಿರುಚಿ : 32-ಬಿ, 7ನೇ ಕ್ರಾಸ್, ತಿಲ್ಲೈನಗರ, ತಿರುಚಿ-620 018.

ಕೊಯಮತ್ತೂರು : 72, ಸರೋಜಿನಿ ರಸ್ತೆ, ರಾಮನಗರ-641 009.

ರಸಪ್ರಶ್ನೆ

1. ಪ್ರಪಂಚದ ಪ್ರಮುಖ ಧರ್ಮಗಳಾವುವು?
2. ಜೆಂದ್ ಅವೆಸ್ತಾ ಯಾವ ಧರ್ಮದ ಶ್ರೇಷ್ಠ ಗ್ರಂಥ?
3. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಎಲ್ಲಿದೆ?
4. ಅಮೆರಿಕಾ ರಾಷ್ಟ್ರಾಧ್ಯಕ್ಷರ ನಿವಾಸದ ಹೆಸರೇನು?
5. ಜಾಗತಿಕ ಆರೋಗ್ಯ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ?
6. ಪ್ರಪಂಚದ ಪ್ರಮುಖ ವೈದ್ಯ ಪದ್ಧತಿಗಳಾವುವು?
7. 'ಸಾರೆ ಜಹಾಂಸೆ ಅಚ್ಛಾ' ಎಂಬ ಕವಿತೆಯ ಕರ್ತೃ ಯಾರು?
8. ಅಫ್ಘಾನಿಸ್ತಾನದ ಹಿಂದಿದ್ದ ಹೆಸರೇನು?
9. ಕಿವುಡನಾಗಿದ್ದಾಗಲೇ ಮೇರು ಕೃತಿ ರಚಿಸಿದ ಪಾಶ್ಚಾತ್ಯ ಸಂಗೀತಗಾರ ಯಾರು?
10. ಕ್ಷ-ಕಿರಣವನ್ನು ಕಂಡು ಹಿಡಿದ ವಿಜ್ಞಾನಿ ಯಾರು?

ಉತ್ತರಗಳು

1. ಹಿಂದೂ ಧರ್ಮ; ಬೌದ್ಧ ಧರ್ಮ; ಜೈನ ಧರ್ಮ; ಕ್ರೈಸ್ತ ಧರ್ಮ; ಇಸ್ಲಾಂ ಧರ್ಮ; ಸಿಖ್ ಧರ್ಮ; ಬಹಾಯಿ ಧರ್ಮ.
2. ಜೆರಾಸ್ಟ್ರಿಯನ್ ಮತದ ಧರ್ಮ ಗ್ರಂಥ.
3. ರೋಂ
4. ಶ್ವೇತಭವನ (ವೈಟ್ ಹೌಸ್)
5. ಜಿನೀವಾ
6. ಅಲೋಪಥಿ, ಆಯುರ್ವೇದ. ಯುನಾನಿ, ಸಿದ್ಧ, ಹೋಮಿಯೋಪಥಿ, ಟಿಬೆಟನ್ - ಅಲ್ಲದೆ ಪ್ರಕೃತಿ ಚಿಕಿತ್ಸೆ.
7. ಇಕ್ಬಾಲ್
8. ಗಾಂಧಾರ
9. ಬಿಥೋವನ್
10. ರಾಂಟ್‌ಜೆನ್ (1895ರಲ್ಲಿ)

-ಟಿ.ವಿ.ವಿ.

ನರ್ಸಿಂಗ್‌ನಲ್ಲಿ ವಿಪುಲ ಉದ್ಯೋಗಾವಕಾಶ

■ ಗಿರೀಶ್ ವಿ.ಡಿ.

ನಮ್ಮ ರಕ್ತಸಂಬಂಧಿಗಳಲ್ಲಿ ಆಪ್ತರು, ಹಾಸಿಗೆಯಲ್ಲಿ ನರಳುತ್ತಿರುವಾಗ ನಾವು ಎಲ್ಲಾ ರೀತಿಯ ಸೇವೆ ನೀಡುವ ಅನಿವಾರ್ಯತೆಗೆ ಬದ್ಧವಾಗುತ್ತೇವೆ. ಬಹುಶಃ ಆ ಕ್ಷಣಗಳಲ್ಲಿ ನಮ್ಮಲ್ಲಿರುವ ಅಸಹ್ಯ ಭಾವನೆ, ಸಂಕೋಚಗಳೆಲ್ಲಾ ಮೂಲೆ ಸೇರುತ್ತವೆ. ಬದಲಿಗೆ ಸಂಯಮ, ಸಹನೆ, ತಾರುಣ್ಯ ಮೂಡಿಬರುತ್ತದೆ. ಆದರೆ ನಾವು ಯಾವಾಗಲೋ ಒಮ್ಮೆ ಮಾಡಬಹುದಾದ ಈ ಸೇವೆಯನ್ನು ಒಂದು ವ್ರತದಂತೆ, ನಿತ್ಯ ಜೀವನದ ಅಂಗವಾಗಿ ಸ್ವೀಕರಿಸುವ ದಾದಿಯರ ಬಗ್ಗೆ ಶುಶ್ರೂಷಕ ವೃತ್ತಿ ಬಗ್ಗೆ ನಾವೇಕೆ ಗಂಭೀರ ವಾಗಿಲ್ಲ? ಮೊದಲಿನಿಂದಲೂ ಸಮಾಜ ಈ ದಾದಿಯರ ಸಮೂಹವನ್ನು ಒಂದು ದುರಭಿಪ್ರಾಯದ ದೃಷ್ಟಿಯಿಂದಲೇ ನೋಡುತ್ತಾ ಬಂದಿದೆ. ಕಳೆದ ವರ್ಷ ನರ್ಸಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿನಿ ಕೊನೆಯ ಕ್ಷಣ ಹಿಂತೆಗೆದಳು. ಕಾರಣವಿಷ್ಟೇ ಅವಳೊಂದಿಗೆ ವಿವಾಹ ನಿಶ್ಚಿತವಾದ ಅವಳ ಸೋದರ ಮಾವ ಈ ಕೋರ್ಸಿಗೆ ಹೋದಲ್ಲಿ ತಾನು ಅವಳನ್ನು ಮದುವೆಯಾಗುವುದಿಲ್ಲ ಎಂದು ಹೇಳಿದ್ದು. ನರ್ಸ್ ಎಂದರೆ ಸಾಕು, ಒಂದು ಬಗೆಯ ಅನುಮಾನದಿಂದ ಸಮಾಜ ಅವರತ್ತ ನೋಡುತ್ತದೆ. ನಾವೆಲ್ಲರೂ ತೊಡಗಿರುವ ವೃತ್ತಿಗೆ ಶಿಸ್ತು, ಸಮಯಪಾಲನೆ, ವೃತ್ತಿನಿಷ್ಠೆ ಮಾತ್ರ ಅವಶ್ಯವೆನಿಸಿದರೆ ನರ್ಸಿಂಗ್ ಕೆಲಸಕ್ಕೆ ಮಾನವೀಯ ಸ್ಪಂದನ ಬಹುಮುಖ್ಯ ಹೀಗೆ ಮಾನವೀಯತೆ ಮರೆಯುವವರಿಗೆ ನಾವು ಸ್ಪಂದಿಸುವ ರೀತಿಯೇ ಇದು?

ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾದ ಈ ವೃತ್ತಿಪರತೆಗೆ ಇದೊಂದು ಕಾರಣವಾದರೆ, ಇನ್ನೊಂದು ಕಾರಣವೂ ಇದೆ. ಅದು ನಮ್ಮ ಪುರೋಹಿತಶಾಹಿ ತುಂಬಾ ದಿನಗಳಿಂದ ಸೃಷ್ಟಿಸಿಕೊಂಡು ಬಂದ 'ಮಡಿವಂತಿಕೆ!'

ನಮ್ಮ ಈ ಮಡಿವಂತಿಕೆಯ ಪೂರ್ವಾಗ್ರಹ ಭಾವನೆಗಳೇ ನಮ್ಮ ಯುವಕ, ಯುವತಿಯರು ಈ ಶಿಕ್ಷಣ ಹಾಗೂ ಕೆಲಸ ಪಡೆಯುವಲ್ಲಿ ಹಿಂದೆಗೆಯುವಂತಾಗಿದೆ.

ಹೀಗಾಗಿಯೇ ಉದ್ಯೋಗದ ವಿಪುಲ ಅವಕಾಶಗಳಿರುವ ಈ ನರ್ಸಿಂಗ್ ಶಿಕ್ಷಣವನ್ನು ಪಡೆಯಲು ಕೇರಳ, ಉತ್ತರ ಭಾರತದ ವಿದ್ಯಾರ್ಥಿಗಳು ಕರ್ನಾಟಕಕ್ಕೆ ದಾಪುಗಾಲು ಇಡುತ್ತಿದ್ದಾರೆ. ಕರ್ನಾಟಕ ಸರಕಾರ, ಕರ್ನಾಟಕ ನರ್ಸಿಂಗ್ ಪರಿಷತ್ ಸಂಸ್ಥೆಯನ್ನು ರೂಪಿಸಿ ನಮ್ಮ ಜನತೆಗೆ ಅವಕಾಶ ಒದಗಿಸಿದೆ. ರಾಜ್ಯದಲ್ಲಿ ಸರಕಾರ ಹಾಗೂ ಖಾಸಗಿ ನರ್ಸಿಂಗ್ ಕಾಲೇಜುಗಳು ಸುಮಾರು 220 ರಷ್ಟಿವೆ. ಬೆಂಗಳೂರಿನಲ್ಲಿಯೇ ಸುಮಾರು 37 ಕೇಂದ್ರ ಸರಕಾರದ ಅನುಮೋದಿತ ಶಿಕ್ಷಣ ಸಂಸ್ಥೆಗಳಿವೆ. ಇವು ಬರೀ ಹಣ ಮಾಡುವ ವ್ಯಾಪಾರಿ ಕೇಂದ್ರಗಳಾಗಿಲ್ಲ. ಕರ್ನಾಟಕದಲ್ಲಿ ಶಿಕ್ಷಣ ಪಡೆಯಲು ಹಿಂದೇಟು ಹಾಕುವ ಜನಗಳ ನಡುವೆಯೇ ಈ ಸಂಸ್ಥೆಗಳನ್ನು ಸ್ಥಾಪಿಸಿ ಒಂದು ಸಾಹಸೀ ಆಂದೋಲನಕ್ಕೆ ಪರೋಕ್ಷವಾಗಿ ಕೈ ಹಾಕಿದ್ದಾರೆ. ವಿದ್ಯಾರ್ಥಿಗಳಿಗೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸುವ ಪ್ರಯತ್ನ ಮಾಡಿದ್ದಾರೆ. ಸರಕಾರ ಪ್ರತಿ ಶಾಲೆಯಲ್ಲೂ ಪ್ರತಿ ಕೋರ್ಸಿಗೂ ಗರಿಷ್ಟ 40 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವ ಆಜ್ಞೆ ಹೊರಡಿಸುವ ಮೂಲಕ ಶಿಕ್ಷಣದ ಗುಣಮಟ್ಟ ಕಾಪಾಡುವಲ್ಲಿ ಪ್ರಯತ್ನ ಮಾಡಿದೆ. ವೈದ್ಯಕೀಯ ಶಾಲೆ ಹೊಂದಿದ ಸಂಸ್ಥೆಗೆ ಈ ಪ್ರವೇಶ ಅವಕಾಶದ ಮಿತಿ 60ಕ್ಕೆ ಇದೆ.

ರಾಜ್ಯ ಸರಕಾರವೇ ನೇರವಾಗಿ 9 ಶಾಲೆಗಳನ್ನು ನಡೆಸುತ್ತಿದೆ. ಪ್ರತಿ ವರ್ಷ 4 ರಿಂದ 5 ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಇದರಲ್ಲಿ ಶೇ 75 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೊರರಾಜ್ಯದವರು ಪ್ರತಿ ಖಾಸಗಿ ಸಂಸ್ಥೆಗಳಲ್ಲಿ ಶೇಕಡಾ 10ರಷ್ಟು ಪ್ರವೇಶಗಳು ಸರಕಾರದಿಂದ ಆಯ್ದ ವಿದ್ಯಾರ್ಥಿಗಳಿಗೆ ಮೀಸಲು. ಸರಕಾರದಿಂದ ಮೆರಿಟ್ ವಿದ್ಯಾರ್ಥಿಗಳಿಗೆ ಮಾಸಿಕ ರೂ. 300/- ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಮಾಸಿಕ ರೂ. 800/- ವಿದ್ಯಾರ್ಥಿ ವೇತನ ಸೌಲಭ್ಯವಿದೆ. ಇತ್ತೀಚಿನ ದಿನಗಳಲ್ಲಿ ನರ್ಸಿಂಗ್ ಕ್ಷೇತ್ರ ತನ್ನ ವ್ಯಾಪ್ತಿಯನ್ನು ವಿಶಾಲಗೊಳಿಸುತ್ತಿದೆ. ವೈದ್ಯಕೀಯ ವಿಜ್ಞಾನಗಳಲ್ಲಿ ಪ್ರತಿಯೊಂದು ಅಂಗಾಂಗಗಳಿಗೂ, ಸಂಬಂಧಿಸಿದ ರೋಗಗಳಿಗೂ ವಿಶೇಷ ಅಧ್ಯಯನದ ಅವಶ್ಯಕತೆ ಹೆಚ್ಚಾದಂತೆ ಆ ವಿಭಾಗಗಳ ಚಿಕಿತ್ಸೆಯಲ್ಲೂ ಹೊಸ ಹೊಸ ತಾಂತ್ರಿಕ ವಿಧಾನಗಳು ಬರುತ್ತಿವೆ. ಈ ಚಿಕಿತ್ಸಾಕ್ರಮಗಳಿಗೆ ಸೂಕ್ತ ತರಬೇತಿ ಹೊಂದಿರುವ ದಾದಿಗಳೇ ಬೇಕು. ಆದ್ದರಿಂದಲೇ ನರ್ಸಿಂಗ್‌ನಲ್ಲೂ ವೃತ್ತಿ ಶಿಕ್ಷಣ (ಡಿಪ್ಲೊಮಾ 3 ವರ್ಷ ಅವಧಿ)

ಗಾಂಧೀಜಿಯಿಂದ ತೆರೆಸಾವರೆಗೆ....

ನಮ್ಮದೇ ರಾಜ್ಯದ ಹಾವೇರಿ ಹತ್ತಿರದ ಸಂಗೂರಿನ 'ಕರಿಬಸಪ್ಪ ಎರೆಸೀಮ' ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಮೈಲುಗಲ್ಲಾದ ಚಲೇಜಾವ್ ಚಳುವಳಿಯ ಒಬ್ಬ ನೇತಾರ. ಬಾಂಬ್ ಸಿಡಿಸಿ ಕೈ ಕಳೆದುಕೊಂಡರಲ್ಲದೆ ಆ ಮುನ್ನ ಗಾಂಧೀಜಿಯವರ ಆಶ್ರಮದಲ್ಲಿದ್ದರು. ಮೀರಾಬೆಹನ್ ವಿಷಮ ಶೀತಜ್ವರದಿಂದ ನರಳುತ್ತಿರುವಾಗ ಅವರ ಶುಶ್ರೂಷೆಯ ಜವಾಬ್ದಾರ ಕರಿಬಸಪ್ಪನವರ ಪಾಲಿನದು. ಮೀರಾಬೆಹನ್‌ಗೆ ಎನಿಮಾ ಕೊಡಬೇಕಾದ ಸಂದರ್ಭ. ಒಬ್ಬ ಬಿಳಿ ಮಹಿಳೆಗೆ ಎನಿಮಾ ಕೊಡಲು ಕರಿಬಸಪ್ಪ ಇವರಿಗೆ ಸಂಕೋಚ. ಇದಕ್ಕೆ ಬಾಪೂ ಹೇಳಿದರು - "ಅವರನ್ನು ಪುರುಷನೆಂದು ಭಾವಿಸಿ ಎನಿಮಾ ಕೊಡಿ." ಇದರಿಂದ ಎನಿಮಾ ಕೊಡುವಾಗ ಸ್ವಲ್ಪವೂ ವಿಚಲಿತರಾಗಲಿಲ್ಲ, ಅವರ ಮನಸ್ಸು ಚಂಚಲಗೊಳ್ಳಲಿಲ್ಲ. ಮಲೇರಿಯಾ, ಪ್ಲೇಗ್‌ನಂತಹ ಖಾಯಿಲೆಗಳು ಸಮರವನ್ನೇ ಘೋಷಿಸುತ್ತಿದ್ದ ಆ ಕಾಲದಲ್ಲಿ ಸ್ವತಃ ಮಹಾತ್ಮಾಜೀ ಎಷ್ಟೋ ರೋಗಿಗಳಿಗೆ ತಾವೇ ತಾಯಿ, ಹೆಂಡತಿ ದಾದಿಯಾಗಿ ಸೇವೆ ಮಾಡಿದ್ದಾರೆ.

ನಮ್ಮೆಲ್ಲರ ನಿರ್ಲಕ್ಷ್ಯ, ಅಸ್ಪೃಶ್ಯತಾ ಭಾವನೆಯಿಂದ ದೂರ ತಳ್ಳಲ್ಪಟ್ಟ ಸಾವಿರಾರು ಕುಷ್ಠರೋಗಿಗಳನ್ನು ಆದರಿಸಿ, ಅವರಿಗೆ 'ಸೂರು' ನೀಡಿ ಅವರ ಸೇವೆಯಲ್ಲಿಯೇ ಬಹುಪಾಲು ಸಮಯ ಕಳೆದ ಮಹಾಮಾತೆ ತೆರೇಸಾ.

ರಾಜ್ಯದಲ್ಲಿನ ಒಟ್ಟು ನರ್ಸಿಂಗ್ ಶಿಕ್ಷಣಕ್ಕೆ ಸಂಬಂಧಿಸಿದ ಸಂಸ್ಥೆಗಳ ಅಂಕಿ ಸಂಖ್ಯಾ ವಿವರ ಹೀಗಿದೆ.

ಜಿಲ್ಲೆ	ಡಿಪ್ಲೋಮಾ ಶಿಕ್ಷಣ	ಪದವಿ	ಸ್ನಾತಕೋತ್ತರ
ಬೆಂಗಳೂರು ನಗರ	37	38	1
ತುಮಕೂರು	12		
ಚಿತ್ರದುರ್ಗ	8		
ಶಿವಮೊಗ್ಗ	2		
ಮೈಸೂರು	9		
ಕೊಡಗು	1		
ದ.ಕನ್ನಡ	14	3	
ಹಾಸನ	5		
ಬೆಳಗಾಂ	6		
ಧಾರವಾಡ	3		
ಬಿಜಾಪುರ	5		
ಗುಲ್ಬರ್ಗಾ	6	1	
ಬಳ್ಳಾರಿ	3		
ಬೀದರ್	4		
ರಾಯಚೂರು	1		
ಚಿಕ್ಕಮಗಳೂರು	2		
ಒಟ್ಟು	118	42	1

ನರ್ಸಿಂಗ್ ಪದವಿ ಶಿಕ್ಷಣ 4 ವರ್ಷ ಹಾಗೂ ಸ್ನಾತಕೋತ್ತರ ಪದವಿ 4 ವರ್ಷ ಹೀಗೆ ವಿವಿಧ ಹಂತಗಳಿವೆ.

ಈಗಾಗಲೇ ಸಾಕಷ್ಟು ಪ್ರಮಾಣದ ಶಾಲಾ ಕಾಲೇಜುಗಳು ರಾಜ್ಯದಲ್ಲಿ ಲಭ್ಯವಿದೆ. ದೇಶದಾದ್ಯಂತ ಒಂದೇ ಪಠ್ಯಕ್ರಮವನ್ನು (ಕೇಂದ್ರ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಸೂಚಿಸಿದ) ಅಳವಡಿಸಲಾಗಿದೆ.

ಯಾವುದೇ ಶೈಕ್ಷಣಿಕ ಸಂಸ್ಥೆ ಈ ವೃತ್ತಿಗೆ ಸಂಬಂಧಿಸಿದ ತರಬೇತಿ ಪ್ರಾರಂಭಿಸಲು ನರ್ಸಿಂಗ್ ಪ್ರತಿಷ್ಠಾನವು ಕೆಲವು ಕನಿಷ್ಠ ನಿರ್ಬಂಧಗಳನ್ನು ಹಾಕಿದೆ.

150 ಹಾಸಿಗೆಗಳ ಆಸ್ಪತ್ರೆ ಇರುವಂತಹ ಪ್ರದೇಶದಲ್ಲಿ ಮಾತ್ರ ಶಾಲೆ ತೆರೆಯಲು ಅನುಮತಿ ನೀಡಲಾಗುವುದು. ಆದರೆ ತಂತ್ರಜ್ಞಾನ ಬೆಳೆಯುತ್ತಿರುವ ಈ ವೇಗದ ದಿನಗಳಲ್ಲಿ ಇನ್ನೂ ಕೆಲವು ಗಮನ ನೀಡಬೇಕಾದ ಅಂಶಗಳಿವೆ.

1. ಶಾಲೆಗೆ ಪ್ರಾರಂಭಿಸಲು ಅನುಮತಿ ನೀಡುವಾಗ ಜಿಲ್ಲಾವಾರು ಜನಸಂಖ್ಯೆ ಆಧಾರವಾಗಿರಿಸಬೇಕು.

2. ವಿದ್ಯಾರ್ಥಿಗಳಿಗೆ ಉತ್ತಮ ವಸತಿ ಸೌಲಭ್ಯ,

ಪ್ರಯೋಗಾಲಯ ನೀಡಲು ಪ್ರಬಲವಾಗಿರುವ ಸಂಸ್ಥೆಗಳಿಗೆ ಅನುಮತಿ ನೀಡಬೇಕು.

3. ಶಿಕ್ಷಣದ ಗುಣಮಟ್ಟ ಕಾಪಾಡಿಕೊಳ್ಳಲು ತಪಾಸಣಾ ಸಮಿತಿ ರಚಿಸಬೇಕು.

4. ಜನಜಾಗೃತಿ ಆಂದೋಲನದಲ್ಲಿ ಸರಕಾರ ಹಾಗೂ ಸಾಮಾಜಿಕ ಸಂಘಟನೆಗಳನ್ನೂ ತೊಡಗಿಸಿ ಕೊಳ್ಳುವ ಕಾರ್ಯಕ್ರಮ ರೂಪಿಸಬೇಕು.

ಸಾಮಾಜಿಕ ಕಳಕಳಿಯ, ಗೌತಮ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲ ಡಾ. ಎ.ಟಿ. ಎಸ್. ಗಿರಿ ಒಂದಿಷ್ಟು ಸಲಹೆಗಳನ್ನು ನೀಡಿದರು. ನರ್ಸಿಂಗ್ ಶಿಕ್ಷಣದಲ್ಲಿ ಉನ್ನತ ಗುಣಮಟ್ಟ ಕಾಪಾಡಲು ಸರಕಾರ ಶಾಲೆಗಳ ಮಿತಿಯನ್ನು ಕ್ರಮವಾಗಿ ಅನುಸರಿಸಬೇಕು.

ವೈದ್ಯ ವಿಜ್ಞಾನದ ಸಕಲ ಶಾಸ್ತ್ರಗಳ ವಿಶೇಷ ತರಬೇತಿಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು.

ಈ ವೃತ್ತಿಯ ಬಗ್ಗೆ ಸಮಾಜದ ನಡುವೆ ಇರುವ ಕೀಳು ಭಾವನೆ ಹೋಗಲಾಡಿಸಲು ಸಮಾಜ ಸೇವಾ ಸಂಘಟನೆಗಳು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮ ರೂಪಿಸಿ ಆಚರಣೆಗೆ ತರಬೇಕು. ಹೀಗೆ ಮಾಡಿದಾಗಲೇ ಫ್ಲಾರೆನ್ಸ್ ನೈಟಿಂಗಲ್ ಇವರ ಜನ್ಮದಿನ ಮೇ 15ನ್ನು ನಾವು 'ನರ್ಸಿಂಗ್ ಡೇ' ಎಂದಾಚರಿಸುವುದು ಅರ್ಥಪೂರ್ಣ.

ಈ ಬಗೆಗೆ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಡಾ. ಎ.ಟಿ.ಎಸ್. ಗಿರಿ
ಪ್ರಾಂಶುಪಾಲರು
ಗೌತಮ್ ಸ್ಕೂಲ್ ಆಫ್ ನರ್ಸಿಂಗ್
ಮಂಜುನಾಥನಗರ
ಬೆಂಗಳೂರು - 560 010.

■



ಸರ್... ನಾನು ಬರೆದುಕೊಟ್ಟ ಭಾಷಣ ಚಿಕ್ಕದೆ ಇತ್ತು... ಆದರೆ ನಾನು ಆ ಭಾಷಣದ ಮೂರು ಪ್ರತಿ ನಿಮಗೆ ಕೊಟ್ಟಿದ್ದು ಇಷ್ಟಕ್ಕೆಲ್ಲಾ ಕಾರಣವಾಗಿದೆ ಅಷ್ಟೇ....

ಆರೋಗ್ಯ ವಿಜ್ಞಾನ ಗ್ರಂಥಪಾಲಕರ ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾ

ಆರೋಗ್ಯ ವಿಜ್ಞಾನ ಗ್ರಂಥಪಾಲಕರ ಒಂದು ವರ್ಷದ ಸ್ನಾತಕೋತ್ತರ ವಿಜ್ಞಾನಗಳ ಪಠ್ಯಕ್ರಮಕ್ಕೆ (ಪಿಜಿಡಿಹೆಚ್‌ಎಲ್) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು. ಇಲ್ಲಿ 1999-2000 ಸಾಲಿನ ವ್ಯಾಸಂಗ ವರ್ಷಕ್ಕೆ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕುಲಸಚಿವರ ಪರವಾಗಿ ಪಡೆದ ರೂ. 50/-ಕ್ಕೆ ಡಿಮ್ಯಾಂಡ್ ಡ್ರಾಫ್ಟ್ ಸಲ್ಲಿಸಿ, ನಿಗಧಿ ಪಡಿಸಿರುವ ಅರ್ಜಿಯನ್ನು ಕುಲಸಚಿವರಿಂದ ಖುದ್ದಾಗಿ ಅಥವಾ ಅಂಚೆ ಮೂಲಕ ಪಡೆಯಬಹುದು.

ಅರ್ಹತೆ

- ಭಾರತದಲ್ಲಿ ಕಾನೂನು ಬದ್ಧವಾಗಿ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಅಥವಾ ಇದಕ್ಕೆ ಸಮವೆಂದು ಪರಿಗಣಿಸಿರುವ ಸ್ನಾತಕೋತ್ತರ ಪಠ್ಯಕ್ರಮದಲ್ಲಿ ಮಾಸ್ಟರ್ ಪದವಿ ಪಡೆದಿರುವ ಮತ್ತು ನಿಗಧಿ ಪಡಿಸಿರುವ ಅರ್ಹತಾ ಪರೀಕ್ಷೆಯಲ್ಲಿ 55%ಗೆ ಕಡಿಮೆ ಇರದಂತೆ ಅಂಕ ಪಡೆದಿರಬೇಕು.
- ಎಂ.ಎಲ್.ಐ.ಸಿ. ಪದವಿ ಪಡೆದು ಆರೋಗ್ಯ ವಿಜ್ಞಾನಗಳ ಕಾಲೇಜುಗಳಲ್ಲಿ ಗ್ರಂಥಪಾಲಕರಾಗಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ್ದು ಮತ್ತು ವಿದ್ಯಾರ್ಹತೆಯಲ್ಲಿ ಕನಿಷ್ಠ 50% ಅಂಕಗಳಿಸಿದಲ್ಲಿ ಅರ್ಹರಾಗುವರು.
- ಪ.ಜಾ/ಪ.ವರ್ಗ/ ಗ್ರೂಪ್ 1 ರ ಅಭ್ಯರ್ಥಿಗಳಿಗೆ ಅರ್ಹತಾ ಪರೀಕ್ಷೆಯಲ್ಲಿ ನಿಗಧಿ ಪಡಿಸಿರುವ ಶೇಕಡಾವಾರು ಅಂಕಗಳಲ್ಲಿ 5% ವಿನಾಯಿತಿ ಇರುತ್ತದೆ.

ಪಠ್ಯ ಕ್ರಮದ ಅವಧಿ

ಸಂಶೋಧನೆಯ ವಿಷಯದ ಮೇಲೆ ಪ್ರಬಂಧ ಸಲ್ಲಿಸುವುದೂ ಸೇರಿದಂತೆ ಪಠ್ಯಕ್ರಮದ ಅವಧಿಯು 12 ತಿಂಗಳುಗಳು.

ಪ್ರವೇಶ ಪರೀಕ್ಷೆ

ಅರ್ಹತೆ ಪಡೆದ ಎಲ್ಲಾ ಅಭ್ಯರ್ಥಿಗಳಿಗೂ ಪ್ರವೇಶ ಪರೀಕ್ಷೆಯನ್ನು 25.06.99 ರಂದು ಬೆಳಿಗ್ಗೆ 11.00 ಗಂಟೆಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು - 41 ಇಲ್ಲಿ ನಡೆಸಲಾಗುವುದು ಮತ್ತು ಅನಂತರ 26.06.99 ರಂದು ಮಧ್ಯಾಹ್ನ 3.00 ಗಂಟೆಗೆ ಸಂದರ್ಶನ ಇರುತ್ತದೆ.

ಗಮನಿಸಿ

■ ಕ್ರಮವಾಗಿ ಭರ್ತಿಮಾಡಿದ ಅರ್ಜಿಯ ಜೊತೆಗೆ, ಅರ್ಹತಾ ಪರೀಕ್ಷೆಯ ಅಂಕಪಟ್ಟಿಗಳು, ಹುಟ್ಟಿದ ದಿನಾಂಕದ ಸಾಕ್ಷ್ಯಾಧಾರ, ಯೋಗ್ಯತಾ ಪತ್ರಗಳು, ಪ್ರಶಂಸನಾ ಪತ್ರಗಳನ್ನು ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು- 41 ಇಲ್ಲಿಗೆ ಕಡೆಯ ದಿನಾಂಕ ದಂದು ಅಥವಾ ಅದಕ್ಕೆ ಮುಂಚೆ ಕಳಿಸಿಕೊಡಬೇಕು.

- ಕ್ರಮವಾಗಿ ಭರ್ತಿ ಮಾಡಿದ ಅರ್ಜಿಪತ್ರಗಳನ್ನು ಕಳುಹಿಸಲು ಕಡೆಯ ದಿನಾಂಕ - **16.06.99**
- ರೂ. 100/- ದಂಡ ಸಹಿತ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ - **21.06.99**

■

ನೌಕಾದಳದಲ್ಲಿ ಇಂಜಿನಿಯರಿಂಗ್‌ಗೆ ಅರ್ಜಿ ಕರೆದಿದೆ

ಭಾರತೀಯ ನೌಕಾದಳವು ಲೊನಾವ್ಲಾ ನೌಕಾ ಇಂಜಿನಿಯರಿಂಗ್ ಕಾಲೇಜಿಗೆ ಸೇರಲು ಪ್ರತಿಭಾವಂತ (10+2) ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಈ ಕೋರ್ಸು ಡಿಸೆಂಬರ್ 99ರಿಂದ ಆರಂಭವಾಗಲಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಭಾರತೀಯ ನೌಕಾದಳವು, ಭಾರತದಲ್ಲೇ ಅತ್ಯುತ್ತಮವೆನಿಸಿಕೊಂಡಿರುವ ಲೊನಾವ್ಲಾ ನೌಕಾ ಇಂಜಿನಿಯರಿಂಗ್ ಕಾಲೇಜಿಗೆ ಪ್ರತಿಭಾವಂತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಇಲ್ಲಿ ಮರೈನ್/ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್/ಏರೋನಾಟಿಕಲ್ ಇಂಜಿನಿಯರಿಂಗ್ ಬಗ್ಗೆ ಅತ್ಯುತ್ತಮ ತರಬೇತಿ ನೀಡಲಿದೆ. ಜೊತೆಗೆ ಆಟೋಟಗಳಿಗೂ ಆದ್ಯತೆಯಿದೆ.

ವಯೋಮಿತಿ

2ನೇ ಡಿಸೆಂಬರ್ 1980 ರಿಂದ 1ನೇ ಜುಲೈ 1983ರಲ್ಲಿ ಜನಿಸಿದ್ದು, ಅವಿವಾಹಿತ ಪುರುಷ ಭಾರತೀಯ ಅಭ್ಯರ್ಥಿಯಾಗಿರತಕ್ಕದ್ದು.

ವಿದ್ಯಾರ್ಹತೆ

ದ್ವಿತೀಯ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆ ಪಾಸಾಗಿದ್ದು, ಭಾರತೀಯ ಅಂಗೀಕೃತ ವಿಶ್ವ ವಿದ್ಯಾಲಯದಲ್ಲಾಗಿರಬೇಕು.

ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ.ಯಲ್ಲಿ ಭೌತಶಾಸ್ತ್ರ ರಸಾಯನ ಶಾಸ್ತ್ರ ಹಾಗೂ ಅಂಕಗಣಿತದಿಂದ ಒಟ್ಟು 70% ಹಾಗೂ ಇಂಗ್ಲಿಷ್‌ನಲ್ಲಿ ಕನಿಷ್ಠ 50% ಅಂಕಗಳನ್ನು ಗಳಿಸಿರಬೇಕು.

ದೇಹದಾರ್ಢ್ಯತೆ

ಎತ್ತರ ಮತ್ತು ತೂಕ : 157 ಸೆಂ.ಮೀ.ಗೆ ತಕ್ಕನಾಗಿ ತೂಕ ಹಾಗೂ ಎದೆಯ ಸುತ್ತಳತೆ ಇರಬೇಕು.

ದೃಷ್ಟಿ - 6/12, 6/18 ಇರಬೇಕು.

ಪೂರ್ಣಾವಧಿ ಶಿಕ್ಷಣದ ಬಳಿಕ ತಾಂತ್ರಿಕ ಅಧಿಕಾರಿಯಾಗಿ ಕೆಲಸಕ್ಕೆ ನೇಮಿಸಿಕೊಳ್ಳಲಾಗುವುದು.

ಅರ್ಜಿ ಸಲ್ಲಿಸುವ ಬಗೆಗೆ

ಅರ್ಜಿಗಳನ್ನು ನಿಗದಿತ ರೂಪದಲ್ಲಿ ಭರ್ತಿ ಮಾಡಿ ಲಕೋಟೆಯ ಮೇಲೆ 'NCE 99-ಗಾಗಿ ಅರ್ಜಿ' ಎಂದು ನಮೂದಿಸಿ, ಕೇರಾಫ್ ಪೋಸ್ಟ್ ಬಾಕ್ಸ್ ನಂ. 04, ಡಿ.ಹೆಚ್.ಕ್ಯೂ. ಪೋಸ್ಟ್ ಆಫೀಸ್, ನ್ಯೂಡೆಲ್ಲಿ - 110 011 ಗೆ, **05 ಜುಲೈ 99ರ ಒಳಗಾಗಿ ತಲುಪುವಂತೆ ಕಳಿಸಬೇಕು.**

ಆಯ್ಕೆ ರೀತಿ

ಅರ್ಹವೆನಿಸಿದ ಅಭ್ಯರ್ಥಿಗಳನ್ನು ಬೆಂಗಳೂರು ಅಥವಾ ಭೂಪಾಲ್‌ಗೆ ಸರ್ವೀಸ್ ಸೆಲೆಕ್ಷನ್ ಬೋರ್ಡ್‌ನ ಸಂದರ್ಶನ ಹಾಗೂ ವೈದ್ಯಕೀಯ ಪರೀಕ್ಷೆಗಾಗಿ ಕರೆಯಲಾಗುವುದು. ಸಂದರ್ಶನವನ್ನು ಜುಲೈ - ಆಗಸ್ಟ್ 99ರಲ್ಲಿ 5 ದಿನಗಳ ಕಾಲ ನಡೆಸಲಾಗುವುದು. ಇದು ಅಭ್ಯರ್ಥಿಯ ಮಾನಸಿಕ ಸ್ಥೈರ್ಯ, ವ್ಯಕ್ತಿತ್ವ, ಕೂಟಚರ್ಚೆ, ಮೌಖಿಕ ಪರೀಕ್ಷೆ, ವೈದ್ಯಕೀಯ ಮುಂತಾದವುಗಳನ್ನೊಳಗೊಂಡಿರುತ್ತದೆ. ಮೊದಲ ದಿನದ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಆಯ್ಕೆಗೊಂಡವರು ಮಾತ್ರ ಮುಂದಿನ ಪರೀಕ್ಷೆ ತೆಗೆದುಕೊಳ್ಳಲು ಅರ್ಹರು. (ಸಂದರ್ಶನಕ್ಕೆ ಹಾಜರಾದವರಿಗೆ ಎರಡನೇ ದರ್ಜೆ ಸ್ಲೀಪರ್ ಬೋಗಿ ಖರ್ಚನ್ನು ಕೊಡಲಾಗುವುದು) ಆಯ್ಕೆಯಾದ ಅಭ್ಯರ್ಥಿಗಳಿಗೆ ಅಂಕಗಳನ್ನಾಧರಿಸಿ ಸೀಟುಗಳನ್ನು ನೀಡಲಾಗುವುದು.

ತರಬೇತಿ

ತರಬೇತಿ ಡಿಸೆಂಬರ್ 1999ರಂದು ಆರಂಭಗೊಳ್ಳುವುದು. ಮೊದಲ ಆರು ತಿಂಗಳು ಗೋವಾದಲ್ಲಿಯೂ 4 ವರ್ಷ Naval College of Engineering, INS ಶಿವಾಜಿ, ಲೊನಾಲ್ವದಲ್ಲಿ ನಡೆಯಲಿದೆ. ಆರು ತಿಂಗಳ ಅವಧಿಯ ನಂತರ 3 ವಾರಗಳ ರಜೆ ಸಿಗಲಿದೆ. ಪೂರ್ಣಾವಧಿ ಕೋರ್ಸಿನ ನಂತರ ಬಿ.ಟೆಕ್. ಪದವಿಯನ್ನು ಜವಹರಲಾಲ್ ವಿಶ್ವವಿದ್ಯಾಲಯದಿಂದ ನೀಡಲಾಗುವುದು.

ತರಬೇತಿ ಖರ್ಚು

ಅಭ್ಯರ್ಥಿಯ ಎಲ್ಲಾ ಖರ್ಚುಗಳನ್ನು ನೌಕಾದಳ ನೋಡಿಕೊಳ್ಳುವುದು.

31/2 ವರ್ಷ ಅವಧಿಯ ತರಬೇತಿಯ ನಂತರ ಅಭ್ಯರ್ಥಿಗೆ Midshipmen ರ‍್ಯಾಂಕ್‌ನೊಂದಿಗೆ ತಿಂಗಳಿಗೆ 8000/- ರೂ.ಗಳನ್ನು ನೀಡಲಾಗುವುದು. ಮತ್ತೆ ಆರು ತಿಂಗಳ ತರಬೇತಿಯ ನಂತರ Sub-Lieutenent ಆಗಿ ತಿಂಗಳಿಗೆ ರೂ. 11,500/- ಸ್ಟೈಫಂಡ್‌ನೊಂದಿಗೆ ಬಡ್ತಿ ಕೊಡಲಾಗುವುದು. ಅಭ್ಯರ್ಥಿಗಳ ಅರ್ಹತೆ ಮೇರೆಗೆ Viz. Commander, Captain ಮುಂತಾದ ಬಡ್ತಿಗಳನ್ನು ನೀಡಲಾಗುತ್ತದೆ.

ಆಫೀಸರ್ಸ್‌ಗೆ 60 ದಿನಗಳ ವಾರ್ಷಿಕ ರಜೆ, 20 ದಿನ Casual ರಜೆ, ಪ್ರವಾಸ ಭತ್ಯದ ರಿಯಾಯ್ತಿ, ತಾನು, ತಂದೆ-ತಾಯಿ ಹಾಗೂ ಕುಟುಂಬಕ್ಕೆ ಉಚಿತ ವೈದ್ಯಕೀಯ ಸೌಲಭ್ಯ, ಉಪಹಾರ ಮುಂತಾದ ಸೌಲಭ್ಯಗಳು ಲಭ್ಯವಿದೆ.

ನೌಕಾದಳವು ಸಾಹಸ ಕ್ರೀಡೆಗಳಿಗೂ ಪ್ರೋತ್ಸಾಹ ನೀಡುವುದು.

ಅರ್ಜಿ ಸಲ್ಲಿಸುವುದು ಹೇಗೆ?

ನಮೂದಿತ ರೀತಿಯಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಡನೆ ಎಲ್ಲಾ ದೃಢೀಕರಣ ಪತ್ರಗಳನ್ನು ಲಗತ್ತಿಸಬೇಕಾಗಿಲ್ಲ. ಹುಟ್ಟಿದ ದಿನಾಂಕ, ಇಂಗ್ಲಿಷ್ ಹಾಗೂ ಪಿ.ಸಿ.ಎಂ. ಅಂಕಪಟ್ಟಿಗಳನ್ನು (ಅರ್ಜಿಯಲ್ಲಿ ತಿಳಿಸಿರುವಂತೆ) ಕೇಂದ್ರ/ರಾಜ್ಯ ಸರ್ಕಾರಿ ಅಧಿಕಾರಿಗಳು/ ಮೊದಲದರ್ಜೆ ನ್ಯಾಯಾಧೀಶರು /ಶಾಲಾಕಾಲೇಜಿನ ಪ್ರಿನ್ಸಿಪಾಲರಿಂದ ದೃಢೀಕರಿಸಿ ಲಗತ್ತಿಸಬೇಕು. ಇಲ್ಲದಿದ್ದರೆ ಅರ್ಜಿಯನ್ನು ತಿರಸ್ಕರಿಸಲಾಗುವುದು.

200 ಪದಗಳು ಮೀರದಂತೆ ಸಂಕ್ಷಿಪ್ತವಾಗಿ 'ನಾನೇಕೆ ಭಾರತೀಯ ನೌಕಾದಳವನ್ನು ಸೇರಲಿಚ್ಛಿಸುತ್ತೇನೆ' ('Why I want to Join the Indian Navy') ಎಂದು ಅಭ್ಯರ್ಥಿಯು ತನ್ನ ಕೈ ಬರಹದಲ್ಲೇ ಬರೆದು ಅರ್ಜಿಯೊಡನೆ ಲಗತ್ತಿಸಬೇಕು. ಆರಿಸಲ್ಪಟ್ಟ ಅಭ್ಯರ್ಥಿಗಳನ್ನು ಜುಲೈ -ಆಗಸ್ಟ್ 99ರಲ್ಲಿ SSB ಸಂದರ್ಶನಕ್ಕೆ ಕರೆಯಲಾಗುತ್ತದೆ. ಆಕಸ್ಮಿಕವಾಗಿ ಪರೀಕ್ಷೆಗಳಿಂದ ಅಭ್ಯರ್ಥಿಗೆ ತೊಂದರೆಯಾದರೆ ಯಾವ ಪರಿಹಾರ

ವನ್ನೂ ನೀಡಲಾಗುವುದಿಲ್ಲ.

SSB ಪರೀಕ್ಷೆ ಸಂದರ್ಶನಗಳಿಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಮಾಡುವಂತಿಲ್ಲ. ಅದಾಗ್ಯೂ ಸಂದರ್ಶನ ಕರೆ ಪತ್ರ ಬಂದ ನಂತರ ಅವಶ್ಯವಿದ್ದರೆ SSB ಅಧ್ಯಕ್ಷರಿಗೆ (ನಕಲು ಪ್ರತಿಯನ್ನು ಡೈರೆಕ್ಟೊರೇಟ್ ಆಫ್ ಮ್ಯಾನ್‌ಪವರ್ ಪ್ಲಾನಿಂಗ್ ಅಂಡ್ ರಿಕ್ರೂಟ್‌ಮೆಂಟ್, ನೇವಲ್ ಹೆಡ್ ಕ್ವಾರ್ಟರ್ಸ್, ನ್ಯೂಡೆಲ್ಲಿ - 110 011) ಪತ್ರಿಸಬಹುದು.

ಜಾಹೀರಾತಿನಲ್ಲಿ ನೀಡಿರುವ ಕರಾರು, ನಿಬಂಧನೆಗಳು ಅಭ್ಯರ್ಥಿ ಮಾರ್ಗದರ್ಶನಕ್ಕೆ ಮಾತ್ರ ನೀಡಲಾಗಿದ್ದು, ಬದಲಾವಣೆಗೆ ಒಳಪಟ್ಟಿದೆ.

ಸೂಚನೆ

ಅಭ್ಯರ್ಥಿಯ ಆಯ್ಕೆಯಲ್ಲಿ ಎತ್ತರ, ದೇಹದಾರ್ಢ್ಯವೂ ಪ್ರಮುಖವಾದ ಅಂಶವಾಗಿರುವುದರಿಂದ ದೈಹಿಕ ತರಬೇತಿ/ಆಟ/ಓಟಗಳನ್ನು ಅಭ್ಯಾಸಮಾಡಿ ಅರ್ಹರಾಗಬೇಕೆಂಬುದು ನಮ್ಮ ಸಲಹೆ.

ಇದರೊಂದಿಗೆ ಅಗತ್ಯವಾದ ಅರ್ಜಿ ನಮೂನೆಯನ್ನು ಕೊಡಲಾಗಿದೆ. **ಜುಲೈ 5 ತುಂಬಿದ ಅರ್ಜಿಗಳನ್ನು ಮೇಲಿನ ವಿಳಾಸಕ್ಕೆ ಕಳಿಸಲು ಕಡೆಯ ದಿನವಾಗಿದೆ.** ■

ಪಂಪ ಪ್ರಶಸ್ತಿ ವಿಜೇತರು

ಇಸ್ವೀ	ಹೆಸರು
1987	ಕೆ.ವಿ. ಪುಟ್ಟಪ್ಪ (ಕುವೆಂಪು)
1988	ತಿ.ನಂ. ಶ್ರೀಕಂಠಯ್ಯ
1989	ಶಿವರಾಮ ಕಾರಂತ
1990	ಎಸ್.ಎಸ್. ಭೂಸನೂರಮಠ
1991	ಪು.ತಿ. ನರಸಿಂಹಾಚಾರ್
1992	ಎ.ಎನ್. ಮೂರ್ತಿರಾವ್
1993	ಗೋಪಾಲಕೃಷ್ಣ ಅಡಿಗ
1994	ಸೇಡಿಯಾಪು ಕೃಷ್ಣಭಟ್
1995	ಕೆ.ಎಸ್. ನರಸಿಂಹಸ್ವಾಮಿ
1996	ಎಂ.ಎಂ. ಕಲಬುರ್ಗಿ
1997	ಜಿ.ಎಸ್. ಶಿವರುದ್ರಪ್ಪ
1998	ದೇ.ಜವರೇಗೌಡ (ದೇಜಗೌ)

–ಗುರುರಾಜ ಬ. ಕನ್ನೂರ

APPLICATION FORMAT

APPLICATION FORM FOR NAVAL COLLEGE OF ENGINEERING DEC. 1999 COURSE

(The application is to be filled in by the candidate in English and in BLOCK CAPITAL6 on the lines and blocks indicated) (Strike out whichever is not applicable)

Affix passport size Photo

1. Name in Full :
(As in Matric/Equivalent Certificate)
Surname **Name**
2. Correspondence Address : ______
District ______ State ______
Telephone No. if any ______ Pin code ______
3. (a) Father's Name :
(b) Father's/Guardian's Occupation ______
(c) Designation ______
(d) Office Address ______
4. Marital Status (Married/Unmarried) ______
5. State to which you belong ______
6. Nationality ______
7. Date of Birth (As per Matric Certificate) should be between 02 Dec. 80 & 01 Jul. 83 (Should be attested by a Gazetted Officer)
8. Name of School/college & University/Board from where passed 10+2 Examination.
9. Marks secured in (To be attested by a Gazetted Officer) :

Subject	Maximum Marks	Marks Secured	Aggregate Percentage in (PCM)
Physics______	______	______	
Chemistry______	______	______	
Maths______	______	______	
TOTAL			

10. Percentage of marks in English : 10th Class ______ 10+2 Class ______

Certified that I have verified the Date of Birth and marks secured by the candidate in PHYSICS, CHEMISTRY, MATHEMATICS and ENGLISH from his original Matriculation/ 10+2 certificates and attest them as true.

Signature ______
Name of the Attesting Officer ______
Designation/ Appointment held ______
Office/Min/Dept. ______
Date ______

(To be attested by a Gazetted Officer of the Central/State Govt. Principal of a Secondary school/College, Ist Class Magistrate, an MP or an MLA).

11. Sports NCC, Extra curricular Activities ______
(Give level of participation/achievement)
12. Have you appeared in SSB earlier? YES / NO
If yes, indicate:
(a) Entry ______
(b) Name of Station of SSB
(c) Batch No. ______
(d) Month & Year of Interview ______

DECLARATION

(a) I hereby declare that all the statements made in the above application are true and correct to the best of my knowledge and belief. I understand that any information found false at any stage would render me disqualified for induction in the armed forces.

(b) I also understand that in case of my final selection, my appointment will be provisional subject to satisfactory police verification.

Signature ______
Permanent Address ______

DECLARATION BY PARENT/ GUARDIAN

(Form of Certificate to be signed by Parent/ Guardian of candidate)

I ______ Parent/Guardian of ______
(Name of Parent/Guardian) (Name of the Candidate)

Who is candidate for the 10+2 (Tech.) Cadet Entry Scheme in the Navy, hereby certify that I fully understand that my son/ward will, if required attend the Service Selection Board interview with my full and free consent at my own risk and that I or my son/ward shall not be entitled to claim any compensation or other relief from the Government in case of any injury which may son /ward may sustain in the course of or as a result of any of the tests given to him at the said Services Selection Board whether due to his or any person's negligence or otherwise.

(Signature of the Candidate)
Place ______
Date ______

(Signature of Parent/Guardian)
Place ______
Date ______

ಕೇಂದ್ರ ಮೀಸಲು ಪೊಲೀಸ್ ಪಡೆ

(ದಕ್ಷಿಣ ಭಾಗ) ನೇಮಕಾತಿ

ಕೇಂದ್ರ ಮೀಸಲು ಪೊಲೀಸ್ ಪಡೆಯವರು ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಪಾಂಡಿಚೇರಿ ಲಕ್ಷದ್ವೀಪದ ಕೇಂದ್ರಾಡಳಿತ ಪ್ರದೇಶದ ಪುರುಷ ಕಾನ್ಸ್‌ಟೇಬಲ್ (ಜನರಲ್ ಡ್ಯೂಟಿ) ಹುದ್ದೆಗಳಿಗೆ ಅರ್ಜಿ ಕರೆದಿದ್ದಾರೆ. ಹುದ್ದೆಗಳ ವಿವರ ಗಮನಿಸಿ.

ಕರ್ನಾಟಕದಲ್ಲೇ ನೇಮಕಾತಿ ನೀಡಲಾಗುವುದು. NCC/Home Guards/ Civil Defence/ ರಾಜ್ಯಮಟ್ಟ / ರಾಷ್ಟ್ರಮಟ್ಟದ ಕ್ರೀಡಾಪಟುಗಳಿಗೆ ಆದ್ಯತೆ. ಎಲ್ಲಾ ಹುದ್ದೆಗಳೂ ತಾತ್ಕಾಲಿಕವಾಗಿದ್ದು. ಸೇವೆಯಲ್ಲಿ ಮುಂದುವರೆಯಲು ಅವಕಾಶ ಸಾಧ್ಯತೆಗಳಿವೆ. ಆಯ್ಕೆಯಾದ ಅಭ್ಯರ್ಥಿಗಳನ್ನು ಭಾರತದ ಯಾವುದೇ ಸ್ಥಳಕ್ಕೆ ನೇಮಿಸಲು/ ಕಳಿಸಲು ನಿರ್ಬಂಧವಿಲ್ಲ.

ರಾಜ್ಯ ಕೇಂದ್ರಾಡಳಿತ ಪ್ರದೇಶ	ಸಾಮಾನ್ಯ ಮಾಜಿ ಸೈನಿಕ	ಎಸ್.ಸಿ.+ ಮಾಜಿ ಸೈನಿಕ	ಎಸ್.ಟಿ.+ ಮಾಜಿ ಸೈನಿಕ	ಇತರೆ ಹಿಂ.ಪಂಗಡಗಳು ಮಾಜಿ ಸೈನಿಕರ	ಒಟ್ಟು
ಕರ್ನಾಟಕ	24+3	11+1	5+1	18+2	58+7= 65

ಅರ್ಹತೆಗಳು

ತತ್ಸಮಾನ ಪರೀಕ್ಷೆ ಪಾಸಾಗಿರಬೇಕು. (ವಿದ್ಯಾರ್ಹತಾ ಪತ್ರವನ್ನು ಸಂದರ್ಶನದ ವೇಳೆ ಹಾಜರುಪಡಿಸಬೇಕು. 1.8.99ಕ್ಕೆ 18 ವರ್ಷಕ್ಕೆ ಕಡಿಮೆ ಇಲ್ಲದಂತೆ ಹಾಗೂ 23 ವರ್ಷ ಮೀರದಿರುವವರು ಅರ್ಹರು (ಎಸ್.ಸಿ./ಎಸ್.ಟಿ. ಗಳಿಗೆ 5 ವರ್ಷ ಹಾಗೂ ಓ.ಬಿ.ಸಿ.ಯವರಿಗೆ 3 ವರ್ಷ ವಯೋಮಿತಿಯಲ್ಲಿ ಸಡಲಿಕೆ ಉಂಟು)

ಸಾಮಾನ್ಯ ವರ್ಗದವರು 167.5 ಸೆ.ಮೀ. ಎತ್ತರ 48.80 ಕೆ.ಜಿ., ಎದೆಯ ಸುತ್ತಳತೆ ಹಿಗ್ಗಿದಾಗ 85 ಸೆ.ಮೀ ಕುಗ್ಗಿದಾಗ 80 ಸೆ.ಮೀ. ಒಂದು ಕಣ್ಣಿನ ದೃಷ್ಟಿ 6/6 ಮತ್ತೊಂದು ಕಣ್ಣಿನ ದೃಷ್ಟಿ 6/9 ಗಿಂತ ಕಡಿಮೆ ಇಲ್ಲದಂತೆ ಇರಬೇಕು.

ಎಸ್.ಸಿ./ಎಸ್.ಟಿ. ಆದಿವಾಸಿ ಹಾಗೂ ಇತರ ಹಿಂದುಳಿದ ವರ್ಗದವರು 162.5 ಸೆ.ಮೀ. ಎತ್ತರ, 45.50 ಕೆ.ಜಿ. ಎದೆಯ ಸುತ್ತಳತೆ ಹಿಗ್ಗಿದಾಗ 81 ಸೆ.ಮೀ. ಕುಗ್ಗಿದಾಗ 76 ಸೆ.ಮೀ. ಇರಬೇಕು.

ಅಭ್ಯರ್ಥಿಗಳಿಗೆ ಯಾವುದೇ ರೀತಿಯ ದೈಹಿಕ ನ್ಯೂನತೆ ಇರಬಾರದು.

ಭೂ, ವಾಯು ಮತ್ತು ನೌಕಾದಳಗಳ ರಕ್ಷಣಾ ಪಡೆಗಳ, ಲೋಕ ಸಹಾಯಕ ಸೇವಾ ಮತ್ತು ವಿಶೇಷ ಸೈನ್ಯ ತುಕಡಿಗಳಿಂದ ಸ್ವ ಇಚ್ಛೆಯ ನಿವೃತ್ತಿ ಹೊಂದಿದಂತವರಿಗೆ ಕೆಲವು ಸಡಿಲಿಕೆಗಳ ಮೇಲೆ ಅವಕಾಶವಿದೆ. ಹೆಚ್ಚಿನ ವಿವರಗಳಿಗೆ 15ನೇ ಮೇ 1999ರ ಕನ್ನಡಪ್ರಭ ಪುಟ 8ರ ಜಾಹೀರಾತು ಗಮನಿಸಿ.

ಅರ್ಜಿ ಸಲ್ಲಿಸುವ ವಿಧಾನ

ಅರ್ಜಿ ಸಲ್ಲಿಸಲಿಚ್ಛಿಸುವವರು ನಮೂದಿತ ಅರ್ಜಿ ಫಾರಂ (Appendix A) ನಂತೆ Register postನಲ್ಲಿ ಅಥವಾ ಕೈಯಲ್ಲಿ ಈ ಕೆಳಕಂಡ ವಿವರಗಳಿಗನುಸಾರವಾಗಿ ಕಳಿಸಬಹುದು.

ಕರ್ನಾಟಕ

The Additional DIGP, Group Centre, CRPF, Yelahanka, Bangalore - 560 064, Karnataka.

ಅರ್ಜಿಗಳನ್ನು ನಮೂದಿತ ರೀತಿಯಲ್ಲಿ ಬೆರಳಚ್ಚು/ ಕೈಬರಹದಲ್ಲಿ ಫುಲ್‌ಸ್ಕೇಪ್ ಹಾಳೆಯ ಒಂದು ಬದಿಯಲ್ಲಿ ಕೆಳಕಂಡ ಪ್ರಮಾಣ ಪತ್ರಗಳ ಝೆರಾಕ್ಸ್ ಪ್ರತಿಗಳೊಡನೆ ಕಳಿಸಬೇಕು.

■ ತತ್ಸಮಾನ ಅಥವಾ ಹೆಚ್ಚಿನ ವಿದ್ಯಾರ್ಹತೆಯ ಪ್ರಮಾಣ ಪತ್ರ 'ಬಿ' ಯಂತೆ.

■ ಹುಟ್ಟಿದ ದಿನಾಂಕ ದೃಢೀಕರಣ ಪತ್ರ.

■ Appendix ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಂದ ಜಾತಿ ದೃಢೀಕರಣದ ಪತ್ರ. (ತಹಶೀಲ್ದಾರ/ಜಿಲ್ಲಾ ನ್ಯಾಯಧೀಶರು, ಕಂದಾಯ ಅಧಿಕಾರಿಗಳು

■ ಸರ್ಕಾರಿ/ಅರೆಸರ್ಕಾರಿ/ಇತರೆ ಕೆಲಸದಲ್ಲಿರುವವರು ಹಿರಿಯ ಅಧಿಕಾರಿಗಳ ಮೂಲಕ ಅರ್ಜಿ ಸಲ್ಲಿಸಬಹುದು. ಇಲ್ಲವೆ, No Objection Certificateಅನ್ನು **ಅರ್ಜಿಯೊಂದಿಗೆ ಲಗತ್ತಿಸಿ 10.6.1999ರ ಒಳಗೆ ತಲುಪುವಂತೆ Registered Post ಕಳಿಸುವುದು.**

■ ಎನ್.ಸಿ.ಸಿ./ಕ್ರೀಡೆಗಳು/ ಐ.ಟಿ.ಐ ಅಥವಾ ಇನ್ಯಾವುದೇ ಹೆಚ್ಚಿನ ಅರ್ಹತೆಗಳಿಗೆ ಸಂಬಂಧಿಸಿದಂತೆ ದೃಢೀಕರಣ ಪತ್ರಗಳು.

■ ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರಗಳು.

■ 3/-ರೂ.ನ ಸ್ಟಾಂಪ್ ಹಚ್ಚಿದ ಪೂರ್ಣ ಸ್ವವಿಳಾಸವಿರುವ ಎರಡುಲಕೋಟೆಗಳನ್ನು ಅರ್ಜಿಯೊಡನೆ ಕಳಿಸಬೇಕು.

■ ಅಪೂರ್ಣ ಅರ್ಜಿಗಳನ್ನು ಹಾಗೂ 10.6.1999ರ ಒಳಗೆ ತಲುಪದ ಅರ್ಜಿಗಳನ್ನು ಮಾನ್ಯ ಮಾಡಲಾಗದು. ಇದಕ್ಕೆ ಸಂಬಂಧಿಸಿದಂತೆ ಪತ್ರವ್ಯವಹಾರಗಳಿಗೆ ಅವಕಾಶವಿಲ್ಲ.

■ ಸಾಮಾನ್ಯ ಹಾಗೂ ಇತರೆ ಹಿಂದುಳಿದ ಪಂಗಡಗಳು 10/- ರೂ.ಗಳ ಇಂಡಿಯನ್ ಪೋಸ್ಟಲ್ ಆರ್ಡರ್‌ಗಳನ್ನು (ಹಿಂತಿರುಗಿಸಲಾಗುವುದಿಲ್ಲ) ಸಂಬಂಧಪಟ್ಟ Additional DIGP ಹೆಸರಿನಲ್ಲಿ ಕಳಿಸಬೇಕು. ಎಸ್.ಸಿ. ಹಾಗೂ ಎಸ್.ಟಿ. ಅಭ್ಯರ್ಥಿಗಳು ಹಣ ಸಂದಾಯ ಮಾಡಬೇಕಾಗಿಲ್ಲ.

■ ಆಯ್ದ ಅರ್ಹ ಅಭ್ಯರ್ಥಿಗಳು ಎಲ್ಲ ಮೂಲಪತ್ರಗಳು, ಎರಡು ಭಾವಚಿತ್ರಗಳು ಅರ್ಜಿಯೊಡನೆ ಕಳಿಸಿರುವ ಭಾವಚಿತ್ರದ ಪ್ರತಿರೂಪವೇ ಆಗಿರಬೇಕು) ದೈಹಿಕ ಪರೀಕ್ಷೆಯ ನಂತರ 11 ಅಡಿ ಉದ್ದ ಜಿಗಿತ, 4 ಅಡಿ ಎತ್ತರ ಜಿಗಿತ, 6 ನಿಮಿಷಗಳಲ್ಲಿ ಒಂದು ಮೈಲು ಓಟದಲ್ಲಿ ಸಫಲರಾಗಬೇಕು. ಅರ್ಹರು ವೈದ್ಯಕೀಯ ಪರೀಕ್ಷೆಗೊಳಗಾಗಬೇಕು. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಪರೀಕ್ಷೆಗಳಿಗೆ ಹಾಜರಾಗಬೇಕಿದ್ದು, ಯಾವುದೇ ಭತ್ಯೆ ನೀಡುವುದಿಲ್ಲ.*ತಂಗುವ (3/4 ದಿನ) ವ್ಯವಸ್ಥೆಯನ್ನು ಅಭ್ಯರ್ಥಿಯೆ ಮಾಡಿಕೊಳ್ಳತಕ್ಕದ್ದು.

■ ಅರ್ಹತೆಯ ಮೇರೆಗೆ ನೇಮಕಾತಿ ಮಾಡಲಾಗುವುದು. ಪರೀಕ್ಷೆಯ ಫಲಿತಾಂಶವನ್ನು ಎಲ್ಲಾ ಪರೀಕ್ಷೆಯ ನಂತರ Notice Boardನಲ್ಲಿ ಹಾಕಲಾಗುವುದು. ನೇಮಕಾತಿಯನ್ನು 5.7.99 ರಿಂದ ನಡೆಸಲಾಗುವುದು. ಅರ್ಜಿಗಳನ್ನು ಈ ಕೆಳಕಂಡ ನಮೂನೆಗಳಲ್ಲಿ ಸಲ್ಲಿಸಬೇಕು (Appendix 'A', Appendix B) ■

ರಸಪ್ರಶ್ನೆ

1. ಈ ಕೆಳಗಿನ ವಿಶ್ವವಿದ್ಯಾಲಯಗಳ ಆವರಣಗಳ ಹೆಸರೇನು?
ಅ) ಮೈಸೂರು, ಆ) ಬೆಂಗಳೂರು, ಇ) ಮಂಗಳೂರು, ಈ) ಕುವೆಂಪು, ಉ) ಗುಲ್ಬರ್ಗಾ ಊ) ಕರ್ನಾಟಕ, ಋ) ಕನ್ನಡ.
2. 'ಕಡಲ ತೀರದ ಭಾರ್ಗವ' ಎಂದು ಖ್ಯಾತರಾದ ಸಾಹಿತಿ ಯಾರು?
3. 'ಮಾನವ ಕಂಪ್ಯೂಟರ್' ಎಂದು ಖ್ಯಾತರಾದ ಬೆಂಗಳೂರಿನ ಮಹಿಳೆ ಯಾರು?
4. ಸ್ವಾತಂತ್ರ್ಯ ನಂತರದ ಮೈಸೂರಿನ ಮೊದಲ ಮುಖ್ಯ ಮಂತ್ರಿ ಯಾರು?
5. ಕಾವ್ಯಾನಂದ ಹೆಸರಿನ ಕಾವ್ಯನಾಮದ ಸಾಹಿತಿ ಯಾರು?
6. ಕನ್ನಡದಲ್ಲಿರುವ ಪ್ರಮುಖ ವಿಶ್ವ ಕೋಶಗಳು ಯಾವುವು
7. ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯವಾಕ್ಯ ಯಾವುದು?
8. ಕನ್ನಡದಲ್ಲಿ ಪ್ರಕಟವಾದ ಮೊದಲ ಕನ್ನಡ ಪುಸ್ತಕ ಯಾವುದು? ಅದರ ಕರ್ತೃ, ಅದು ಪ್ರಕಟವಾದ ವರ್ಷ ಯಾವುದು?
9. ಕನ್ನಡದಲ್ಲಿ ಹಾಲಿ ಇರುವ ಹಾಸ್ಯ ಪ್ರಧಾನ ಪತ್ರಿಕೆಗಳು ಯಾವುವು? ಅವುಗಳು ಎಂದು ಪ್ರಾರಂಭವಾದವು? ಅವುಗಳ ಸಂಪಾದಕರು ಯಾರ್‍ಯಾರು?
10. ಸಾರ್ವಜನಿಕ ಗ್ರಂಥಾಲಯ ಕಾನೂನು ಕರ್ನಾಟಕದಲ್ಲಿ ಎಂದು ಅಂಗೀಕರಿಸಲ್ಪಟ್ಟಿತು?

ಉತ್ತರಗಳು

1. ಅ) ಮಾನಸ ಗಂಗೋತ್ರಿ, ಆ) ಜ್ಞಾನಭಾರತಿ ಇ) ಮಂಗಳ ಗಂಗೋತ್ರಿ, ಈ) ಜ್ಞಾನ ಸಹ್ಯಾದ್ರಿ ಉ) ಜ್ಞಾನ ಗಂಗ ಊ) ಪಾವಟಿ ನಗರ ಋ) ವಿದ್ಯಾರಣ್ಯ 2. ಕೋಟ ಶಿವರಾಮಕಾರಂತ 3. ಶಕುಂತಲಾದೇವಿ 4. ಕೆ. ಚೆಂಗಲರಾಯ ರೆಡ್ಡಿ (ಕೆ.ಸಿ. ರೆಡ್ಡಿ) 5. ಸಿದ್ದಯ್ಯಪುರಾಣಿಕ 6. ಬಾಲ ಪ್ರಪಂಚ (ಕೆ.ಶಿವರಾಮಕಾರಂತ) (3 ಸಂ); ಕನ್ನಡ ವಿಶ್ವಕೋಶ (ಮೈವಿವಿ) (ಉದ್ದೇಶಿತ 14 ಸಂಪುಟಗಳು ಈಗ 12 ಸಂಪುಟಗಳು ಪ್ರಕಟ); ಜ್ಞಾನ ಗಂಗೋತ್ರಿ (7 ಸಂಪುಟಗಳು); ಕರ್ನಾಟಕ (ವಿಷಯ ವಿಶ್ವಕೋಶ ಮೈವಿವಿ); ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ ; ಜಾನಪದ ವಿಶ್ವಕೋಶ (ಕ.ಸಾ.ಪ); ವಿಜ್ಞಾನ ಪ್ರಪಂಚ (4. ಸಂ) 7. ಸಿರಿಗನ್ನಡಂ ಗೆಲ್ಗೆ 8. Grammer of the Karnataka language ವಿಲಿಯಂ ಕೇರಿ. 1917, ಶ್ರೀರಾಮಪುರಂ ಪ್ರೆಸ್ (ಕಲ್ಕತ್ತ ಬಳಿ) 9. ಅ) ವಿನೋದ : ಸ್ಥಾಪನೆ ; 26.1.1951 ಸಂಪಾದಕರು : ಜಿ. ನಾರಾಯಣ ಆ) ಅಪರಂಜಿ : ಸ್ಥಾಪನೆ : 1963 ಸಂಪಾದಕ : ಶಿವಕುಮಾರ್ 10. 1965 (ಜಾರಿಗೆ ಬಂದದ್ದು 1966ರಲ್ಲಿ)

-ಟಿ.ವಿ.ವಿ.

ಉಚಿತ ವರ್ಗೀಕೃತ ಜಾಹೀರಾತು

ಕೋಟಿವೀರನ ನಮನ

1998-99ನೇ ಸಾಲಿನಲ್ಲಿ ನನ್ನ ಹತ್ತಿರ ಜೀವವಿಮೆ ಮಾಡಿಸಿ ನನ್ನನ್ನು 'ಕೋಟಿವೀರನನ್ನಾಗಿ' ಮಾಡಿದ ನನ್ನ ಎಲ್ಲಾ ಪಾಲಸಿದಾರರಿಗೆ ಅನಂತಾನಂತ ಧನ್ಯವಾದಗಳು. **-ಎಸ್.ಸಿ. ತಿಪ್ಪೇಸ್ವಾಮಿ,** ಜೀವ ವಿಮಾ ಪ್ರತಿನಿಧಿ, ಹಾವೇರಿ.

ಸದ್ಬುದ್ಧಿ ಬರಲಿ

ಕಳೆದ ವರ್ಷ ಪ್ರಜಾವಾಣಿ ವರದಿಗಾರನಾಗಿ ಕಾರ್ಯನಿರ್ವಹಿಸಿ ಎಂಟು ತಿಂಗಳ ಸಂಭಾವನೆಗೆ ಪ್ರತಿದಿನಕ್ಕೆ ಒಂದರಂತೆ ಅರುವತ್ತು ಪತ್ರಗಳನ್ನು ಬರೆದರೂ ಓಗೊಡದೆ ಈಗ ಹೊಸದಾಗಿ ಅರ್ಜಿ ಕರೆದಿದೆ. ಮುಂಬರುವ ಹೊಸಬನಿಗೆ ಹಾಗಾಗದಿರಲಿ ಸಂಸ್ಥೆಗೆ ಸದ್ಬುದ್ಧಿ ಬರಲಿ.

- ಟಿ.ವಿ.ವಿ., ತಿ.ನ.ಪುರ.

ಹಾರೈಕೆ

ಪ್ರೀತಿಯ ಚಿಕ್ಕಮ್ಮನವರಾದ ಬಿ. ಮಂಜುಳ ಶಿಕ್ಷಕರು, ದೇವರ ಕೃಪಾಕಟಾಕ್ಷದಿಂದ ಆದಷ್ಟು ಬೇಗನೇ ಚೇತರಿಸಿಕೊಂಡು ಗುಣಮುಖರಾಗಿ ಚಿರಕಾಲ ಬಾಳಲಿ ಎಂದು ದೇವರಲ್ಲಿ ಪ್ರಾರ್ಥನೆ.

- ಎಚ್. ಕೃಷ್ಣಮೂರ್ತಿ ಬಿ.ಎ., ಚಿಕ್ಕಕುಂಬಳಗುಂಟೆ.

ಹುಟ್ಟುಹಬ್ಬ

I wish you happy Birthday to my dear Bonybird Sharu on 20th June.
Your loving -

-**Prabhu**, Ilkal.

ಹಾರೈಕೆ

ನನ್ನ ಪ್ರೀತಿಯ ಜೀವನ ಸಂಗಾತಿ ಆಗುವ ಎಸ್.ಡಿ. ಗೀತಾ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಂದ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ ಆಗಲೆಂದು ಹಾರೈಸುವ ಜೀವನ ಸಂಗಾತಿ

-ರಾಜಶೇಖರ ಎಂ., ಹುಮನಾಬಾದ.

ಅಭಿನಂದನೆ

ದಿ. 3.6.99ಕ್ಕೆ ಪ್ರಥಮ ವಿವಾಹ ವಾರ್ಷಿಕೋತ್ಸವ ಆಚರಿಸಲಿರುವ ಸೊಸೆ ಶ್ರೀಮತಿ ವಿಶಾಲಾಕ್ಷಿ ನಾಗರಾಜ್ ಉಪರೆ ಇವರಿಗೆ ತುಂಬು ಹೃದಯದ ಹಾರ್ದಿಕ ಅಭಿನಂದನೆಗಳು. ಶುಭ ಕೋರುವವರು ಚಿಕ್ಕಪ್ಪ, ಚಿಕ್ಕಮ್ಮ, ತಮ್ಮ, ತಂಗಿ, ಅತ್ತಿಗೆ ಮತ್ತು ಮನೆಯವರು.

-ರವಿ. ಸೋ. ದೇವರಡ್ಡಿ ಸಹ ಶಿಕ್ಷಕರು, ಶೀರನಹಳ್ಳಿ,

ಹಾರೈಕೆ

1999ನೇ ಮೇ ತಿಂಗಳಿನಲ್ಲಿ ವಿವಾಹಿತರಾದ ಡಾ. ವಿನಯ ವೈ.ಬಿ. ಎಸ್.ಡಿ. ಎಮ್ ಆಯುರ್ವೇದ ಆಸ್ಪತ್ರೆ ಕುತ್ಪಾಡಿ ಇವರ ಮುಂದಿನ ದಾಂಪತ್ಯ ಜೀವನ ಸುಖಮಯವಾಗಿರಲೆಂದು ದೇವರು ಇವರಿಗೆ ಸಕಲ ಭಾಗ್ಯ ಕರುಣಿಸಲೆಂದು ಹಾರೈಸುವ ನಿಮ್ಮ ಪ್ರೀತಿಯ

- ದಿನೇಶ್, ಪುತ್ತೂರು.

ಸಂದೇಶ

ಪರಿಸರ, ಸಕಲ ಜೀವಿಗಳಿಗೂ ಆಶ್ರಯ ತಾಣ. ಜೀವಪೋಷಕ. ಆದರೆ ಪರಿಸ್ಥಿತಿ ಏನಾಗಿದೆ? ನಿಮ್ಮ ಜೀವಿತದ ಅವಧಿಯ ಒಂದಿಷ್ಟು ಸಮಯವನ್ನು ಪರಿಸರದ ಚಿಂತನಕ್ಕಾಗಿ ಮೀಸಲಿಡಿ. ನಿಮ್ಮ ನಿಮ್ಮ ಮನೆಯ ಅಂಗಳದಲ್ಲಿ ಒಂದೊಂದು ಗಿಡ ನೆಟ್ಟು ಪರಿಸರವನ್ನು ಸಂರಕ್ಷಿಸಿ.

- ಸಂತೋಷಕುಮಾರ ಸುಭಾಸ ಬಂಡೆ, ಬಾಬು ಗಿರಿಸಾಗರ, ನಾಗಠಾಣ.

ಹಾರೈಕೆ

ಈ ವರ್ಷದಲ್ಲಿ ನಮ್ಮ ಶಾಲೆಯಲ್ಲಿ ಬೇಸಿಗೆ ಕ್ಲಾಸುಗಳು ನಡೆದವು. ನಡೆಸಿಕೊಟ್ಟಿರುವ ಎಂ. ಎಸ್. ಗಾಣಿಗೇರ ಎಂ.ಡಿ. ನೆವನಕ್ಕಿ ಚಿಪಾಟಿಯ ವರಿಗೂ ನಮ್ಮ ಶಾಲೆಯ ಹಾಗೂ ವಿದ್ಯಾರ್ಥಿಗಳ ವಂದನೆಗಳು. ಕ್ಲಾಸಿಗೆ ಬಂದ ಎ.ಎಂ.ಆಲಗೂರು ಇವರಿಗೂ ಶುಭಾಶಯಗಳು.

-ಗೋವಿಂದಪ್ಪ ಲಕ್ಷ್ಮಣ ಬಿ. ಪಾಟೀಲ, ಬೆಳಗಲಿ.

ಹೃದಯಸ್ಪಂದನ

ಪ್ರಿಯ ಸಹೋದರಿ ದಾಕ್ಷಾಯಿಣಿ -

ಪರಿಸ್ಥಿತಿಗಳ ಒತ್ತಡದಿಂದ ನೀ ಯಾರಿಗೂ ತಿಳಿಸದೆ ಗೆಳತಿಯೊಂದಿಗೆ ಹೊರಟುಬಿಟ್ಟಿರುವೆ. ಮನೆಯಲ್ಲಿ ಎಲ್ಲರೂ ಕಂಗಾಲಾಗಿದ್ದಾರೆ. ನಿನ್ನ ದಾರಿ ಕಾಯುತ್ತಿದ್ದಾರೆ. ನಿನ್ನಿಚ್ಚೆಗೆ ವಿರುದ್ಧವಾಗಿ ಯಾರೂ ನಡೆದುಕೊಳ್ಳುವುದಿಲ್ಲ ದಯವಿಟ್ಟು ಹಿಂದಿರುಗಿ ಬಾ, ಅಣ್ಣ ನಿನಗಾಗಿ ಕಾಯುತ್ತಿರುತ್ತಾನೆ.

- ಚ.ರಾ. ನಾಗೇಂದ್ರಪ್ರಸಾದ್
ದೂರವಾಣಿ - 3307810

ಅಭಿನಂದನೆ

ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘಟಕರಾಗಿ ಹೆಚ್ಚಿನ ಸಾಧನೆ ಮಾಡುತ್ತ ಕ್ರೀಯಾಶೀಲರಾಗಿರುವ ಮತ್ತು ಬುದ್ಧಸೇವಾ ಪ್ರಶಸ್ತಿ ಪಡೆದಿರುವ ಡಾ. ಮಹಾಂತೇಶ ಮಲ್ಲನಗೌಡ ಅವರಿಗೆ ಅಭಿನಂದನೆಗಳು.

-ಬೀರಪ್ಪ ಶಂಭೋಜಿ, ಸಿಂಧನೂರು.

ಅಭಿನಂದನೆಗಳು

ಇತ್ತೀಚಿಗೆ ನಾಲತವಾಡದಲ್ಲಿ ಸ್ಥಳೀಯ ಶ್ರೀಮಂತ ಜಗದೇವರಾಯ ದೇಶಮುಖ ಸಾಂಸ್ಕೃತಿಕ ವೇದಿಕೆಯ ಮುಖಾಂತರ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಿದ್ದಕ್ಕೆ ವೇದಿಕೆಯ ಎಲ್ಲರಿಗೂ ಸ್ಥಳೀಯರ ಪರವಾಗಿ ಹಾರ್ದಿಕ ಅಭಿನಂದನೆಗಳು.

-ಗುರುರಾಜ್ ಬ. ಕನ್ನೂರ (ಬಿ.ಎ.),ಮುದ್ದೇಬಿಹಾಳ.

ಹುಟ್ಟುಹಬ್ಬ

ಆತ್ಮೀಯ ಗೆಳೆಯನಾದ ಸಂಗಮೇಶ ಎಚ್, ನಂದವಾಡ್ಗಿಯವರಿಗೆ 18ನೇ ಹುಟ್ಟು ಹಬ್ಬದ (1.6.99) ಶುಭಾಶಯಗಳು. ಅವನಿಗೆ ಆರೋಗ್ಯ ಮತ್ತು ಒಳ್ಳೆಯ ಅಂಕಗಳನ್ನು ಗಳಿಸಲಿ ಎಂದು ಹಾರೈಸುವೆ.

- ಬಾಷಾ ಆರ್. ವಂಟಿ, ಹುನಗುಂದ.

ಹಾರೈಕೆ

ಶ್ರೀ ಬಿ.ಎ. ಷಣ್ಮುಕಪ್ಪ ಗ್ರೇಡ್ -1, ಪ್ರಾಚಾರ್ಯರು, ಮಹಾಂತಸ್ವಾಮಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಂಸಭಾವಿ ಇವರು ದಿನಾಂಕ 30.04.99ರಂದು ನಿವೃತ್ತರಾಗಿರುತ್ತಾರೆ. ಇವರ ನಿವೃತ್ತಿ ಜೀವನ ಸುಖ ಶಾಂತಮಯವಾಗಿ ಇರಲೆಂದು ಹಾರೈಸುತ್ತೇನೆ.

-ವಸಂತ ಕುಲಕರ್ಣಿ, ಹಾವೇರಿ.

ವಿವಾಹ ವಾರ್ಷಿಕೋತ್ಸವ

ದಿನಾಂಕ 30.4.99ರಂದು ವಿವಾಹವಾಗಿರುವ ನನ್ನ ಆತ್ಮೀಯ ಸ್ನೇಹಿತರಾದ ನಾಗರಾಜ ವಾರದ ಮತ್ತು ರೇಣುಕಾ ಹಾಗೂ ಶರಣ ಬಸವರಾಜ ಮತ್ತು ಕಾವ್ಯ ಇವರ ದಾಂಪತ್ಯಜೀವನ ಸುಖ ಸಮೃದ್ಧಿಯಿಂದ ಕೂಡಿರಲಿ ಎಂದು ಹಾರೈಸುವೆ.

-ಲಕ್ಷ್ಮಿಕಾಂತ ಕೊಂಪಲ್, ಲಿಂಗಸೂಗೂರು.

ಹುಟ್ಟುಹಬ್ಬ

ನಮ್ಮ ಪ್ರೀತಿಯ ಅಣ್ಣನಾದ ಕೆ. ರಮೇಶ್‌ಬಾಬುಗೆ 12.6.99ಕ್ಕೆ 20ನೇ ಹುಟ್ಟುಹಬ್ಬದ ಶುಭಾಶಯಗಳು. ಅವರು ಆಯುರಾರೋಗ್ಯ ಹಾಗೂ ವಿದ್ಯೆಯನ್ನು ಗಳಿಸಲಿ ಎಂದು ಹಾರೈಸುವ ತಂಗಿಯರು, ತಂದೆ ತಾಯಿ ಮತ್ತು ಸ್ನೇಹಿತರು ಹಾಗೂ ಬಂಧುಮಿತ್ರರು.

-ಕೆ. ಉಷಾರಾಣಿ, ಹರಪನಹಳ್ಳಿ.

ಹುಟ್ಟುಹಬ್ಬ

ಪ್ರೀತಿಯ ಗೆಳೆಯನಾದ ನಾಗಪ್ಪ ಬಿ. ಸಂಕ್ರಪ್ಪಗೆ ಬರುವ ಜೂನ್ 5 ರಂದು ಹುಟ್ಟುಹಬ್ಬದ ಶುಭಾಶಯಗಳು ಹಾಗೂ 10ನೇ ತರಗತಿಯಲ್ಲಿ ಹೆಚ್ಚಿನ ಅಂಕ ಪಡೆಯಲೆಂದು ಹಾರೈಸುತ್ತೇನೆ.

-ಶ್ರೀಶೈಲ, ಗಂಗಪ್ಪ, ಚಿಕ್ಕಣ್ಣವರ, ಬೆಳಗಲಿ.

ಉಚಿತ ವರ್ಗೀಕೃತ ಜಾಹೀರಾತು

ಶುಭ ಹಾರೈಕೆ

9.5.99ರಂದು ಗೆಳೆಯ ಕೆ.ಮಲ್ಲಯ್ಯ ಯಶೋಧಾ ಅವರನ್ನು ಬಾಳಸಂಗಾತಿಯನ್ನಾಗಿಸಿಕೊಂಡರು. ಇವರ ವಿವಾಹ ನಮಗೆಲ್ಲರಿಗೂ ಸಂತೋಷದ ವಿಷಯ. ಹಾಗೆಯೇ ಅವರ ಜೋಡಿಬಾಳು ಯಾವಾಗಲೂ ನಗುನಗುತ್ತಾ ಸಾಗಲಿ ಎಂದು ಹಾರೈಸುವ ನಿನ್ನ ಗೆಳೆಯರಾದ -

- ರಮೇಶ್ ವಿ. ಅರಳಹಳ್ಳಿ,ಕೆ. ಚನ್ನಪ್ಪ, ಅಂಬರೀಶ್
ಬಸವೇಶ್ವರ ಬುಕ್ ಸ್ಟಾಲ್, ಸಿಂಧನೂರು.

ಹುಟ್ಟುಹಬ್ಬ

ನನ್ನ ಮುದ್ದಿನ ಮಗನಾದ ಅರುಣ್‌ಕುಮಾರ ಇವನ ಆರನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು. ದೇವರು ಅವನಿಗೆ ಆಯಸ್ಸು ಆರೋಗ್ಯ ಕೊಟ್ಟು ಸದಾ ಕಾಪಾಡಲೆಂದು ಹಾರೈಸುವೆ.

-ಶ್ರೀ ಮುಕುಂದರಾಜು ಅರ್ಕಾಚಾರ್, ರಾಣೆಬೆನ್ನೂರು.

ಕೃತಿಗಳಿಗೆ ಆಹ್ವಾನ

ಸಾಹಿತ್ಯಶ್ರೀ ದಶಮಾನೋತ್ಸವ ಸ್ಪರ್ಧೆಗೆ 1998ನೇ ಸಾಲಿನಲ್ಲಿ ಪ್ರಕಟಿತ ಕೃತಿ ಕಳಿಸುವುದು 100/- ರೂ. ಬಹುಮಾನ. ಕೊನೆ ದಿನ ಜುಲೈ 15. 1999 ಸಾದಾ ಅಂಚೆಯ ಮೂಲಕ **-ಜೆ. ಎಂ. ರಾಜಶೇಖರ ಶಾರದಾ** ಬಳಗ ಚೌಡಯ್ಯದಾನಪುರ, ರಾಣೆ ಬೆನ್ನೂರು, ಜಿಲ್ಲೆ ಹಾವೇರಿ-581 115.

- ಜೆ.ಎಂ. ರಾಜಶೇಖರ,
ಚೌಡಯ್ಯದಾನಪುರ.

ಹುಟ್ಟುಹಬ್ಬ

ಸಂಭ್ರಮದ ಸಡಗರದಲ್ಲಿ ಮೀನಿನಂತೆ ಚುರುಕಾಗಿ ನಕ್ಷತ್ರಗಳಂತೆ ಹೊಳಪಾಗಿ ದಿನಾಂಕ 3.6.99 ರಂದು 4ನೇ ವರ್ಷದ ಹುಟ್ಟು ಹಬ್ಬ ಆಚರಿಸಲಿರುವ ಪ್ರೀತಿಯ ಅಳಿಯ ಹನುಮಂತನಿಗೆ ತುಂಬು ಹೃದಯದ ಹಾರ್ದಿಕ ಶುಭಾಶಯಗಳು.

- ಹನುಮಂತರಾವ್ ಭಜಂತ್ರಿ, ತುಳಸಿಗಿರಿ.

ಸುಸ್ವಾಗತ

FERNS FASHION STREAK BAZAAR ROAD, HONAVAR. ALL TYPES OF READY MADE GARMENTS KING IN COMPANY BRAND JEANS ARE AVAILABLE.

-ROSHAN FERNANDES, HONNAVAR.

ಸ್ವಾಗತ

ಕಲಘಟಗಿ ತಾಲೂಕ ಧಾರವಾಡ ಜಿಲ್ಲಾ ಗಂಜಿಗಟ್ಟಿಯ ವ್ಯವಸಾಯ ಸೇವಾ ಸಹಕಾರಿ ಸಂಘ ಈಗ ಬ್ಯಾಂಕ್ ಆದ್ದದ್ದಕ್ಕೆ ನಮ್ಮ ಸದಸ್ಯರ ಪರವಾಗಿ ಅಭಿನಂದನೆಗಳು.

- ಈರಪ್ಪ ಬಸಪ್ಪ, ಧಾರವಾಡ.

ಅಭಿನಂದನೆ

ಕಂಪ್ಲಿ ಪಟ್ಟಣದಲ್ಲಿ 'ಬಿಸಿಲ ಬದುಕು' ಏಜೆನ್ಸಿಯನ್ನು ತೆಗೆದುಕೊಂಡ. ಬಿ.ಮಹಮ್ಮದ್ ಸಾಬ್, ಎನ್ನೋಬಲ್ ಇಂಡಿಯ ಆರ್ಗನೈಜರ್ ಕಂಪ್ಲಿ. ಇವರಿಗೆ ಎನೋಬಲ್ ಇಂಡಿಯ ಬಳಗದ ಅಭಿನಂದನೆಗಳು.

- ಸಿ.ಎಂ. ವೀರೇಶ, ಎನ್ನೋಬಲ್.

ಹಾರೈಕೆ

ಬಳ್ಳಾರಿಯಲ್ಲಿ ಎಲ್.ಎಲ್.ಬಿ. ಕೊನೆಯ ವರ್ಷದ ಪರೀಕ್ಷೆ ಬರೆಯುತ್ತಿರುವ ಆತ್ಮೀಯ ಸ್ನೇಹಿತ ಮಂಜುನಾಥ ಬೇರ್ಲಿ ಇವರು ಫಲಪ್ರದ ಯಶಸ್ಸನ್ನು ಗಳಿಸಿ ಉಜ್ವಲವಾದ ಭವಿಷ್ಯವನ್ನು ಪಡೆಯಲೆಂದು ಹಾರೈಸುವೆ.

- ಸೋಮನಾಥ ಎಸ್. ಕಾರಟಗಿ, ಹುಳ್ಳಿಹಾಳ.

ಒಮ್ಮೆ ಬನ್ನಿ

ನಮ್ಮಲ್ಲಿ ಎಲ್ಲಾ ತರಹದ ಅರ್ಜಿಗಳು ಸಿಗುತ್ತವೆ. ಸ್ಟಾಂಪ್ ಪೇಪರ್‌ಗಳು ಹಾಗೂ ಅಂದವಾದ ಜೆರಾಕ್ಸ್ ಮಾಡಲಾಗುವುದು ಸಂಪರ್ಕಿಸಿ - ಮೋದಿ ಆಟೋ ಜೆರಾಕ್ಸ್ ಸೆಂಟರ್ ಬಿ.ಡಿ.ಓ ಆಫೀಸ್ ಆವರಣ, ಸಿಂಧನೂರು.

- ಗುರುರಾಜ ಜಾಗೀರ್ದಾರ್, ಸಿಂಧನೂರು.

ಹಾರೈಕೆ

ಪ್ರೀತಿಯ ಸೋದರರನಾದ ಪತ್ರಕರ್ತ ಡಿ.ಎನ್. ಮಂಜುನಾಥ್‌ಗೆ ಜೂನ್ 25ಕ್ಕೆ ಬರುವ ಹುಟ್ಟು ಹಬ್ಬಕ್ಕೆ ಹಾರ್ದಿಕ ಶುಭಾಶಯಗಳೊಂದಿಗೆ ಆಯುರೋಗ್ಯವಿರಲೆಂದು ಹಾರೈಸುವೆವು.

-ವೀಣಮ್ಮ ದಂಡಿನಶಿವರ,

ಶುಭಾಶಯಗಳು

ಅನೇಕ ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ನಮ್ಮ ಗ್ರಾಮದ ರಸ್ತೆ (ಮಣ್ಣು) ಇಂದು ನಮ್ಮ ಮಾನವರಾದ ಎಚ್.ಎಸ್. ವಿನಾಯಕ್ ಇವರ ಶ್ರಮದಿಂದ ಡಾ। ಬರೀಕರಣ ರಸ್ತೆ ಆಗುತ್ತಿರುವುದರಿಂದ ಇವರಿಗೆ ನಮ್ಮ ಗ್ರಾಮದ ಪರವಾಗಿ ಶುಭಾಶಯಗಳು.

- ಎಂ. ಟೀಪು, ಜಗಳೂರು.

ಅಭಿನಂದನೆಗಳು

ವಿನಯಶಾಲಿ ಸದ್ಗುರು ವಿನ್ಸೆಂಟ್ ಮಾಸ್ತರು, ದೀನ ದಲಿತರೂ ಬಡವರೂ ಆದ ನಮ್ಮನ್ನು ಪ್ರೀತಿಸಿ ನಿರ್ವಂಚನೆಯಿಂದ ವಿದ್ಯಾದಾನ ನೀಡಿ ಮುಂದೆ ಬಂದರು ಇವರ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ ಸನ್ಮಾನಿಸಿದ ಅಂಬೇಡ್ಕರ್ ಸಂಘದವರು ವಂದನೀಯರು ಗುರುಗಳಿಗೆ ಶರಣು.

-ಪುಟ್ಟರಾಜು ಎಂ.ಎ., ಕೊಳ್ಳೇಗಾಲ.

ಹಾರೈಕೆ

ಪ್ರೀತಿಯ ಗೆಳತಿಯಾದ ಕವಿತಾಗೆ ಬರುತ್ತಿರುವ ಜೂನ್ 5 ರಂದು ನಡೆಯಲಿರುವ M.S.W. ಪ್ರವೇಶ ಪರೀಕ್ಷೆಗಾಗಿ Best of luck ಅವಳ ಆಸೆಯು ಪೂರೈಸುವಂತೆ ದೇವರಲ್ಲಿ ಪ್ರಾರ್ಥಿಸುವ

- ಪವಿತ್ರಾ ಕುಲಕರ್ಣಿ.

ಅಭಿನಂದನೆ

ಶ್ರೀ ಸಂಗಪ್ಪ ಮುಖ್ಯಗುರುಗಳು, ಬಾಲಕಿಯರ ಪ್ರಾಥಮಿಕ ಶಾಲೆ ಜಾಲಹಳ್ಳಿ ಇವರು ವಯೋಮಿತಿ ಮೇಲೆ 31.5. 99ಕ್ಕೆ ನಿವೃತ್ತರಾದರು. ಶಾಲೆಯ ಸಹಶಿಕ್ಷಕ ವೃಂದದ ವತಿಯಿಂದ ಬೀಳ್ಕೊಡಗೆ ಹಾಗೂ ಅಭಿನಂದನೆಗಳು.

- ತಿಪ್ಪಯ್ಯ ಶಿಕ್ಷಕರು, ಜಾಲಹಳ್ಳಿ.

ಹುಟ್ಟುಹಬ್ಬ

ಆತ್ಮೀಯ ಸ್ನೇಹಿತರಾದ ಶಿವಪ್ಪ ಹುರುಳಿಹಾಳ್, ಗಂಗಾಧರ ಹೆಚ್.ವಿ. ಮತ್ತು ಬಸವರಾಜ್ ಪಾಟೀಲ್ ಕ್ರಮವಾಗಿ ಜೂನ್ 1. 1. 14 ರಂದಿರುವ ಹುಟ್ಟು ಹಬ್ಬಕ್ಕೆ ಆಯುರಾರೋಗ್ಯ ಇರಲೆಂದು ಬಾಳು ಬಂಗಾರವಾಗಲಿ ಎಂದು ಹಾರೈಸುವೆ.

- ಜೆ.ಸಿ.ಮಲ್ಲಿಕಾರ್ಜುನ, ಇಂಜಿನಿಯರ್,
ಬೆಂಗಳೂರು.

ಹಾರೈಕೆ

ಆತ್ಮೀಯ ಜೀವನ ಸಂಗಾತಿ ಮಿತ್ರನಾದ ವಿಠೋಬಾ. ಎಂ. ಪತ್ತಾರ್ ಹೆಡ್‌ಮಾಸ್ತರ್ ಹುದ್ದೆಗೆ ನೇಮಕವಾಗಿದ್ದು ನನಗೆ ಅತೀವ ಸಂತೋಷ. ಗೆಳೆಯಾ ನೀನು ಉನ್ನತ ಹುದ್ದೆಯ ಶಿಖರ ಯಶಸ್ವಿಯಾಗಿ ಏರುತ್ತಿರುವುದು ಸಂತೋಷ ತಂದಿದೆ. ಗೆಳೆಯಾ ಆ ಸೃಷ್ಟಿಕರ್ತ ಲಿಂಗದೇವ ಧರ್ಮಹಿತ ಬಸವರು, ಆಯುಷ್ಯ ಆರೋಗ್ಯ ಹೃದಯವಂತಿಕೆ ಇತ್ತು ಕಾಪಾಡಲಿ ಎಂದು ಹಾರೈಸುವ.

-ಉದಯಕುಮಾರ ಜಿ. ಪಾಲಿ, ಕಲಬುರ್ಗಿ.

ಹುಟ್ಟುಹಬ್ಬ

ನನ್ನ ಮಗಳು ಚಿ। ಪೂಜಾಳ 4ನೇ ವರ್ಷದ ಹುಟ್ಟು ಹಬ್ಬ ದಿ.27.6.99ಕ್ಕೆ ಶುಭಾಶಯಗಳು ದೇವರು ಅವಳಿಗೆ ಆಯಸ್ಸು ಆರೋಗ್ಯ ಕೊಟ್ಟು ಸದಾ ಕಾಪಾಡಲೆಂದು ಹಾರೈಸುವ. ಶ್ರೀ ವಿದ್ಯ, ಶೈಲ, ಗುರುಪ್ರಸಾದ, ನಿರ್ಮಲಾ, ರವಿ, ಶ್ರೀಧರ, ಕೃಷ್ಣಮೂರ್ತಿ, ಸುಧಾಕರ. ಅಜ್ಜ, ಅಜ್ಜಿ.

- ಶ್ರೀ ಮತ್ತು ಪ್ರಕಾಶ ಹುನಗ,
ಕೊಪ್ಪಳ.

ಉಚಿತ ಜಾಹೀರಾತು ಕೂಪನ್!

ಜಾಹೀರಾತು ನೀಡಲು ಹಣ ಕೊಡಬೇಕು ಎಂಬುದು ನಿಮಗೆಲ್ಲಾ ಗೊತ್ತಿರುವ ಸತ್ಯ. ಆದರೆ ಈಗ ನಿಮ್ಮ ಈ ನಂಬಿಕೆಯನ್ನೇ ಸುಳ್ಳು ಮಾಡುತ್ತಿದ್ದೇವೆ! ನೀವು ಒಂದು ಪೈಸೆಯನ್ನೂ ಖರ್ಚು ಮಾಡದೆ 'ಬದುಕು' ಮಾಸ ಪತ್ರಿಕೆಗೆ ವರ್ಗೀಕೃತ ಜಾಹೀರಾತು ನೀಡಬಹುದು.

ಜಾಹೀರಾತಿನ ವಿಷಯ

ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಹಬ್ಬ, ಹೊಸವರ್ಷ, ವಿವಾಹ ವಾರ್ಷಿಕೋತ್ಸವ, ಪರೀಕ್ಷೆಯ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಪ್ರಶಸ್ತಿ-ಪುರಸ್ಕಾರ.... ಹೀಗೆ ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಆಪ್ತರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ, ಪರಿಚಿತರಿಗೆ ಶುಭಾಶಯ ಕೋರಲು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಚಿತ ಜಾಹೀರಾತು ಕೂಪನ್‌ನ್ನು ವೈಯಕ್ತಿಕ ಜಾಹೀರಾತುಗಳಿಗೆ ಮಾತ್ರ ಉಪಯೋಗಿಸಿ. ವ್ಯಾಪಾರ, ವೈವಾಹಿಕ ವಿಷಯಗಳಿಗೆ ಈ ಉಚಿತ ಸೌಲಭ್ಯ ಲಭ್ಯವಿಲ್ಲ.

ಹೇಗೆ ಕಳಿಸುವುದು?

ಈ ಕೆಳಗಿನ ಕೂಪನ್‌ನಲ್ಲಿ ಜಾಹೀರಾತು ವಿಷಯವನ್ನು 20 ಶಬ್ದಗಳಿಗೆ ಮೀರದಂತೆ ಬರೆದು 'ಬದುಕು' ವಿಳಾಸಕ್ಕೆ ಕಳಿಸಿದರೆ ನಿಮ್ಮ ಕೆಲಸ ಮುಗಿಯಿತು.

ಮುಂದಿನ ತಿಂಗಳ ಸಂಚಿಕೆಯಲ್ಲಿ ನೀವು ನಿಮ್ಮ ಜಾಹೀರಾತನ್ನು ನೋಡಿ ಆನಂದಿಸಬಹುದು. ಜಾಹೀರಾತಿನ ವಿಷಯ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿರಬಹುದು. ಹಾಂ! ನೆನಪಿಡಿ! ನಮ್ಮ ಕಚೇರಿಯನ್ನು ತಲುಪುವ ಮೊದಲ 50 ಜಾಹೀರಾತುಗಳಿಗೆ ಮಾತ್ರ ಈ ಅವಕಾಶ ಸಿಗುತ್ತದೆ. ಆದ್ದರಿಂದ ತಡ ಮಾಡದೆ ತಕ್ಷಣ ಕೂಪನ್ ಭರ್ತಿ ಮಾಡಿ ಇಂದೇ ಕಳಿಸಿಕೊಡಿ.

ಕೂಪನ್ ಕಳಿಸಬೇಕಾದ ವಿಳಾಸ

'ಬಿಸಿಲ ಬದುಕು' ಮಾಸಪತ್ರಿಕೆ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

ಉಚಿತ ಜಾಹೀರಾತು ಕೂಪನ್

ದಯವಿಟ್ಟು ಈ ಕೆಳಗಿನ ವರ್ಗೀಕೃತ ಜಾಹೀರಾತನ್ನು ಜುಲೈ 99ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ ಪ್ರಕಟಿಸಲು ಕೋರಿಕೆ.

1	2	3	4
5	6	7	8
9	10	11	12
13	14	15	16
17	18	19	20


ಜಾಹೀರಾತು ನೀಡುವವರ ಪೂರ್ಣ ವಿಳಾಸ..

....

....

ಪಿನ್‌ಕೊಡ್.................................... ದೂರವಾಣಿ ಸಂಖ್ಯೆ.....................................

ಜಾಹೀರಾತುದಾರರ ಸಹಿ



ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ 1950ರಲ್ಲಿ ಜನಿಸಿ, ಅಲ್ಲಿಯೇ ಕನ್ನಡ ಮಾಧ್ಯಮದಲ್ಲಿ ಹತ್ತನೇ ತರಗತಿವರೆಗೆ ಓದಿದ ಡಾ. ಎನ್. ಪ್ರಭುದೇವ ಅವರದು ಹೃದ್ರೋಗ ಶಸ್ತ್ರ ಚಿಕಿತ್ಸೆಯಲ್ಲಿ ಬಹು ದೊಡ್ಡ ಹೆಸರು. ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ವಿಭಾಗಕ್ಕೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು, ಸುಮಾರು 5000ಕ್ಕೂ ಹೆಚ್ಚು ತೆರೆದ ಹೃದಯ ಶಸ್ತ್ರ ಚಿಕಿತ್ಸೆಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ.

ಡಾ. ಎನ್. ಪ್ರಭುದೇವ

ಕನ್ನಡ ಮಾಧ್ಯಮದಲ್ಲಿ ಹತ್ತನೆಯ ತರಗತಿಯವರೆಗೆ ಓದಿ, ನಂತರ ಪಿ.ಯು.ಸಿ.ಗೆ ಸೇರಿದ ತಕ್ಷಣ ವಿದ್ಯಾರ್ಥಿಗಳಿಗೆ ಒಂದು ಭಯಂಕರ 'ಭೂತ' ಕಾಟ ಕೊಡಲು ಶುರು ಮಾಡಿ ಬಿಡುತ್ತದೆ. ಅದೇ ಇಂಗ್ಲೀಷ್ ಭಾಷೆ. ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಕೊಡುವ ಸಲುವಾಗಿ ಹಲವಾರು ಗಣ್ಯರೊಡನೆ ಮಾತಾಡಿ, ಹಿಂದೊಮ್ಮೆ ಅವರು ಇದೇ ತರಹದ ಸಮಸ್ಯೆಗಳನ್ನು ಎದುರಿಸಿದ ರೀತಿ ಮತ್ತು ಅವರು ನಿಮ್ಮ ಈ ಸಮಸ್ಯೆಗೆ ನೀಡಿರುವ ಸಲಹೆಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

■ ವಸುಧೇಂದ್ರ

ಪ್ರಶಸ್ತಿ

ಪ್ರಥಮ ಬಾರಿ ಗರ್ಭಿಣಿ ಮಹಿಳೆಗೆ ಈ ಶಸ್ತ್ರ ಚಿಕಿತ್ಸೆಯನ್ನು ಮಾಡಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ದೇಶ ವಿದೇಶಗಳ ಹೆಸರಾಂತ ಆಸ್ಪತ್ರೆಗಳಿಗೆ ಭೇಟಿ ನೀಡಿರುವ ಇವರು, ಹೃದಯಕ್ಕೆ ಸಂಬಂಧಿಸಿದ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಇದೇ ವಿಷಯದ ಮೇಲೆ ಮಹತ್ವದ ಪ್ರಬಂಧಗಳನ್ನು ಮಂಡಿಸಿದ್ದಾರೆ.

1 ಇಂಗ್ಲಿಷ್ ಮಾಧ್ಯಮಕ್ಕೆ ಸೇರಿದ ಹೊಸತರಲ್ಲಿ ನಿಮ್ಮ ಅನುಭವಗಳೇನು?

ನಾನು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಎಂಬ ಹಳ್ಳಿಯಿಂದ ಬಂದವನು. ಬೆಂಗಳೂರಿನಲ್ಲಿ ಸೇಂಟ್ ಜೋಸೆಫ್‌ನಲ್ಲಿ ಪಿ.ಯು.ಸಿ.ಗಾಗಿ ಸೇರಿಕೊಂಡೆ. ಮೊದಲ ಒಂದೆರಡು ತಿಂಗಳು ತುಂಬಾ ಕಷ್ಟ ಆಯ್ತು. 'ನೀರಿನಿಂದ ಹೊರ ಹಾಕಿದ ಮೀನು' ಅಂತಾರಲ್ಲ, ಹಾಗೆ. ಇಂಗ್ಲಿಷ್ ಮಾಧ್ಯಮದಿಂದ ಬಂದ ಹುಡುಗರು ಸಾಕಷ್ಟು ಜನರಿದ್ದರಿಂದ ನಮ್ಮ ಸಮಸ್ಯೆ ಇನ್ನೂ ದೊಡ್ಡದಾಗಿ ಕಾಣುತ್ತಿತ್ತು. ಆದರೆ ಅದನ್ನು ಒಂದು 'ಛಾಲೆಂಜ್' ಆಗಿ ತೆಗೆದುಕೊಂಡೆ. ಮೊದಲಿಂದಲೂ ಶಾಲೆಯಲ್ಲಿ ಬುದ್ಧಿವಂತ ಅನ್ನಿಸಿಕೊಂಡ ನನಗೆ ಈಗ ಯಕಶ್ಚಿತ್ ಇಂಗ್ಲಿಷ್‌ನಿಂದ ಇಷ್ಟೊಂದು ಸಮಸ್ಯೆ ಆಗ್ತಾ ಇದೆಯೆ? ಅಂತ ಯೋಚಿಸಿದೆ. ಅನಂತರ ಆತ್ಮ ವಿಶ್ವಾಸ ಹೆಚ್ಚಾಗುತ್ತಾ ಹೋಯಿತು. ಒಂದೆರಡು ತಿಂಗಳಿನಲ್ಲಿ ಸಮಸ್ಯೆ ಮಾಯವಾಯ್ತು.

2 ಇಂದು ಇದೇ ಸಮಸ್ಯೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?

ಇದೊಂದು ಅತ್ಯಂತ ಸ್ವಾಭಾವಿಕ ಸಮಸ್ಯೆ ಅಂತ ಮನವರಿಕೆ ಮಾಡಿಕೊಳ್ಳಬೇಕು. ಈ ಸಮಸ್ಯೆಯಿಂದ ಹೊರ ಬರಲು ಕೆಲವರಿಗೆ 2 ತಿಂಗಳಾದರೆ ಮತ್ತೆ ಕೆಲವರಿಗೆ 6 ತಿಂಗಳಾಗಬಹುದು. ಆದರೆ ಈ ಸಂದರ್ಭದಲ್ಲಿ ಎದೆಗುಂದಿ ಏನೇನೋ ಹುಚ್ಚುಚ್ಚು ನಿರ್ಧಾರ ತೆಗೆದುಕೊಳ್ಳಬಾರದು. ತಂದೆ-ತಾಯಿ ಮತ್ತು ಅಧ್ಯಾಪಕ ವೃಂದವೂ ವಿದ್ಯಾರ್ಥಿಗಳು ಎದೆಗುಂದದಂತೆ ನೋಡಿಕೊಳ್ಳುವುದು ಅವಶ್ಯಕ. ಅಂತಹ ವಿದ್ಯಾರ್ಥಿಗಳಿಗೆ ಚೇತರಿಸಿಕೊಳ್ಳಲು ಸಾಕಷ್ಟು ಸಮಯಾವಕಾಶವನ್ನು ಮಾಡಿಕೊಟ್ಟು, ಅವರ ಆತ್ಮ ವಿಶ್ವಾಸವನ್ನು ಹೆಚ್ಚಿಸಬೇಕು.

3 ಪ್ರಾಥಮಿಕ ಶಿಕ್ಷಣ ಯಾವ ಭಾಷೆಯಲ್ಲಿದ್ದರೆ ಒಳ್ಳೆಯದೆಂದು ನೀವು ಭಾವಿಸುತ್ತೀರಿ?

ಪ್ರಾಥಮಿಕ ಶಿಕ್ಷಣವನ್ನು 'ಮಾತೃಭಾಷೆ'ಯಲ್ಲಿ

ಕಲಿಸುವುದಕ್ಕೆ ಸರಿಸಮನಾದದ್ದು ಮತ್ತೊಂದಿಲ್ಲ. ಅಂತ ನಾನು ದೃಢವಾಗಿ ನಂಬುತ್ತೇನೆ. ಆ ವಯಸ್ಸಿನಲ್ಲಿ ಮಗು ತನ್ನನ್ನು ತಾನು ಅರ್ಥ ಮಾಡಿಕೊಳ್ಳುತ್ತಿರುತ್ತದೆ. ತನ್ನ ಶಕ್ತಿ ಸಾಮರ್ಥ್ಯಗಳ ಬಗ್ಗೆ ತಿಳಿದುಕೊಳ್ಳುತ್ತಿರುತ್ತದೆ. ಅಂತಹ ಸಮಯದಲ್ಲಿ ನಾವು ಅನಾವಶ್ಯಕವಾಗಿ ಭಾಷೆಯ ಗೊಂದಲದಲ್ಲಿ ಆ ಮಗುವನ್ನು ತಳ್ಳಿ ಬಿಟ್ಟರೆ ಅದು ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುವ ಸಾಧ್ಯತೆಗಳಿರುತ್ತದೆ. ಮುಂದೆ ಎಂದೆಂದಿಗೂ ಅದು ಒಂದು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗದೇ ಹೋಗಬಹುದು.

ಜನರಲ್ ಮ್ಯಾನೇಜರ್ ಅಭಿಪ್ರಾಯ


ಹೆಚ್.ಎ.ಎಲ್.ಜೆನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಕೆ.ಎಸ್. ಸುಧೀಂದ್ರರವರು ಕನ್ನಡ ಮಾಧ್ಯಮದ ಬಗ್ಗೆ ಕೆಲವು ವಿಶೇಷ ಅಭಿಪ್ರಾಯಗಳನ್ನು ತಿಳಿಸಿದರು.

'ಇದೇ ತರಹದ ಸಮಸ್ಯೆಯನ್ನು ನಾವೆಲ್ಲರೂ ಒಮ್ಮೆಯಾದರೂ ಎದುರಿಸಲೇ ಬೇಕಾಗುತ್ತದೆ. ನಾನು ಹಿಂದೊಮ್ಮೆ ಫ್ರಾನ್ಸ್‌ಗೆ ಹೋದಾಗ, ಈ ರೀತಿಯ ಗೊಂದಲವನ್ನು ಎದುರಿಸಬೇಕಾಯ್ತು. ಆದರೆ ಅಲ್ಲಿಗೆ ಹೋಗುವುದಕ್ಕೆ ಮುಂಚೆ ಇಲ್ಲಿ ಸಾಕಷ್ಟು ಫ್ರೆಂಚ್ ಕಲಿತದ್ದರಿಂದ ಸಮಸ್ಯೆ ಅಷ್ಟೊಂದು ಗಂಭೀರವೆನಿಸಲಿಲ್ಲ. ಸಾಮಾನ್ಯವಾಗಿ ಹೊಸ ಭಾಷೆಯೊಂದನ್ನು ಕಲಿಯುವಾಗ ಅದನ್ನು ಪುಸ್ತಕದಲ್ಲಿ ನಮಗೆ ತಿಳಿದಂತೆ ಓದಿಕೊಳ್ಳುವುದಕ್ಕಿಂತಾ, ಆ ಭಾಷೆ ಬಲ್ಲವರು ಮಾತನಾಡುವುದನ್ನು ಕೇಳಿದಾಗ, ಹೆಚ್ಚು ಪರಿಣಾಮಕಾರಿಯಾಗುತ್ತದೆ. ಉಚ್ಚಾರಣೆ ಸ್ಪಷ್ಟವಾಗುತ್ತದೆ.

ಕನ್ನಡ ಮಾಧ್ಯಮದಿಂದ ಬಂದಿರುವ ವಿದ್ಯಾರ್ಥಿಗಳ ಸಲುವಾಗಿ ನಾವು ವಿಶೇಷ ಧ್ವನಿ ಸುರಳಿ, ದೃಶ್ಯ ಸುರಳಿ (ವಿಡಿಯೋ ಕ್ಯಾಸೆಟ್)ಗಳನ್ನು ಮಾಡಬೇಕು. ಒಮ್ಮೆ ಕಾಲೇಜಿನಲ್ಲಿ ಮಾಡಿದ ಪಾಠ ಅರ್ಥವಾಗದಿದ್ದರೂ, ಮನೆಗೆ ಬಂದ ನಂತರ ಮತ್ತೊಂದು ಬಾರಿ ಅರ್ಥವಾಗುವವರೆಗೆ ಈ ಸಲಕರಣೆಗಳನ್ನು ಬಳಸಿಕೊಳ್ಳಬಹುದು. ಸಾಕಷ್ಟು ವಿದ್ಯಾರ್ಥಿಗಳಿಗೆ ಈ ತರಹದ ಸಹಾಯ ಬೇಕಾಗಿರುವುದರಿಂದ, ಇಂತಹ ಧ್ವನಿ ಸುರಳಿ, ದೃಶ್ಯ ಸುರಳಿಗಳಿಗೆ ಸಾಕಷ್ಟು ದೊಡ್ಡ ಮಾರುಕಟ್ಟೆಯೂ ಇರುತ್ತದೆ. ಅಷ್ಟೇ ಅಲ್ಲದೆ, ದೂರದರ್ಶನ ಮತ್ತು ಇತರ ಕನ್ನಡ ಚಾನಲ್‌ನವರು ಇಂತಹ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು, ಒಳ್ಳೆಯ ಕಾರ್ಯಕ್ರಮಗಳನ್ನು ತಯಾರಿಸಿ, ಆ ವಿದ್ಯಾರ್ಥಿಗಳು ವೀಕ್ಷಿಸಲು ಅನುಕೂಲವಾಗುವಂತಹ ಸಮಯದಲ್ಲಿ ಬಿತ್ತರಿಸಿದರೆ ತುಂಬಾ ಸಹಾಯವಾಗುತ್ತದೆ.

ಈ ಸಮಸ್ಯೆ ತಾತ್ಕಾಲಿಕ. ಛಲವೊಂದಿದ್ದರೆ ಸಾಕು, ಈ ಸಮಸ್ಯೆಯಿಂದ ಸಲೀಸಾಗಿ ಈಜಿ ದಡ ಸೇರಬಹುದು. ಈ ಸಮಸ್ಯೆಗಳೇನೇ ಇರಲಿ, ಮಗುವಿನ ಪ್ರಾಥಮಿಕ ವಿದ್ಯಾಭ್ಯಾಸ ಮಾತೃಭಾಷೆಯಲ್ಲಿಯೇ ಇರಬೇಕೆಂದು ನಾನು ದೃಢವಾಗಿ ನಂಬುತ್ತೇನೆ'.

'ಎಂ.ಪಿ.'ಗಳನ್ನೂ
ಝೆರಾಕ್ಸ್
ಮಾಡಿಸುವಂತಿದ್ದರೆ...
ನಾವು
ಸುಲಭದಲ್ಲಿ
ಬಹುಮತ
ಸಾಧಿಸ
ಬಹುದಿತ್ತು!



ವೈಜ್ಞಾನಿಕ ವಿಷಯಗಳು

■ ಗಂಟೆಗೆ 40,000 ಕಿ.ಮೀ. ವೇಗದ ರಾಕೆಟ್‌ನಲ್ಲಿ 15 ವಯಸ್ಸಿನ ಬಾಲಕನೊಬ್ಬನನ್ನು ಗ್ರಹ ಪರ್ಯಟನೆಗಾಗಿ ಕಳಿಸಿದರೆ, ಅವನು ಚಂದ್ರನನ್ನು ಒಂದೇ ದಿನದಲ್ಲಿ ಮುಟ್ಟಬಲ್ಲ. ಬುಧ ಗ್ರಹ ತಲುಪಲು ಮೂರು ತಿಂಗಳು ಬೇಕು. ಶುಕ್ರ ಸೇರಲು 2 ತಿಂಗಳು ಸಾಕಾದರೆ ಮಂಗಳ ಗ್ರಹ ತಲುಪಲು ಮತ್ತೆರಡು ತಿಂಗಳು ಬೇಕು. ಈ ವೇಗದ ರಾಕೆಟ್ ಗುರು ಗ್ರಹವನ್ನು 1.5 ವರ್ಷದಲ್ಲಿ ಮುಟ್ಟಿದರೆ ಶನಿ ಗ್ರಹವನ್ನು 2.5 ವರ್ಷದಲ್ಲಿ ತಲುಪುತ್ತದೆ. ಯುರೇನಸ್ ತಲುಪಲು ಸುಮಾರು 8 ವರ್ಷ ಬೇಕಾದರೆ ನೆಪ್ಚೂನ್ ತಲುಪಲು 12.5 ವರ್ಷಗಳೇ ಬೇಕು. 16 ವರ್ಷಗಳಲ್ಲಿ ಪ್ಲೂಟೋ ಮುಟ್ಟಿ ನೇರವಾಗಿ ಧರೆಗೆ ಹಿಂದಿರುವಾಗ ಬಾಲಕನ ಯೌವ್ವನ ಕಳೆದು ಹೋಗಿರುತ್ತದೆ.

■ ಕೆನಡಾದಲ್ಲಿ ದೊರೆತಿರುವ ಶಿಲೆಯೊಂದು 396 ಕೋಟಿ ವರ್ಷ ಹಳೆಯದು. ಗ್ರೀನ್ಲೆಂಡಿನಲ್ಲಿ ದೊರೆತಿರುವ ರೂಪಾಂತರಿಕ ಶಿಲೆಯೊಂದರ ವಯಸ್ಸು 370 ಕೋಟಿ ವರ್ಷ. ನಮ್ಮ ಕರ್ನಾಟಕ ರಾಜ್ಯದಲ್ಲಿನ ಶಿಲೆಗಳು ಇದರಿಂದ ಹಿಂದೆ ಬಿದ್ದಿಲ್ಲ. ಗೊರೂರಿನ ಬಳಿಯಿರುವ ಪಟ್ಟೆ ಶಿಲೆಗೆ 335 ಕೋಟಿ ವರ್ಷ. ಲಾಲ್‌ಬಾಗಿನ ಕೆಂಪೇಗೌಡ ಗೋಪುರವಿರುವ ಬಂಡೆಗೆ 395 ಕೋಟಿ ವರ್ಷಗಳ ಪ್ರಾಯ.

■ 6 ಸೆಂ.ಮೀ ಗಳಷ್ಟು ದಪ್ಪ ಮೇಲ್ಮಣ್ಣನ್ನು ರೂಪಿಸಲು ಪ್ರಕೃತಿವ್ಯವಸ್ಥೆಗೆ 2000 ವರ್ಷಗಳೇ ಬೇಕು. ಅರಣ್ಯ ನಾಶದಿಂದ ಬೋಳಾದ ಪ್ರದೇಶದಲ್ಲಿ ಒಂದೇ ಒಂದು ಮಳೆಗಾಲದಲ್ಲಿ ಅಷ್ಟೂ ಮೇಲ್ಮಣ್ಣು ಕೊಚ್ಚಿಹೋಗುತ್ತದೆ.

■ ಖಂಡಗಳು ಸರಿಯುತ್ತ ಕಿರಿದಾಗುತ್ತಿರುವಾಗಲೇ ಸಾಗರಗಳು ಹಿರಿದಾಗುತ್ತಿವೆ. ಉದಾಹರಣೆಗೆ ಈಗ ಉತ್ತರ ಅಮೆರಿಕ, ಯುರೋಪ್ ಹೆಚ್ಚು ದೂರ ಸರಿದಿವೆ. ಅಟ್ಲಾಂಟಿಕ್ ಸಾಗರ 500 ವರ್ಷಗಳ ಹಿಂದೆ ಇದ್ದುದಕ್ಕಿಂತ ಈಗ 10 ಮೀ. ಹೆಚ್ಚು ಅಗಲವಾಗಿದೆ.

■ ಇಡೀ ಧರೆಯನ್ನು ಕಿಂಚಿತ್ತು ಬಿಡುವಿಲ್ಲದೆ ಬೆಳಗುವ ಸೂರ್ಯನ ವಯಸ್ಸೆಷ್ಟು ಎಂಬ ಪ್ರಶ್ನೆ ಎಂತಹವರ ತಲೆಯಲ್ಲೂ ಕೊರೆಯುತ್ತಿರಬಹುದು. ಇದೀಗ ವಿಜ್ಞಾನಿಗಳು ಕರಾರುವಕ್ಕಾಗಿ ಲೆಕ್ಕ ಹಾಕಿದ್ದಾರೆ. ಸೂರ್ಯನಿಗೀಗ ಮಧ್ಯ ವಯಸ್ಸು. ಸೂರ್ಯ ಇನ್ನೂ 5000 ಮಿಲಿಯನ್ ವರ್ಷ ಬೆಳಗುತ್ತಲೇ ಇರುತ್ತಾನೆ. ನಂತರವೂ ಸಾವಿರಾರು ಮಿಲಿಯನ್ ವರ್ಷಗಳು ಕಳೆದ ಮೇಲೆ ತಣ್ಣಗಾಗಿ ಕಪ್ಪು ಕುಬ್ಜವಾಗಿ ಅಸು ನೀಗುತ್ತಾನೆ.

–ಬಿ.ಎಂ.ಅವಿನಾಶ್

ಕಷ್ಟ ಚಕ್ರ

> ನಿವೃತ್ತಿಯೆಂದರೆ ಮುಟ್ಟುನಿಂತ ಹೆಣ್ಣಿನ ಸ್ಥಿತಿ. ಅಪ್ರಯೋಜಕ. ದುಡಿಯದೆಯೇ ತಿಂಗಳು ತಿಂಗಳು ನನಗೆ ಬರುತ್ತಿದ್ದ ಹಣ ಕಂಡು ನಿವೃತ್ತಿ ಸೌಲಭ್ಯವಿಲ್ಲದ ನನ್ನಾಕೆಗೆ ಮತ್ಸರ, ಸಿಡುಕು ಎರಡೂ. ಇದ್ದೊಬ್ಬ ಮಗಳು ಗೃಹಿಣಿಯಾಗಿ ಹೆಂಡತಿಯ 'ಕೈಮುರಿದಂತಾಗಿತ್ತು.' ವಾರಕ್ಕೆ ಏಳು ಬಗೆಯಾಗಿ ಬೇಯುವ ಅನ್ನ, ಹೊಸ ರುಚಿ, ನಮ್ಮಿಬ್ಬರ Weightನ್ನು ಕುಕ್ಕರಿನ ಮೇಲೆ ಹಾಕುತ್ತಾರಲ್ಲಾ ಆ Weightನ ಮಟ್ಟಕ್ಕೆ ತಂದು ತಿಂಗಳಿನ ಮುಖ್ಯ ಖರೀದಿ ಔಷಧ, Outing, ದವಾಖಾನೆ ಆಗಿದ್ದವು.

■ ಡಾ. ಟಿ.ಕೆ. ತಾಪಸ್

ಸರಕಾರದವರು ಒದ್ದಕಡೆಯಲ್ಲೆಲ್ಲ 'ಫುಟ್ ಬಾಲ್' ನಂತೆ ಓಡಾಡಿ ನಿವೃತ್ತಿಯ ನಂತರ ಮನೆಯ ಮೂಲೆ ಸೇರಿದ್ದೇನೆ. ನಿವೃತ್ತಿಯೆಂದರೆ ಮುಟ್ಟುನಿಂತ ಹೆಣ್ಣಿನ ಸ್ಥಿತಿ. ಅಪ್ರಯೋಜಕ. ದುಡಿಯದೆಯೇ ತಿಂಗಳು ತಿಂಗಳು ನನಗೆ ಬರುತ್ತಿದ್ದ ಹಣ ಕಂಡು ನಿವೃತ್ತಿ ಸೌಲಭ್ಯವಿಲ್ಲದ ನನ್ನಾಕೆಗೆ ಮತ್ಸರ, ಸಿಡುಕು. ಎರಡೂ. ಇದ್ದೊಬ್ಬ ಮಗಳು ಗೃಹಿಣಿಯಾಗಿ ಹೆಂಡತಿಯ 'ಕೈಮುರಿದಂತಾಗಿತ್ತು' ವಾರಕ್ಕೆ ಏಳು ಬಗೆಯಾಗಿ ಬೇಯುವ ಅನ್ನ, ಹೊಸ ರುಚಿ, ನಮ್ಮಿಬ್ಬರ Weight ನ್ನು ಕುಕ್ಕರಿನ ಮೇಲೆ ಹಾಕುತ್ತಾರಲ್ಲಾ ಆ Weightನ ಮಟ್ಟಕ್ಕೆ ತಂದು ತಿಂಗಳಿನ ಮುಖ್ಯ ಖರೀದಿ ಔಷಧ, Outing, ದವಾಖಾನೆ ಆಗಿದ್ದವು. ನನ್ನಾಕೆಯ ಒಂದೇ ಕೆಲಸ ನಾನು ಏನು ಕೆಲಸ ಮಾಡುತ್ತಿದ್ದೇನೆ ಎಂಬುದರ ನಿಗಾ ಇಡುವುದು.

ನನ್ನ ಕೆಲಸ? ವಿರಾಮವಿದ್ದಾಗಲೆಲ್ಲಾ ಟೀವಿ ನೋಡುವುದು. ಆಗಾಗ ಲೇಖನ ಬರೆಯವುದು. ನನಗೆ ಸ್ವಲ್ಪ Starting trouble ಹಾಗಾಗಿ ವಿಚಾರದಲ್ಲಿ ಮುಳುಗಿ ಟೀವಿ ನೋಡುತ್ತಿದ್ದಾಗ ಕಾಲಚಕ್ರದ ಬಗೆಗೆ ಟಿಪ್ಪಣಿ ಸಾಗುತ್ತಿತ್ತು. ಚಕ್ರಗಳ ಚಕ್ರವ್ಯೂಹದಲ್ಲಿ ಹೂತು ಹೋದೆ. ಮಿಲನ ವಿಯೋಗ-ಮಿಲನ, 'ಪುನರಪಿ ಜನನಂ, ಪುನರಪಿ ಮರಣಂ, ಪುನರಪಿ ಜನನೀ ಜಠರೇ ಶಯನಂ? ತುಟ್ಟಿಭತ್ತೆ - ಬೆಲೆಯೇರಿಕೆ - ತುಟ್ಟಿಭತ್ತೆ, ಓದು-ಪರೀಕ್ಷೆ- ಓದು' ಹೀಗೆ.

ಆಗ ತಲೆಯಲ್ಲಿ ನವೆಯುಂಟಾಗಿ ಕೆರೆದುಕೊಂಡೆ. 'ಆನಂದ.. ಮಹದಾನಂದ' ಎಂಬ ಚಿತ್ರಗೀತೆ ಗುನುಗುತ್ತಾ ಕುಣಿದಾಡುವಂತಾಯಿತು. ಹೊಸ ವಿಚಾರ ಬಂತೆಂದಿರಾ? ಊಹೂಂ. ಬೊಕ್ಕೆ ತುರಿಸುವಾಗಿನ ಆನಂದ ಅವರ್ಣನೀಯ. ಪ್ರಾಮಾಣಿಕವಾಗಿ ಹೇಳುತ್ತೇನೆ. ಇಂಥ ಆನಂದ ಎಂಥ ಸಾಹಿತ್ಯ ಸಂಗೀತಗಳಿಂದಲೂ ನನಗಾಗಿಲ್ಲ. ಕಜ್ಜಿ ತುರಿಸುವ ಸಂದರ್ಭ ಬಂದಾಗ ನೀವೂ ಖಂಡಿತ ನನ್ನ ವಾದವನ್ನು ಒಪ್ಪುವಿರಿ.

ಬೊಕ್ಕೆಯನ್ನು ತುರಿಸುತ್ತಲೇ 'ಯುರೇಕಾ' ಎಂದು ಕಿರುಚಿ, ಥರಗುಟ್ಟುವ ಹೆಂಡತಿಯಿಂದ ಸಕತ್ತಾಗಿ ಬೈಸಿಕೊಂಡೆ, ನಾನು ಹೊಸ ಚಕ್ರವೊಂದನ್ನು ದೃಷ್ಟಿಸಿದ್ದೆ. ಹೆಮ್ಮೆಯಿಂದ ಹೇಳುತ್ತೇನೆ- ಅದೇ ಕಷ್ಟ ಚಕ್ರ. ಬಿತ್ತದೇ, ಗೊಬ್ಬರ ಹಾಕದೇ, ನೀರೆರೆಯದೇ ಗಂಡಸಿಗೆ ದೇವರು ದಯಪಾಲಿಸಿದ ಬೆಳೆ: ಗಡ್ಡ ಮೀಸೆ, ಬೆಳೆಯುತ್ತದೆ - ಬೋಳಿಸುತ್ತೇನೆ. ಬೆಳೆಯುತ್ತದೆ! ಹೇಗಿದೆ ಕಷ್ಟ ಚಕ್ರ? ಹುಬ್ಬಳ್ಳಿ - ಧಾರವಾಡ -ಹುಬ್ಬಳ್ಳಿ ಬಸ್ಸಿನಂತೆ, ಅಲ್ಲವೇ? ಕಷ್ಟವಿದ್ದರೇ ಸುಖ. ಇಲ್ಲದಿದ್ದರೆ ಏನು ಹೆಣ್ಯಾ ಇದ್ಹಂಗ ಇದ್ದಾನಲ್ರೀ ಅಂವ ಎಂಬ ಹೀಯಾಳಿಕೆಗೆ ಆಹಾರ. ಆದರೆ ಕಲಿಯುಗದ ಪ್ರಭಾವವೋ ಏನೋ...... ನನ್ನ ಅನೇಕ ಗೆಳೆಯರು ಕಷ್ಟದ ಅಭಾವದಿಂದ ಪರಿತಪಿಸುತ್ತಿದ್ದರೆ, ಹಲವು ಗೆಳತಿಯರು ನಮಗೇಕಪ್ಪಾ ಇವರೆಡೂ' ಎಂದು ಕಂಡಕಂಡವರನ್ನು ಶಪಿಸುತ್ತಿದ್ದಾರೆ.

'ತುರಿಕೆಯನ್ನು ಉತ್ತೇಜಿಸಿದರೆ ಹತ್ತೂ ಬೆರಳುಗಳಿಗೂ ಕೈ ತುಂಬ ಕೆಲಸ' ಎಂದುಕೊಂಡು ಸಮಸ್ಯೆಯನ್ನೆದುರಿಸಲು ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ. ಹೆಂಡತಿ ಸದಸ್ಯೆ. ನಾನು ನಿವೃತ್ತ ಸರಕಾರಿ ಅಧಿಕಾರಿಯಲ್ಲವೇ? ಎಲ್ಲ ಕೆಲಸ ಕ್ರಮಬದ್ಧವಾಗಬೇಕು.

ಈ ಸಂದರ್ಭದಲ್ಲಿ ಫಕ್ಕನೆ ನೆನಪಿಗೆ ಬಂದವ ಮಲ್ಲ. ಚಡ್ಡಿ ಇಲ್ಲದಾಗಿನಿಂದ ಇಂಟರ್‌ವರೆಗೆ ನನ್ನ ಸಹಪಾಠಿ. ಹಂಚಿ ಕಡ್ಡಿಯಂತಿದ್ದವ ಮಲ್ಲ ಹೇಗಾದ? ಆತನ ತಂದೆ ತಾಯಿಗಳಿಗೇ ಗೊತ್ತು. ಆದರೆ ಮಲ್ಲನಿಗೆ ತಂದೆ ತಾಯಿಗಳೇ ಗೊತ್ತಿಲ್ಲ! ಹುಟ್ಟುವ ಮೊದಲೇ ತಂದೆ ಹೋದ; ಬೆಳೆಯುವ ಮೊದಲೇ ತಾಯಿ ಹೋದಳು. ಮೈ ಚಳಿ ಬಿಟ್ಟು, ಓಣಿಯ ಕೂಸಾಗಿ ಬೆಳೆದರೂ ಮಲ್ಲ, ಕಾಳಗದ ಮಲ್ಲನಾಗಲಿಲ್ಲ. ಮಾತಿನ ಮಲ್ಲನಾದ! 'ತಮ್ಮ ನಿಜ ನಾಮಧೇಯವಾವುದು ಪೇಳುವಂಥವರಾಗಿರಿ' ಎಂದರೆ 'ಶಿಷ್ಯಾ ಅದು ಕನಕನ ಮುಂಡಿಗೆ, ತಿಳಿಯಲು ತಿಣುಕಬೇಡ' ಎಂದು ಮಲ್ಲನೇ ಹೇಳುತ್ತಿದ್ದ.

ಅನೇಕ ನಳಗಳ ನೀರು ಕುಡಿದ ನಾನು ನನ್ನೂರಿಗೆ ಹಿಂತಿರುಗಿದಾಗ ನಿಜವಾಗಿಯೂ ಪ್ರವಾಸಿಯಂತಾಗಿದ್ದೆ. ಕಷ್ಟ ಚಕ್ರವ್ಯೂಹ್ಯದಿಂದ ಹೊರಬರಲು ಮಲ್ಲ ಅತ್ಯಗತ್ಯವಾಗಿದ್ದ. ಹಳೆಯ ಸ್ನೇಹಿತರು ಎಲ್ಲೆಲ್ಲಿ ಹೋಗಿದ್ದರೋ... ನನ್ನ ನಗರ

ಕಿವಿ ಮಾತು

■ ಕಲ್ಲುಸಕ್ಕರೆ ಮತ್ತು ಒಣಕೊಬ್ಬರಿಯನ್ನು ಜಗಿದು ಚಪ್ಪರಿಸಿ ತಿನ್ನುವುದರಿಂದ ಬಾಯಿ ಹುಣ್ಣು ವಾಸಿಯಾಗುವುದು.

■ ಕರಿಬೇವನ್ನು ನುಣ್ಣಗೆ ಅರೆದು, ಬೆಣ್ಣೆಯೊಡನೆ ಬೆರೆಸಿ, ಎರಡು ದಿನ ತಿಂದರೆ ಬಾಯಿಹುಣ್ಣು ಗುಣವಾಗುತ್ತದೆ.

■ ಗಸಗಸೆ ಮತ್ತು ಒಣಕೊಬ್ಬರಿಯನ್ನು ಬೆರೆಸಿ, ಕುಟ್ಟಿ, ಅಗಿದು ತಿಂದರೆ ಬಾಯಿಹುಣ್ಣು ಗುಣವಾಗುವುದು.

■ ಚಿಗುರು ಸೀಬೆ ಎಲೆಗಳ ಕಷಾಯವನ್ನು ತಯಾರಿಸಿ, ಅದಕ್ಕೆ ಸ್ವಲ್ಪ ಉಪ್ಪು ಸೇರಿಸಿ, ದಿನಕ್ಕೆ ಮೂರು ಸಾರಿ ಬಾಯಿ ಮುಕ್ಕಳಿಸಿದರೆ ಬಾಯಿ ನಾತ ಹೋಗಿ, ಬಾಯಿಹುಣ್ಣು ವಾಸಿಯಾಗುವುದು.

■ ಕೆಂಪು ಗಣಿಕೆ ಸೊಪ್ಪನ್ನು ಬೇಯಿಸಿ ತಿನ್ನುವುದರಿಂದ ಬಾಯಿಹುಣ್ಣು ನಿವಾರಣೆಯಾಗುವುದು.

■ ಕೊತ್ತಂಬರಿ ಬೀಜದ ಚೂರ್ಣವನ್ನು ಜೇನು ತುಪ್ಪದಲ್ಲಿ ಬೆರೆಸಿ ನಾಲಿಗೆಯ ಮೇಲೆ ಹಚ್ಚಿಕೊಂಡು ಚಪ್ಪರಿಸುತ್ತಿದ್ದರೆ ಬಾಯಿಹುಣ್ಣು ಗುಣವಾಗುತ್ತದೆ.

■ ಚೆನ್ನಾಗಿ ಮಾಗಿದ ಟೊಮ್ಯಾಟೋ ಹಣ್ಣನ್ನು ಸೇವಿಸುತ್ತಿದ್ದರೆ ಬಾಯಿಹುಣ್ಣು ಗುಣವಾಗುವುದು. ■

ಪ್ರದಕ್ಷಿಣೆಗೆ ಶುರು.

ಗಡಿಯಾರದ ಕಾರಖಾನೆಯಲ್ಲಿ ಕೆಲಸ ಮಾಡುವ ಯಾವ ಲಲನಾಮಣಿಯ ಬೆರಳ ಚಳಕಕ್ಕಿಂತಲೂ ಕಡಿಮೆಯಿಲ್ಲದ್ದು ಮಲ್ಲನ ಕತ್ತರಿ-ಚಳಕ ಹಿಂದಿನ ಅನುಭವದ ಈ ಮೆಲುಕು ಮಧುರ ಸಂಗೀತ, ಸವಿಗೂಳುಗಳ ನೆನಪಿನಂತೆ. ಪಾಪ, ಮಲ್ಲ! ಸಹೋದರರ ಶಿಕ್ಷಣ, ಸಹೋದರಿಯ ಮದುವೆಗಳ ಜವಾಬ್ದಾರಿ ನಿಭಾಯಿಸುವಾಗ ತನ್ನ ಮದುವೆಯನ್ನೇ ಮರೆತಿದ್ದ. ಸಿಕ್ಕದ್ದನ್ನು ಓದುತ್ತ ಮಸ್ತಕವೇ ಪುಸ್ತಕವಾಗಿ ನಿರಾಶೆಯ ಹೊಗೆ ನಗೆಯ ಅಲೆಯಾಗಿ ಹೊರಬರುತ್ತಿತ್ತು.

ಅಂತೂ ನಾನು ಯಶಸ್ವಿಯಾದೆ. ಮಲ್ಲನ ಕಷ್ಟ ನಿವಾರಣಾಲಯ ಸಿಕ್ಕೇ ಬಿಟ್ಟಿತು, ಒಂದು ದಿನ ನನ್ನ ಕಷ್ಟ ನಿವಾರಣೆ ಆತನಿಂದಲೇ ಆಗಬೇಕು ಎಂಬ 'ವಿಕ್ರಮಾದಿತ್ಯ ಹಟ' ನನ್ನದು.

ವೃತ್ತಪತ್ರಿಕೆಯಲ್ಲಿ ತಲ್ಲೀನನಾದ ಮಲ್ಲ ನನ್ನನ್ನು ನೋಡಿದ ಕೂಡಲೇ ಹಲೋ ಎನ್ನಲಿಲ್ಲ. ನನಗೆ ಸಿಕ್ಕಿದ್ದು ಬೆನ್ನಿನ ಮೇಲೊಂದು ದೊಡ್ಡ ಗುದ್ದು! ಎಷ್ಟೊಂದು ಹಿತಕರವಾದ ನೋವದು! ಆಮೇಲೆ, ಎಷ್ಟು ವರ್ಷ ಭೂಗತ ಆಗಿರ್ತೀಯೋ ಮಗನss ಎಂಬ ಸವಾಲ್. ಕೊನೆಗೆ ಬೆಳೆದ ಕೂದಲಲ್ಲಿ ಕೈಯಾಡಿಸಿ, ಮಾಡ್ತೀನಿ ಬಾ ನಿನ್ನ ಇವತ್ತ' ಎಂಬ ಆತ್ಮೀಯ ಬೆದರಿಕೆ. ಅಂದು ನನ್ನ ನಂಬರ್ ಕೊನೆಗೆ ಕೆಲವರ ತಲೆಯಲ್ಲಿ ಕೂದಲನ್ನು, ಕೆಲವರ ಕೂದಲಲ್ಲಿ ತಲೆಯನ್ನು ಹುಡುಕುತ್ತ, ರಸ್ತೆ ಪ್ಯಾಚ್‌ವರ್ಕ್ ತರಹ ಹಲವರ ಗಡ್ಡ ತಿದ್ದುತ್ತ, ನನ್ನೊಡನೆ ಹರಟಿ, ಹರಟಿ, ಕೊನೆಗೆ ಕುರ್ಚಿಯ ಕೈಗೆ ನನ್ನನ್ನೆಳೆದ. ಈಗ ನಾವಿಬ್ಬರೇ.

'ನಮ್ಮಾ ಕುಂಟ ರಾಮ್ಯಾ, ಬಾಬೂಮನಿ ಸಲೀಂ, ಕಡಿಮನಿ ಮೇರಿ ಏನಾದ್ರೋ?'

'ಅವ್ರು ಮೂರೂ ಮಂದಿ ತಮ್ಮ ತಮ್ಮ ಹಾದೀ ಹಿಡಿದ್ರು' ಸಂಭಾಷಣೆಯ ಈಗತ್ತು ಮಲ್ಲನದೇ.

'ಅಂದ್ರ? ಬಿಡಿಸಿ ಹೇಳೋ?'

'ಅಲೀಕಡೆ, ರಾಮ್ಯಾ, ಸಲೀಂ ತೀರಿಕೊಂಡ್ರು, ಉಪ್ಪಿನ ಕ್ಯೂದಾಗ ನಿಂತಲ್ಲೇ ರಾಮ್ಯಾ ಕುಸಿದ; ಹೇಣ್ತಿ ಉಳ್ಳಾಗಡ್ಡಿ ತತಾ ಎಂದು ಹೇಳಿದ್ದು ಕೇಳಿ ಸಲೀಂ ಎದೀ ಒಡೆದು ಸತ್ತ'.

'ಕಡೀಮನಿ ಮೇರಿ ಒಬ್ಬಳss ಮಗಳಲ್ಲss?'

'ಹೌದು. ಗಂಡು ಹುಡುಗ್ಹನಂಗ ಬೆಳೆಸಿದ್ರು... 'ಏನು ಮಾಡೋದು. ಅವಳು ಮರಿಯಾಗಿ ಪರಲೋಕಕ್ಕss ಹೋಗಿಬಿಟ್ಲು...' ಎಂದು ಹುಸಿ ದುಃಖ ನಟಿಸಿದ.

'ತ್ಚು, ತ್ಚು, ಅವಳಿಗೇನಾಗಿತ್ತೋ?'

'ಅವಳಿಗೇನಾಗೇದ ಧಾಡಿ. ಆದದ್ದು, ಆ ಮುದುಕರಿಗೆ'

'ನನಗ ತಿಳೀಲಿಲ್ಲ.... ಪರಲೋಕ ಅಂದಿ...'

'ನಾವು ನೋಡದಿದ್ದ, ನೋಡಲಿಕ್ಕೆ ಸಾಧ್ಯ ಇಲ್ಲದ ಲೋಕ ಹೌದೋ ಅಲ್ಲೊ, ಪರಲೋಕಂದ್ರ? ನನಗ, ನಿನಗ, ಅಮೆರಿಕಾ ಪರಲೋಕ, ಏನಂತೀ? ಪರಲೋಕಕ್ಕ ಹೋದವ್ರು ತಿರುಗಿ ಬರಂಗಿಲ್ಲ. ನಾವss ಅಲ್ಲಿಗೆ ಹೋಗಬೇಕು! ಅದೇನೋ ಹಸಿರು ಕಾರ್ಡಂತ - ನಮ್ಮ ರೇಶನ್ ಹಸಿರು ಕಾರ್ಡು ಅಂತ ತಿಳಿದಿದ್ದೆ ಅದು ಸಿಕ್ತಂತ. ಹೀಂಗ ಆಕೆ ತಿರುಗಿ ಬರದ ಲೋಕಕ್ಕ ಹೋದ್ಳಪಾ! ಆಕಿ ತಂದಿ ತಾಯಿ ಆಕಿ ಕಳಿಸೂ ರೊಕ್ಕಾ ಉಪ್ಪಿನಕಾಯಿ ಹಕ್ಕೊಂತ ಜೀವಾ ಹಿಡದಾರ' ಮಲ್ಲನ ಮಾತಿನ ಶೈಲಿ, ತರ್ಕಕ್ಕ ನಗಬೇಕೋ, ವಿಷಯ ತಿಳಿದು ಅಳಬೇಕೋ ತಿಳೀಲಿಲ್ಲ.

ಈ ಹರಟೆಯಲ್ಲೂ ನನ್ನ ತಲೆಯ ಮೇಲೆ ಮಲ್ಲನ ಕತ್ತರಿ ಪ್ರಯೋಗ ನಡೆಯುತ್ತಲೇ ಇತ್ತು. Division of attention ಇಂವಗ ಹ್ಯಾಂಗ ಸಾಧಿಸೇರೆಲ್ಲ ಎಂದ ಆಶ್ಚರ್ಯವಾಯಿತು. ಅವನ ಓದು, ಮಾತಿನ ಕಲೆ ನೋಡಿ, ವ್ಯಾಸ, ವಿದುರ, ವಾಲ್ಮೀಕಿ ಆಯಾ ಕಾಲದ ಮಲ್ಲರ ಸುಧಾರಿತ ಆವೃತ್ತಿಗಳೇ ಏಕಾಗಿರಬಾರದು ಎಂಬ ಸಂಶೋಧನೆಯ ಅಂಶ ಹೊಳೆಯಿತು. ಮಲ್ಲನ ವೃತ್ತಿ, ಜಾತಿ ನನಗ ಯಾವಾಗಲೂ ಮುಖ್ಯ ಎನ್ನಿಸಿಲ್ಲ. ಆತನದು ಶುದ್ಧ ಸ್ನೇಹ!

ನಮ್ಮ ಕಡೆಗೆ, 'ಕುತ್ತಿಗೆಗೇ ಬಂತು' ಅಂತಾರಲ್ಲ, ಅದು ಈಗ ನನ್ನ ಅನುಭವಕ್ಕೆ ಬಂದಿತು. ಕುತ್ತಿಗೆಯನ್ನು ಶುದ್ದ ಮಾಡಲು ತನ್ನ ಕತ್ತಿಗೆ ಅರ್ಧ ಬ್ಲೇಡ್ ಮಲ್ಲ ಸಿಕ್ಕಿಸಿ ಸಿದ್ಧನಾದ; ನನ್ನನ್ನು ಹಿಂದೆ ಬಾಗಿಸಿದ. ನನಗೆ ಒಮ್ಮೆಲೇ ನೆನಪಾಯಿತು. ಹಿಂದೊಮ್ಮೆ ಆತನ ವೃತ್ತಿಯನ್ನು ಹೀಯಾಳಿಸಿದ್ದೆ. ಆತ ಆಗ ಕೆರಳಿ 'ನನ್ನ ನೋಡಿಕೋತೇನ್ಲೆ' ಅಂದಿದ್ದ. ಅದೆಲ್ಲ ನೆನಪಾಗಿ ಗಂಟಲು ಒಣಗಿದರೂ, ಮುಖ ಬೆವೆತಿತು. ನಾನು ಏನು ಮಾಡಿದೆನೋ ಈಗ ನೆನಪಿಲ್ಲ. ಕುತ್ತಿಗೆಯ ಮೇಲೆ ಚಿಕ್ಕ ಗಾಯವಾಗಿ ರಕ್ತ ಬಂದೇಬಿಟ್ಟಿತು.

'ಬೋರೋಲಿನ್ ಕಂಹಾ ಹೈ?' ನಾನು ಕಿರುಚಿದೆ.

'ಗಲೇ ಪೇ ಖೂನ್ ಆಯಾ ಹೈನಾ? ಏತೋ ರೋಜ್‌ಕೀ ಬಾತ್ ಹೈ. ತುಮ್ಹೇ ಚಾಹಿಯೇ 'ಪಟಕ' ಎಂದವನೇ ಪಟಕದ ಬಿಲ್ಲೆಯನ್ನು ಗಾಯಕ್ಕೆ ತಿಕ್ಕಿದ. ಅಂಥ ಉರಿಯುವಿಕೆಯಲ್ಲೂ ಆತನ ಟೀವಿ ಹಿಂದಿಯನ್ನು ಮನಸ್ವೀ ಮೆಚ್ಚಿದೆ ನಾನು.

'ದಡ್ಡ, ಹೊಸ ಬ್ಲೇಡ್ ಅದು. ನಿನಗ ಏಡ್ಸ್ ಬರುವುದಿಲ್ಲ ಗಾಬರಿಯಾಗಬೇಡ' ಎಂದು ಮಲ್ಲ ಸಮಾಧಾನ ಹೇಳಿದ.

ಅಂದು ನಾನು ಹೊಸ ಮನುಷ್ಯನಾಗಿದ್ದೆ ಮಲ್ಲನ ಭೆಟ್ಟಿ, ಗೆಳೆಯರ ಮಾಹಿತಿ, ಕಷ್ಟದ ಮಾತು ಇವೆಲ್ಲವೂ ಅದಕ್ಕೆ ಕಾರಣ. ದುಃಖಿತ ಮಲ್ಲನ ಹರಟೆಯ ಕಲೆ ಹೊಸ ಹುರುಪು ತುಂಬಿತ್ತು. ಆತನ ಪ್ರಗತಿ ಕಂಡು ಸ್ವತಃ ನಾನೇ ಪ್ರಗತಿಗೊಂಡಷ್ಟು ಸಂತೋಷವಾಗಿತ್ತು. ಎದುರಿನ ರೈಲು ಓಡಿದಾಗ ನೀವು ಕುಳಿತ ರೈಲೇ ಓಡಿದಂತೆ ಭಾಸವಾದ ಹಾಗೆ.

ಒಳ್ಳೆಯ ನೆನಪುಗಳು ಬೇಗ ಮಾಸುವುದಿಲ್ಲ. ನೆನಪನ್ನು ಮೆಲುಕು ಹಾಕುತ್ತ, ಮರುದಿನ ರಾತ್ರಿ, ಮುಖದತ್ತ ಕೈ ಹೋಯಿತು, ನೋಡಿ ಬೆಚ್ಚಿದೆ, ಗಲ್ಲವೆಲ್ಲ ಬಿರುಸು! ಅಯ್ಯೋ ಕಷ್ಟ ಚಕ್ರ! ಈ ಉದ್ಗಾರ ಹೊರಟಿತು. ■

''ಶ್ರೀಕಂಠಯ್ಯಾ... ಇದ್ದೀಯೇನಯ್ಯಾ, ಮನೇಲಿ'' ಹೊರಗಿನಿಂದಲೇ ಕರೆದ ಮಿತ್ರನನ್ನು ನಂಜುಂಡಯ್ಯ. ಹೊರಗೆ ಬಂದ ಶ್ರೀಕಂಠಯ್ಯ ಗೆಳೆಯನನ್ನು ಬರಮಾಡಿಕೊಂಡು, ಜೊತೆಯಲ್ಲಿದ್ದ ಹೊಸಬರನ್ನು ''ಯಾರು'' ಎನ್ನುವಂತೆ ಪ್ರಶ್ನಾರ್ಥಕವಾಗಿಯೇ ನೋಡಿದ. ಮಿತ್ರನ ನೋಟ ಗ್ರಹಿಸಿದ ನಂಜುಂಡಯ್ಯ.

''ನೋಡಯ್ಯಾ.... ಇವನು ಈಶ್ವರಯ್ಯಾಂತ.... ನಿನ್ನ ಹಾಗೇ ಇವನೂ ನನ್ನ ಹಳೆಯ ಸ್ನೇಹಿತ... ನಾನೂ, ಇವನೂ ಜೊತೇಲಿ ಕೆಲಸ ಮಾಡಿದ್ವಿ ಬಿದರೆಯಲ್ಲಿ, ಇಪ್ಪತ್ತೈದು ವರ್ಷಗಳ ಹಿಂದೆ.... ಈಗ ಇವನ ಮಗ ಇಲ್ಲೇ ವರ್ಗವಾಗಿ ಬಂದಿದ್ದಾನೆ, ಹಾಗಾಗಿ ಇವನನ್ನು ನೋಡೋದಕ್ಕೆ ಮತ್ತೆ ಅವಕಾಶವಾಯ್ತು''.

ಹೊಡೆದು ಹಾಕಿದ ಸಂಖ್ಯೆ

''ಹೌದೇ? ತುಂಬಾ ಸಂತೋಷ............ ನಂಜುಂಡಯ್ಯ ದೋಸ್ತ್ ಅಂದ್ಮೇಲೆ, ನನಗೂ ಸ್ನೇಹಿತರು'', ಶ್ರೀಕಂಠಯ್ಯ ನುಡಿದ.

ಅದೂ, ಇದೂ ಮಾತನಾಡುತ್ತಾ ಕಾಫಿ ಕುಡಿದಾದ ಮೇಲೆ ''ಶ್ರೀಕಂಠಯ್ಯ, ಆ ದಿನ ನೀನು ಹೇಳಿದೆಯಲ್ಲಾ ಹೊಡೆದು ಹಾಕಿದ ಸಂಖ್ಯೆ ಕಂಡು ಹಿಡಿಯೋ ವಿಧಾನ.... ಇವನಿಗೂ ಹೇಳಿದೆ.... ನನ್ನ ಹಾಗೆ ಕಾಲ ಕಳೆಯೋದಕ್ಕೆ ಒಂದು ಮಾರ್ಗ ಆಯ್ತು ಎಂದು ಅಂತಹ ಸಮಸ್ಯೆ ಬಿಡಿಸ್ತಾ ಇರ್ತಾನೆ... ಆದಿರಲಿ, ಅದನ್ನ ಕಂಡು ಹಿಡಿಯೋ ವಿಧಾನ ಇನ್ನೊಂದು ಇದೇಂತ ಹೇಳಿದ್ಯಲ್ಲಾ ಅವತ್ತು.... ಅದನ್ನೂ ಹೇಳಿ ಬಿಡಯ್ಯಾ ತಿಳಕೊಳ್ಳೋಣ''

''ಅದಕ್ಕೇನಯ್ಯಾ ಹೇಳ್ತೀನಿ.... ಈ ಪೇಪರ್ರೂ, ಪೆನ್ನೂ ತಗೋ''

''ಈಗ ಹೇಳು, ಎಷ್ಟು ಸ್ಥಾನದ ಸಂಖ್ಯೆ ಬರೀಬೇಕು?''

''ಮೂರೋ, ನಾಲ್ಕೋ ಸ್ಥಾನ ಇರೋ ಸಂಖ್ಯೆ ಬರಿ''

''ಹೂಂ, ಬರೆದೆ''

''ಈಗ ನೀನು ಬರೆದಿರೋ ಸಂಖ್ಯೇಲಿ, ಬೇರೆ ಬೇರೆ ಸ್ಥಾನಗಳಲ್ಲಿರೋ ಸಂಖ್ಯೆಗಳ ಸ್ಥಾನಗಳನ್ನು ಬದಲಾಯಿಸಿ ಬರಿ''

''ಯಾವ ಸ್ಥಾನದ್ದು, ಯಾವ ಸ್ಥಾನಕ್ಕೆ ಹೋಗಬೇಕು?''

''ಅದಕ್ಕೇನು ನಿಯಮ ಇಲ್ಲಪ್ಪಾ... ನಿನಗೆ ಹೇಗೆ ಬೇಕೋ ಹಾಗೆ ಸ್ಥಾನಗಳನ್ನು ಬದಲಾಯಿಸಿ ಬರಿ''

''ಹೂಂ... ಆಯ್ತಪ್ಪ ಬರೆದಿದ್ದೀನಿ''

''ಈಗ ನೋಡು. ಮೊದಲು ಬರೆದೆಯಲ್ಲ ಆ ಸಂಖ್ಯೇಲಿ, ಈಗ ಸ್ಥಾನ ಅದಲು ಬದಲು ಮಾಡಿ ಬರೆದೆಯಲ್ಲಾ ಅದನ್ನ ಕಳಿ''

''ಕಳೆದೆ.... ಈಗ ಒಂದು ಸಂದೇಹ''

''ಏನಪ್ಪಾ, ಅದು?''

''ಅಲ್ಲಯ್ಯಾ ಸ್ಥಾನಗಳತ್ತ ಬದಲಾಯಿಸಿ ಬರೆದಾಗ ಮೊದಲು ಬರೆದ ಸಂಖ್ಯೆಗಿಂತ ಇದೇ ದೊಡ್ಡದಾಗಿ ಬಿಟ್ರೇ?''

''ಓಹೋ, ಹಾಗೋ...... ಅದಕ್ಕೇನು, ತಲೆ ಕೆರೆದು ಕೊಳ್ಳೋದು ಬೇಡ... ಯಾವ್ದು ದೊಡ್ಡ ಸಂಖ್ಯೆಯೋ, ಅದರಿಂದ ಚಿಕ್ಕದನ್ನ ಕಳೆದರೆ ಸಾಕು''

■ ಸಂಗ್ರಹ - ರವಿರಾಜು

''ಹಾಗಾದರೆ ಸರಿ''

''ದೊಡ್ಡದರಿಂದ, ಚಿಕ್ಕದು ಕಳೆದ ಮೇಲೆ ಬಂದಿದೆಯಲ್ಲಾ ಆ ಸಂಖ್ಯೆ.. ಅದರಲ್ಲಿ ಯಾವುದಾದರೂ ಒಂದು ಸ್ಥಾನದ ಸಂಖ್ಯೆಯನ್ನು ಹೊಡೆದು ಹಾಕು''

''ಹೊಡೆದು ಹಾಕಿದೆ''

''ಈಗ, ಇರೋ ಬೇರೆ ಬೇರೆ ಸಂಖ್ಯೆಗಳನ್ನು ಹೇಳು''

''ನಾಲ್ಕು, ಸೊನ್ನೆ, ಎಂಟು''

''ಒಟ್ಟು ಮೊತ್ತ ಹನ್ನೆರಡು.... ಹನ್ನೆರಡಕ್ಕೆ ಹತ್ತಿರದ್ದು ಹದಿನೆಂಟು.... ಅಂದರೆ ವ್ಯತ್ಯಾಸ ಆರು. ನೀನು ಹೊಡೆದು ಹಾಕಿದ ಸಂಖ್ಯೆ ಆರು.. ಹೌದೇನಯ್ಯಾ?''

''ಕರೆಕ್ಟ್... ಸರಿಯಾಗೇ ಹೇಳಿದೆ... ಈಗ ನನಗೇನೂ ಅರ್ಥವಾಯ್ತು... ಇದನ್ನ ವಿವರಿಸಿ ಹೇಳು, ಇವನಿಗೂ ಅರ್ಥವಾಗ್ಲಿ.''

''ಆಯ್ತು, ಅದಕ್ಕೇನು.... ನೀನು ಬರೆದ ಸಂಖ್ಯೆ ಹೇಳು''

''8376

''ಈಗ ಇದರಲ್ಲಿಯೇ ಬೇರೆ ಬೇರೆ ಸಂಖ್ಯೆಗಳ ಸ್ಥಾನಗಳನ್ನ ಅದಲು ಬದಲು ಮಾಡಿ ಬರೆದೆ, ಅಲ್ವಾ?''

''ಹೌದು''

''ಆ ಸಂಖ್ಯೆ ಯಾವ್ದು?''

''3768''

''ಈಗ ನೀನು ಬರೆದದ್ದು ಹೀಗೆ.....

8376
3768
4608

.... ಹೌದಾ?''

''ಹೌದು... ಈ ಸಂಖ್ಯೇಲಿ 6 ನ್ನ ಹೊಡೆದು ಹಾಕಿದೆ... ಅಂದ್ರೆ ಹೀಗೇ ಬರೆದೆ 4✗08''

''ಈಗ ಉಳಿದ ಸಂಖ್ಯೆಗಳು... ನಾಲ್ಕು, ಸೊನ್ನೆ, ಎಂಟು..... ಇವುಗಳ ಮೊತ್ತ 4+0+8= 12...... ಒಟ್ಟು ಮೊತ್ತ 12..... ಒಂಬತ್ತರಿಂದ ಭಾಗಿಸೋದಕ್ಕೆ ಆಗುವಂಥಾ ಇದರ ಹತ್ತಿರದ ಸಂಖ್ಯೆ ಅಂದ್ರೆ 18......

18 - 12 = 06....... ಆದ್ದರಿಂದ ಹೊಡೆದು ಹಾಕಿದ ಸಂಖ್ಯೆ.

''ಗೊತ್ತಾಯ್ತೇನಯ್ಯಾ, ಈಶ್ವರಯ್ಯ.....?'' ನಂಜುಂಡಯ್ಯ ಕೇಳಿದ.

''ಗೊತ್ತಾಯ್ತಪ್ಪ.. ಆದರೆ 6ರ ಬದಲು ಸೊನ್ನೆ ಹೊಡೆದು ಹಾಕಿದರೆ?''

''ಅದೂ ಸುಲಭ.... ಈ 4608ರಲ್ಲಿ ಸೊನ್ನೆ ಹೊಡೆದಾಗ.... 4608 ...... ಉಳಿದ ಸಂಖ್ಯೆಗಳು 4, 6, 8....... ಇವುಗಳ ಮೊತ್ತ 4+6+8 = 18 ಅಲ್ವೇ?

ಈ ಸಂಖ್ಯೆ 9 ರಿಂದ ಪೂರ್ಣವಾಗಿ ಭಾಗಿಸಲ್ಪಡುತ್ತೆ... 18/9 = 2... ಹೀಗೇನಾದರೂ ಆದರೆ... ಆಗ, ಹೊಡೆದು ಹಾಕಿದ ಸಂಖ್ಯೆ ಸೊನ್ನೆ ಅಥವಾ 9 ಅಂತಾ ಹೇಳ್ಬೇಕು... ಈಗ ನಾವೇ ನೋಡಿದ್ದೀವಲ್ಲಾ... ಹೊಡೆದು ಹಾಕಿದ್ದು ಸೊನ್ನೆ ಅಂತ''

''ಗೊತ್ತಾಯ್ತು.... ಮತ್ತಷ್ಟು ಸಂಖ್ಯೆಗಳನ್ನು ಹೀಗೇ ಬರೆದು ಸಮಸ್ಯೆ ಬಗೆ ಹರಿಸೋಕೆ ನೋಡೋಣ .... ಕಾಲ ಕಳೆದ ಹಾಗೆ ಆಗುತ್ತೆ.'' ■

ಯಶಸ್ಸಿನ ಸೂತ್ರಗಳು

ಜೀವನದಲ್ಲಿ ಪ್ರತಿ ಮನುಷ್ಯ ಹಲವಾರು ಸನ್ನಿವೇಶ ಎದುರಿಸಬೇಕಾಗುವುದು. ಹಲವು ವಿಧದ ಜನರ ಜೊತೆ ಸಂಪರ್ಕ, ಸಮಸ್ಯೆಗಳ ಸುಳಿಗೆ ಸಿಕ್ಕಾಗ ಕೈ ಚೆಲ್ಲಿ ಕೂಡದೆ ಧೈರ್ಯವಾಗಿ ಪರಿಸ್ಥಿತಿಗೆ ಅನುಗುಣವಾಗಿ ಸಂದರ್ಭ ಅರಿತು ನಡೆದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಈ ಕೆಳಗಿನ ಯಶಸ್ವೀ ಬದುಕಿನ ಸೂತ್ರಗಳನ್ನು ಪಾಲಿಸಲು ಯತ್ನಿಸಿದರೆ ವಿಜಯ ಮಾಲೆ ನಿಮ್ಮ ಕೊರಳಿಗೆ ಬೀಳುವುದರಲ್ಲಿ ಸಂಶಯವಿಲ್ಲ. ಯಶಸ್ಸಿಗೆ ಬರೀ ಮೂವತ್ತು ಮಾತ್ರ ಸೂತ್ರಗಳೆಂದು ಭಾವಿಸದೆ, ಯಶಸ್ವಿ ಸೂತ್ರಗಳಲ್ಲಿ ಕೆಲವು ಇವೆಂದು ಸ್ವೀಕರಿಸಬಹುದು.

- ನಿಮ್ಮ ಸಮಸ್ಯೆ ಸಂತೋಷಗಳನ್ನು ಇನ್ನಿತರರ ಜೊತೆ ಹಂಚಿಕೊಳ್ಳಿರಿ.
- ನಿಮ್ಮ ಕೆಲಸಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ನಿತ್ಯವೂ ಯತ್ನಿಸಿರಿ. ಪ್ರಯತ್ನಿಸಿದರೆ ಫಲ ಪ್ರಾಪ್ತಿಯಾಗುವುದು ಎಂಬುದು ಮರೆಯದಿರಿ.
- ಬಹು ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕೆನ್ನುವ ಉತ್ಸಾಹ ಪ್ರಗತಿಯ ಪ್ರಥಮ ಮೆಟ್ಟಿಲು.
- ವಿವೇಕ, ಸೃಜನಾತ್ಮಕತೆ, ಧೈರ್ಯವು ಆತ್ಮ ವಿಶ್ವಾಸದಿಂದ, ದೃಢ ಮನೋಭಾವದಿಂದ ಬರುತ್ತವೆ.
- ನಿಮ್ಮ ವಾಗ್ದಾನ, ಮಾತು ತಪ್ಪದೇ ಉಳಿಸಿಕೊಳ್ಳಿರಿ.
- ಅಪಜಯಕ್ಕೆ ಹೊರಗಿನವರಲ್ಲಿ ಕಾರಣ ಹುಡುಕದೆ, ನಿಮ್ಮಲ್ಲಿಯೇ ಹುಡುಕಲು ಯತ್ನಿಸಿರಿ.
- ಇನ್ನಿತರರ ಅಭಿಪ್ರಾಯಕ್ಕೆ ಕಿವಿಗೊಟ್ಟು ಕೇಳುವ ಅಭ್ಯಾಸ ರೂಢಿಸಿಕೊಂಡರೆ ಸಾಮೂಹಿಕ ವಿವೇಕ, ಸಹಜವಾಗಿ ಬರುವುದು.
- ಯಾವುದೇ ವಿಷಯವನ್ನು ಸುಲಭವೆಂದು ಭಾವಿಸಿ ನಿರ್ಲಕ್ಷ್ಯ ಮನೋಭಾವ ರೂಪಿಸಿಕೊಳ್ಳದಿರಿ.
- ನೀವು ಭೆಟ್ಟಿಯಾಗುವ ಗ್ರಾಹಕ, ವಹಿವಾಟುದಾರರ ಜೊತೆಗೆ ಯಾವುದೇ ಮುಚ್ಚುಮರೆಯಿಲ್ಲದೇ ನೀತಿಯಿಂದ ವ್ಯವಹರಿಸಿರಿ.
- ನೀವು ಭೆಟ್ಟಿಯಾಗುವ ವ್ಯಕ್ತಿಗಳೊಂದಿಗೆ ಸೌಜನ್ಯದಿಂದ ಮಾತನಾಡಿಸುವ ಕಲೆ ರೂಢಿಸಿಕೊಳ್ಳಿರಿ. ಸೇವೆಯೇ ಉನ್ನತ ಪದವಿ ತಲುಪಲು ಏಕೈಕ ಮಾರ್ಗ.
- ಮೊದಲ ಪ್ರಯತ್ನ ವಿಫಲವಾದರೆ, ಪ್ರಯತ್ನ ಮಾಡುವುದು ಬಿಡಬಾರದು. ಮರಳಿ ಯತ್ನವ ಮಾಡುವುದರಿಂದ ಜಯಮಾಲೆ ನಿಮ್ಮ ಕೊರಳಿಗೆ ಬೀಳುವುದು.
- ಪ್ರತಿಯೊಬ್ಬ ಮನುಷ್ಯನೂ ಪ್ರತಿಭಾವಂತನೇ. ಯಾರನ್ನೂ ಕೆಲಸಕ್ಕೆ ಬಾರದ ವ್ಯಕ್ತಿಗಳೆಂಬ ನಿರ್ಧಾರ ಮೊದಲೇ ಮಾಡದೆ, ಅವರಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರತರಲು ಯತ್ನಿಸಿರಿ.
- ಸೃಜನಾತ್ಮಕವಾದ, ಸಮಯೋಚಿತ ಧನಾತ್ಮಕ ಆಲೋಚನೆಗಳು, ಇತರರ ಮೇಲೆ ಪ್ರಭಾವ ಬೀರಬಲ್ಲವು.
- ನಿಮ್ಮ ಕಛೇರಿ, ಸಂಸ್ಥೆ, ವಹಿವಾಟು ಕೇಂದ್ರದ ಸಿಬ್ಬಂದಿಯ ಕ್ರಿಯಾಶೀಲ ಮನೋಭಾವಕ್ಕೆ ಮನಃಪೂರ್ವಕವಾಗಿ ಮೆಚ್ಚುವ, ಪ್ರೋತ್ಸಾಹಿಸುವ ಗುಣ ರೂಢಿಸಿಕೊಳ್ಳಿರಿ.
- ಶಾಂತ ಮನೋಭಾವ, ಸೌಮ್ಯ ನುಡಿಗಳಿಂದ ಇತರರು ನಿಮ್ಮನ್ನ ಮೆಚ್ಚಿ ಅಭಿಮಾನಿಸುವಂತಾಗುವುದು.
- ನಿಮ್ಮ ಚಟುವಟಿಕೆಗಳು ಹವ್ಯಾಸಗಳು ಇತರರಲ್ಲಿ ಪ್ರಭಾವ ಬೀರಬಲ್ಲವು ಎಂಬುದನ್ನು ಅರಿಯಿರಿ.
- ಕೆಲಸದಲ್ಲಿನ ತನ್ಮಯತೆ, ಉತ್ಸಾಹ ನಿಮ್ಮನ್ನು ಬೇರೆಯವರು ಗುರುತಿಸುವಂತೆ ಮಾಡುವುದು.
- ಬೇರೆಯವರ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಂಡಾಗ, ಬೇರೆ ಪರಿಣಾಮಗಳನ್ನು ಸತ್ಪರಿಣಾಮಗಳನ್ನು ಕಾಣಬಹುದು.
- ಸದಾ ಸದ್ವಿವೇಕದಿಂದ ವರ್ತಿಸುವುದು ಹಣಕಾಸಿನ ವಿಷಯದಲ್ಲಿ ಜಾಗ್ರತೆಯಲ್ಲಿರುವುದು.
- ತಮ್ಮ ತಮ್ಮ ಕೆಲಸಗಳನ್ನು ತಾವು ಮಾಡದೆ, ಇನ್ನಿತರರ ಮೇಲೆ ಆಧಾರ ಪಡುವವರು, ಸ್ವಸಾಮರ್ಥ್ಯ ರೂಢಿಸಿಕೊಳ್ಳದಿರುವವರು ಜೀವನದಲ್ಲಿ ಯಶಸ್ಸು ಕಾಣರು ಎಂಬುದನ್ನು ಮನಗಾಣಬೇಕು.
- ನೀವು ಕೆಲಸ ಮಾಡುತ್ತಿರುವ ಸಂಸ್ಥೆಯ ಹಿತಾಸಕ್ತಿ ಕಾಪಾಡಲು ಸದಾ ಯತ್ನಿಸಬೇಕು.
- ಅನಾವಶ್ಯಕ ವಾದ ಮಾಡದೆ, ಪರಿಸ್ಥಿತಿ ಅರಿತು ಕಾರ್ಯ ಮಾಡಲು ಮುಂದಾಗಬೇಕು.
- ಮಹಿಳೆಯರನ್ನು ಗೌರವಿಸುವ ಸತ್ಸಂಪ್ರದಾಯ ಪಾಲಿಸದಿದ್ದರೆ ಮನುಷ್ಯ ಅಪೂರ್ಣ ವ್ಯಕ್ತಿತ್ವ ಮೈಗೂಡಿಸಿಕೊಂಡಂತೆ.
- ಧೈರ್ಯದಿಂದ ನಿರ್ಧರಿಸಿದ ಕಾರ್ಯಗಳನ್ನು ಜಾರಿಗೆ ತರಲು ಯತ್ನಿಸಬೇಕು.
- ನಿಮ್ಮ ಸಾಮರ್ಥ್ಯ ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಕೆಲಸ ಮಾಡಿರಿ. ಫಲಾಪೇಕ್ಷೆ ಇಲ್ಲದೆ ಮಾಡಿದ ಕಾರ್ಯ ಉತ್ತಮ ಫಲ ನೀಡುವುದು.
- ಒಳ್ಳೆಯ ಕೆಲಸದಿಂದ ಆಗುವ ಅಭಿವೃದ್ಧಿಯ ರಹಸ್ಯ ಅನುಭವದ ಮೂಲಕವೇ ಪಡೆಯಬೇಕು.
- ಪ್ರತಿ ಉದ್ಯೋಗಿಯ ಉತ್ಸಾಹದ ಮೇಲೆ ಸಂಸ್ಥೆಯ ಉತ್ಸಾಹ ಆಧಾರವಾಗಿದೆ ಎಂಬುದು ಅರಿಯಬೇಕು.
- ಇತರರು ಯಾವ ರೀತಿ ಇರುತ್ತಾರೆಯೋ ಅವರನ್ನು ಹಾಗೆಯೇ ಸ್ವೀಕರಿಸಿರಿ.
- ಮನುಷ್ಯನ ಸಾಮರ್ಥ್ಯದ ಅಭಿವೃದ್ಧಿಗೆ ಎಲ್ಲೆ ಯಾವುದೂ ಇಲ್ಲವೆಂದು ಅರಿಯಬೇಕು.
- ಜೀವನದಲ್ಲಿ ಶಿಸ್ತು, ಸಂಯಮ, ಕರ್ತವ್ಯ ನಿಷ್ಠೆಯಿಂದ ಮಾತ್ರ ಮನುಷ್ಯ ಉನ್ನತ ಮಟ್ಟ ತಲುಪಬಹುದು.

■ ವಾಗೀಶ ಬಳ್ಳಾರಿ

ಕಿವಿ ಮಾತು

■ ಎರಡು ಟೀ ಚಮಚ ನೆಲ್ಲಿಕಾಯಿ ರಸದೊಂದಿಗೆ ಒಂದು ಟೀ ಚಮಚ ಅಪ್ಪಟ ಅರಿಶಿನದ ಪುಡಿ ಸೇರಿಸಿ, ದಿನಕ್ಕೆ ಮೂರು ಸಾರಿಯಂತೆ ಒಂದು ವಾರಕಾಲ ಸೇವಿಸುವುದರಿಂದ ಕಾಮಾಲೆ ಸುಧಾರಣೆ ಕಂಡು ಬರುವುದು.


■ ಪ್ರತಿದಿನ ಬೆಳಿಗ್ಗೆ ಎರಡು ಚಮಚ ಬೇವಿನ ಸೊಪ್ಪಿನ ರಸವನ್ನು ಎರಡು ಚಮಚ ಜೇನಿನೊಂದಿಗೆ ಬೆರಸಿ, ಕಾಮಾಲೆ ರೋಗಿಗೆ ಕುಡಿಸುತ್ತಿದ್ದರೆ, ಸುಧಾರಣೆ ಕಂಡು ಬರುವುದು. (ರಾಗಿಯ ಗಂಜಿಯೊಡನೆ ಮಜ್ಜಿಗೆ ಸೇವಿಸಿ ಊಟ ಮಾಡಬೇಕು)

■ ಮಜ್ಜಿಗೆಯಲ್ಲಿ ನುಗ್ಗೆಸೊಪ್ಪನ್ನು ನೆನೆಸಿಟ್ಟು ಕುಡಿದರೆ ಕಾಮಾಲೆ ವಾಸಿಯಾಗುತ್ತದೆ.

■ ಪರಂಗಿಹಣ್ಣನ್ನು ದಿನಕ್ಕೆ ಮೂರಾವರ್ತಿಯಂತೆ ಒಂದು ವಾರ ತಿಂದರೆ ಕಾಮಾಲೆ ಗುಣವಾಗುತ್ತದೆ.

■ ಕಾಮಾಲೆ ರೋಗ ಪೀಡಿತರು ಸೌತೆಕಾಯಿಯನ್ನು ಹಸಿಯಾಗಿ ತಿನ್ನುತ್ತಾ ಬಂದರೆ ಆ ರೋಗ ತಗ್ಗುತ್ತದೆ.

■ ಕರಿಮೆಣಸು ಮತ್ತು ಜೇನು ತುಪ್ಪವನ್ನು ಮಾವಿನಕಾಯಿಗೆ ಸೇರಿಸಿಕೊಂಡು ತಿನ್ನುತ್ತಿದ್ದರೆ ಪಿತ್ತಕೋಶವು ಜಾಗೃತವಾಗಿ ಪಿತ್ತರಸವು ಅಧಿಕವಾಗಿ ಸ್ರವಿಸುತ್ತದೆ



ವ್ಯಕ್ತಿತ್ವ ವಿಕಾಸ - 23

ಸ್ವಭಾವಗಳ ಸಿಂಹಾವಲೋಕನ

■ ಕೃಶಾಂಗ

ಪ್ರಾಣಿಗಳು, ವೃಕ್ಷಗಳು, ಅವುಗಳಿಗೆ ನಾವು ತೋರಿದ ಪ್ರೀತಿಗೆ ತಕ್ಕ ಪ್ರತಿಫಲ ನೀಡುತ್ತವೆ. ಆದರೆ ಇತರರಿಗೆ ನಾವು ಮಾಡಿದ ಸೇವೆಗೆ ತಕ್ಕ ಪ್ರತಿಫಲ ಸಮಾಜ ಬಾಂಧವರಿಂದ ದೊರೆತೇ ತೀರುವುದೆಂಬ ಭರವಸೆಯಿಲ್ಲ. ನಮ್ಮ ಬಂಧು-ಮಿತ್ರರಿಗೆ ನಾನು ಏನಾಗಿದ್ದೇನೆಂಬುದು ಮಾತ್ರ ಮಹತ್ವದ್ದಲ್ಲ; ನಾನೇನಾಗಿದ್ದೆನೆಂಬುದರತ್ತಲು ಅವರ ಗಮನ ಹರಿಯುತ್ತದೆ. ನಾನೇನು ಮಾಡಲು ಶಕ್ತನಾಗಿದ್ದೇನೆಂಬುದರತ್ತ ಮಾತ್ರವಲ್ಲ; ನಾನೇನು ಮಾಡಿದ್ದೇನೆಂಬುದರತ್ತಲೂ ಸಹ ಅವರ ಕುತೂಹಲ ಓಡುತ್ತದೆ. ಇತರರು, ನನ್ನ ನೈತಿಕ ಸ್ವಭಾವದ ತಮ್ಮ ತಿಳಿವಳಿಕೆಯ ಆಧಾರದ ಮೇಲೆ ನನ್ನನ್ನು ಅಳೆಯುತ್ತಾರೆ. ವ್ಯಕ್ತಿಯೊಬ್ಬನ ವರ್ತಮಾನ ಭೂತಗಳ ಬಗೆಗಿನ ಅರಿವು, ಆತನ ನೈತಿಕ ಸ್ವಭಾವದ ಸಿಂಹಾವಲೋಕನವೇ ಆತನ ಖ್ಯಾತಿ.

ಇತರರ ತಿಳಿವಳಿಕೆಯಂತೆಯೇ ನನ್ನ ನೈಜ ನೈತಿಕ ಸ್ವಭಾವ ಇರಲೇಬೇಕಿಲ್ಲ. ನಾವು 'ಮೇಧಾವಿ' ಎಂದು ಕರೆಯುವ ಒಬ್ಬ ವ್ಯಕ್ತಿ ನಾವು ತಿಳಿದಷ್ಟು ಮೇಧಾವಿ ಅಲ್ಲದಿರಬಹುದು. ಆದರೆ, ಸಾಮಾಜಿಕ ಪರಿಸರ, ಹೆಡ್ಡನನ್ನು 'ಮೇಧಾವಿ' ಎಂದು ತಪ್ಪು ತಿಳಿದ ಉದಾಹರಣೆಗಳು ಇಲ್ಲ. ನೌಕರಿ, ವ್ಯವಹಾರ, ಬುದ್ಧಿಮತ್ತೆಗಳ ವಿಷಯದಲ್ಲಿ ಯಾವನೊಬ್ಬ ಗಳಿಸಿದ ಖ್ಯಾತಿ ಆತನ ಯಶಸ್ಸಿನ ವಿವಿಧ ಏರು ಹಂತಗಳಿಗೆ ಉತ್ತರವಾಗುತ್ತದೆ. ಖ್ಯಾತಿ ಯಾರ ಜನ್ಮಸಿದ್ಧ ಹಕ್ಕೂ ಅಲ್ಲ; ಅದನ್ನು ಶ್ರಮ ವಹಿಸಿ ಗಳಿಸಬೇಕಾಗುತ್ತದೆ.

ಬೇರೆಯವರು ನಮ್ಮ ಬಗೆಗೆ ಪ್ರಚುರ ಪಡಿಸಿದ ಒಳ್ಳೆಯ ಅಥವಾ ಕೆಟ್ಟ ಅಭಿಪ್ರಾಯಗಳು ನಮ್ಮ ಬಗೆಗೆ ನಾವು ಅನಾವಶ್ಯಕ ಹೆಮ್ಮೆ ಪಟ್ಟುಕೊಳ್ಳುವಂತೆ ಅಥವಾ ಕೀಳರಿಮೆ ಬೆಳೆಸಿಕೊಳ್ಳುವಂತೆ ಮಾಡಬಹುದು. ನಮ್ಮನ್ನು ನಾವು ಚೆನ್ನಾಗಿ ಅರಿತುಕೊಳ್ಳುವುದನ್ನು ಇದು ಕಠಿಣಗೊಳಿಸಬಹುದು. ಯಾವಾಗಲೋ 'ಅಳುಬುರುಕಿ' ಎನಿಸಿಕೊಂಡವಳು, ಹೊರ ಜಗತ್ತಿಗೆ ಅತ್ಯಂತ ಶೌರ್ಯವಂತಿಕೆಯನ್ನು ಸಿದ್ಧಪಡಿಸಿದ ನಂತರವೂ ಸಹ, ತಾನು 'ಅಳುಬುರುಕಿ'ಯೇ ಎಂದು ಬಳಲುತ್ತಿರಬಹುದು. ಸರ್ವೋತ್ಕೃಷ್ಟತೆಯ ಖ್ಯಾತಿಯನ್ನು ಹೇಗೋ ಪಡೆದವ ಸರಾಸರಿ ಬುದ್ಧಿವಂತರೊಡನೆ ಬೆರೆಯಲು ಇಷ್ಟಪಡದಿರಬಹುದು; ಏಕಾಂಗಿಯಾಗಬಯಸಬಹುದು; ಎಲ್ಲರೆದುರೂ ತನ್ನ ಹಳೆಯ ಕೊಳಲನ್ನೇ ಊದುತ್ತಿರಬಹುದು.

ನಿಮ್ಮ ಖ್ಯಾತಿಯ ಬಗೆಗೆ ಇತರರಿಗೆ ಪೂರ್ಣ ಅರಿವಿರಲಿಕ್ಕಿಲ್ಲ. ಆದರೆ ನಿಮಗೆ ಅದು ತಿಳಿದಿರುತ್ತದೆ. ನಿಮ್ಮದು ಸುಖ್ಯಾತಿಯಾಗಿದ್ದರೆ ನೀವು ಆತ್ಮವಿಶ್ವಾಸಿಗಳಾಗಿದ್ದು ಇತರರ ಕಣ್ಣಲ್ಲಿ ಕಣ್ಣಿಟ್ಟು ನೋಡಬಲ್ಲಿರಿ. ನೀವು ಆಶಾವಾದಿಗಳೂ, ಮುನ್ನುಗ್ಗುವ ಪ್ರವೃತ್ತಿಯವರೂ, ಸ್ವ-ನಿಯಂತ್ರಣ ಹೊಂದಿದವರೂ ಆಗಿರುವಿರಿ. ಆಗ ನೀವು ಸ್ನೇಹಪರರೂ, ಸುರಕ್ಷಿತ ಭಾವನೆಯನ್ನು ಅನುಭವಿಸುವವರೂ ಕೂಡ. ಆದರೆ ನಿಮ್ಮದು ಕುಖ್ಯಾತಿ ಎಂಬುದು ನಿಮಗೇ ತಿಳಿದಿದ್ದರೆ ನೀವು ಜನರಿಂದ ದೂರವಿರ ಬಯಸುವವರೂ, ಅಧೈರ್ಯವಂತರೂ, ಅನಾಕರ್ಷಕ ನಡೆನುಡಿಯವರೂ ಆಗಿರುವಿರಿ. ಆಗ ನೀವು ನಿರಾಶಾವಾದಿಗಳು ಬೇಗನೆ ಕೋಪಗೊಳ್ಳುವವರು. ಜನರನ್ನು ಗುಂಪುಗಳಲ್ಲಿ ಸಂಧಿಸಲು ನೀವು ಇಚ್ಛೆಪಡದಿರಬಹುದು. ಆದರೆ ಕೆಲವರ ಬಗೆಗೆ ಅತಿ ಆತ್ಮೀಯತೆಯನ್ನು ತೋರ್ಪಡಿಸಬಹುದು. ನಿಮ್ಮ ಕುಖ್ಯಾತಿಗೆ ಕಾರಣವಾದ ಸಂದರ್ಭಗಳಂತವುಗಳ ಬಗೆಗೆ ಚರ್ಚೆ ನಡೆದಾಗ ಅಲಕ್ಷ್ಯ, ತಾತ್ಸಾರ, ಕಡುಕೋಪ ಅಥವಾ ತೀಕ್ಷ್ಣ ವಿಮರ್ಶೆಗಳನ್ನು ಹೊರಹಾಕಬಹುದು.

'ನೀತಿಯನ್ನು ತಿಳಿದಿರುವುದಷ್ಟೇ ಅಲ್ಲ, ಅದನ್ನು ಆಚರಣೆಯಲ್ಲಿ ತರಬೇಕು' ಎಂಬ ನೆಹರು ಉಪದೇಶ ಇಲ್ಲಿ ಪ್ರಸ್ತುತವಾಗುತ್ತದೆ. ನಮ್ಮ ಸುತ್ತಲಿನ ಸಮಾಜ ನಮ್ಮ ಆಚರಣೆಯನ್ನು ಗಮನಿಸುತ್ತಿರುತ್ತದೆ. ನಾವು ಕುಖ್ಯಾತರು ಎಂದು ತಿಳಿದೊಡನೆ ನಮ್ಮ ಬಂಧು-ಮಿತ್ರರು ಜಾಗರೂಕರಾಗಿ ನಮ್ಮಿಂದ ದೂರವಾಗುತ್ತಾರೆ. ಏಕೆಂದರೆ ಅವರಿಗೆ, ನಿನ್ನ ಮಿತ್ರರು ಯಾರು ಹೇಳು; ನೀನು ಎಂಥ ವ್ಯಕ್ತಿಯೆಂಬುದನ್ನು ನಾನೇ ಹೇಳುವೆ ಎಂಬುದರ ಅರ್ಥ ಚೆನ್ನಾಗಿ ಆಗಿರುತ್ತದೆ. ನಿಮ್ಮ ದುರ್ಗುಣದ ಫಲಾನುಭವಿಗಳು ತಾವು ಆಗಬಾರದೆಂಬುದು ಅವರ ಇಚ್ಛೆಯಾಗಿರುತ್ತದೆ.

ಪ್ರಚಲಿತ ಸಾಮಾಜಿಕ ಮೌಲ್ಯಗಳಿಗೆ ನೀವು ಎಷ್ಟು ನಿಕಟವಾಗಿರುವಿರಿ ಎಂಬುದು ನಿಮ್ಮ ಖ್ಯಾತಿಯ ವರ್ಗೀಕರಣಕ್ಕೆ ಆಧಾರ. ನಿಮ್ಮ ಗೆಳೆಯರು ಶಾಲೆಯಲ್ಲಿ ಪಾಠಕ್ಕಿಂತ ಆಟಕ್ಕೆ ಹೆಚ್ಚು ಮಹತ್ವ ನೀಡುತ್ತಿದ್ದರೆ, ಯಾವಾಗಲೂ ಅಭ್ಯಾಸದಲ್ಲಿ ತೊಡಗಿರುವ ಕೀರ್ತಿನಾಥ 'ಪುಸ್ತಕದ ಹುಳು' ಎಂಬ ಕೀಟಲೆಗೆ ಆಹಾರವಾಗುತ್ತಾನೆ; ಪಠ್ಯೇತರ ಚಟುವಟಿಕೆಗಳಲ್ಲಿ ಮುಂದಿರುವ ಆರತಿ ಆದರ್ಶ ವಿದ್ಯಾರ್ಥಿನಿಯಾಗಿ ಕಂಗೊಳಿಸಬಹುದು. ಆದರೆ

ನಮ್ಮ ಸುತ್ತಲಿನ ಸಮಾಜ ನಮ್ಮ ಆಚರಣೆಯನ್ನು ಗಮನಿಸುತ್ತಿರುತ್ತದೆ. ನಾವು ಕುಖ್ಯಾತರು ಎಂದು ತಿಳಿದೊಡನೆ ನಮ್ಮ ಬಂಧು- ಮಿತ್ರರು ಜಾಗರೂಕರಾಗಿ ನಮ್ಮಿಂದ ದೂರವಾಗುತ್ತಾರೆ.

ಈ ಸಾಮಾಜಿಕ ಮೌಲ್ಯಗಳು ಗುಂಪಿನಿಂದ ಗುಂಪಿಗೆ ಬದಲಾಗುವಂಥವು. ಆದುದರಿಂದ ಗಂಭೀರ ಶಿಕ್ಷಕ ಸಮುದಾಯದಲ್ಲಿ ಕೀರ್ತಿನಾಥ, ಆರತಿಯರ ಖ್ಯಾತಿ ತಿರುವು ಮುರುವಾದಾವು! ಹಾಗಾದರೆ, ಖ್ಯಾತಿ ನಮ್ಮ ಇರುವು, ಚರ್ಯೆ, ವರ್ತನೆಗಳನ್ನು ಸಮಾಜ ಯಾವ ರೀತಿ ಅರ್ಥೈಸುತ್ತದೆ ಎಂಬುದನ್ನು ಅವಲಂಬಿಸಿದೆ ಎಂದು ಹೇಳಬಹುದು. ನೀವು ಭಾಗಿಗಳಾಗಿರುವ ಸಾಮಾಜಿಕ ಗುಂಪು ಹಣಕ್ಕೆ ಮಹತ್ವ ನೀಡುತ್ತದೆ ಎಂದುಕೊಳ್ಳಿ. ಆಗ, ನಿಮ್ಮ ದೃಷ್ಟಿಯಲ್ಲಿ, ಅನಕ್ಷರಸ್ಥ ಲಕ್ಷಾಧಿಪತಿಯ ಖ್ಯಾತಿ ಬಡವನಾದ ಶ್ರೇಷ್ಠ ಪಂಡಿತನದಕ್ಕಿಂತ ಉತ್ತಮ ಮಟ್ಟದ್ದಾಗಿರುವುದು ಸಹಜ. ಬೇರೆಯವರ ಖ್ಯಾತಿಯ ಪರಿಗಣನೆ ಅವರು ಇದ್ದ ಸ್ಥಿತಿಯನ್ನಲ್ಲ, ಆದರೆ ಪರಿಗಣಿಸುವ ವ್ಯಕ್ತಿಯ ಮತ್ತು ಆತ ಪ್ರತಿನಿಧಿಸುವ ಸಾಮಾಜಿಕ ಗುಂಪಿನ ಬೇಕು ಬೇಡಗಳ ಬೆಳಕಿನಲ್ಲಿ ನಡೆಯುತ್ತದೆ.

ಒಬ್ಬ ವ್ಯಕ್ತಿಯ ಬಗೆಗೆ ಸಾಮಾಜಿಕ ನಿರ್ಣಯ ರೂಪುಗೊಳ್ಳುವ ಅಂದರೆ, ಆತನ ಖ್ಯಾತಿ ಬೆಳೆಯುವ ಇಲ್ಲವೆ ಅಳಿಯುವ ಬಗೆ ಹೇಗೆ? ಮೊದಲನೆಯ ಹಂತ 'ಪ್ರಥಮ ದರ್ಶನ ಪ್ರಭಾವ' ಇಲ್ಲಿ ವ್ಯಕ್ತಿಯ ಮುಖಚರ್ಯೆ, ವರ್ತನೆ, ಸ್ನೇಹಿತ-ಸ್ನೇಹಿತೆಯರು, ಸಾಮಾಜಿಕ - ಆರ್ಥಿಕ ಸ್ಥಾನಮಾನ, ಪೋಷಾಕು, ಹಾವಭಾವ ಇತ್ಯಾದಿ ಗಣಿಸಲ್ಪಡುತ್ತವೆ. ಈ ಪ್ರಭಾವ ಆತನಿಗೆ ಅನುಕೂಲವಾಗಿದ್ದರೆ ಹೆಚ್ಚಿನ ವಿವರಗಳತ್ತ ಇತರರ ಲಕ್ಷ್ಯ ಹೊರಳಬಹುದು. ಇಲ್ಲದಿದ್ದರೆ, ಮೊದಲ ತುತ್ತಿನಲ್ಲಿ ಬಂದ ಹರಳಿನಂತೆ ಮುಂದಿನ ಹಂತದ ಬೆಳವಣಿಗೆ ಸ್ಥಗಿತಗೊಳ್ಳಬಹುದು.

ಎರಡನೆಯ ಹಂತದಲ್ಲಿ ಮುಖಚರ್ಯೆಯ ಮುಂದುವರಿದ ಪರೀಕ್ಷೆ ನಡೆಯುತ್ತದೆ. ಇಲ್ಲಿಯೂ ಖ್ಯಾತಿ ಬೆಳೆಯಬಹುದು ಅಥವಾ ಹಿಂದಿನ ಮಟ್ಟಕ್ಕೆ ನಿಂತು ಹೋಗಬಹುದು.

ನಂತರದ ಸರದಿ ವರ್ತನೆಯದು. ಚಿವುಟಿದರೂ ದುಃಖಿಸದ ಮಗು ಭಲೇ ಎನ್ನಿಸಿಕೊಳ್ಳಬಹುದು; ಹೊಸ ಸಹಪಾಠಿಗಳಿಗೆ ಮೊದಲ ದಿನವೇ ಅನಾಥ ಪ್ರಜ್ಞೆ ಕಾಡದಂತೆ ವರ್ತಿಸುವ ವಿದ್ಯಾರ್ಥಿಗಳು ಸ್ನೇಹಶೀಲರೆಂಬ ಖ್ಯಾತಿಗೆ ಪಾತ್ರರಾದಾರು.

ಕೆಲವು ಸಲ ವ್ಯಕ್ತಿಯೊಬ್ಬನ ಖ್ಯಾತಿ, ಆತ ಸೇರಿದ ಜನಾಂಗದ ಹೆಸರಾಂತ ವ್ಯಕ್ತಿಗಳ ಖ್ಯಾತಿ-ಅಪಖ್ಯಾತಿಗಳ ಬೆಳಕಿನಲ್ಲಿ ನಿರ್ಣಯಿಸಲ್ಪಡಬಹುದು. ಇದು ದುರ್ದೈವದ್ದಾದರೂ ನಿಜವಾದದ್ದೆಂಬುದು ಅನೇಕ ಸಲ ನಮ್ಮ ಗಮನಕ್ಕೆ ಬರುತ್ತದೆ.

ವ್ಯಕ್ತಿಯ ಖ್ಯಾತಿ ಸಾಮಾಜಿಕ ಸಂಸರ್ಗದಿಂದ ಹರಡುತ್ತದೆ. ವಿನಯನ ಬಗೆಗಿನ ಅಭಿಪ್ರಾಯವು ಕಾಲಾಂತರದಲ್ಲಿ ವಿಮಲೆ, ಊರ್ವಶಿಯರನ್ನು ತಲುಪುತ್ತದೆ. ಈ ತರುಣಿಯರೀರ್ವರೂ ಮೊದಲ ಸಲ ವಿನಯನನ್ನು ಭೇಟ್ಟಿ ಮಾಡಿದಾಗ ರೂಪಿಸಿಕೊಳ್ಳುವ ಅಭಿಪ್ರಾಯ ರಾಮನ ಅಭಿಪ್ರಾಯದ ಪ್ರಭಾವದಿಂದ ಪೂರ್ಣವಾಗಿ ಸ್ವತಂತ್ರವಾಗಿರಲಾರದು. ಕೆಲವರ ಬಗೆಗೆ ನಾವು ಇರಿಸಿರುವ ತಮಾಷೆಯ ಅಡ್ಡ ಹೆಸರುಗಳು- 'ಜಂಭದ ಕೋಳಿ', 'ಗಾನ ಗಂಧರ್ವ' ಇತ್ಯಾದಿ ಪರೀಕ್ಷೆಗೆ ಒಳಪಡದೇ ಚಲಾವಣೆಯಲ್ಲಿ ಉಳಿದುಬಿಡಬಹುದು. ಅದರಂತೆ ಒಂದೇ ಒಂದು ಲೋಪ ವ್ಯಕ್ತಿಯ ಉಳಿದ ಎಲ್ಲ ಸದ್ಗುಣಗಳನ್ನು ನುಂಗಿಬಿಡಬಹುದು.

ನೀವು ಸುಖ್ಯಾತಿಗೆ ಅಥವಾ ಕಾರಣಾಂತರದಿಂದ ಕುಖ್ಯಾತಿಗೆ ಒಳಗಾಗಿರುವಿರೆಂದು ಭಾವಿಸಿ, ಪರರ ಮೇಲೆ ಆದ ಇದರ ಪರಿಣಾಮವನ್ನು ಸಾಮಾನ್ಯವಾಗಿ ಬದಲಿಸಲಾಗದು. ಇಂಥ ವ್ಯಕ್ತಿ ಸಂಪೂರ್ಣವಾಗಿ ಬದಲಾಗಿ ಹೊಸ ಮುಖಗಳ ಸಹವಾಸದಲ್ಲಿದ್ದರೂ ಸಹ ಯಾವುದೋ ದಿಕ್ಕಿನಿಂದ ಬರುವ ಒಂದು ಅಭಿಪ್ರಾಯ ಹಿಂದಿನ ಖ್ಯಾತಿಯನ್ನು ಜಾರಿಗೊಳಿಸಬಹುದು. 'ಒಮ್ಮೆ ರಾಜಕೀಯ ನೇತಾರ, ಕೊನೆಯವರೆಗೂ ರಾಜಕೀಯ ನೇತಾರ' ಆಗಿರಲು ಬಹುಶಃ ಇದೇ ಕಾರಣ. ಬಹಳಷ್ಟು ಜನ ಹೊಸ ಮನುಷ್ಯರಾಗಲು ದೂರದ ಸ್ಥಳಕ್ಕೆ ಶಾಶ್ವತ ಸ್ಥಳಾಂತರಕ್ಕೆ ಶರಣು ಹೋಗಬೇಕಾದೀತು!

ಇತರರ ನೈತಿಕ ಸ್ವಭಾವವನ್ನು ಒರೆಗೆ ಹಚ್ಚುವಾಗ ಕೆಲವು ಸಲ ನಾವು ತಪ್ಪು ಮಾಡುತ್ತೇವೆ. ಸಾಧನಾ ಒಬ್ಬ ಯಶಸ್ವೀ ಉದ್ದಿಮೆ ನಿರ್ವಾಹಕಿ. ಹಾಗಾದರೆ ಎಲ್ಲ ರಂಗಗಳಲ್ಲೂ ಯಶಸ್ವೀ ಎಂದು ತೀರ್ಮಾನಿಸುವುದು ಸರಿಯಲ್ಲ. ಇಂಥ ತಪ್ಪನ್ನೇ ಇಲ್ಲಿಯೂ ಪುನರಾವರ್ತಿಸುತ್ತೇವೆ. ಒಂದು ಸಂದರ್ಭದಲ್ಲಿ ಅಪ್ರಾಮಾಣಿಕವಾಗಿ ವರ್ತಿಸಿದವ ಎಲ್ಲ ಸಂದರ್ಭಗಳಲ್ಲೂ ಹಾಗೇ ಇರಬೇಕಿಲ್ಲ. ಅದರಂತೆಯೇ ಒಂದು ಸದ್ಗುಣ ಹೊಂದಿದ ವ್ಯಕ್ತಿ ಎಲ್ಲ ಸದ್ಗುಣಗಳನ್ನು ಹೊಂದಿರಬೇಕಿಲ್ಲ. ಶಾಲೆ ಕಲಿಯುವ ಮಾಧುರಿ ಮೂಗು ಕಿವಿ ಹಿಂಡುವ ಅಂಕಗಣಿತದ ಶಿಕ್ಷಕಿಗೆ ಮೋಸ ಮಾಡಿದರೆ, ಬೆನ್ನು ತಟ್ಟಿ ಪ್ರೀತಿಸುವ ಕನ್ನಡ ಶಿಕ್ಷಕನೊಡನೆ ಶ್ರದ್ಧೆ-ಭಕ್ತಿಗಳಿಂದ ವರ್ತಿಸುತ್ತಾಳೆ- ಇದು ದೊಡ್ಡವರನೇಕರ ಅನುಭವವೂ ಕೂಡ. ಅಲ್ಲವೇ? ಇದೇ ತತ್ವ ಎಲ್ಲ ಬಗೆಯ ಮಾನವ ಸಂಬಂಧಗಳಲ್ಲಿಯೂ ಕಾಣಿಸುತ್ತದೆ.


ಪ್ರಚೋದನೆಗಳಿಗೆ ಪಕ್ಕಾಗಿ ಸಾಮಾಜಿಕವಾಗಿ ತಿರಸ್ಕೃತವಾದ ಮಾರ್ಗಗಳ ಮುಖಾಂತರ ಶೀಘ್ರ ಸುಖಪಡಲು ಹವಣಿಸುವುದು ಸಾಮಾನ್ಯ ಸ್ವಭಾವ. ನಮ್ಮ ನೈತಿಕ ಸ್ವಭಾವದ ಸ್ವರೂಪವು ಪ್ರಚೋದನೆಗಳು ಒಡ್ಡುವ ಬಲೆಗೆ ನಾವು ಎಷ್ಟು ಆಳವಾಗಿ ಸಿಲುಕಿದ್ದೇವೆ ಎಂಬುದನ್ನವಲಂಬಿಸಿದೆ. ಕುದುರೆಯ ಬಾಲಕ್ಕೆ ಜೋತು ಬೀಳುವುದರಿಂದ ಅನಾಯಾಸವಾಗಿ ಹಣ ಬರುತ್ತದೆ ಎಂಬ ಪ್ರಚೋದನೆ ವ್ಯಕ್ತಿಯಲ್ಲಿ ಆ ಮಾರ್ಗದ ಆಸೆ ಹುಟ್ಟಿಸುತ್ತದೆ.

ಹಾಗಾದರೆ ಆದರ್ಶಪ್ರಾಯ ನೈತಿಕ ಸ್ವಭಾವ ಎಂತಹದು? ಅದು ಪ್ರಚೋದನೆಗಳಿಗೆ ಒಳಗಾಗುವುದಿಲ್ಲ. ಆದರೆ ಅಷ್ಟೇ ಸಾಲದು. ಜೀವನದಲ್ಲಿ ನಿರಂತರವಾಗಿ ಉತ್ತಮ ಮಾರ್ಗಗಳ ಆಯ್ಕೆ ಮಾಡುವ ಶಕ್ತಿ ಒಳ್ಳೆಯದು-ಕೆಟ್ಟದ್ದು ಇವುಗಳ ನಡುವಿನ ಅಂತರ ತಿಳಿಯುವ ಜಾಣ್ಮೆ ಮುಂತಾದವುಗಳನ್ನು ಅದು ಒಳಗೊಂಡಿರುತ್ತದೆ.

ಸಾಮಾಜಿಕವಾಗಿ ಅಗ್ರಾಹ್ಯವಾದ ಬಯಕೆಗಳನ್ನು ಮೂಲದಲ್ಲಿ ಚಿವುಟಲು ಶಕ್ತನಾಗುವವ ಉತ್ತಮ ನೈತಿಕ ಸ್ವಭಾವ ಬೆಳೆಸಿಕೊಳ್ಳಬಲ್ಲ. ಆದರೆ ಇಂಥ 'ಸಮೂಲ ಚಿವುಟುವಿಕೆ' ಸಾಧ್ಯವೆ ಎಂಬುದು ಚಿಂತನಾರ್ಹ ಪ್ರಶ್ನೆ. 'ಆಸೆಯೇ ದುಃಖಕ್ಕೆ ಮೂಲ' ಎಂಬ ಭಗವಾನ್ ಬುದ್ಧನ ಉಪದೇಶ ತಾತ್ವಿಕವಾಗಿ ನಿಜವಾದರೂ ಸಂಪೂರ್ಣ ಆಶಾರಹಿತ ಸ್ಥಿತಿಯನ್ನು ತಲುಪ ಬಯಸುವ ಹಲವರಿಗೆ ನಿರಾಶೆಯೇ ದೊರೆತೀತು.

ಹಾಗಾದರೆ ಉತ್ತಮ ನೈತಿಕ ಸ್ವಭಾವವನ್ನು ಗುರುತಿಸಬಲ್ಲ ಮಾನದಂಡ ಎಲ್ಲಿದೆ? ವ್ಯಕ್ತಿ ಸಾಮಾಜಿಕ ನಿಯಮಗಳನ್ನು ತಾನು ಪಾಲಿಸುವುದಲ್ಲದೆ ಇತರರನ್ನೂ ಆ ದಿಕ್ಕಿನಲ್ಲಿ ಸಾಗುವಂತೆ ಮನವೊಲಿಸಿ ಒಟ್ಟು ಸಾಮಾಜಿಕ ವ್ಯವಸ್ಥೆಯ ಒಳಿತನ್ನು ಸಾಧಿಸಲು ಎಷ್ಟರ ಮಟ್ಟಿಗೆ ಸಾಫಲ್ಯ ಪಡೆದಿದ್ದಾನೆ ಎಂದು ತಿಳಿದುಕೊಳ್ಳುವುದೇ ನೈತಿಕ ಸ್ವಭಾವ ಪರೀಕ್ಷೆಯ ಅಳತೆಗೋಲಾಗಬೇಕು.

ನಮ್ಮ ಸಮಕಾಲೀನ ಜಗತ್ತು ಕೆಲವು ಆದರ್ಶಗಳನ್ನು ಅಂಗೀಕರಿಸಿದೆ. ನಮ್ಮ ಪ್ರಭಾವವನ್ನುಪಯೋಗಿಸಿ ಎಲ್ಲರೂ ಅವುಗಳನ್ನು ಬೆಂಬಲಿಸುವಂತೆ ಪ್ರಯತ್ನಿಸಬೇಕಿದೆ. ಈ ಬೆಂಬಲವೆಂಬ ಅಳಿಲು ಸೇವೆಯ ಮೂಲಕ ಜಗತ್ತನ್ನು ನಾವು ಕಂಡುದಕ್ಕಿಂತ ಉತ್ತಮತರವಾದ ವಾಸಸ್ಥಾನವಾಗಿ ಪರಿವರ್ತಿಸಬೇಕಿದೆ. ಅಂದರೆ ಈ ಕಾರ್ಯಕ್ಕಾಗಿ ನಮ್ಮ ಸಂಪೂರ್ಣ ಶಕ್ತಿ ಕೌಶಲ್ಯಗಳು ವ್ಯಯವಾಗಬೇಕು. ಇವು ನಮ್ಮ ದೇಹ, ಮನಸ್ಸು, ಭಾವನೆ ಅಥವಾ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಿರಬಹುದು. ಈ ಗುರಿಯತ್ತ ಹೋದ ವ್ಯಕ್ತಿಯ ನೈತಿಕ ಸ್ವಭಾವ ಅತ್ಯುನ್ನತ ಮಟ್ಟದ್ದೆಂದು ಹೇಳಬಹುದು. ■



ಕ್ರೀಡೆ ಬಗ್ಗೆ ತಿಳಿಯಿರಿ



■ ಶಂಕರಗೌಡ ವೈ.ಪಾಟೀಲ

1. ಮಿಲ್ಕಾ ಸಿಂಗ್ ಅವರು ಯಾವ ವರ್ಷದಲ್ಲಿ 400 ಮೀಟರ್ ಓಟದಲ್ಲಿ ಪ್ರಥಮ ರಾಷ್ಟ್ರೀಯ ಪ್ರಶಸ್ತಿ ಗಳಿಸಿದರು?

2. ಭಾರತದ ಬ್ಯಾಡ್ಮಿಂಟನ್ ಸಂಘವು ಯಾವಾಗ ಮತ್ತು ಎಲ್ಲಿ ಸ್ಥಾಪಿತವಾಯಿತು?

3. ವಿಶ್ವಮಟ್ಟದಲ್ಲಿ ಅತಿ ಎತ್ತರದ ಆಟಗಾರನೆಂದು ಹೆಸರಾದ ಭಾರತೀಯ, ಬಾಸ್ಕೆಟ್‌ಬಾಲ್ ಕ್ರೀಡಾಪಟು ಯಾರು?

4. ವಿಶ್ವ ಹವ್ಯಾಸಿ ಬಿಲಿಯರ್ಡ್ಸ್ ಸ್ಪರ್ಧೆಯಲ್ಲಿ ಭಾರತ ಭಾಗವಹಿಸಿದ್ದು ಯಾವ ವರ್ಷ?

5. ಮೊದಲ ಮಹಿಳಾ ರಾಷ್ಟ್ರೀಯ ಸ್ನೂಕರ್ ಚಾಂಪಿಯನ್‌ಷಿಪ್ ಪ್ರಶಸ್ತಿಯನ್ನು ಯಾರು ಮತ್ತು ಯಾವ ವರ್ಷದಲ್ಲಿ ಗಳಿಸಿದರು?

6. ಭಾರತದ ಮುಷ್ಟಿಕಾಳಗ ಪಟುಗಳು ಮೊದಲ ಬಾರಿಗೆ ಒಲಿಂಪಿಕ್‌ನಲ್ಲಿ ಭಾಗವಹಿಸಿದ್ದು ಯಾವಾಗ?

7. ವಿಶ್ವ ಚದುರಂಗದ ಚಾಂಪಿಯನ್‌ನ್ನು ಸೋಲಿಸಿದ ಮೊದಲ ಭಾರತೀಯನಾರು, ಆತ ಸೋಲಿಸಿದ ಚಾಂಪಿಯನ್ ಯಾರು? ಮತ್ತು ಯಾವ ವರ್ಷ?

8. ಭಾರತದ ಖ್ಯಾತ ಕ್ರಿಕೆಟ್ ಪಟು ನಾರಿ ಕಾಂಟ್ರಾಕ್ಟರ್ ಎಂಬುವವರ ಜೀವ ಉಳಿಸಲು ರಕ್ತದಾನ ಮಾಡಿದ ವೆಸ್ಟ್ ಇಂಡೀಸಿನ ಕ್ರಿಕೆಟ್ ಆಟಗಾರ ಯಾರು?

9. ವಿಶ್ವ ವಿಖ್ಯಾತ ಕಾಲ್ಚೆಂಡು ಪಟುವಾದ ಪೀಲೆ ಯವರು ಭಾರತದಲ್ಲಿ ಆಡಿದ್ದಾರೆಯೇ? ಆಡಿದ್ದರೆ ಯಾವಾಗ, ಎಲ್ಲಿ ಮತ್ತು ಯಾವ ತಂಡದ ಪರ?

10. ಅರ್ಜುನ್ ಪ್ರಶಸ್ತಿ ಪಡೆದ ಪ್ರಥಮ ಮಹಿಳಾ ಮತ್ತು ಪುರುಷ ಗಾಲ್ಫ್ ಕ್ರೀಡಾಪಟುಗಳು ಯಾರು?

11. ಒಲಿಂಪಿಕ್ಸ್ ಹಾಕಿಯಲ್ಲಿ ಯಾವ ಗೆಲುವು ಭಾರತಕ್ಕೆ ಅತಿ ಶ್ರೇಷ್ಠದ್ದಾಗಿದೆ?

12. ಕಿರಣ್ ಬೇಡಿಯವರು ಏಶಿಯಾದ ಹುಲ್ಲು ಹಾಸಿನ ಟೆನ್ನಿಸ್ ಪಂದ್ಯವನ್ನು ಯಾವ ವರ್ಷದಲ್ಲಿ, ಯಾರನ್ನು ಸೋಲಿಸಿ ಚಾಂಪಿಯನ್ ಆದರು?

13. 1988ರಲ್ಲಿ ತೂಕ ಮತ್ತು ಪವರ್‌ಲಿಫ್ಟ್ ಸ್ಪರ್ಧೆಗಳಲ್ಲಿ ಚಾಂಪಿಯನ್ ಎನಿಸಿದ ಭಾರತವು ಗೆದ್ದ ಪದಕಗಳಾವುವು?

14. ಒಲಿಂಪಿಕ್ ಶೂಟಿಂಗ್‌ನಲ್ಲಿ ಭಾರತದ ಅತ್ಯುತ್ತಮ ಗುರಿಕಾರರು ಯಾರು?

15. ಸ್ಕ್ವಾಷ್ ಆಟದಲ್ಲಿ ಭಾರತದ ಕುಟುಂಬ ವೊಂದು ಇತಿಹಾಸ ಸೃಷ್ಟಿಸಿತು.

16. ಭಾರತದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ಇಬ್ಬರು ಈಜುಗಾರರು ಯಾರು, ಯಾವ ವರ್ಷದಲ್ಲಿ?

17. ಭಾರತದಲ್ಲಿ ಇದುವರೆಗೆ ಎಷ್ಟು ಬಾರಿ ಟೇಬಲ್ ಟೆನ್ನಿಸ್ ವಿಶ್ವಕಪ್ ಪಂದ್ಯಾವಳಿ ನಡೆದಿವೆ?

18. ಏಷಿಯಾಡ್ ವಾಲಿಬಾಲ್‌ನಲ್ಲಿ ಭಾರತ ಎಷ್ಟು ಪದಕಗಳನ್ನು ಗೆದ್ದಿದೆ?

19. ಕಾಮನವೆಲ್ತ್‌ನ ವೈಟ್‌ಲಿಫ್ಟಿಂಗ್ ಪಂದ್ಯಗಳಲ್ಲಿ ಪ್ರಥಮ ಬಾರಿಗೆ ಭಾರತಕ್ಕೆ ಪದಕ ತಂದವರು ಯಾರು?

20. ಏಶಿಯಾಡ್ ಪಂದ್ಯಗಳಲ್ಲಿ ಅತಿ ಹೆಚ್ಚು ಪದಕಗಳನ್ನು ಗಳಿಸಿರುವ ಭಾರತದ ಕುಸ್ತಿಪಟು ಯಾರು? ಗಳಿಸಿದ ಪದಕಗಳ ವಿವರವೇನು?

21. ಏಶಿಯಾಡ್‌ನ ಯಾಚಿಂಗ್ (ತೇಲು ದೋಣಿ) ಸ್ಪರ್ಧೆಯಲ್ಲಿ ಅತಿ ಹೆಚ್ಚು ಪದಕಗಳನ್ನು ಪಡೆದ ಭಾರತೀಯ ಯಾರು?

22. ಯಾವ ಏಶಿಯಾಡ್‌ನಲ್ಲಿ ಭಾರತದ ರೋವಿಂಗ್ (ಹುಟ್ಟುಹಾಕುವ ದೋಣಿ) ತಂಡವು ತನ್ನ ಮೊದಲ ಪದಕ ಯಾವ ರೂಪದಲ್ಲಿ ಗಳಿಸಿತು?

23. ಕ್ಯಾನೋಯಿಂಗ್ (ಸೈಕಲ್ ದೋಣಿ) ಮೊದಲಿಗೆ ಯಾವ ಏಶಿಯಾಡ್ ಪಂದ್ಯದಲ್ಲಿ ಸೇರಿಸಲಾಯಿತು? ಭಾರತ ಇದರಲ್ಲಿ ಭಾಗವಹಿಸಿದ್ದು ಯಾವಾಗ?

24. ಏಶಿಯಾ ಕಪ್‌ನಲ್ಲಿ ಭಾರತಕ್ಕೆ ಮೊದಲ ಪದಕ ಗಳಿಸಿ ಕೊಟ್ಟ ಬಿಲ್ಲುಗಾರನಾರು?

25. ಮೊದಲ ಮಿಸ್ಟರ್ ಯೂನಿವರ್ಸ್ ಪ್ರಶಸ್ತಿ ಪಡೆದ ಭಾರತೀಯ ದೇಹದಾರ್ಢ್ಯ ಪಟು ಯಾರು?

26. ಏಶಿಯಾಡ್ ಚಾಂಪಿಯನ್ ಕ್ರೀಡೆಯ ಸೈಕಲ್ ಓಟದಲ್ಲಿ 34 ವರ್ಷಗಳ ಹಿಂದೆಯೇ ಪದಕ ಗಳಿಸಿದ ಭಾರತೀಯ ಸೈಕಲ್ ಸವಾರನಾರು?

27. 9ನೇ ಏಶಿಯಾಡ್ ಪಂದ್ಯದಲ್ಲಿ ಭಾರತದ ಪರ ಚಿನ್ನ ಗೆದ್ದ ಕುದುರೆ ಮತ್ತು ಸವಾರನ ಹೆಸರೇನು?

28. ಏಶಿಯಾಡ್ 1982ರ ಜಿಮ್ನಾಸ್ಟಿಕ್ ಪಂದ್ಯಗಳಲ್ಲಿ ಭಾರತಕ್ಕೆ ದಕ್ಕಿದ ಸ್ಥಾನವೇನು?

29. ಕರಾಟೆಯಲ್ಲಿ ಯಾವ ವರ್ಷದಲ್ಲಿ ಯಾವ ಭಾರತೀಯ ಕರಾಟೆ ಪಟು ಗೋಲ್ಡನ್ ಮ್ಯಾನ್ ಪ್ರಶಸ್ತಿ ಗೆದ್ದರು?

30. 1ನೇ ರಾಷ್ಟ್ರೀಯ ಜ್ಯೂಡೋ ಚಾಂಪಿಯನ್ ಸ್ಪರ್ಧೆಯು ಎಲ್ಲಿ, ಯಾವಾಗ ನಡೆಯಿತು?

ಉತ್ತರ

1. 1957, 2. 1934-ಕಲ್ಕತ್ತ, 3. 221 ಸೆಂಟಿಮೀಟರ್ ಎತ್ತರದ ಸುನೀಲ್ ಪಾಂಡ, 4. 1930, 5. ಕರ್ನಾಟಕದ ಜೂಡಿ ವಾಲಿಯಾ 1989ರಲ್ಲಿ, 6. 1948ರ ಲಂಡನ್ ಒಲಿಂಪಿಕ್‌ನಲ್ಲಿ, 7. ಸುಲ್ತಾನ್‌ಖಾನ್ 1930-31ರಲ್ಲಿ ಕ್ಯೂಬಾದ ಕ್ಯಾಸಾಬ್ಲಾಂಕಾರನ್ನು ಸೋಲಿಸಿದರು, 8. ಸರ್ ಫ್ರಾಂಕ್ ಒರೆಲ್, 9. ಹೌದು. ಸೆಪ್ಟೆಂಬರ್ 24, 1977ರಲ್ಲಿ ನ್ಯೂಯಾರ್ಕ್ ಕಾಸ್ಮಾಸ್ ಕ್ಲಬ್‌ನ ಪರ, ಮೋಹನ್ ಬಾಗನ್ ವಿರುದ್ಧ ಕಲ್ಕತ್ತಾದಲ್ಲಿ ಆಡಿದ್ದಾರೆ, 10. ಅಂಜನಿ ದೇಸಾಯಿ (1972) ಮತ್ತು ಬಿಲ್ಲೂ ಸೇಠಿ (1961), 11. 1932ರಲ್ಲಿ ಲಾಸ್ ಏಂಜಲ್ಸ್‌ನಲ್ಲಿ ಅಮೆರಿಕಾವನ್ನು ಭಾರತವು 24-1 ಗೋಲುಗಳಲ್ಲಿ ಸೋಲಿಸಿದ ಗೆಲುವು, 12. 1972, ಭಾರತದ ಸುಸಾನ್ ದಾಸ್, 13. 5 ಚಿನ್ನ, 6 ಬೆಳ್ಳಿ ಮತ್ತು 8 ಕಂಚು ಪದಕಗಳು, 14. ಕರ್ಣಸಿಂಗ್ 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಎಂಟನೇ ಸ್ಥಾನ ಗಳಿಸಿದರು, 15. ಮುಂಬೈಯ ಪಂಡೋಲ್ ಮನೆತನದ 3 ಪೀಳಿಗೆಯು ಭಾರತ ತಂಡದ ಪರ ಆಟವಾಡಿದೆ, 16. ಮಿಹಿರ್‌ಸೇನ್ 1959ರಲ್ಲಿ, ಆರತಿ ಸಹಾ- 1960ರಲ್ಲಿ, 17. ಮೂರು ಬಾರಿ : 1952 (ಮುಂಬೈ), 1975 (ಕಲ್ಕತ್ತಾ), 1987 (ನವದೆಹಲಿ), 18. ಒಂದು ಬೆಳ್ಳಿ, ಎರಡು ಕಂಚಿನ ಪದಕಗಳು, 19. ಮನೋಹರ್ ಲಾಲ್ ಘೋಷ್, ಕಿಂಗ್ಸ್‌ಟನ್ ಕಾಮನ್‌ವೆಲ್ತ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರು, 20. ಕರ್ತಾರ ಸಿಂಗ್ 1978ರಲ್ಲಿ ಚಿನ್ನ, 1982ರಲ್ಲಿ ಬೆಳ್ಳಿ ಮತ್ತು 1986ರಲ್ಲಿ ಮತ್ತೊಮ್ಮೆ ಚಿನ್ನದ ಪದಕವನ್ನು ಗಳಿಸಿದರು, 21. ಫಾರೂಖ್ ತಾರಾಪುರ, 1980-ಕಂಚು, 1982-ಚಿನ್ನ, 1986-ಬೆಳ್ಳಿ, 22. ಕಾಕ್ಸ್‌ಡೇರ್‌ನಲ್ಲಿ ನಡೆದ 1982ರ ಏಷ್ಯಾಡ್‌ನಲ್ಲಿ ಕಂಚಿನ ರೂಪದಲ್ಲಿ ಪಡೆಯಿತು, 23. 1990ರಲ್ಲಿ ಬೀಜಿಂಗ್ ಪಂದ್ಯದಲ್ಲಿ, ಭಾರತ ಇದರಲ್ಲಿ ಭಾಗವಹಿಸಿತು, 24. 1988ರಲ್ಲಿ ಕಲ್ಕತ್ತಾದಲ್ಲಿ ಶ್ಯಾಂಲಾಲ್ ಕಂಚಿನ ಪದಕ ಗಳಿಸಿಕೊಟ್ಟರು, 25. ಮೊನೊತೋಷ್ ರಾಯ್ 1951ರಲ್ಲಿ ಲಂಡನ್ನಿನಲ್ಲಿ ನಡೆದ ಪಂದ್ಯದ ಕಡಿಮೆ ತೂಕದ ಗುಂಪಿನಲ್ಲಿ, 26. ಅಮರಸಿಂಗ್ ಸೋಖಿ, 1961ರ ಮೊದಲ ಏಷ್ಯಾಡ್ ಕ್ರೀಡೆಯಲ್ಲಿ, 4,000 ಮೀ.ನಲ್ಲಿ ಬೆಳ್ಳಿ ಪದಕ, 27. ಕುದುರೆಯ ಹೆಸರು ಶಾಹಜಾದ್. ಸವಾರ ರಘುವೀರ ಸಿಂಗ್, 28. ಪುರುಷರ 5ನೇ ಸ್ಥಾನ, ಮಹಿಳೆಯರ 7ನೇ ಸ್ಥಾನಗಳನ್ನ ಭಾರತ ದಕ್ಕಿಸಿಕೊಂಡಿತು, 29. 1988ರಲ್ಲಿ ಕಟ್ಮಂಡುವಿನಲ್ಲಿ ನಡೆದ ಅಂತರ್‌ರಾಷ್ಟ್ರೀಯ ಪಂದ್ಯದಲ್ಲಿ ಸುಕುಲ್ ಬ್ಯಾನರ್ಜಿ 30. 1966, ಚೆನ್ನೈ.

ಕ್ರಿಕೆಟನ್ನು ಜಾಗತೀಕರಣಗೊಳಿಸುತ್ತಿರುವ ಕಾಲಘಟ್ಟವಿದು. ಕ್ರಿಕೆಟ್‌ನ ಗಂಧಗಾಳಿಯೇ ತಿಳಿಯದ ಎಷ್ಟೋ ದೇಶಗಳಲ್ಲಿ ಕ್ರಿಕೆಟನ್ನು ಆಯೋಜಿಸುವ ಹಲವಾರು ಶ್ಲಾಘನೀಯ ಪ್ರಯತ್ನಗಳು ನಡೆಯುತ್ತಿವೆ. ಟೊರಾಂಟೊ, ಕೌಲಾಲಂಪುರ್‌ಗಳು ಕ್ರಿಕೆಟನ್ನು ತಮ್ಮ ನಾಡಿನಲ್ಲಿ ಪರಿಚಯಿಸಿಕೊಂಡಿವೆ. ಅಮೆರಿಕದ ಡಿಸ್ನಿಲ್ಯಾಂಡ್‌ಗೂ ಕ್ರಿಕೆಟ್ ಕಾಲಿಡುವ ನಿರೀಕ್ಷೆ ಇದೆ.

ಪ್ರಯತ್ನಗಳು ಸಾವಿರಾರು ಇರಬಹುದು. ಆದರೆ ಕ್ರಿಕೆಟ್ ತನ್ನ ಪ್ರತಿಷ್ಠೆ ಸಂಪಾದಿಸಿರುವುದು ಅವರ ಅಸಂಖ್ಯಾತ ಅಭಿಮಾನಿಗಳಿಂದಾಗಿ ಎಂಬುದನ್ನು ನಾವಿಲ್ಲಿ ಮರೆಯಬಾರದು. ಅದಿಲ್ಲದಿದ್ದಲ್ಲಿ ಕ್ರಿಕೆಟ್ ಕೂಡ ಇತರೇ ಆಟಗಳಂತೆ ಸೊರಗಿ ಹೋಗುತ್ತಿತ್ತೇನೋ? ಆದರೆ ಒಂದು ದುರಂತವೆಂದರೆ ಕ್ರಿಕೆಟ್‌ಗೆ ಒಳ್ಳೆಯ ಸ್ಥಾನಮಾನ ಗಳಿಸಿಕೊಟ್ಟ ಜನತೆಯೇ ಅದರ ಘನತೆಗೆ ಮಸಿ ಬಳಿಯುತ್ತಿರುವುದು.

ಕ್ರಿಕೆಟನ್ನು ವೀಕ್ಷಿಸುವ ಉದ್ದೇಶವಾದರೂ ಏನು? ಒಂದು ಮಾನಸಿಕ ಉಲ್ಲಾಸಕ್ಕಾಗಿ ಮತ್ತೊಂದು, ತಮ್ಮ ದೇಶದ ತಂಡವನ್ನು ಉತ್ತೇಜಿಸುವುದಕ್ಕಾಗಿ. ಆದರೆ ಇಂದು ಇದರಲ್ಲಿ ಸ್ವಲ್ಪ ಏರುಪೇರಾಗಿದೆ. ತಾಯ್ನಾಡಿನ ತಂಡದ ಸೋಲು ಮಾನಸಿಕ ನೆಮ್ಮದಿಯನ್ನು ಕದಡಿ ಗಲಭೆಗಳಲ್ಲಿ ಪರ್ಯಾವಸಾನವಾಗುತ್ತಿವೆ. ನಿರ್ಬಂಧಕಾರಿ ವಸ್ತುಗಳು ಮೈದಾನಕ್ಕೆ ಪ್ರವೇಶಿಸುತ್ತಿವೆ.

ನಮ್ಮ ರಾಷ್ಟ್ರದ ತಂಡವೇ ಗೆಲ್ಲಬೇಕು ಎಂಬುದು ಅನೇಕ ಕ್ರೀಡಾಭಿಮಾನಿಗಳಲ್ಲಿ ಬೆಳೆದಿರುವ ಅಂಧಾಭಿಮಾನ. ಎದುರಾಳಿಯೂ ಗೆಲ್ಲಲಿಕ್ಕಾಗಿಯೇ ಆಡುತ್ತಾನೆ ಎಂಬ ಭಾವನೆ ಕ್ರೀಡಾಭಿಮಾನಿಗಳಲ್ಲಿ ಬೆಳೆದಿಲ್ಲ. ಬೆಂಗಳೂರಿನಲ್ಲಿ ಪಾಕ್ ವಿರುದ್ಧದ ನಮ್ಮ ಹೀನಾಯ ಸೋಲಿಗೆ ಹತಾಶೆಯನ್ನು ವಿಕೃತ ರೀತಿಯಲ್ಲಿ ತೋರಿರುವುದು ಕಿಂಚಿತ್ತೂ ಸರಿಯಲ್ಲ. 1996ರ ವಿಶ್ವಕಪ್‌ನ ಸೆಮಿಫೈನಲ್ ಪಂದ್ಯ ಕಲ್ಕತ್ತಾದಲ್ಲಿ ನಡೆದಾಗ ಅಲ್ಲಿಯೂ ದಂಗೆ ದಹದಹಿಸಿತ್ತು.

ಇಂತಹ ವರ್ತನೆಗಳಿಂದ ನಮ್ಮ ಕ್ರಿಕೆಟಿಗರಲ್ಲಿ ಯಾವ ಪರಿವರ್ತನೆಗಳಾಗಲಾರದು. ಇದು ನಮ್ಮ ದೇಶದ ಕ್ರೀಡಾ ಮನೋಭಾವಕ್ಕೆ ತರುವ ಕಳಂಕವೆಂದೇ ಹೇಳಬಹುದು. ಯಾವ ತಂಡಗಳೂ ಭಾರತದಲ್ಲಿ ಭಾರತದೆದುರು ಆಡಲು ಹಿಂಜರಿಯುವಂತಹ ವಾತಾವರಣ ನಿರ್ಮಾಣವಾಗಬಹುದು.

ಭಾರತ ಮತ್ತು ಪಾಕ್ ನಡುವೆ ಕ್ರಿಕೆಟ್ ಬಾಂಧವ್ಯವನ್ನು ಉತ್ತಮಪಡಿಸಲು ಉಭಯ ರಾಷ್ಟ್ರಗಳ ನಡುವೆ ಟೆಸ್ಟ್ ಸರಣಿ ಏರ್ಪಡಿಸುವ ವಿಚಾರ ಹೊರಬಿದ್ದಾಗ ತೀವ್ರತರನಾದ ವಿವಾದಗಳಾದವು. ಕೊನೆಗೂ ಭಾರತದಲ್ಲಿ ಟೆಸ್ಟ್ ಸರಣಿ ಯಶಸ್ವಿಯಾಗಿ ಮುಗಿಯಿತು. ಆದರೆ ಏಷ್ಯನ್ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ಸ್‌ನಲ್ಲಿ ಖಾಲಿ ಕ್ರೀಡಾಂಗಣದಲ್ಲಿ ಪಂದ್ಯ ಮುಗಿಸಬೇಕಾಗಿ ಬಂದದ್ದು ವಿಪರ್ಯಾಸ.

ಇದು ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಇತ್ತೀಚೆಗೆ ಆಸ್ಟ್ರೇಲಿಯಾ ತಂಡ ವಿಂಡೀಸ್ ಪ್ರವಾಸದಲ್ಲಿದ್ದಾಗ ಅಹಿತಕರ ಘಟನೆಗಳು ಜರುಗಿದವು. ಆರನೇ ಏಕದಿನ ಪಂದ್ಯದಲ್ಲಿ ವಿಂಡೀಸ್ ಸೋಲುತ್ತದೆಂದು ತಿಳಿದಾಗ ಪ್ರೇಕ್ಷಕರು ಮೈದಾನಕ್ಕೆ ನುಗ್ಗಿದರು. ಕೊನೆಯ ಪಂದ್ಯದಲ್ಲೂ ಕ್ಯಾಂಬೆಲ್ ವಿವಾದಾತ್ಮಕ ರನ್‌ಔಟ್ ಆದಾಗ ಪ್ರೇಕ್ಷಕರ ದುರ್ವರ್ತನೆ ಹೊಸ ರೂಪ ಪಡೆದಿತ್ತು. ಕೊನೆಗೆ ಆಸೀಸ್ ನಾಯಕ ಸ್ಟೀವ್ ವ್ಹಾ ನಿರಾಶರಾಗಿ ''ಆಟಗಾರ ಸಾಯುವ ಮೊದಲು ಕ್ರಮಕೈಗೊಳ್ಳಿ'' ಎಂಬ ಎಚ್ಚರಿಕೆಯ ನುಡಿಯನ್ನಾಡಿದರು.


ಒಂದು ರಾಷ್ಟ್ರದ ತಂಡ ಮತ್ತೊಂದು ದೇಶದಲ್ಲಿ ನಿರ್ಭಯವಾಗಿ ಆಡುವ ವಾತಾವರಣ ನಿರ್ಮಾಣವಾಗುವುದು ಯಾವಾಗ? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಬಹುಕಷ್ಟದ ಕೆಲಸ. ಎಲ್ಲಾ ದೇಶಗಳಲ್ಲೂ ಕೆಲವರಾದರೂ ದುರಭಿಮಾನಿಗಳಿದ್ದೇ ಇರುತ್ತಾರೆ. ಇಂಥವರಿಂದ 'ಜಂಟಲ್‌ಮನ್' ಗೇಮ್ ಎನಿಸಿದ ಕ್ರಿಕೆಟ್‌ನ 'ಕೋಟ'ಗೆ ಕಳಂಕ ಅಂಟುತ್ತಿದೆ. ಪ್ರೇಕ್ಷಕನ ಮನೋಭಾವದಲ್ಲಿಯೇ ಬದಲಾವಣೆಗಳಾಗಬೇಕೇ ವಿನಾ ವ್ಯವಸ್ಥೆಯಲ್ಲಲ್ಲ. ಕ್ರೀಡೆಯಲ್ಲಿ ಸೋಲಲಿ, ಗೆಲ್ಲಲಿ ಅವುಗಳನ್ನು ಸಮಾನವಾಗಿ ಸ್ವೀಕರಿಸುವ ಆದರ್ಶ ಮನೋಭಾವ ಮೂಡಿದಾಗ ಎಲ್ಲವೂ ಸುಗಮವಾಗುತ್ತದೆ. ■

ಪ್ರೇಕ್ಷಕರ 'ದುರ್ವರ್ತನೆ'ಗೆ ಕೊನೆಯೆಂದು?



■ ಗರ್ತಿಕೆರೆ ವಿ.ಪ್ರಕಾಶ್

ಪ ದ ಬ ಂ ಧ 17



ಪದಬಂಧ 16ರ ಸರಿಯುತ್ತರ

ಎಡದಿಂದ ಬಲಕ್ಕೆ

1. ಪರಾಭವ 4. ಚಳುವಳಿ 6. ಹಿಮ 8. ಅಣ್ಣ 9. ಮಲ್ಲ 10. ಜನಕ 12. ಕುಲ 15. ಬಸವೇಶ್ವರ 18. ಟಹ 19. ಜನನಿ 21. ದೇಶ 22. ನಾಡಿ 23. ಲಯ 25. ಮಡಿವಾಳ 26. ಮಹಾಸುದ್ದಿ.

ಮೇಲಿನಿಂದ ಕೆಳಕ್ಕೆ

2. ರಾತ್ರಿ ಸಮಯ 3. ವಡಿ 4. ಚಣ್ಣ 5. ವನ ಪಾಲಕ 7. ಮನುಜ 8. ಅಣುಕ 11. ನವಚೇತನ 13. ಕಂಬಳಿ 14. ಮರಣ 16. ಜಟಕಾಬಂಡಿ 17. ನಾಶ ಪಡಿಸು 19. ಜರಡಿ 20. ನಿರ್ಮಲ 22. ನಾಳ 24. ಯಮ

ಎಡದಿಂದ ಬಲಕ್ಕೆ

1. ನಾಗರೀಕರಿಂದ ಕೊನೆಗೆ ಅರಸ ನೆನಸಿ ಕೊಂಡ ಹಾವುಗಳ ಒಡೆಯ .... (4)
4. ಸಮೋಸ ತಿನ್ನಿಸಿದರೂ ವಂಚನೆ ಮಾಡುವವ............ (4)
6. ಗಳಗಳ ಅತ್ತರೂ ನೀರು ಬಾರದ ನಲ್ಲಿ............ (2)
8. ಸಂದೇಹದ ಸುಳಿವಿನಲ್ಲಿ ಮರಣ ಹೊಂದಿದ ಶರೀರ .... (2)
9. ಮಲಗುವಾಗ ಕಿರುಚಾಟ ಮಾಡಿದ ಕೂಸು............ (2)
10. ಸಲದ ನಡುವೆ ಕಾಣಿಸಿಕೊಂಡ ಎಲ್ಲವೂ............ (3)
12. ಜನರು ತಳಮಳಿಸಲು ಕಾರಣವಾದ ಸೆಕೆ............ (2)
15. ಶಿವನು ರೋಷಗೊಂಡಾಗ ತೋರಿಸಿದ ಭಯಂಕರ ರೂಪ....... (5)
18. ನಟರಾಜ ಮಾಡಿದ ನರ್ತನ............ (2)
19. ಉಪ್ಪರಿಗೆ ಮನೆ ಕಟ್ಟಲು ಬೇಕಾದ ಮರಳು .... (3)
21. ವಶೀಕರಣಕ್ಕೆ ಅನುಕೂಲವಾದ ಹೆಣ............ (2)
22. ಬಲ ಪರಾಕ್ರಮದೊಂದಿಗೆ ಬಂಡಿ ಅನ್ನ ತಿಂದ ಪಾಂಡವ .... (2)
23. ಬದುಕು ಕುಂಠಿತಗೊಳಿಸುವ ಕ್ಷಾಮ .... (2)
25. ಧೃತಿಗೆಡದೆ ಜೀವನ ಸಾಗಿಸಿದ ನಳರಾಜನ ಪತ್ನಿ .... (4)
26. ಹಣದೊಂದಿಗೆ ಉದ್ಭವಿಸಿದ ಪ್ರಕರಣ .... (4)

ಮೇಲಿನಿಂದ ಕೆಳಕ್ಕೆ

2. ಊರ ಗಡಿಯಲ್ಲಿ ಕಟ್ಟಿಸಿದ ಕುಸ್ತಿ ಸಾಧನೆ ಮಾಡುವ ಗೃಹ......... (5)
3. ಅಂಜನ ಹಚ್ಚಿ ದ್ರವ್ಯ ಹುಡುಕುವ ಮಾನವರು .... (2)
4. ಮೋಹಿನಿ ತೋರಿಸಿದ ಪ್ರೀತಿ .... (2)
5. ಬೆಳಗಾದರೆ ಜೀವನಕ್ಕೆ ಅವಶ್ಯವಾಗಿ ಬೇಕಾದ ವಾಯು, ಪ್ರಕಾಶ... (5)
7. ಸಭೆಯ ಕಾರ್ಯ ಕಲಾಪ ನಡೆದದ್ದು ಸುಗಮ, ತಲೆಕೆಳಕಾಗಿದೆ.... (3)
8. ನಂದಗೋಕುಲದಂತೆ ಕಟ್ಟಿಸಿದ ದೇವಸ್ಥಾನ .... (3)
11. ಕನಸು ಬಿದ್ದಾಗ ಬಡ ಬಡಿಸು .... (5)
13. ಕಣಿ ಕೇಳಿ ತೋರಿಸಿದ ದಯೆ............ (3)
14. ಸರಕಾರಕ್ಕೆ ತೆರಿಗೆ ಸಲ್ಲಿಸಬೇಕಾದ ಸಾಮಗ್ರಿ .... (3)
16. ಅನ್ನ, ವಸತಿ ನೀಡಿ ದಿಕ್ಕಿಲ್ಲದವರಿಗೆ ಸಹಾಯವಾದ ಸೂರು .... (5)
17. ಒಂಭತ್ತು ಸಮುದ್ರದ ಹೆಸರಿನಲ್ಲಿ ಸಿಕ್ಕ ರಸಾಯನ .... (5)
19. ಉತ್ತತ್ತಿ ವನದಲ್ಲಿ ಸಿಕ್ಕಿದ್ದು ಕೆಟ್ಟದ್ದಲ್ಲ, ಒಳ್ಳೆಯದು .... (3)
20. ಕುಂಟು ನೆಪ ಹೇಳಿ ವಲಸೆ ಹೋದ ಸಂಸಾರ............ (3)
22. ಭ್ರಾಂತಿಗೊಂಡವನಿಗೆ ಉಂಟಾದ ಅಂಜಿಕೆ .... (2)
24. ಮಹತ್ತರ ವರ ನೀಡಿದ ಶಿವ ತಿರುಗಿದ್ದಾನೆ............ (2)

■ ಜವಳಿ ವೀರಣ್ಣ

(ಉತ್ತರ: ಮುಂದಿನ ಸಂಚಿಕೆಯಲ್ಲಿ)

ವಿಶ್ವ ವಿಖ್ಯಾತ ಜೋಗ ಜಲಪಾತ ದುಮ್ಮಿಕ್ಕುವುದು ಉತ್ತರ ಕನ್ನಡದ ನೆಲದಲ್ಲೇ. ಉತ್ತರ ಕನ್ನಡದಲ್ಲಿ ಹರಿವ ನದಿಗಳು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸಾಕಷ್ಟು ದಬೆ ದಬೆಯನ್ನುಂಟು ಮಾಡಿ ಪ್ರಕೃತಿಪ್ರಿಯರಿಗೆ ಸಂತಸವನ್ನುಂಟು ಮಾಡಿವೆ. ಮಾಗೋಡು, ಸಾತೊಡ್ಡಿ, ಉಂಚಳ್ಳಿ, ಶಿವಗಂಗಾ ಶೀರ್ಲೆ, ಕೆಳಗಿನಕೇರಿ ಹೀಗೆ ಹೆಸರಿಸುತ್ತ ಹೋದರೆ ಅದೆಷ್ಟೋ ಜಲಪಾತಗಳು. ಇದೊಂದು ಜಲಪಾತಗಳ ಜಿಲ್ಲೆ ಎಂದರೆ ತಪ್ಪಾಗದು. ಸಾಕಷ್ಟು ಜಲಪಾತ ನೋಡಿದ್ದೇನೆ, ಅಲ್ಲಿ ಇಳಿದಿದ್ದೇನೆ ಎಂದೆಲ್ಲ ಬುರುಡೆ ಬಿಡುವ ಚಾರಣಿಗರಿದ್ದರೆ ನಿಮಗಿದೋ ಚಾರಣಕ್ಕೆ ಕೈಬೀಸಿ ಕರೆಯುತ್ತಿದೆ ''ಬುರುಡೆ ಜಲಪಾತ.''

ಸಿದ್ದಾಪುರ ತಾಲೂಕು ಜಿಲ್ಲೆಯ ಒಂದು ತುದಿಯಲ್ಲಿದೆ. ತಾಲೂಕಿನ ಹೆಗ್ಗರಣೆ ಬಳಿ ಉಂಚಳ್ಳಿ ಜಲಪಾತ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಹಾಗೇ ಅದಕ್ಕೆ ಸಮಾನಾಂತರವಾಗಿ ಕ್ಯಾದಗಿ ಬಳಿ ಇರುವ ಇಳಿಮನೆ ಹೊಳೆಯ 'ಬುರುಡೆ ಜೋಗ' ಅಡವಿ ಮಧ್ಯದಿಂದ ಹೊರಪ್ರಪಂಚಕ್ಕಿನ್ನೂ ಪರಿಚಯವಾಗಬೇಕು.

ಸಿದ್ದಾಪುರದಿಂದ ಕುಮಟಾಕ್ಕೆ ಹೋಗುವ ರಸ್ತೆಯಲ್ಲಿ 20 ಕಿ.ಮೀ ಸಾಗಿದರೆ ಕ್ಯಾದಗಿ ಸಿಗುತ್ತದೆ. ಅಲ್ಲಿಯೇ ಸಮೀಪದಲ್ಲಿ ಇಳಿಮನೆ ಹೊಳೆಯ ನೀರು ಬೂದಗಿತ್ತಿಯ ಬಳಿ ನಾಲ್ಕು ಹರಿತಗಳಲ್ಲಿ ಜಲಪಾತವಾಗಿ ದುಮ್ಮಿಕ್ಕುತ್ತದೆ. ಇದನ್ನು 'ಬುರುಡೆ ಜೋಗ' ಎಂದು ಈ ಭಾಗದ ಜನ ಕರೆದಿದ್ದಾರೆ. ನೀರು ನಾಲ್ಕನೇ ಹಂತದಲ್ಲಿ ಕೆಳ ಬೀಳುವಲ್ಲಿ 'ಕಲ್ಲುಬಂಡೆಯೊಂದು ಮಾನವನ ಬುರುಡೆಯಾಕಾರದಲ್ಲಿದ್ದುದೇ' ಇದಕ್ಕೆ ಈ ಹೆಸರು ಬರಲು ಕಾರಣ ಎನ್ನುವುದು ಸ್ಥಳೀಯರ ಅಭಿಪ್ರಾಯ.

ಈ ಜಲಪಾತಕ್ಕೆ ಸಿದ್ದಾಪುರ - ಕುಮಟಾ ರಸ್ತೆಯಿಂದ ಇಳಿಮನೆ ಮಾರ್ಗವಾಗಿ ಹೋಗಬೇಕು. ಕ್ಯಾದಗಿಯಿಂದ ಕಚ್ಚಾರಸ್ತೆಯಲ್ಲಿ ಸುಮಾರು 5 ಕಿ.ಮೀ ವಾಹನದಲ್ಲಿ ಸಾಗಬಹುದಾಗಿದೆ. ನಂತರ ಒಂದೂವರೆ ಕಿ.ಮೀ. ದಟ್ಟಡವಿಯಲ್ಲಿ ಕಾಲ್ನಡಿಗೆಯ ಪ್ರಯಾಣ. ಅಲ್ಲಿಂದ ಅರ್ಧ ಕಿ.ಮೀ. ಇಳಿದರೆ ಈ ಜಲಪಾತ ನೋಡಲು ಸಾಧ್ಯ. ಇಲ್ಲಿ ಬರೆದಷ್ಟು ಬರೆದದ್ದನ್ನು ಓದಿದಷ್ಟು


■ ಸೀತಾರಾಂ ಬೆಳಖಂಡ

ಸುಲಭ ಈ ಜಲಪಾತ ನೋಡಲು ಸಾಧ್ಯವಾಗುವುದಾದರೆ ಚಾರಣಿಗರಿಗೇನು ಕೆಲಸ ಎಂಬ ಪ್ರಶ್ನೆ ಏಳುವುದು ಸಹಜ.

ನುಣುಪಾದ ಕಲ್ಲು ಬಂಡೆಗಳು, ಚೂಪು ಕಲ್ಲುಗಳು, ನೇರ ಇಳಿಜಾರಿನಲ್ಲಿ ಮಳೆಗಾಲದಲ್ಲಿ ನೀರು ಹರಿವ ಜಾಗದಲ್ಲಿ ಜಲಪಾತ ನೋಡಲು ಹೋಗುವವ ಇಳಿಯಬೇಕು. ಆಚೆ ಈಚೆ ನೋಡಿದರೆ ಅತ ಎಲ್ಲರಿಗಿಂತ ಮೊದಲು ತಳ ಮುಟ್ಟುತ್ತಾನೆ. ಆದರೆ ಜಲಪಾತ ನೋಡಲು ಮಾತ್ರ ಆಗಲಾರದು. ಆತನ ಜೊತೆ ಇದ್ದವರಿಗೆ ಆಸ್ಪತ್ರೆ ಡ್ಯೂಟಿ ಕಟ್ಟಿಟ್ಟಿದ್ದೆ. ಮಳೆಗಾಲದ ನಂತರ ಎರಡು ತಿಂಗಳು ಇಲ್ಲಿ ಹೋಗುವಂತಿಲ್ಲ. ಅಲ್ಲದೆ ಮಾರ್ಚ್, ಏಪ್ರಿಲ್ ಏನಾದರೂ ಮಳೆ ಬಿದ್ದರೆ ಆಗಲೂ ಇಳಿಯುವುದು ಕಷ್ಟಸಾಧ್ಯ. ಮಳೆ ಇಲ್ಲದಿದ್ದರೆ ಮಾರ್ಚ್ ಅಥವಾ ಏಪ್ರಿಲ್ ಈ ಜಲಪಾತ ನೋಡಲು ಸುಲಭ ಸಾಧ್ಯ.

ಹರ ಸಾಹಸದ ನಂತರ ಕೆಳಗಿಳಿದರೆ ಆ ಬೆಳ್ನೊರೆಯ ಜಲಪಾತ ಎಂತಹವರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಸುಮಾರು 200 ಅಡಿಗಳಿಗಿಂತ ಎತ್ತರದಲ್ಲಿ 3 ಹಂತಗಳಲ್ಲಿ ನೀರು ಬಳಕುತ್ತಾ ನೊರೆಯೆನ್ನೆಬ್ಬಿಸಿ ಧುಮುಕುತ್ತದೆ. ಸ್ವಲ್ಪ ದೂರ ಬಂಡೆಗಳ ಮರೆಯಲ್ಲಿ ಹರಿದು ಮತ್ತೆ ನೂರು ಅಡಿಗಳಷ್ಟು ಕೆಳಗೆ ಬೀಳುತ್ತದೆ. ಸ್ವಲ್ಪ ಸಾಹಸ ಪ್ರವೃತ್ತಿಯವರಿದ್ದರೂ ಸಾಕು, ಜಲಪಾತದ ನೀರು ಬೀಳುವಲ್ಲಿಯವರೆಗೆ ಹೋಗಬಹುದು. ಸ್ವಲ್ಪ ಸಮಯ ಈಜಿ ನಂತರ ವಾಪಸ್ ಬರಬೇಕಾದರೆ ನೇರವಾಗಿ ಹತ್ತುವಾಗ ಕೆಳಗೆ ಜಲಪಾತದಡಿ ಅನುಭವಿಸಿದ ಆನಂದ ಮರೆಯುವಷ್ಟು ಕಾಲು ನೋಯುತ್ತದೆ.

ಈ ಭಾಗದಲ್ಲಿರುವ ಗ್ರಾಮ ಅರಣ್ಯ ಸಮಿತಿ ಈ ಜಲಪಾತಕ್ಕೆ ಹೋಗಲು ಸರ್ವ ಋತು ರಸ್ತೆ ಬೇಕು, ಈ ಜಲಪಾತ ಗಣನೆಗೆ ತೆರೆದುಕೊಳ್ಳಬೇಕು ಎನ್ನುವ ಅಭಿಪ್ರಾಯ ವ್ಯಕ್ತ ಪಡಿಸುವುದರೊಂದಿಗೆ ಪರಿಸರ ಪ್ರೇಮಿ ಪ್ರವಾಸೋದ್ಯಮ ಬರಲಿ ಎನ್ನುವ ಅಭಿಪ್ರಾಯ ಹೊರಹೊಮ್ಮಿದೆ. ಏನೇ ಇರಲಿ, ಕೆ.ಪಿ.ಸಿ.ಯವರ (ಕರ್ನಾಟಕ ಪವರ್ ಕಾರ್ಪೋರೇಶನ್) ಕಣ್ಣಿಗೆ ಬಿದ್ದು ಆಕರ್ಷಣೆ ಕಳೆದುಕೊಳ್ಳುವ ಮುನ್ನ ಒಮ್ಮೆ ನೋಡಿ 'ಬುರುಡೆ ಜಲಪಾತ'. ■



ಬುದ್ಧಿ ಓಡಿ ಹೋಗಿದೆ

ಸೋಮನಕಟ್ಟೆಯಲ್ಲಿ 'ಸೋಮನಾಥ ಬಲು ದೊಡ್ಡ ಜಮೀನುದಾರ. ಹೊಲಗದ್ದೆ, ಬಾವಿ ತೋಟ ಆಳು-ಕಾಳು ಎಲ್ಲ ರೀತಿ ಯಿಂದಲೂ ದೊಡ್ಡವ. ಅವನು ಮೈಕೈಯಿಂದ ದಪ್ಪಗಾಗಿಯೂ ದೊಡ್ಡವನಾಗಿದ್ದ. ಒಮ್ಮೆ ಅವನು ತೋಟದಲ್ಲಿ ಒಂದು ಮಹಲು ಕಟ್ಟಿಸಿದ. ಸುತ್ತ -ಮುತ್ತಲಿನ ಊರ ರೈತರನ್ನು ಭೋಜನಕ್ಕೆ ಆಮಂತ್ರಿಸಿ, ಬಂದ ವರಿಗೆಲ್ಲ ಮಹಲಿನ ಪಡಸಾಲೆ, ನಡುಮನೆ ಅಡುಗೆಮನೆ, ಮಲ ಗುವ ಕೋಣೆ ತೋರಿಸುತ್ತಿದ್ದ. ಬಂದವರೆಲ್ಲ ವಾ!ವಾ! ಭೇಷ್! ಭೇಷ್ ಎಂದು ಹೊಗಳುತ್ತಿದ್ದರು. ಕೊನೆಗೊಬ್ಬ ರೈತ ಮಲಗುವ ಕೋಣೆ ಯಲ್ಲಿಯ ಮೃದುವಾದ ಹಾಸಿಗೆಯ ಮಂಚ ಸೋಫಾ ಕಂಡು ಕುಳಿತು ನೋಡಿದ. ಮೋಜಿ ಗಾಗಿ 'ಯಜಮಾನರೆ ಈ ಕೋಣೆಯ ಬಾಗಿಲು ಚಿಕ್ಕದಾಯಿತು. ಒಂದು ವೇಳೆ ತಾವು ಆರಾಮವಾಗಿ ಮಲಗಿದಾಗ ಸತ್ತರೆ ತಮ್ಮ ಶವ ಹೊರಗೆ ಒಯ್ಯಲು ಕಠಿಣವಾಗುವುದು' ಎಂದ ನಗುತ್ತ. ರೈತನ ಅಸಭ್ಯ ಮಾತುಕೇಳಿ ಜಮೀನುದಾರನ ಪಿತ್ತನೆತ್ತಿಗೇರಿತು. ಕೂಡಲೇ ಆಳುಗಳನ್ನು ಕರೆಸಿ ಅವನ ಕೈಕಾಲು ಕಟ್ಟಿಸಿ ಕುದುರೆ ಲಾಯದಲ್ಲಿ ಒಗೆಸಿಬಿಟ್ಟ. ಬಂದವರೆಲ್ಲ ತುಟಿಬಿಚ್ಚದೆ ಹೊರಗೆ ಹೋದರು.

ಸಂಜೆವರೆಗೂ ರೈತ ಮನೆಗೆ ಬಾರದ್ದನ್ನು ತಿಳಿದ ಅವನ ಇಬ್ಬರು ಮಕ್ಕಳು ಜಮೀನು ದಾರನ ಮನೆಗೆ ಬಂದರು. 'ಮಾಲಿಕ ನಿಮ್ಮ ಮನೆಗೆ ಊಟಕ್ಕೆ ಬಂದ ನಮ್ಮ ತಂದೆ ತಿರುಗಿ ಬಂದಿಲ್ಲ' ಎಂದ ಹಿರಿಯವ.

'ಆ ಮೂರ್ಖನನ್ನು ಕೈಕಾಲು ಕಟ್ಟಿಸಿ ಒಗೆಸಿದ್ದೇನೆ' ಎಂದು ನಡೆದ ಘಟನೆ ವಿವರಿಸಿದ ಜಮೀನುದಾರ.

'ಸರಿಯಾಗಿ ಹೇಳಿದಿರಿ. ನಿಜವಾಗಿಯೂ ನಮ್ಮಪ್ಪ ಮೂರ್ಖ! ಅವನಿಗೆ ಇಷ್ಟೂ ಬುದ್ಧಿ ಇಲ್ಲ. ಶವ ಬಾಗಿಲಲ್ಲಿ ಹಾಯದಿದ್ದರೆ ಕಡಿದು ತುಂಡು ಮಾಡಿ ಹೊರಗೆ ಒಯ್ಯಲು ಬರುತ್ತಿರಲಿಲ್ಲವೇ?'

'ಅದೂ ಆಗದಿದ್ದರೆ ಕಡಿಯದೆ ಶವ ಇಲ್ಲಿ ಯೇ ಇಟ್ಟು ಬೆಂಕಿ ಹಚ್ಚಲು ಬರುತ್ತಿರಲಿ ಲ್ಲವೇ?' ಎಂದ ಕಿರಿಯವ.

ಇವರ ಮಾತುಕೇಳಿ ಜಮೀನು ದಾರ ಮತ್ತಷ್ಟು ಕೆರಳಿದ. 'ತಂದೆ ಮಕ್ಕ ಳೆಲ್ಲ ಮೂರ್ಖರು. ಬುದ್ಧಿ ಎಲ್ಲಿ ಯೋ ಓಡಿ ಹೋಗಿದೆ. ಇವ ರೊಂದಿಗೆ ಇವರಪ್ಪನನ್ನು ಓಡಿಸಿ ಬಿಡಿ. ಕೂಡಲೇ ಹೋಗಿ ಬುದ್ಧಿ ಹಿಡಿದು ತರಲಿ' ಎಂದ.

'ಯಜಮಾನರೆ ಬುದ್ಧಿ ಯಾವಕಡೆ ಓಡಿದೆ ಹೇಳಿರಿ ಸಂಜೆಯಾಗುವಷ್ಟರಲ್ಲಿ ಹಿಡಿದು ತಂದುಕೊಡುತ್ತೇವೆ' ಎನ್ನುತ್ತ ತಂದೆಯನ್ನು ಕರೆದುಕೊಂಡು ಮನೆಗೆ ಬಂದರು ಬುದ್ಧಿವಂತ ಮಕ್ಕಳು.

-'ಸಿಸು'ಸಂಗಮೇಶ

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

ಹೇಗಾದರೂ ಮಾಡಿ ಪುಟ್ಟಣ್ಣಿಯನ್ನು ಓದಿಸಿ ಒಳ್ಳೆ ಉದ್ಯೋಗ ಕೊಡಿಸಬೇಕು. ಅಮ್ಮನನ್ನು ಸುಖವಾಗಿಡಬೇಕೆಂದು ತಿಳಿದು ರಾವುಣ್ಣಿ ಕಷ್ಟ ಪಟ್ಟು ಓದಿ ಮುಂದೆ ಪೊಲೀಸ್ ಆಫೀಸರ್ ಆದನು. ಆದರೆ ತಮ್ಮ ಅಮ್ಮನ ಅತಿ ಮುದ್ದಿನಿಂದ, ತನ್ನ ತುಂಟತನದಿಂದ ಎಲ್ಲರನ್ನು ರೇಗಿಸಿ ಬೈಯ್ಯಿಸಿಕೊಂಡು ತನ್ನ ಓದನ್ನು ಅರ್ಧದಲ್ಲೇ ಬಿಟ್ಟು ಸಣ್ಣ ಪುಟ್ಟ ಕಳ್ಳತನ ಮಾಡಿ ಅಣ್ಣನ ಕೈಗೆ ಸಿಕ್ಕಿ ಬಿದ್ದನು. ಬೇಸತ್ತ ಅಣ್ಣ ತನ್ನ ಪೊಲೀಸ್ ವರ್ತನೆಯನ್ನು ತೋರಿಸಿ ತಮ್ಮನನ್ನು ಸರಿ ದಾರಿಗೆ ತಂದು ಸ್ವಂತ ಉದ್ಯೋಗ ಮಾಡಲು ಸಹಾಯ ಮಾಡಿದನು. ಇಂದು ಈ ಪುಟ್ಟಣ್ಣಿ ಸ್ವಂತ ದುಡಿಯುವುದಲ್ಲದೆ ಸಾವಿರಾರು ಜನಕ್ಕೆ ಕೆಲಸ ನೀಡುವ ಉದ್ಯಮಿ ಆಗಿದ್ದಾನೆ

-ರೋಸಿತ ಮೈಕಲ್
೭ನೇ ತರಗತಿ, ಚನ್ನಪಟ್ಟಣ.

ಆ ರಾತ್ರಿ ರಾವುಣ್ಣಿಗೆ ಒಂದು ಆಶ್ಚರ್ಯ ಕಾದಿತ್ತು. ಪುಟ್ಟಣ್ಣಿ ತಾನು ಕೇಳಿದ ಸುದ್ದಿಯನ್ನು ಹೇಗೆ ಹೇಳಿದನು. 'ಅಣ್ಣಾ ಊರಿನ ಮೇಷ್ಟರ ಮನೆಗೆ ಒದೆ ತಿಂದ ತುಂಟ ಹುಡುಗರು 'ನಾಳೆ ರಾತ್ರಿ ಬೆಂಕಿ ಇಡುವ' ಎಂದು ಆಟದ ಬಯಲ ಮೂಲೆಯಲ್ಲಿ ಗುಸುಗುಸು ನಡೆಸಿದ್ದರು.''

ಮಾರನೆ ದಿನ ಗುರುಗಳಿಗೆ ರಾವುಣ್ಣಿ ಪುಟ್ಟಣ್ಣಿ ವಿಷಯ ಮುಟ್ಟಿಸಿದಾಗ ಆ ರಾತ್ರಿ ಗುರು ಗಳೊಂದಿಗೆ ಎಲ್ಲರೂ ನಿದ್ದೆಗೆಟ್ಟು ಕೂತರು

ಪುಟ್ಟಣ್ಣಿ ಕೇಳಿದ್ದು ಸತ್ಯವೆಂಬಂತೆ ಐದಾರು ಹುಡುಗರು 12 ಘಂಟೆಯ ಸುಮಾರಿಗೆ ಮನೆಗೆ ಬೆಂಕಿ ಹಾಕುವ ಹುನ್ನಾರ ನಡೆಸಿದರು. ಬಾಗಿಲು ತೆಗೆದ ಗುರುಗಳು ಹುಡುಗರ ದಿಟ್ಟಿಸಿದರು. ಗುರು ಗಳನ್ನು ಕಂಡು ಹೆದರಿ ಓಡುವ ಹುಡುಗರನ್ನು ರಾವುಣ್ಣಿ ತಡೆದು 'ಗುರುಗಳು ನಿಮ್ಮ ಒಳ್ಳೆಯದಕ್ಕೆ ಬುದ್ಧಿ ಹೇಳ್ತಾರೆ, ಹೊಡಿತಾರೆ ವಿನಃ ನೀವು ಹಾಳಗಲೆಂದಲ್ಲ' ಇದರಿಂದ ವಿದ್ಯಾರ್ಥಿಗಳು ಗುರುಗಳಲ್ಲಿ ಕ್ಷಮೆ ಕೇಳಿದರು. ಗುರುಗಳೂ ಎಲ್ಲ ರನ್ನೂ ತಬ್ಬಿಕೊಂಡು ಮನೆಯೊಳಗೆ ನಡೆದು ಬುದ್ಧಿ ಹೇಳಿ ರಾವುಣ್ಣಿ ಪುಟ್ಟಣ್ಣಿಯನ್ನು ಶ್ಲಾಘಿಸಿ ಬೀಳ್ಕೊಟ್ಟರು.

-ಬಲಾರ್ಚಿ,
9ನೇ ತರಗತಿ, ಮತ್ತಿಕೆರೆ.

ರಾವುಣ್ಣಿ ಪುಟ್ಟಣ್ಣಿಯ ತುಂಟತನವನ್ನು ಈ ಸಮಯದಲ್ಲಿ ಜಾಣತನದಿಂದ ತಿದ್ದುತ್ತಿದ್ದನು. ಹಾಗೆಯೇ ತಾನು ಕಲಿತ ಪಾಠಗಳ ಹೊಸ ಹೊಸ ವಿಚಾರಗಳ ಆಸಕ್ತಿಯುತವಾದ ಸಾಹಸ ಕಥೆಗಳ ಹೇಳುತ್ತಿದ್ದನು. ಇದರಿಂದ ಪುಟ್ಟಣ್ಣಿ ಆಕರ್ಷಿತ ನಾಗಿ ಅಣ್ಣನಿಗೆ ತನ್ನ ದಿನನಿತ್ಯದ ಚಟುವಟಿಕೆಗಳ ಬಾಯ್ಬಿಟ್ಟು ಹೇಳುತ್ತಿದ್ದನು. ''ಅಣ್ಣಾ ಇವತ್ತೊಂದು ಅಜ್ಜಿ ಬಸ್ ನಿಲ್ದಾಣದಿಂದ ಬಹಳ ಶ್ರಮ ಪಟ್ಟುಕೊಂಡು ಒಂದು ಸಣ್ಣ ಚೀಲ ಹೊತ್ತು ತರುತ್ತಿದ್ದಳು. ಅಲ್ಲೇ ಆಡುತ್ತಿದ್ದ ನನಗೆ ಅವಳನ್ನು ಕಂಡು ಮರುಕ ಹುಟ್ಟಿತು. ಅವಳನ್ನು ಸಮೀಪಿಸಿ ಸಹಾಯ ಮಾಡುತ್ತೇನೆಂದು ಚೀಲ ತಲೆ ಮೇಲೆ ಹೊತ್ತು ಅಜ್ಜಿಯನ್ನು ಹಿಂಬಾಲಿಸಿದೆ.

ಮನೆ ತಲುಪಿದಾಗ ಅಜ್ಜಿ ನನಗೊಂದು ಹಣ್ಣು ಕೊಟ್ಟಳು. ಇಬ್ಬರೂ ತಿನ್ನೋಣವೆಂದು ಅದನ್ನು ಇಲ್ಲಿಗೇತಂದೆ. ತಕೋ'' ಎಂದು ಹಣ್ಣು ಕೈಗಿತ್ತನು. ರಾವುಣ್ಣಿ ಪುಟ್ಟಣ್ಣಿ ಹಣ್ಣನ್ನು ಹಂಚಿ ಕೊಂಡು ತಿಂದರು. ಮುಂದೆ ರಾವುಣ್ಣಿ ಓದಿ ಉದ್ಯೋಗ ಸಂಪಾದಿಸಿದನು. ಪುಟ್ಟಣ್ಣಿ ಓದ ದೆಯೇ ಅಣ್ಣ ಅಮ್ಮನ ನೆರವಿಗೇ ಅಲ್ಲ ಊರಿಗೇ ನೆರವಾಗಿ ನಿಂತು ಕೊನೆಗೆ ಊರ ಪ್ರಮುಖನಾಗಿ ಸಮಾಜ ಸೇವೆ ಸಲ್ಲಿಸಲು ಸಜ್ಜಾದನು.

-ಎನ್.ಎಂ. ಚಿನ್ನಮ್ಮ, 9ನೇ ತರಗತಿ,
ನಾಗರಹಾಳು.


ಎರಡು ಚಿತ್ರಗಳ ಬಿಡುಗಡೆಯ ಕಥೆ

ಆ ಎಲ್ಲಾ ರಗಳೆಗಳಿಗೆ ಕಾರಣವಾಗಿದ್ದು ಪತ್ರಿಕೆಯೊಂದರಲ್ಲಿ ಪ್ರಕಟವಾದ ಒಂದು ಶೀರ್ಷಿಕೆ.

'ವಿಶ್ವ' ಚಿತ್ರ ಶಿವರಾಜ್‌ಕುಮಾರ್ ಅವರ 50ನೇ ಚಿತ್ರ ಎಂಬ ಒಂದು ವಾಕ್ಯ ಗಾಂಧಿನಗರದಲ್ಲಿ ಸಂಚಲನವನ್ನು ಉಂಟು ಮಾಡಿತು. ಮರುದಿನವೇ ಇನ್ನೊಂದು ಪತ್ರಿಕೆಯಲ್ಲಿ ಶಿವರಾಜ್‌ಕುಮಾರ್ ಸಹಿ ಹೊತ್ತ ಜಾಹೀರಾತೊಂದು ಪ್ರಕಟವಾಯಿತು. ಅದರಲ್ಲಿ ವಿಶ್ವ ಚಿತ್ರ ತಾನು ನಟಿಸಿದ 50ನೇ ಚಿತ್ರ ಎನ್ನುವುದು ತಪ್ಪು, ತನ್ನ 50ನೇ ಚಿತ್ರವೇನಿದ್ದರೂ ಎ.ಕೆ.47 ಎಂದು ಶಿವಣ್ಣ ದೃಢೀಕರಿಸಿದರು.

ಎಸ್ಟೇಟ್ ಕ್ಲಬ್‌ನಲ್ಲಿ 'ವಿಶ್ವ' ಶೂಟಿಂಗ್ ನಡೆಯುತ್ತಿದ್ದ ಸಂದರ್ಭದಲ್ಲಿ ಶಿವಣ್ಣ 'ವಿಶ್ವ' ಚಿತ್ರ ತನ್ನ 50ನೇ ಚಿತ್ರ ಎಂದು ಹೇಳಿಯೇ ಇಲ್ವೇ?

ಹಾಗಿದ್ದರೆ ಎಸ್ಟೇಟ್ ಕ್ಲಬ್‌ನಲ್ಲಿ 'ವಿಶ್ವ' ಶೂಟಿಂಗ್ ನಡೆಯುತ್ತಿದ್ದ ಸಂದರ್ಭದಲ್ಲಿ ಶಿವಣ್ಣ 'ವಿಶ್ವ' ಚಿತ್ರ ತನ್ನ 50ನೇ ಚಿತ್ರ ಎಂದು ಹೇಳಿಯೇ ಇಲ್ವೇ? ಹೇಳದೇ ಇದ್ದಲ್ಲಿ ಪತ್ರಿಕೆಯಲ್ಲಿ ಅದು ಹೇಗೆ ವರದಿಯಾಗುತ್ತಿತ್ತು? ಮೂಲವೊಂದರ



ಪ್ರಕಾರ, ಶಿವಣ್ಣ 'ವಿಶ್ವ' ಚಿತ್ರ ಎ.ಕೆ.47ಗಿಂತ ಮೊದಲೇ ತೆರೆಕಾಣಲಿದೆ ಅಂದಿದ್ದರಂತೆ. ಅಲ್ಲಿಗೇ ಅದು 50ನೇ ಚಿತ್ರವಾಯಿತಲ್ಲ.

ಜಾಹೀರಾತು ನೀಡಿದ್ದು ಸಾಲದು ಎಂಬಂತೆ ಅದರ ಬೆನ್ನಿಗೇ ಪತ್ರಿಕಾ ಹೇಳಿಕೆಯೊಂದನ್ನೂ ಶಿವರಾಜ್‌ನೀಡಿದರು. ಅದರ ಪ್ರಕಾರ 'ವಿಶ್ವ' ಅವರ 50ನೇ ಚಿತ್ರವೆಂಬ ಸುದ್ದಿ ಆಕಸ್ಮಿಕವಾಗಿ ಆದ ಅಚಾತುರ್ಯವೇ ಹೊರತು ಉದ್ದೇಶಪೂರ್ವಕ ಅಲ್ಲ. ಈ ಪತ್ರಿಕಾ ಹೇಳಿಕೆಗೆ ಅವರ ಸಹಿ ಇರಲಿಲ್ಲ ಎನ್ನೋದು ಕುತೂಹಲಕಾರಿ. ಶಿವರಾಜ್ ಸಿಂಗಾಪುರ್‌ಗೆ ತೆರಳಿ ನಾಲ್ಕು ದಿನಗಳ ನಂತರ ಈ ಹೇಳಿಕೆ ಬಂದಿರುವುದರಿಂದ ಅವರ ಸಹಿ ಇರೋದಕ್ಕೆ ಸಾಧ್ಯಾನೂ ಇರಲಿಲ್ಲ ಎನ್ನುತ್ತದೆ ಗಾಂಧಿನಗರದ ಮೂಲ. ಹಾಗಿದ್ದರೆ ಈ ಸಹಿ ಇಲ್ಲದ ಪತ್ರವನ್ನು ಸಿದ್ಧಗೊಳಿಸಿದವರು ಯಾರು? ಅದು ನಿಮ್ಮ ಊಹೆಗೆ ಬಿಟ್ಟಿದ್ದು.

ಜನಪ್ರಿಯ ನಟನೊಬ್ಬ ತನ್ನ ಹೇಳಿಕೆ ತಪ್ಪಾಗಿ ಪ್ರಕಟವಾಗಿದೆ ಎಂದು ಜಾಹೀರಾತು ನೀಡಿದ್ದು ಇದೇ ಮೊದಲು ಇರಬೇಕು. ಸಂಪ್ರದಾಯದ ಪ್ರಕಾರ ಯಾವ ಪತ್ರಿಕೆಯಲ್ಲಿ ತನ್ನ ಬಗ್ಗೆ ಸುದ್ದಿ ಪ್ರಕಟವಾಗಿದೆಯೋ ಅದೇ ಪತ್ರಿಕೆಗೆ ಸ್ಪಷ್ಟೀಕರಣ ಕೊಡಬೇಕಿತ್ತು. ಆದರೆ ಶಿವರಾಜ್ (ರಾಮು?) ಹೊಸ ಸಂಪ್ರದಾಯವನ್ನು ಹುಟ್ಟುಹಾಕಿದ್ದಾರೆ. ಇದರಿಂದಾಗಿ ಅವರ ವರ್ಚಸ್ಸಿಗೆ ಧಕ್ಕೆ ಬರೋದಿಲ್ಲವೇ?

ಈ ಒಟ್ಟಾರೆ ಹಗರಣದಿಂದ ನಷ್ಟವಾಗಿದ್ದು 'ವಿಶ್ವ'ದ ನಿರ್ಮಾಪಕ ಧನರಾಜ್ ಅವರಿಗೆ. 'ಎ.ಕೆ. 47' ಸಿದ್ಧವಾಗುವಲ್ಲಿ ವಿಳಂಬವಾಗುತ್ತಿದ್ದಂತೆ 'ವಿಶ್ವ' ನೇ ಮೊದಲು ಬರುವ ಅವಕಾಶವಿದೆ ಎನ್ನುವುದನ್ನು ಅರಿತ ಧನರಾಜ್ ಇನ್ನಿಲ್ಲದ ವೇಗದಲ್ಲಿ ಶೂಟಿಂಗ್ ನಡೆಸಿದ್ದರು. ಅಷ್ಟೇ ಅಲ್ಲ. ಶೂಟಿಂಗ್ ಜೊತೆಜೊತೆಗೇ ಡಬ್ಬಿಂಗ್, ರಿರೆಕಾರ್ಡಿಂಗ್ ಮೊದಲಾದ ಕೆಲಸಗಳನ್ನು ಪೂರೈಸಿದ್ದರು. ಅವರ ಲೆಕ್ಕಾಚಾರ ಸರಿಹೋಗಿದ್ದರೆ ಮೇ 21ಕ್ಕೆ ವಿಶ್ವ ತೆರೆಕಾಣಬೇಕಿತ್ತು. ಆ ಹೊತ್ತಿಗೆ ಅನಾಹುತವಾಯಿತು. ಶಿವರಾಜ್ ಹೇಳಿಕೆ ಅಥವಾ ಹೇಳಿದರು ಎನ್ನಲಾದ ಮಾತು ಪತ್ರಿಕೆಯಲ್ಲಿ ಪ್ರಕಟವಾಯಿತು. ತಕ್ಷಣ ಎಚ್ಚೆತ್ತುಕೊಂಡ ಎ.ಕೆ. 47 ನಿರ್ಮಾಪಕ ರಾಮು ಚುರುಕಾದರು. ಅವರ ಪ್ರಯತ್ನದ ಫಲವಾಗಿ ಜಾಹೀರಾತು ಬಂತು. ಈಗ ನೋಡಿ ಎ.ಕೆ.47 ತೆರೆಕಾಣದೆ 'ವಿಶ್ವ' ಹೊರಬರುವಂತಿಲ್ಲ. ಎ.ಕೆ. 47 ಅನಂತರ ಕನಿಷ್ಠ 1 ತಿಂಗಳಾದರೂ ಧನರಾಜ್ ಕಾಯುವುದು ಅನಿವಾರ್ಯ. ಅವರೇ ಹೇಳುವ ಪ್ರಕಾರ ಈ ವಿಳಂಬದಿಂದಾಗಿ ಸುಮಾರು 12 ಲಕ್ಷ ರೂಪಾಯಿ



ನಷ್ಟವಾಗಿದೆ.

50ನೇ ಚಿತ್ರದ ರಗಳೆ ಶುರುವಾಗುತ್ತಿದ್ದಂತೆ ಶಿವರಾಜ್ ಸಿಂಗಾಪುರ್‌ಗೆ ಪ್ರವಾಸ ಹೋದರು. 'ವಿಶ್ವ' ಚಿತ್ರಕ್ಕೆ ಕೇವಲ ಎರಡು ತಾಸು ಅವರು ಡಬ್ಬಿಂಗ್ ಮಾಡಬೇಕಿತ್ತು. ಸಿಂಗಾಪುರ್‌ನಿಂದ ಬಂದ ಮೇಲೆ ಅದನ್ನು ಮಾಡುತ್ತೇನೆ ಅಂದರಂತೆ. ಅಲ್ಲಿಗೇ ಶಿವರಾಜ್ ಸಿಂಗಾಪುರ್ ಪ್ರವಾಸದ ಉದ್ದೇಶ ಸ್ಪಷ್ಟ.

ಧನರಾಜ್-ರಾಮು ನಡುವಿನ ಪೈಪೋಟಿ ಇಂದು ನಿನ್ನೆಯದಲ್ಲ. 'ವಿಶ್ವ' ಶೂಟಿಂಗ್ ನಡೆಯುತ್ತಿದ್ದ ಜಾಗಕ್ಕೆ ರಾಮು ಒಂದು ದಿನ ಮಚ್ಚು ಹಿಡಿದುಕೊಂಡು ನುಗ್ಗಿದ್ದು ಸುದ್ದಿಯಾಗಿತ್ತು. ಆದರೆ 50ನೇ ಚಿತ್ರದ ಹಗರಣದಲ್ಲಿ ರಾಮು ತಪ್ಪೇನಿಲ್ಲ. ಯಾಕೆಂದರೆ ವರ್ಷದ ಹಿಂದೆ ಎ.ಕೆ.47 ಚಿತ್ರ ಸೆಟ್ಟೇರಿದಾಗಲೇ ಇದು ಶಿವರಾಜ್ 50ನೇ ಚಿತ್ರ ಎಂದು ಪ್ರಚಾರ ಮಾಡಲಾಗಿತ್ತು. 'ವಿಶ್ವ' ಸೆಟ್ಟೇರಿದ್ದು ಕಳೆದ ನವೆಂಬರ್‌ನಲ್ಲಿ. ಆದರೆ ನಾಯಕನಟನ ದ್ವಂದ್ವ ನೀತಿಯಿಂದಾಗಿ ಧನರಾಜ್ ಕಂಗಾಲಾಗಿದ್ದಾರೆ. ಜೀವನದಿ ಚಿತ್ರನಿರ್ಮಿಸಿ 80 ಲಕ್ಷ ಕಳಕೊಂಡ ಧನರಾಜ್‌ಗೆ ವಿಶ್ವ ಜೀವದಾನ ನೀಡಬಹುದು ಎಂಬ ಆಸೆ ಇತ್ತು. ಆದರ ನಾಯಕಿ ಹಾಗೂ ನಾಯಕನ ಡೇಟ್ಸ್ ಸಮಸ್ಯೆಯಿಂದಾಗಿ ಶೂಟಿಂಗ್ ವಿಳಂಬವಾಯಿತು. 80 ಲಕ್ಷ ಬಜೆಟ್‌ನಲ್ಲಿ ಮುಗಿಯಬೇಕಿದ್ದ ಚಿತ್ರ ಈಗಾಗಲೇ 1.90 ಕೋಟಿ ನುಂಗಿದೆ.

ಅದಿರಲಿ, ಈ ಸಂಖ್ಯಾವಾರು ಲೆಕ್ಕಾಚಾರಕ್ಕೆ ಚಿತ್ರದ ಮುಹೂರ್ತ ನಡೆದ ದಿನ ಮುಖ್ಯವಾಗುತ್ತದೆಯೇ ಅಥವಾ ಬಿಡುಗಡೆಯ ದಿನ ಮುಖ್ಯವಾಗುತ್ತದೆಯೇ ಅನ್ನೋ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಅಷ್ಟಕ್ಕೂ ಇಂಥದ್ದನ್ನೆಲ್ಲಾ ಗಂಭೀರವಾಗಿ ಪರಿಗಣಿಸುವವರು ಶಿವರಾಜ್ ಅಭಿಮಾನಿಗಳಷ್ಟೇ ಹೊರತಾಗಿ ಇತರೇ ಪ್ರೇಕ್ಷಕರಲ್ಲ.


ವಿಶ್ವ ಚಿತ್ರ 21ಕ್ಕೆ ಬಿಡುಗಡೆ ಆಗಿದ್ದರೆ ಹಾಗೂ ಕ್ಲಿಕ್ ಆಗುತ್ತಿದ್ದರೆ ಎ.ಕೆ.47ಗೆ ಲಾಭವಾಗುತ್ತಿರಲಿಲ್ಲವೆ? ಪ್ರಚಾರಕ್ಕೆ ಲಕ್ಷಗಟ್ಟಲೆ ಸುರಿದಿದ್ದ ಧನರಾಜ್‌ಗೆ ಅನ್ಯಾಯವಾಗಲಿಲ್ಲವೇ? ಎ.ಕೆ.47 ಚಿತ್ರ ಮೊದಲು ಬಂದು ಯಶಸ್ವಿಯಾದರೂ 'ವಿಶ್ವ'ನಿಗೆ ಲಾಭವಾಗುತ್ತದೆ ಎನ್ನುವವರು ಇರಬಹುದು. ಯಾಕೆಂದರೆ ಎರಡೂ ಆ್ಯಕ್ಷನ್ ಚಿತ್ರಗಳೇ.

ಶಿವರಾಜ್‌ಕುಮಾರ್ ಚಿತ್ರಗಳು ಇತ್ತೀಚೆಗೆ ಯಶಸ್ಸು ಕಾಣುತ್ತಿಲ್ಲ. ಕನಿಷ್ಠವೆಂದರೆ ಏಳು ಚಿತ್ರಗಳು ಫ್ಲಾಪ್ ಆಗಿವೆ. ಆದರೆ ಅವರ ಚಿತ್ರ ಬಾರದೆ ಮೂರು ತಿಂಗಳಾಗಿರುವುದು ಎ.ಕೆ.47ಗೆ ವರದಾನವಾಗಿದೆ. ಈ ನಡುವೆ ಬಂದ 'ಚಂದ್ರೋದಯ' ಯಶಸ್ವಿಯಾಗಿದ್ದರೂ ಅಲ್ಲಿ ಶಿವಣ್ಣ ಅತಿಥಿ ಕಲಾವಿದ.

ಈ ವರ್ಷದ ಮೊದಲ ಆರು ತಿಂಗಳಲ್ಲಿ ಒಂದೇ ಒಂದು ಶಿವರಾಜ್ ಚಿತ್ರ ತೆರೆ ಕಂಡಿದೆ. ಮುಂದಿನ ನಾಲ್ಕು ತಿಂಗಳಲ್ಲಿ ನಾಲ್ಕು ಚಿತ್ರಗಳು ತೆರೆಕಾಣಲಿವೆ. ಎ.ಕೆ.47 'ವಿಶ್ವ' 'ಯಾರೇ ನೀ ಅಭಿಮಾನಿ' ಹಾಗೂ 'ಹೃದಯ ಹೃದಯಾ'.

ಅಂದ ಹಾಗೆ ಎ.ಕೆ.47 ಹಾಗೂ ವಿಶ್ವ ಚಿತ್ರಗಳ ನಡುವೆ ಸಾಕಷ್ಟು ಹೋಲಿಕೆಗಳಿವೆ. ಎರಡೂ ಚಿತ್ರಕ್ಕೆ ಸಂಗೀತ ನೀಡಿದವರು ಹಂಸಲೇಖಾ. ಸಾಹಸ ಸಂಯೋಜಿಸಿದವರು ರಾಮ್‌ಶೆಟ್ಟಿ. ವ್ಯತ್ಯಾಸ ಎಲ್ಲಿ ಬರುತ್ತದೆ ಅಂದರೆ ಕಥೆಯಲ್ಲಿ. ಎ.ಕೆ.47 ಒರಿಜಿನಲ್ 'ವಿಶ್ವ' ರೀಮೇಕ್.

ಈ ಹಗರಣದ ಹಿನ್ನೆಲೆಯಲ್ಲಿ ಮತ್ತದೇ ಪ್ರಶ್ನೆ ಕಾಡುತ್ತದೆ. ನಟನೊಬ್ಬನ ಜವಾಬ್ದಾರಿ ಚಿತ್ರವೊಂದರಲ್ಲಿ ನಟಿಸುವಷ್ಟಕ್ಕೇ ಸೀಮಿತವಾಗುತ್ತದೆಯೇ? ಅಥವಾ ಚಿತ್ರ ಸಕಾಲದಲ್ಲಿ ಬಿಡುಗಡೆಯಾಗುವಂತೆಯೂ ಆತ ಆಸಕ್ತಿ ವಹಿಸಬೇಕೆ? ತೆಲುಗು - ತಮಿಳು ಚಿತ್ರರಂಗದಲ್ಲಿ ನಾಯಕನೇ ಚಿತ್ರದ ಹಂಚಿಕೆದಾರನೂ ಆಗಿರುತ್ತಾನೆ. ಹಾಗಾಗಿ ನಿರ್ಮಾಪಕನಿಗೆ ಹೆಚ್ಚಿನ ತಲೆನೋವಿಲ್ಲ. ಲಕ್ಷಗಟ್ಟಲೆ ಸಂಭಾವನೆ ಪಡೆಯುವ ಸ್ಟಾರ್ ನಟಿಸಿದ ನಂತರ ಚಿತ್ರದಲ್ಲಿ ಆಸಕ್ತಿ ಕಳಕೊಂಡರೆ ನಿರ್ಮಾಪಕನ ಗತಿಯೇನು? ■


ಡೊನೇಷನ್...
• ಬಿ.ವಿಲ್ಸನ್
ಬರೇ ಒಂದೇ ದಿನ ಬ್ಯಾಗ್ ಹೊತ್ಕೊಂಡು ಹೋಗಲು ಯಾಕೆ ಅಳ್ತೀಯಾ... ನಾನು ಈ ಬ್ಯಾಗ್‌ನ ಈಡೀ ವರ್ಷ ಹೊತ್ಕೊಂಡು ಹೋಗಲ್ವಾ....
ಶಾಲೆ
DONATION
Father
School Bag
ಇಲ್ಲೇ... ಎಲ್ಲಿಂದ್ಲೋ "ದುಡ್ಡಿನ" ಪರಿಮಳ ಬರ್‍ತಾ ಇದೆ ಕಣೋ....
ಶಾಲೆ
ನಮ್ಮಪ್ಪನಿಗೆ ತಲೆ ಇಲ್ಲ.... ಸುಮ್ನೆ ಶಾಲೆಗೆ ಡೊನೇಷನ್ ಕೊಟ್ಟು ದುಡ್ಡು ಹಾಳು ಮಾಡೋ ಬದ್ಲು ವರದಕ್ಷಿಣೆ ಕೊಟ್ಟು ಮದುವೆ ಮಾಡಿಸಿದ್ರೆ ಚೆನ್ನಾಗಿರ್‍ತಿತ್ತು...
ಶಾಲೆ
School Bag
School Bag

BISILA BADUKU Kannada Monthly JUNE 1999 RNI No. 67406 / 97 Regd. BGW / 394